# ಎಲ್. ಕೃಷ್ಣಪ್ಪ

ಡಿ.ಬಿ. ಮಲ್ಲಿಕಾರ್ಜುನಸ್ವಾಮಿ ಮಹಾಮನೆ



ಕರ್ನಾಟಕ ನಾಟಕ ಅಕಾಡೆಮಿ

ರಂಗಸಂಪನ್ನರು ಮಾಲಿಕೆ

# ಎಲ್. ಕೃಷ್ಣಪ್ಪ

ಡಿ.ಬಿ. ಮಲ್ಲಿಕಾರ್ಜುನಸ್ವಾಮಿ ಮಹಾಮನೆ

ಕರ್ನಾಟಕ ನಾಟಕ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – ೦೨

**L. Krishnappa :**
A Monograph in Kannada by **D.B. Mallikarjuna Swamy Mahamane**
Published by **Mr. Siddaraju**, Registrar, Karnataka Nataka Academy,
Kannada Bhavana, J.C.Road, Bengaluru- 560002 . Phone: 080-22237484

ಹಕ್ಕುಗಳು : ಕರ್ನಾಟಕ ನಾಟಕ ಅಕಾಡೆಮಿ
ಮೊದಲ ಮುದ್ರಣ : ೨೦೧೬
ಪ್ರತಿಗಳು : ೧,೦೦೦
ಪುಟಗಳು : ೧೧೬
ಬೆಲೆ : ರೂ. ೮೦/-

**ಪ್ರಕಾಶಕರು**
ಸಿದ್ಧರಾಜು, ರಿಜಿಸ್ಟ್ರಾರ್,
ಕರ್ನಾಟಕ ನಾಟಕ ಅಕಾಡೆಮಿ,
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–೫೬೦೦೦೨
ದೂರವಾಣಿ: ೦೮೦ ೨೨೨೩೭೪೮೪

ಮುಖಪುಟ ವಿನ್ಯಾಸ :
ಕೃಷ್ಣ ರಾಯಚೂರು

ಮುದ್ರಣ :
**ಮಾರುತಿ ಪ್ರಿಂಟಿಂಗ್ ಪ್ರೆಸ್**
ಬೆಂಗಳೂರು
ಮೊ. : ೯೭೩೮೨೮೩೮೭೪

# ಪ್ರಧಾನ ಸಂಪಾದಕರ ನುಡಿ

ಕರ್ನಾಟಕ ನಾಟಕ ಅಕಾಡೆಮಿಯ ನಮ್ಮ ಅವಧಿ ಎರಡು ವರ್ಷ ಕಳೆದಿದೆ. ಮೊದಲ ವರ್ಷ ಜಿಲ್ಲೆಗಳಲ್ಲಿ ನಾಟಕೋತ್ಸವ, ಹವ್ಯಾಸಿ ರಂಗ ತಂಡಗಳಿಗೆ ಶಿಬಿರ, ರಸಗ್ರಹಣ, ನಾಟಕ ಕಂಪನಿಗಳಿಗೆ ಹೊಸ ನಾಟಕ ಬರೆಸುವ ಯೋಜನೆ, ಪೌರಾಣಿಕ ರಂಗೋತ್ಸವ, ತಿಂಗಳ ನಾಟಕ, ರಂಗಗೀತೆ ಪ್ರಾತ್ಯಕ್ಷಿಕೆ, ಮುಂಬಯಿಯಲ್ಲಿ ನಾಟಕೋತ್ಸವ ಮುಂತಾದ ಹತ್ತು ಹಲವು ವಿನೂತನ ಕಾರ್ಯಕ್ರಮ ನಡೆಸಿದೆವು.

ವಿಜಯಪುರದಲ್ಲಿ ೨೦೧೫ ಸೆ.೨೪ ರಿಂದ ೩೦ ರ ವರೆಗೆ ನಡೆದ ರಾಜ್ಯ ಕನ್ನಡ ವೃತ್ತಿರಂಗಭೂಮಿ ಸಮ್ಮೇಳನದಲ್ಲಿ ಎಲ್ಲ ಕಂಪನಿಗಳ ಕಲಾವಿದರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಐದು ದಿನಗಳ ಕಾಲ ಹತ್ತು ನಾಟಕ ಕಂಪನಿಗಳಿಗೆ ಏರ್ಪಡಿಸಿದ್ದ ನಾಟಕ ಸ್ಪರ್ಧೆ ರಂಗ ಇತಿಹಾಸದಲ್ಲಿ ಅಪರೂಪದ್ದಾಗಿತ್ತು. ಹಿರಿಯ ಕವಿಗಳಾದ ಬಿ.ಆರ್.ಅರಿಷಿಣಗೋಡಿ ಅವರಿಗೆ ಇಳಕಲ್‌ನಲ್ಲಿ, ಎಲ್.ಬಿ.ಕೆ.ಆಲ್ದಾಳ ಅವರಿಗೆ ಕಲಬುರಗಿಯಲ್ಲಿ ಏರ್ಪಡಿಸಿದ್ದ ಅಭಿನಂದನೆ, ವಿಚಾರ ಸಂಕಿರಣ, ಪುಸ್ತಕ ಬಿಡುಗಡೆ ವಿಶೇಷವಾಗಿತ್ತು.

ಹಾವೇರಿ ಜಿಲ್ಲೆಯ ಶೇಷಗಿರಿಯಲ್ಲಿ ೨೧ ದಿನಗಳ ಕಾಲ ರಂಗ ನೇಪಥ್ಯ ಶಿಬಿರ, ರಾಮನಗರದ ಜಾನಪದ ಲೋಕದಲ್ಲಿ ನಡೆದ ಐದು ದಿನಗಳ ನಾಟಕ ರಚನಾ ಶಿಬಿರ, ಶಿರಸಿಯಲ್ಲಿ ನಡೆದ ರಂಗವಿಮರ್ಶಾ ಕಮ್ಮಟ, ದೆಹಲಿಯಲ್ಲಿ ನಡೆದ ವೃತ್ತಿ ಕಂಪನಿ ನಾಟಕೋತ್ಸವ ಕೆಲವು ಮೈಲುಗಲ್ಲುಗಳು. ವಿಶೇಷ ಘಟಕ ಯೋಜನೆಯಡಿ ಬಹುತೇಕ ಜಿಲ್ಲೆಗಳಲ್ಲಿ ರಂಗಶಿಬಿರ, ನಾಟಕ ಪ್ರದರ್ಶನ ನಡೆದಿವೆ. ಫೆಲೋಶಿಪ್ ಯೋಜನೆ ಮುಂದುವರಿದಿದೆ. ಕರ್ನಾಟಕ ನಾಟಕ ಅಕಾಡೆಮಿಯ ಮುಖವಾಣಿ 'ಸಂವಾದ' ಪತ್ರಿಕೆಯನ್ನು ಪುನರಾರಂಭಿಸಿದ್ದೇವೆ.

ಪುಸ್ತಕಗಳ ಪ್ರಕಟನೆ ನಾಟಕ ಅಕಾಡೆಮಿಯ ಮಹಾತ್ವಾಕಾಂಕ್ಷೆಯ ಯೋಜನೆ. ಮೊದಲ ಸರ್ವ ಸದಸ್ಯರ ಸಭೆಯಲ್ಲಿ ಪ್ರಕಟನಾ ಸಮಿತಿ ರಚಿಸಿ ಕಾರ್ಯಪ್ರವೃತ್ತರಾಗಿದ್ದೆವು. ಪುಸ್ತಕಗಳ ಪ್ರಕಟನೆ ಮುಖಾಂತರ ಅಂದು ಕಂಡ ಕನಸು ಇಂದು ನನಸಾಗುತ್ತಿದೆ. ಹಿಂದಿನ ವರ್ಷ ಹಾಗೂ ಈ ವರ್ಷದ ಪ್ರಕಟನಾ ಸಮಿತಿ ಮತ್ತು ಈ ಕನಸು ಸಾಕಾರಗೊಳ್ಳಲು ಶ್ರಮಿಸಿದ ಸದಸ್ಯ ಗುಡಿಹಳ್ಳಿ ನಾಗರಾಜ ಹಾಗೂ ಪುಸ್ತಕ ಬರೆದುಕೊಟ್ಟ ಎಲ್ಲ ಲೇಖಕರಿಗೂ ಕೃತಜ್ಞತೆಗಳು.

ಎಲ್.ಬಿ.ಶೇಖ (ಮಾಸ್ತರ)
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ

# ರಂಗಸಂಪನ್ನರು

ಕರ್ನಾಟಕ ನಾಟಕ ಅಕಾಡೆಮಿ ಪ್ರಕಟನೆಗೆ ಆದ್ಯತೆ ಇರುವ ಅಕಾಡೆಮಿಯಲ್ಲ, ಇದು ಪ್ರಯೋಗ ಪ್ರಧಾನವಾದುದು. ಆದರೂ ರಂಗಭೂಮಿ ಚಟುವಟಿಕೆ, ಅಧ್ಯಯನಕ್ಕೆ ಪೂರಕವಾಗಬಲ್ಲ ಆಕರಗಳು ಅಕಾಡೆಮಿಯಲ್ಲಿ ದೊರೆಯುವಂತಾಗಬೇಕು ಎಂದು ಈ ಹಿಂದೆ ತಕ್ಕಮಟ್ಟಿನ ಪ್ರಕಟನೆ ಕಾರ್ಯಗಳು ನಡೆದಿವೆ. ಮಧ್ಯೆ ಕ್ಷೀಣಿಸಿದ್ದ ಪ್ರಕಟನಾ ವಿಭಾಗವನ್ನು ಚುರುಕುಗೊಳಿಸಿ ಮತ್ತಷ್ಟು ಪುಸ್ತಕಗಳನ್ನು ಹೊರತರಬೇಕು ಎಂದು ಅಧ್ಯಕ್ಷರಾದ ಎಲ್.ಬಿ.ಶೇಖ ಮಾಸ್ತರ ಅವರ ಅಧ್ಯಕ್ಷತೆಯಲ್ಲಿ 23 ಜುಲೈ 2014 ರಂದು ನಡೆದ ಪ್ರಕಟನಾ ಸಮಿತಿ ಸಭೆಯಲ್ಲಿ ನಿರ್ಧರಿಸಲಾಯಿತು. ಸಮಿತಿ ಸದಸ್ಯರಾದ ಪಿ.ತಿಪ್ಪೇಸ್ವಾಮಿ, ವಿ.ಎನ್.ಅಕ್ಕಿ, ಗುಡಿಹಳ್ಳಿ ನಾಗರಾಜ ಹಾಗೂ ರಿಜಿಸ್ಟ್ರಾರ್ ಸಿದ್ದರಾಜು ಭಾಗವಹಿಸಿದ್ದರು.

ಪ್ರಕಟನೆಗೆ ಇದ್ದ ಬೇಡಿಕೆಗಳು ಹಲವಾರು. ಆದರೆ ಸೀಮಿತ ಅವಕಾಶದಲ್ಲಿ ತೀರಾ ಅಗತ್ಯವಾದ ಪುಸ್ತಕಗಳನ್ನು ಮಾತ್ರ ಪ್ರಕಟಿಸಲು ಸಾಧ್ಯವಿತ್ತು. ಕನ್ನಡ ರಂಗಭೂಮಿಗೆ ಅಸಾಧಾರಣ ಕೊಡುಗೆ ನೀಡಿದ ಪ್ರತಿಭಾವಂತರ ಕುರಿತ ಪುಸ್ತಕಗಳನ್ನು ಹೊರತರುವ 'ರಂಗಸಂಪನ್ನರು' ಮಾಲಿಕೆಯನ್ನು ಸಿಜಿಕೆಯವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಆರಂಭಿಸಿ ಕೆಲವು ಪುಸ್ತಕಗಳನ್ನು ಹೊರತರಲಾಗಿತ್ತು. ನಂತರದ ಅವಧಿಯಲ್ಲೂ ಕೆಲವು ಪುಸ್ತಕಗಳು ಹೊರಬಂದವು. ಆ ಮಾಲಿಕೆಯನ್ನು ಮುಂದುವರಿಸಲು ತೀರ್ಮಾನಿಸಿದೆವು.

ಬಿ.ವಿ.ರಾಜಾರಾಂ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಪ್ರತಿ ಜಿಲ್ಲೆಯ ರಂಗಮಾಹಿತಿ ಹೊರತರುವ ಯೋಜನೆ ರೂಪಿಸಿ ಸದಸ್ಯರಿಗೇ ಆ ಹೊಣೆ ವಹಿಸಲಾಗಿತ್ತು. 5–6 ಜಿಲ್ಲೆಗಳ ರಂಗಮಾಹಿತಿ ಬರಹವೂ ಪೂರ್ಣಗೊಂಡಿತ್ತು. ಆದರೆ ಪುಸ್ತಕಗಳು ಪ್ರಕಟನೆಯಾಗಲಿಲ್ಲ. ಉಳಿದಿರುವ ಇತರ ಜಿಲ್ಲೆಗಳನ್ನೂ ಸೇರಿಸಿಕೊಂಡು ಜಿಲ್ಲೆಗೊಂದು ರಂಗಮಾಹಿತಿ ಪುಸ್ತಕಗಳನ್ನು ಹೊರತರುವ ಯೋಜನೆ ಹಮ್ಮಿಕೊಂಡೆವು. ಆಯಾ ಜಿಲ್ಲೆಗಳ ರಂಗ ಚಟುವಟಿಕೆಯಲ್ಲಿ ಪಾಲ್ಗೊಂಡ ಲೇಖಕರಿಗೆ ಈ ಕೆಲಸವನ್ನು ಒಪ್ಪಿಸಿದೆವು. ಜಿಲ್ಲಾ ರಂಗಮಾಹಿತಿ ಕಲೆಹಾಕುವುದು ಗುರುತರ ಕೆಲಸ. ದಾಖಲೆಗಳು ಸರಿಯಾಗಿ ಲಭ್ಯವಿಲ್ಲದ ಕಾರಣ ಲೇಖಕರು ತಮ್ಮ ಶಕ್ತ್ಯಾನುಸಾರ ಸಂಗ್ರಹಿಸಿ ಬರೆದಿದ್ದಾರೆ. ಆದ್ದರಿಂದ ಇವನ್ನು ಯಾರೂ ಸಂಪೂರ್ಣ ಮಾಹಿತಿ ಎಂದು ಭಾವಿಸಬಾರದು. ಇದೊಂದು ಆರಂಭ. ಇದನ್ನು ಮುಂದುವರಿಸಲು ಸಂಘ ಸಂಸ್ಥೆ, ವಿಶ್ವವಿದ್ಯಾಲಯಗಳಿಗೆ ಅವಕಾಶವಿದೆ.

ರಂಗಸಂಪನ್ನರು ಮಾಲಿಕೆಗೆ ಪುಸ್ತಕ ಬರೆಯಲು ಕಲಾವಿದರ ಬಳಿ ಕುಳಿತಾಗಲೂ ಲೇಖಕರಿಗೆ ಮಾಹಿತಿ ಹಾಗೂ ಚಿತ್ರಗಳ ಕೊರತೆ ಕಾಡಿದೆ. ಆದರೂ ತಾವು ಕಣ್ಣಾರೆ ಕಂಡಿದ್ದ ಕಲಾವಿದರ ಪ್ರತಿಭಾ ಸಂಪನ್ನತೆಯನ್ನು ಆಪ್ತವಾಗಿ ಚಿತ್ರಿಸಿಕೊಟ್ಟಿದ್ದಾರೆ.

2015ರಲ್ಲಿ ಪ್ರಕಟನಾ ಸಮಿತಿ ಬದಲಾದಾಗಲೂ ಈ ಮಾಲಿಕೆಗಳ ಪುಸ್ತಕಗಳನ್ನು ಸಂಪಾದಿಸುವ ಹೊಣೆಯನ್ನು ನನಗೇ ವಹಿಸಲಾಯಿತು. ಸದಸ್ಯರು ಇಟ್ಟ ವಿಶ್ವಾಸ ಹಾಗೂ ಅಧ್ಯಕ್ಷರಾದ ಶ್ರೀ ಶೇಖ್ ಮಾಸ್ತರ್ ಅವರು ಪುಸ್ತಕದ ಕೆಲಸ ಎಲ್ಲಿಗೆ ಬಂತು ಎಂದು ಸದಾ ನೆನಪಿಸುತ್ತ, ಈ ಪ್ರಕಟನೆಗಳ ಕುರಿತು ತಾಳಿದ ಆಸಕ್ತಿಯ ಫಲವಾಗಿ ಈ ಪುಸ್ತಕಗಳು ಇದೀಗ ಹೊರಬರುತ್ತಿವೆ.

**ಹವ್ಯಾಸಿ ರಂಗಭೂಮಿಯ ಪ್ರಸ್ತುತತೆಗೆ ಶ್ರಮಿಸಿದ ಎಲ್.ಕೃಷ್ಣಪ್ಪ**

ಪ್ರಯೋಗಶೀಲ ಹವ್ಯಾಸಿ ರಂಗಭೂಮಿ ನೆಲೆಗೊಳ್ಳುತ್ತಿದ್ದ 1960 ರ ದಶಕದಿಂದ ನೇಪಥ್ಯ ಕಲಾವಿದರಾಗಿ, ರಂಗ ವಿನ್ಯಾಸಕಾರರಾಗಿ, ನಿರ್ದೇಶಕರಾಗಿ, ಪತ್ರಕರ್ತನಾಗಿ ಕೃಷ್ಣಪ್ಪನವರ ಸೇವೆ ಅಗಾಧವಾದುದು. ದೆಹಲಿಯಲ್ಲಿದ್ದ ಬಿ.ವಿ.ಕಾರಂತರನ್ನು ಬೆಂಗಳೂರಿಗೆ ಕರೆತಂದು ಕನ್ನಡ ಹವ್ಯಾಸಿ ರಂಗಭೂಮಿ ಸಂಚಲನಕ್ಕೆ ಅವರೊಂದಿಗೆ ಕೈಜೋಡಿಸಿದವರು ಕೃಷ್ಣಪ್ಪ. ಲಂಕೇಶ್ ಅವರೊಂದಿಗೆ ಪ್ರತಿಮಾ ರಂಗ ಸಂಶೋಧನಾ ಟ್ರಸ್ಟ್ ಸ್ಥಾಪಿಸಿ, ಆ ಮೂಲಕ 'ಈ ಮಾಸ ನಾಟಕ' ರಂಗ ಪತ್ರಿಕೆಯನ್ನು ಕಳೆದ 17 ವರ್ಷಗಳಿಂದ ನಡೆಸಿಕೊಂಡು ಬಂದಿದ್ದಾರೆ.

ಹವ್ಯಾಸಿ ರಂಗಭೂಮಿಯ ಈ ದೈತ್ಯ ಪ್ರತಿಭೆಯನ್ನು ಕತೆಗಾರ, ರಂಗ ನಿರ್ದೇಶಕ ಡಿ.ಬಿ.ಮಲ್ಲಿಕಾರ್ಜುನಸ್ವಾಮಿ ಮಹಾಮನೆ ಅವರು ಆಪ್ತವಾಗಿ ಪರಿಚಯಿಸಿದ್ದಾರೆ. ಕತೆಗಾರನ ನಿರೂಪಣೆಯ ಸೊಗಸು ಹಾಗೂ ನಿಖರ ಮಾಹಿತಿಗಳು ಮೇಳೈಸಿವೆ. ಹವ್ಯಾಸಿ ರಂಗಭೂಮಿಯ ಹಲವು ಮಹತ್ವದ ಸಂಗತಿಗಳು ದಾಖಲಾಗಿರುವುದು ಈ ಪುಸ್ತಕದ ವಿಶೇಷ.

**–ಗುಡಿಹಳ್ಳಿ ನಾಗರಾಜ**

ಪ್ರಕಟಣಾ ಸಮಿತಿ ಸದಸ್ಯರು :
**ಕೆ. ಜಗುಚಂದ್ರ**
**ಉಮೇಶ್ ಸಾಲಿಯಾನ್**
**ಹಾಲ್ಕುರಿಕೆ ಶಿವಶಂಕರ್**

# ಕರ್ನಾಟಕ ನಾಟಕ ಅಕಾಡೆಮಿ

ಎಲ್.ಬಿ.ಶೇಖ (ಮಾಸ್ತರ)
ಅಧ್ಯಕ್ಷರು

ಸದಸ್ಯರು

ರಾಜಪ್ಪ ಕಿರಗಸೂರು
ಕಲ್ಪನಾ ನಾಗನಾಥ್
ಪಿ.ತಿಪ್ಪೇಸ್ವಾಮಿ
ಎಂ.ಎಸ್.ಗುಣಶೀಲನ್
ಮುದ್ದಣ್ಣ ರಟ್ಟೆಹಳ್ಳಿ
ಅನ್ನಪೂರ್ಣ ಸಾಗರ
ಗುಡಿಹಳ್ಳಿ ನಾಗರಾಜ
ಎಚ್.ಷಡಾಕ್ಷರಪ್ಪ ಹೊಸಮನಿ
ಶ್ರೀಪಾದ ಭಟ್
ಉಮೇಶ ಸಾಲಿಯಾನ್
ವಿ.ಎನ್.ಅಕ್ಕಿ
ಬಿ.ಎಂ.ರಾಮಚಂದ್ರ
ಎನ್.ಕೆ.ರಾಮಕೃಷ್ಣ
ಎ.ವರಲಕ್ಷ್ಮಿ
ಎಸ್.ಕೆ.ಕೊನೆಸಾಗರ
ಹಾಲ್ಕುರಿಕೆ ಶಿವಶಂಕರ್
ಎಲ್.ಎಚ್.ರಂಗನಾಥಪ್ಪ
ಕೆ.ಜಗುಚಂದ್ರ

ರಿಜಿಸ್ಟ್ರಾರ್:
ಸಿದ್ದರಾಜು

ಯೋಜನಾ ಸಹಾಯಕರು:
ಕೆ.ರೇವಣ್ಣ

ಕಚೇರಿ ಸಿಬ್ಬಂದಿ:
ಸೌಭಾಗ್ಯಲಕ್ಷ್ಮೀ, ಎಂ.ಭೋಜಣ್ಣ, ಸುಶೀಲಮ್ಮ

# ಮಹಾಮನೆಯ ಮಾತು

**ಯಾ**ವುದೇ ಸಾಮಾಜಿಕ ಹಿನ್ನೆಲೆ ಇಲ್ಲದ, ಸಾಂಸ್ಕೃತಿಕ – ಸಾಹಿತ್ಯಿಕ ಪರಂಪರೆಯ ಲವಲೇಶವು, ಗಂಧ ಗಾಳಿಯೂ ಇಲ್ಲದ ಮನೆಯಿಂದ ಬಂದವರು ಕೃಷ್ಣಪ್ಪ. ತಾಯಿಯ ಮುಖವನ್ನೇ ಕಾಣದ, ಅನಾಥ ಪ್ರಜ್ಞೆಯಲ್ಲೆ ಬಾಲ್ಯ ಕಳೆದ, ಪರರ ಮನೆಯಲ್ಲಿ ಬೆಳೆದ ಕೃಷ್ಣಪ್ಪನವರು ಬದುಕನ್ನು ರೂಪಿಸಿಕೊಳ್ಳಲಿಕ್ಕೆ, ನೆಲೆ ಕಾಣಲಿಕ್ಕೆ ದಾಟಿ ಬಂದ ದಾರಿಗಳು ಸುಗಮವೇನಾಗಿರಲಿಲ್ಲ. ಕಲ್ಲು ಮುಳ್ಳುಗಳ ಹಾದಿ, ಏರು – ತಗ್ಗುಗಳ ಬೀದಿ, ಪುಟ್ಟ ತೆಪ್ಪದಲ್ಲೆ ಸಪ್ತಸಾಗರವನ್ನು ದಾಟಿನೆಂಬ ಛಲ ಇವರದು, ಹಾಗಾಗೆ ತಮ್ಮ ನಂಬಿಕೆ, ಪರಿಶ್ರಮ, ಶ್ರದ್ಧೆ ಮತ್ತು ಬದ್ಧತೆ ಕೃಷ್ಣಪ್ಪನವರನ್ನು ಇನ್ನೂ ರಂಗದಲ್ಲಿ ಜೀವಂತವಾಗಿರಿಸಿದೆ. ಇವರ ಸಮಕಾಲೀನರು ಹಿಂದೆ ಸರಿದಿದ್ದಾರೆ. ಮನೆ ಸೇರಿದ್ದಾರೆ. ವಿಶ್ರಾಂತ ಜೀವನದಲ್ಲಿದ್ದಾರೆ. ಆದರೆ ಕೃಷ್ಣಪ್ಪನವರು ಇನ್ನೂ ಕ್ರಿಯಾಶೀಲ, ಇನ್ನೂ ಚಟುವಟಿಕೆಯ ಕೇಂದ್ರ, ಕಿರಿಯರೊಡನೆಯೂ ಬೆರತು ರಂಗ ಕೈಂಕರ್ಯ ಮಾಡುವ ಹಿರಿತನ. ಬೆಳಕು ವಿನ್ಯಾಸ, ರಂಗಶಿಬಿರ, ನಾಟಕ ನಿರ್ದೇಶನ, ರಂಗಪತ್ರಿಕೆ, ಸಂಘಟನೆ ಎಂದು ಹಲವಾರನ್ನು ಮೈಮೇಲೆ ಎಳೆದುಕೊಂಡು ಕೆಲಸ ಮಾಡುತ್ತಲೇ ಇದ್ದಾರೆ. ತಮ್ಮ ಕೆಲಸಗಳಲ್ಲಿ ತಮ್ಮ ಕುಟುಂಬವನ್ನು ತೊಡಗಿಸಿದ್ದಾರೆ. ಮಡದಿ ವಿನೋದಿನಿ, ಮಗಳು ಶ್ವೇತ ಶ್ರೀವಾಸ್ತವ್, ಮಗ ಶರದ್ ಎಲ್ಲರೂ ಇವರ ರಂಗಕಾಯಕಕ್ಕೆ ಕೈ ಜೋಡಿಸುತ್ತಲೇ ಇದ್ದಾರೆ. ಅಂತಹ ರಂಗ ಬದ್ಧತೆ ಇವರ ಕುಟುಂಬದ್ದು ಹಾಗೂ ಕೃಷ್ಣಪ್ಪನವರದು. ಸಿನಿಮಾ ನಟನಾಗಬೇಕೆಂದು ತಮ್ಮ ಕನಸನ್ನು ತಮ್ಮ ಮಗಳು 'ಶ್ವೇತಾ ಶ್ರೀವಾಸ್ತವ್' ಅವರಲ್ಲಿ ನನಸಾಗಿಸಿಕೊಳ್ಳುತ್ತಾರೆ ಕೃಷ್ಣಪ್ಪ. ಆ ಪಯಣದ ಹಾದಿಯೇನು ಸುಗಮವಲ್ಲ. ಅದೊಂದು ರೋಚಕ ಕತೆ.

ಬಿ.ವಿ. ಕಾರಂತರು ಕರ್ನಾಟಕದಲ್ಲಿ ನೆಲೆಯೂರಲು ಕೃಷ್ಣಪ್ಪನವರ ಕೊಡುಗೆ ಹಾಗೂ ತ್ಯಾಗ ಅಪಾರವಾದದ್ದು, ಆರ್. ನಾಗೇಶ್, ಪಿ. ಲಂಕೇಶ್, ಟಿ.ಎನ್ ಸೀತಾರಾಂ, ಪ್ರಸನ್ನ ಇನ್ನೂ ಅನೇಕರ ಕಾರ್ಯಗಳಲ್ಲಿ ಕೃಷ್ಣಪ್ಪನವರ ಪಾಲಿದೆ. 60ರ ದಶಕದಿಂದ 2010ರ ನಂತರವೂ ರಂಗಭೂಮಿಯಲ್ಲಿ ಸಕ್ರಿಯವಾಗಿರುವ ರಂಗಜೀವಿಯನ್ನು ನಾನು ಕಂಡಿಲ್ಲ. ತನಗೆ ವಯಸ್ಸಾಯಿತು. ತಾನು ಹಳೆಬ ಎಂದು ಕೃಷ್ಣಪ್ಪನವರಿಗೆ ಅನ್ನಿಸಿಯೇ ಇಲ್ಲ. ಈಗಲೂ ರಂಗದೆಡೆಗೆ ತುಯ್ಯುವ ಮನಸ್ಸು ಅವರದು. ಮೊನ್ನೆ ಮೊನ್ನೆಯಷ್ಟೆ ಬೆಂಗಳೂರಿನ ಕಲಾ ಕಾಲೇಜಿನ ವಿದ್ಯಾರ್ಥಿಗಳಲ್ಲಿ ಕನ್ನಡ ರಂಗಭೂಮಿಯ ಶ್ರೇಷ್ಠ ನಾಟಕಗಳಲ್ಲಿ ಒಂದಾದ ಕೆ.ವಿ. ನಾರಾಯಣರ 'ಹುತ್ತವ ಬಡಿದರೆ' ನಾಟಕವನ್ನು ನಿರ್ದೇಶಿಸಿದ್ದಾರೆ. ರಂಗಭೂಮಿಯ ಪರಿಚಯವಿಲ್ಲದ, ನಟನೆ ಎಂದರೆ ಏನೆಂದು ತಿಳಿಯದ ಹುಡುಗರಿಗೆ ನಾಟಕ ಕಲಿಸಿದ್ದಾರೆ. ಉತ್ತಮ ಅಭಿನಯ ತೆಗೆದಿದ್ದಾರೆ. ಇದು ಕೃಷ್ಣಪ್ಪನವರಲ್ಲಿರುವ ಚೈತನ್ಯ, ರಂಗದೆಡಗಿನ ಮಮಕಾರ. ರಂಗಭೂಮಿಯ ಮಾತು ಬಂದರೆ ಸಾಕು ಅವರ ದೇಹ ಚೈತನ್ಯದ ಚಿಲುಮೆಯಾಗುತ್ತದೆ. ಮನಸ್ಸು ಚಿಟ್ಟೆಯಂತೆ ಹಾರಾಡುತ್ತದೆ. ಮೈ ಮನದೊಳಗೆ ರಂಗಭೂಮಿ ತುಂಬಿಕೊಳ್ಳುತ್ತದೆ. ಸುತ್ತಲಿನದೆಲ್ಲವನ್ನು ಮರೆತು ಬಿಡುತ್ತಾರೆ. ರಂಗ ದೇವತೆ ಅವರ ದೇಹದೊಳಗೆ ಆವಾಹನೆಗೊಳ್ಳುತ್ತಾಳೆ.

ಇಂತಹ ಕೃಷ್ಣಪ್ಪನವರಿಗೆ ಸಲ್ಲಬೇಕಾಗಿರುವ ಸ್ಥಾನಮಾನಗಳು ಸಲ್ಲಲಿಲ್ಲ. ಇವರ ಸಮಕಾಲೀನರು ಹಾಗೂ ಇವರ ನಂತರ ರಂಗಕ್ಕೆ ಬಂದವರು ರಂಗದಲ್ಲಿ ಪಡೆಯಬಹುದಾದುದ್ದನ್ನೆಲ್ಲ ಪಡೆದಿದ್ದಾರೆ. ಅಲಂಕರಿಸಬೇಕಾದ ಸ್ಥಾನಗಳನ್ನು ಅಲಂಕರಿಸಿದ್ದಾರೆ. ಇದು ನನ್ನ ಅಭಿಪ್ರಾಯ. ಆದರೆ ಕೃಷ್ಣಪ್ಪನವರು ಇದ್ಯಾವುದಕ್ಕೂ ತಲೆ ಕೆಡಿಸಿಕೊಳ್ಳದೆ ಕೆಲಸ ಮಾಡುತ್ತಲೇ ಬರುತ್ತಿದ್ದಾರೆ. ಮುಂದುವರಿದಿದ್ದಾರೆ.

ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಎಲ್.ಬಿ. ಶೇಖ್ ಮಾಸ್ತರ್ ಹಾಗೂ ಸದಸ್ಯರಾದ ಶ್ರೀ ಗುಡಿಹಳ್ಳಿ ನಾಗರಾಜ ಅವರ 'ರಂಗ ಸಂಪನ್ನರು ಮಾಲಿಕೆ'ಗೆ ಶ್ರೀ ಕೃಷ್ಣಪ್ಪನವರ ಕುರಿತು ಪುಸ್ತಕ ಬರೆಯುವ ಜವಾಬ್ದಾರಿಯನ್ನು ನನಗೆ ವಹಿಸಿದ್ದಾರೆ. ಕೃಷ್ಣಪ್ಪನವರ ಬಗ್ಗೆ ನಾನಲ್ಲದೇ ಮತ್ತಾರು ಪುಸ್ತಕ ಬರೆದಾರು, ಎಂದು ನಾನು ಸಹ ಸಂತೋಷದಿಂದಲೇ ಅಕಾಡೆಮಿಯವರು ವಹಿಸಿರುವ ಕೆಲಸವನ್ನು ಸಂತೋಷದಿಂದಲೇ ಒಪ್ಪಿದ್ದೇನೆ.

ಕೃಷ್ಣಪ್ಪನವರ ಕುರಿತು ಪುಸ್ತಕ ಬರೆಯಲು ನಾನು ಒಪ್ಪಿಕೊಂಡಿದ್ದು ಎರಡು ಕಾರಣಗಳಿಂದ ಒಂದು ಅಕಾಡೆಮಿಯ ಮೇಲಿರುವ ಪ್ರೀತಿ, ಗೆಳೆಯರಾದ ಶೇಖ್

ಮಾಸ್ತರ್ ಮತ್ತು ಅವರ ಬಳಗ ಮಾಡುತ್ತಿರುವ ಅವರ ಕೆಲಸದ ಮೇಲಿನ ಮೆಚ್ಚುಗೆ, ಮತ್ತೊಂದು ಕೃಷ್ಣಪ್ಪನವರ ಮೇಲಿರುವ ಗೌರವ. 'ನಿಷ್ಕಾಮ ಕರ್ಮಿ'ಯಂತೆ, ಯಾವುದೇ ಮಮಕಾರವಿಲ್ಲದೆ ಇಲ್ಲಿ ದುಡಿಯುತ್ತಿರುವುದು. ನನ್ನಂತವನಿಗೆ ಮಾದರಿಯಾಗಿರುವುದು. ಹಾಗೂ ನನ್ನ ಕಷ್ಟದ ದಿನಗಳಲ್ಲಿ ನನ್ನೊಡನೆ ನಿಂತು ನನಗೆ ಧೈರ್ಯ ತುಂಬಿದ್ದು, ನನ್ನ ಜೊತೆ ಇದ್ದು ಸಹಕರಿಸಿದ್ದು. ಮಗದೊಂದು, ನನಗೆ ರಂಗಭೂಮಿ ಚರಿತ್ರೆಯನ್ನು ತಿಳಿಯಬೇಕೆಂಬ ಕುತೂಹಲ ಅದನ್ನು ನನ್ನ ಬರವಣಿಗೆಯಲ್ಲಿ ಹಿಡಿದಿಡಬೇಕೆಂಬ ತವಕ.

ತಮ್ಮ ಬೆಳಕಿನ ವಿನ್ಯಾಸದ ಕೌಶಲ್ಯಕ್ಕೆ ತಮ್ಮ ಓರಿಗೆಯವರಿಂದ 'ದೀವಟಿಗೆ ಕೃಷ್ಣಪ್ಪ' ಎಂದೇ ಹೆಸರಾಗಿರುವ ಕೃಷ್ಣಪ್ಪನವರು ನಾನು ಮೊದಲೇ ಹೇಳಿದಂತೆ 60ರ ದಶಕದಿಂದ ಇಲ್ಲಿಯವರೆಗೂ ಅಂದರೆ 5 ದಶಕಗಳಿಗೂ ಮೀರಿ ರಂಗದಲ್ಲಿರುವರು. ಅಷ್ಟು ವರ್ಷಗಳ ರಂಗ ಸಾಧನೆಯನ್ನು, ಅವರ ರಂಗ ತಪಸ್ಸನ್ನು, ಧ್ಯಾನವನ್ನು ಈ ಪುಟ್ಟ ಪುಸ್ತಕದಲ್ಲಿ ಹಿಡಿದಿಡಲಾಗುವುದಿಲ್ಲ. ಅದು ತಮಗೂ ಗೊತ್ತಿದೆ. ಎಲ್ಲದ್ದಕ್ಕೂ ಒಂದು ಮಿತಿ ಇರುತ್ತದೆ. ಒಂದು ಚೌಕಟ್ಟಿರುತ್ತದೆ. ಅದರಂತೆ ಅಕಾಡೆಮಿಯೂ ಈ ಕೆಲಸಕ್ಕೂ ಒಂದು ಮಿತಿ ಹಾಕಿಕೊಂಡಿದೆ. ಹಲವು 'ರಂಗ ಸಂಪನ್ನರ' ಕುರಿತು ಪುಸ್ತಕಗಳು ಬರುತ್ತಿವೆ. ಅಕಾಡೆಮಿಯೂ ಸಹ ಕಾಲ ಮಿತಿ, ಆರ್ಥಿಕ ಮಿತಿ ಇಂತಹ ಮಿತಿಗಳಲ್ಲೆ ಕೆಲಸ ಮಾಡಬೇಕಾಗಿದೆ. ಅನಿವಾರ್ಯತೆ ಇದೆ. ಬರಹಗಾರರು ಸಹ ಅಕಾಡೆಮಿಯೊಡನೆ ಸಹಕರಿಸಬೇಕಾಗಿದೆ. ಕೃಷ್ಣಪ್ಪನವರ ಸಂಪೂರ್ಣ ರಂಗಚರಿತ್ರೆಯನ್ನು ಕೊಡಲಾಗುತ್ತಿಲ್ಲವಲ್ಲ ಎಂಬ ಕೊರಗಿನೊಡನೆಯೇ ನಾನು ಈ ಕೃತಿಯನ್ನು ನಿಮ್ಮ ಮಡಲಿಗಿಡುತ್ತಿದ್ದೇನೆ.

ಕೃಷ್ಣಪ್ಪನವರ ಕುರಿತು ಬರೆಯುತ್ತಿದ್ದಂತೆ, ಅವರೊಡನೆ ಮಾತಿಗಿಳಿಯುತ್ತಿದ್ದಂತೆ, ಅವರ ಜೊತೆ ಮುಖಾಮುಖಿಯಾಗುತ್ತಿದ್ದಂತೆಯೆ 5 ದಶಕಗಳ 'ರಂಗ ಲೋಕ' ತೆರೆದುಕೊಳ್ಳುತ್ತಾ ಹೋಯಿತು. 50 ವರ್ಷಗಳ ಚರಿತ್ರೆ ಅನಾವರಣವಾಯಿತು. ನಾನೇನು ಕೃಷ್ಣಪ್ಪನವರ ಕುರಿತು ಬರೆಯುತ್ತಿದ್ದೇನೆಯೇ ಅಥವಾ 50 ವರ್ಷಗಳ ಕನ್ನಡ ರಂಗಭೂಮಿಯ ಚರಿತ್ರೆ ಬರೆಯುತ್ತಿದ್ದೇನೆಯೇ ಎಂದು ಭಾಸವಾಗಲು ತೊಡಗಿತು. ಅಷ್ಟೊಂದು, ಮಾಹಿತಿಗಳು, ಅಷ್ಟೊಂದು ಕತೆಗಳು, ಅಷ್ಟೊಂದು ಸಾಧನೆಗಳು, ಅಷ್ಟೊಂದು ಕಲಾವಿದ – ಕಲಾವಿದೆಯರು, ಅಷ್ಟೊಂದು ತಂಡಗಳು ನನ್ನ ಕಣ್ಮುಂದು ಬರಲು ಪ್ರಾರಂಭಿಸಿತು. ನಾನೊಬ್ಬನೇ ಏಕೆ ಆ 'ಮೆರವಣಿಗೆ'ಯನ್ನು ನೋಡಿ ಆನಂದಿಸಬೇಕು. ನಿಮಗೂ ಆ 'ಆನಂದ' ಸಿಗಲಿ ಎಂದು ಅದನ್ನು ನಿಮಗೂ ತೋರುತ್ತಿದ್ದೇನೆ. ತೆರೆದಿಟ್ಟಿದ್ದೇನೆ. ನಿಮ್ಮದಾಗಿಸಿಕೊಳ್ಳಿ,

ಕೃಷ್ಣಪ್ಪನವರ ಬಗ್ಗೆ ಬರೆಯುವುದು ಇನ್ನೂ ಇದೆ. ಹೇಳುವುದು ಮುಗಿಯಲಿಕ್ಕಿಲ್ಲ. ಇನ್ನೂ ಬರೆಯಬೇಕಾಗಿತ್ತಲ್ಲ ಎಂಬ ಕೊರಗನ್ನು ಬಿಟ್ಟರೆ ನನಗೆ 'ಈ ಕೆಲಸ' ತೃಪ್ತಿ ತಂದಿದೆ. ಇದನ್ನು ಆಗು ಮಾಡಿದ, ನನ್ನಿಂದ ಕೃಷ್ಣಪ್ಪನವರ ಕುರಿತು ಪುಸ್ತಕ ಬರೆಸಿದ ನನ್ನ ಮೇಲೆ ನಂಬಿಕೆ ಇಟ್ಟು ಜವಾಬ್ದಾರಿ ನೀಡಿದ 'ಕರ್ನಾಟಕ ನಾಟಕ ಅಕಾಡೆಮಿಯ' ಅಧ್ಯಕ್ಷರು ಹಾಗೂ ಸದಸ್ಯರೆಲ್ಲರಿಗೆ, ಅಲ್ಲಿಯ ಅಧಿಕಾರಿ ವರ್ಗಕ್ಕೆ ನಾನು ಋಣಿಯಾಗಿದ್ದೇನೆ. ಹಾಗೆಯೆ ಪುಸ್ತಕ ಬರೆಯುವ ಸಂದರ್ಭದಲ್ಲಿ ಹಲವು ಮಾಹಿತಿ ನೀಡಿ ತಮ್ಮ ಕತೆ ಹೇಳುತ್ತಾ ಬಂದ ಕೃಷ್ಣಪ್ಪನವರಿಗೆ, ಅದಕ್ಕೆ ಸಹಕರಿಸಿದ ಅವರ ಮಡದಿ, ಮಕ್ಕಳಿಗೆ ನನ್ನ ನಮನಗಳು.

ಅಂದವಾಗಿ ಮುದ್ರಿಸಿದ ರೀಗಲ್ ಪ್ರಿಂಟ್ ಸರ್ವೀಸ್‌ನ ಮಾಲೀಕರಾದ ಎಂ. ವೆಂಕಟೇಶ್ ಹಾಗೂ ಅವರೆಲ್ಲಾ ಸಿಬ್ಬಂದಿವರ್ಗಕ್ಕೆ ನಮಸ್ಕಾರ.

**– ಡಿ.ಬಿ ಮಲ್ಲಿಕಾರ್ಜುನಸ್ವಾಮಿ ಮಹಾಮನೆ**

# ಕೃಷ್ಣ ಕತೆ

## ಕೃಷ್ಣಾಷ್ಟಮಿಗೂ (ಗೋಕುಲಾಷ್ಟಮಿಗೂ) ಸಾಬರಿಗೂ ಏನು ಸಂಬಂಧ?

**ಕೃ**ಷ್ಣಾಷ್ಟಮಿಗೂ ಸಾಬರಿಗೂ ಏನ್ ಸಂಬಂಧ ಅನ್ನುವ ಮಾತು ನಮ್ಮಲ್ಲಿ ಚಾಲ್ತಿಯಲ್ಲಿದೆ. ಇದು ನಿಮಗೆ ಗೊತ್ತಿರಬಹುದು. ಹಾಗೆಯೇ ಹೈದರಾಲಿಗೂ ನಮ್ಮ ಕೃಷ್ಣನಿಗೂ ಏನ್ ಸಂಬಂಧ ಅನ್ನುವ ಮಾತು ಹೇಳಿದರೆ ನಿಮಗೆ ಏನೂ ಅರ್ಥ ಆಗುವುದಿಲ್ಲ. ಯಾವ ಹೈದರ, ಯಾವ ಕೃಷ್ಣ, ಏನು ಕಥೆ ಎನ್ನುವ ಪ್ರಶ್ನೆ ನಿಮ್ಮಲ್ಲಿ ಏಳಬಹುದು. ಅಥವಾ ಏನೂ ಅರ್ಥವಾಗದೆ ನೀವು ಸುಮ್ಮನಾಗಬಹುದು ಅಥವಾ ಇದ್ಯಾವುದೋ ಹಿಂದೂ-ಮುಸ್ಲಿಂ ಹುಡುಗರ ಬಾಂಧವ್ಯದ ಕಥೆ ಇರಬಹುದು ಎಂದುಕೊಳ್ಳಬಹುದು. ನಾವು ಸ್ವಲ್ಪ ಚರಿತ್ರೆ ಕಡೆ ನೋಡೋಣ. ಅಂದ್ರೆ ಇತಿಹಾಸದ ಪುಟಗಳನ್ನು ತಿರವಿ ಹಾಕೋಣ. ಮೈಸೂರು ದೊರೆಗಳನ್ನು ಪಕ್ಕಕ್ಕೆ ಸರಿಸಿ ಮೈಸೂರು ಸಂಸ್ಥಾನವನ್ನು ತನ್ನ ತೆಕ್ಕೆಗೆ ತೆಗೆದುಕೊಂಡವನು, ತನ್ನದೇ ಆದ ಸಾಮ್ರಾಜ್ಯ ಕಟ್ಟಿದವನು, ಸಾಮಾನ್ಯನೊಬ್ಬನ ಮಗ, ಓದು ಬರಹ ಗೊತ್ತಿಲ್ಲದವನು, ನಿರಕ್ಷರಕುಕ್ಷಿ, ಮೈಸೂರು ಪಡೆಯೊಳಗಿನ ಕಾಲಾಳುವಿನ ಕೂಸು, ಹೇಳಹೆಸರಿಲ್ಲದವನು ತನ್ನ ಸಾಮರ್ಥ್ಯ, ಬುದ್ಧಿವಂತಿಕೆ, ಚತುರತೆ, ಚಾಣಾಕ್ಷತನ ಮತ್ತು ಪರಿಶ್ರಮ, ಛಲ, ಇವುಗಳ ಬಲದಿಂದಲೇ ಮೇಲೆ ಬಂದವನು ಅರಸನಾದವನು, 'ಸುಲ್ತಾನ' ಎನಿಸಿಕೊಂಡು "ಹೈದರಾಲಿಖಾನ್" ಶ್ರೀರಂಗಪಟ್ಟಣವನ್ನು ರಾಜಧಾನಿ ಮಾಡಿಕೊಂಡು ಮೈಸೂರು ಆಳಿದವನು. ತಮಗೆ ಈತ ಗೊತ್ತು ತಾನೆ?

ಈ ಹೈದರನಿಗೆ ತೋಟಗಾರಿಕೆ ಮಾಡುವುದೊಂದು ಹವ್ಯಾಸ, ಹುಚ್ಚು, ಒಂದು ಖಯಾಲಿ ಹಾಗೂ ಒಂದು ಬದ್ಧತೆ. ಎಕರೆಗಟ್ಟಲೆ ಕೈ ತೋಟ, ಅಲ್ಲಿ ತರಾವರಿ ಮರ ಗಿಡಗಳು, ಗಿಡ ಬಳ್ಳಿಗಳು, ಬಳ್ಳಿ ಬಳ್ಳಿ ಬಳಕುವ ಲತೆಗಳು, ಲತೆ ಲತೆಗಳ ಮೊದರು, ಮೊದರು ಮೊದರಿನ ಹೂದರುಗಳು ತರತರದ, ಬಣ್ಣ ಬಣ್ಣದ ಹೂಗಳು. ಹೂ ಹೂವಿನೊಳಗಣ ಪರಾಗ, ಪರಾಗದೊಳಗಣ ಮಕರಂದ, ದುಂಬಿ ಮರಿದುಂಬಿ, ಜೇನು, ಕಿರುಜೇನು, ಹೆಜ್ಜೇನು, ಪಟ್ಟೆ ಪಟ್ಟೆ ಚಿಟ್ಟೆ, ಪತಂಗ, ಪಾತರಗಿತ್ತಿ, ಗಿಣಿ ಗೊರವಂಕ, ಕೋಗಿಲೆ-ಕಾಜಾಣ, ನಲಿವ ನವಿಲು, ನೆಗೆವ ಅಳಿಲು, ಮೊಲ, ಕಪಿ-ಪಿಕ ಕೃಷ್ಣಂಮೃಗ, ಜಿಂಕೆ, ಸಾರಂಗ, ಅದೊಂದು ಲೋಕ. ಭುವಿಯ ಬಸಿರಿನಿಂದ ಹಸಿರ

ಸ್ವರ್ಗವ ಸೃಷ್ಟಿಸುವ ಕನಸು. ಇಂತಹದೊಂದು ಹಸಿರ ಜಗತ್ತನ್ನು 1758ರ ಸುಮಾರಿನಲ್ಲಿ ಹೈದರ ಬೆಂಗಳೂರಿನಲ್ಲಿ ನಿರ್ಮಿಸುತ್ತಾನೆ.

ಭೂಮಿಯೇ ಬದುಕಾಗಿದ್ದ, ಇಳೆಯೇ ಉಸಿರಾಗಿದ್ದ ಧರೆಯ ಮಕ್ಕಳು; ಮೂಡಣ ದಿಕ್ಕಿನ ದ್ರಾವಿಡ ನಾಡಿನ ಹೊಸೂರು ಕಡೆ ಅಲ್ಲಲ್ಲಿ ತೋಟಗಾರಿಕೆಯಲ್ಲಿ ನಿಪುಣರೆನಿಸಿದ್ದ ತಿಗಳರು ಹೈದರನ ಕಣ್ಣಿಗೆ ಬೀಳುತ್ತಾರೆ. ಅಲ್ಲಿ ಕುಶಲ ಕಸುಬುದಾರಿರುವ ಸುದ್ದಿ ಅವನ ಕಿವಿಯನ್ನು ನಿಮಿರುಸುತ್ತದೆ. ಗುಣಗ್ರಾಹಿಯಾದ, ಕುಶಲಮತಿಯೂ ಆದ ಕೋವಿದರ ತಲಾಷಿನಲ್ಲಿದ್ದ ಹೈದರನು ಈ ತಿಗಳರನ್ನು ಬೆಂಗಳೂರಿಗೆ ಕರೆಸಿಕೊಳ್ಳುತ್ತಾನೆ. ಸಿದ್ದಾಪುರ – ಮಾವಳ್ಳಿ – ಕನಕನಪಾಳ್ಯ, – ಚಿನ್ನಯ್ಯ ಗಾರ್ಡನ್ ಇವುಗಳ ಸನಿಹದ ಬಯಲಿನಲ್ಲಿ ಆತನ ಕನಸನ್ನು ಸಾಕಾರಗೊಳಿಸುತ್ತಾನೆ. ಅಲ್ಲೊಂದು ಕೈ ತೋಟ ಬೆಳೆಸುತ್ತಾನೆ. ದೇಶ ವಿದೇಶಗಳ ಹಸಿರ ಸಂಕುಲ ಬೆಂಗಳೂರಿಗೆ ಬರುತ್ತವೆ. ತಿಳಿಗೆಂಪು, ರಣಕೆಂಪು, ರಕ್ತಗೆಂಪಿನ ಲಾಲು ಗುಲಾಲಿನ ಗುಲಾಬಿ ಹೂಗಳು ಇಲ್ಲಿ ಅರಳುತ್ತವೆ. ಆ ತೋಟಕ್ಕೆ ಹೈದರ ಲಾಲ್‌ಬಾಗ್ ಎಂದು ಹೆಸರಿಡುತ್ತಾನೆ. ಆ ಲಾಲ್‌ಬಾಗಿನ ಬಸಿರೊಳಗೆ ಉಸಿರಚೆಲ್ಲಿ ಹಸಿರ ಚಿಗುರಿಸಿದವರು ಈ ತಿಗಳರು. ಮದ್ರಾಸು ಮೂಲದವರು ಎನ್ನುತ್ತಾರೆ ಇವರನ್ನು. ಮೂಲ ದ್ರಾವಿಡರ ಬಣ್ಣ, ಕಟ್ಟುಮಸ್ತು ಆಳ್ತನ, ಕೃಷ್ಣ (ತಿಮ್ಮಪ್ಪ) ಚೆಲುವು ಗಂಡಸರಿಗಾದರೆ, ಕನ್ನಗಿಯ ಚೆಲುವು ಹೆಂಗಳೆಯರಿಗೆ. ಹಾಗೆ ಬೆಂಗಳೂರಿಗೆ ಬಂದ ತಿಗಳರ ಕುಡಿಯೊಳಗೆ ಯಾವುದೋ ಒಂದು ತಲೆ, ಅಪ್ಪನ ಅಪ್ಪನೊ, ಅವರ ಅಜ್ಜನೊ, ಅಜ್ಜನಜ್ಜನೊ ಯಾರೋ ಒಬ್ಬ ನಮ್ಮ ಈ ಕೃಷ್ಣನ ತಾತ ಮುತ್ತಾತ ಕೋಲು ತಾತನಾಗಿದ್ದನೆಂಬುದು ಚರಿತ್ರೆ ವಂಶಾವಳಿ. ಆ ಹೈದರನ ಕಾರಣ ಈ ಲಾಲುಬಾಗಿನ ಕಾರಣ ಅವರು ಇಲ್ಲಿಗೆ ಬಂದರು. ಆ ವಂಶದ ಬಳ್ಳಿ ನಮ್ಮ ಕೃಷ್ಣ, ಕೃಷ್ಣಪ್ಪ, ಈ ಮಾಸದ ಕೃಷ್ಣಪ್ಪ, ಯಾನೆ ದೀವಟಿಗೆ ಕೃಷ್ಣಪ್ಪ, ಎಲ್ ಕೃಷ್ಣಪ್ಪ.

## ಎಲ್ ಕೃಷ್ಣಪ್ಪ – ಎಲ್ ಹೈದರ ಎಲ್ಲಿಗೆಲ್ಲಿಗೆ ಸಂಬಂಧ?

ಆ ಹೈದರಿನಗೂ ಈ ಕೃಷ್ಣನಿಗೂ ಇರುವ ಸಂಬಂಧದ ಒಗಟು ಬಿಡಿಸಿದಂತಾಯಿತೆಂದು ನಾನು ಭಾವಿಸುತ್ತೇನೆ. ಗೊಂದಲವಿಲ್ಲದ ನಿಮ್ಮ ಪ್ರಸನ್ನವಾಗಿರುವ ಮುಖವನ್ನು ಕಾಣುತ್ತಿದ್ದರೆ ನಿಮಗೂ ತಿಳಿಯಿತೆಂದು ನನಗೂ ಭಾಸವಾಗುತ್ತಿದೆ. ಈ ಕತೆ ಇಲ್ಲಿಗೆ ಮುಗಿಯುವುದಿಲ್ಲ. ಇವರಿಬ್ಬರ ನಡುವೆ ಮತ್ತಷ್ಟು ಹೋಲಿಕೆಗಳಿವೆ. ಹೈದರನಂತೆ ತನ್ನ ಸ್ವಂತ ಪರಿಶ್ರಮದಿಂದಲೇ ಈ ರಂಗಭೂಮಿಯಲ್ಲಿ, ಈ ರಂಗು ರಂಗು ಭೂಮಿಯಲ್ಲಿ ಮೇಲೆ ಎದ್ದವರು, ಬೆಳೆದವರು, ಗುರುತಿಸಲ್ಪಡುವ ವ್ಯಕ್ತಿಯಾದವರು. ಕೃಷ್ಣಪ್ಪನರೂ ಹೈದರನಂತೆ ಮಹತ್ವಾಕಾಂಕ್ಷೆ ಉಳ್ಳವರು. ಸಾಧಿಸುವ ಛಲ ಉಳ್ಳವರು. ಹೈದರ ಅಕ್ಷರ ಬಲ್ಲವನೇನಲ್ಲ. ಕೃಷ್ಣಪ್ಪನವರು ಹೆಚ್ಚು ಓದಬೇಕೆಂಬ ಹಂಬಲವಿದ್ದರೂ ಹೆಚ್ಚಿನ ವಿದ್ಯಾಭ್ಯಾಸ ಕಂಡವರಲ್ಲ. ಹೈದರ್ ಸಾಮಾನ್ಯ

ಕುಟುಂಬದಿಂದ ಬಂದವನು. ಕೆಳಮಧ್ಯಮ ವರ್ಗವೂ ಅಲ್ಲ. ಕೃಷ್ಣಪ್ಪನವರ ಕುಟುಂಬವೂ ಹಾಗೆ. ತುಂಡು ಭೂಮಿಯನ್ನೂ ಕಾಣದವರು. ಬೇರೆಯವರ ಭೂಮಿಯನ್ನು ನಂಬಿದವರು. ಏನೂ ಇಲ್ಲದವನು ಸಾಮ್ರಾಜ್ಯ ಕಟ್ಟುತ್ತಾನೆ ಹೈದರ್. ಇವರೂ ಅಷ್ಟೇ ಏನೂ ಅಲ್ಲದವರು ರಂಗಸಾಮ್ರಾಜ್ಯದ ಸಾರಥಿಯಾಗುತ್ತಾರೆ. ಬೆಳಕಾಗುತ್ತಾರೆ. ಎರಡೂ ಮೂರು ದಶಕಗಳು ಕೃಷ್ಣಪ್ಪನವರಿಲ್ಲದ ನಾಟಕಗಳಿಲ್ಲ. ಆಧುನಿಕ ದಿನಮಾನದ ರಂಗಭೂಮಿಯಲ್ಲಿ ಬಿಚ್ಚುಕೊಳ್ಳುತ್ತದ್ದ ನಾಟಕಗಳು ಬೆಳಕು ಕಾಣಬೇಕೆಂದರೆ ಕೃಷ್ಣಪ್ಪನವರು ಬೇಕೇಬೇಕು. ಎಲ್ಲೆಲ್ಲಿ ನೋಡಿದರೂ ಕೃಷ್ಣಪ್ಪನವರ ಬೆಳಕೇ ಬೆಳಕು! ರಂಗಕ್ಕೆ 'ದೀಪ' ಹಿಡಿದವರು, ನಾಟಕಕ್ಕೆ 'ಬೆಳಕು' ಕೊಟ್ಟವರು, 'ದೀವಟಿಗೆ ಕೃಷ್ಣಪ್ಪ' ಎಂದೇ ಜನಜನಿತವಾದವರು. ಇದು ಹೈದರ್ ಹಾಗೂ ಕೃಷ್ಣಪ್ಪನವರಿಗಿರುವ ಹೋಲಿಕೆ ಹಾಗೂ ಸಾಮ್ಯತೆ. ಇಂಥಾ ಕೃಷ್ಣನು ಮುಂದೆ ರಂಗಭೂಮಿಯಲ್ಲಿ ಹೆಜ್ಜೆ ಮೂಡಿಸಿದ ಪರಿ ಪರಿಯ ಚಿತ್ರಗಳನ್ನು ನಿಮ್ಮ ಮುಂದಿಡುತ್ತಿದ್ದೇನೆ. ನೀವು ಸ್ವೀಕರಿಸಬೇಕು.

## ಅಸ್ತವ್ಯಸ್ತ ಬಾಲ್ಯಾವಸ್ಥೆ

ಆಗ ಬಹು ಹಿಂದೆ ಬೆಂಗಳೂರಿಗೆ ಪ್ಲೇಗು ಹಾಗೂ ಕಾಲಾರಾದ ಹಾವಳಿ. ಜನ ತತ್ತರಿಸಿ ಹೋದರು. ಸತ್ತವರು ಹಲವು ಮಂದಿ, ಬದುಕಿದವರು ಕೆಲವು ಮಂದಿ. ಬದುಕಿದರೆ ಸಾಕೆಂದು ದಾರಿ ಕಂಡತ್ತ ಓಡಿದವರು ಕೆಲವರು. ಮತ್ತೆ ಕೆಲವರು ತಮ್ಮ ಊರಿನತ್ತ ನಡೆದವರು, ಬದುಕುಳಿದರು. ಹಾಗೆ ನೆಲೆಯೂರಿದ್ದ ಮಾವಳ್ಳಿಯಿಂದ ಪೂರ್ವಿಕರ ಊರು ಆನೇಕಲ್ ಹಾಗೂ ಹೊಸೂರಿನ ನಡುವಿದ್ದ ಹೆನ್ನಾಗರಕ್ಕೆ ಬಂದು ಜೀವ ಉಳಿಸಿಕೊಳ್ಳುತ್ತಾರೆ ಕೃಷ್ಣನ ತಾತಂದಿರು. ತಾತ ಅಲ್ಲೇ ಉಳಿದು ಅವರಿವರ ಜಮೀನಿನಲ್ಲಿ ದುಡಿಯುತ್ತಾರೆ. ಕುಲಕಸುಬು ತೋಟಗಾರಿಕೆಯನ್ನು ಮುಂದುವರಿಸುತ್ತಾರೆ. ಕೃಷ್ಣನ ತಂದೆ ಲಕ್ಷ್ಮಯ್ಯನವರು ಅವರಪ್ಪನ ಹಾದಿ ಹಿಡಿಯುತ್ತಾರೆ. ವಯಸ್ಸಿಗೆ ಬಂದ ಮೇಲೆ ಪೂರ್ವಿಕರು ನೆಲೆಸಿದ್ದ ಬೆಂಗಳೂರಿನ ಮಾವಳ್ಳಿಯ ಕಡೆ ಸಂಬಂಧ ಹುಡುಕಿಕೊಂಡು ಬಂದು ಪಳುವಕ್ಕ(ರಾಮಕ್ಕ)ವರನ್ನು ಮದುವೆ ಆಗುತ್ತಾರೆ. ಈ ದಂಪತಿಗಳಿಗೆ ಮೂವರು ಹೆಣ್ಣುಮಕ್ಕಳು ಹಾಗೂ ಒಂದು ಗಂಡುಮಗು ನಂತರ ಕೃಷ್ಣ ಹುಟ್ಟುತ್ತಾನೆ. ಕೃಷ್ಣನಿಗೆ ಅರಿವು ಬರುವಷ್ಟರಲ್ಲಿ ಅವರ ತಾಯಿ ಇರಲ್ಲ. ಬಟ್ಟೆ ಒಗೆಯಲಿಕ್ಕೆಂದು ಹೆನ್ನಾಗರದ ಕುಂಟಗೆ ಹೋದ ಪಳುವಕ್ಕನವರು ಕಾಲುಜಾರಿ ಬಿದ್ದು ಇಲ್ಲವಾಗುತ್ತಾರೆ. ಕೃಷ್ಣನ ಪಾಲಿಗೆ ಅಮ್ಮ ಇಲ್ಲ. ಕೃಷ್ಣ ತಾಯಿ ಕಾಣದ ತಬ್ಬಲಿ. ದ್ವಾಪರದ ಕೃಷ್ಣನೂ ಸಹ ಅಮ್ಮನ ಪ್ರೀತಿ ಪಾಲನೆಯಿಂದ ದೂರವಾದಂತೆ ಇವನೂ ಸಹ ಅಮ್ಮನ ಪ್ರೀತಿಯಿಂದ ವಂಚಿತರಾಗುತ್ತಾನೆ. ಅಪ್ಪ ಮತ್ತೊಂದು ಮದುವೆಯಾಗುತ್ತಾರೆ. ಗೋಕುಲದ ಕೃಷ್ಣ ಮಥುರೆಗೆ ಬಂದಂತೆ ಕೃಷ್ಣ

ಹೆನ್ನಾಗರ ಬಿಡಬೇಕಾಗುತ್ತದೆ. ಅಲ್ಲಿಂದ ಬೆಂಗಳೂರಿಗೆ ಬರುತ್ತಾರೆ. ಅಮ್ಮನ ತೌರು, ಮಾವಳ್ಳಿಯ ಸಂಬಂಧಿಕರ ಮನೆ ಸೇರುತ್ತಾರೆ. ಹಾಗೆಯೇ ಅಕ್ಕಂದಿರು ಸಹ ಅವರಿವರ ಮನೆ ಸೇರುತ್ತಾರೆ. ಆ ಮನೆಗಳಲ್ಲಿ ಕೆಲಸ ಮಾಡುತ್ತಲೇ ಬದುಕು ಕಾಣುತ್ತಾರೆ. ಕೃಷ್ಣ ಮಾವಳ್ಳಿ ಸೇರಿದಾಗ ಒಂದುವರೆ ವರ್ಷ. ಅವರು ಆ ಮನೆ ಹೋದಂದಿನಿಂದಲೇ ಅನಾಥತೆ ಕಾಡುತ್ತದೆ. ಸುಖದ ದಿನಗಳೇನಾಗಿರಲಿಲ್ಲ ಅವು. ಬಾಲ್ಯದ ಯಾವ ಅನುಭವಗಳೂ ಅವರಿಗಾಗಲಿಲ್ಲ. ಅಮ್ಮನ ಅಪ್ಪುಗೆ ಇಲ್ಲ. ಅಪ್ಪನ ಸಾನಿಧ್ಯವಿಲ್ಲ. ಅಕ್ಕತಂಗಿಯರ ಒಡನಾಟವಿಲ್ಲ. ಯಾವ ಪ್ರೀತಿಯ ಮಾತುಗಳಿಲ್ಲಿ ಏನಿಲ್ಲದಿದ್ದರೂ ಅಲ್ಲಿರಲೇಬೇಕಾದ ಅನಿವಾರ್ಯತೆ. ಅನ್ನದ ಆಶ್ರಯಕ್ಕಾಗಿ ಆಸರೆಯೊಂದು ಬೇಕಾಗಿತ್ತಲ್ಲ. ಇವರಿಗಾಗಿ ಕಣ್ಣೀರು ಸುರಿಸುತ್ತಿದ್ದವರು ಯಾರಿದ್ದರಲ್ಲಿ? ಇದಾವುದರ ಪರಿವೇಯೂ ಇಲ್ಲ. ಅದು ಗೊತ್ತಾಗುವ ವಯಸ್ಸೂ ಅಲ್ಲ. ಎಲ್ಲರಂತೆ ಆಟ ಪಾಠಗಳಲ್ಲಿ ನಲಿದಾಡಬೇಕು, ಶಾಲೆಗೆ ಹೋಗಬೇಕು ಅಮ್ಮನ ಮಡಿಲಲ್ಲಿ ಮಲಗಬೇಕು, ಇದ್ಯಾವುದೂ ತಿಳಿಯದ ವಯಸ್ಸು ಅದು. ಆ ಕೃಷ್ಣನದು.

## ಮಾವಳ್ಳಿಯ ಕುಟೀರದಲ್ಲಿ ಪುಟ್ಟ ಗೊಲ್ಲ ಕೃಷ್ಣ

ಈಗಿನ ಮಿನರ್ವ ಟಾಕೀಸು, ಅದರ ಅಕ್ಕಪಕ್ಕದ ಸುತ್ತಮುತ್ತಲ ಜಾಗ ಮಾವಳ್ಳಿ. ಅದೊಂದು ಹಳ್ಳಿ ಆಗ. ಈಗ ತನ್ನ ಒಡಲೊಳಗೆ ಹಳ್ಳಿಯ ಎಲ್ಲಾ ಗುಣಲಕ್ಷಣಗಳನ್ನೂ ಉಳಿಸಿಕೊಂಡು ನಗರವಾಗಿದೆ. ನಗರದ ಒಂದು ಭಾಗವಾಗಿದೆ. ಬಡಾವಣೆಯಾಗಿದೆ. ಮಾವಳ್ಳಿಯ ಈಶ್ವರ ದೇವಸ್ಥಾನದ ಹಿಂಭಾಗದಲ್ಲಿ ಒಂದು ಇತರೆ ಜನವರ್ಗಗಳ ಕೇರಿಯಿದ್ದ ವಠಾರ. ಅದೇ ಅಣ್ಣಯ್ಯಪ್ಪನವರ ಮನೆ. ಕೃಷ್ಣಪ್ಪನವರ ತಾಯಿಯ ಕಡೆಯ ಸಂಬಂಧಿ. ಸಬ್‌ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಜವಾನನ ಕೆಲಸ. ಆತನಿಗೆ ಮಕ್ಕಳಿಲ್ಲದ್ದರಿಂದ ಕೃಷ್ಣನನ್ನು ಸಾಕಿಕೊಳ್ಳುತ್ತಾರೆ ಅವರು.

ಆ ವಠಾರದಲ್ಲಿ ಇದ್ದವರೆಂದರೆ ಕುಲುಮೆಕೆಲಸ ಮಾಡುತ್ತಿದ್ದ ರಾಜಗೋಪಾಲ, ಆತನ ಹೆಂಡತಿ ಅಲಮೇಲು ಮಂಗಮ್ಮ, ಟೈಲರ್ ಮುನಿಸ್ವಾಮಿ, ಆತನ ಹೆಂಡತಿ ಮಂಗಮ್ಮ, ಪೈಂಟರ್ ಚಿನ್ನತಂಬಿ, ಆತನ ಹೆಂಡತಿ ಅಚ್ಚಮ್ಮ, ಗೋವಿಂದರಾಜು, ಆತನ ಹೆಂಡತಿ ಸತ್ಯಕ್ಕ, ಜಯರಾಮ, ಸೀನ, ಬಿ.ಕಂಗನ್, ಷಣ್ಮುಗಂ, ಸತ್ಯ ಹೀಗೆ ಬೇರೆ ನಾನಾವಿಥಧ ಜನ. ಬೇರೆ ಬೇರೆ ಕೆಲಸದವರು. ವಿವಿಧ ಭಾಷೆ, ಸಂಸ್ಕೃತಿಯವರು ಅಲ್ಲಿದ್ದರು. ಹೊತ್ತು ಮೂಡುವ ಮುನ್ನವೇ ಮನೆ ಮನೆಗೆ ಹಾಲಾಕುವ ಹಾಲಮ್ಮಂದಿರು, ಕೆ. ಆರ್.ಮಾರ್ಕೆಟ್‌ನಿಂದ ತರಕಾರಿ ಗೂಡೆಯನೊತ್ತು ಬಿರಬಿರನೆ ಹೆಜ್ಜೆ ಹಾಕುತ್ತಿದ್ದ ತಮಿಳಿಗರು, ಸುತ್ತಮುತ್ತಲ ದೇವಾಲಯಗಳಲ್ಲಿ ಪೂಜೆ ಮಾಡಲು ತೆರಳುತ್ತಿದ್ದ ಮಡಿ ಬ್ರಾಹ್ಮಣರು, ಪೇಪರ್ ಹಾಕುವ ಹುಡುಗರು, ಚಿಂದಿ ಹಾಯುವ ಅನಾಥರು, ಇಂತಹವರೇ ಅಲ್ಲಿ, ಈ ಹುಡುಗ ಕಪ್ಪಗೆ ಗುಂಡು ಗುಂಡಾಗಿ ಮುದ್ದು

ಮುದ್ದಾಗಿ ಇದ್ದುದರಿಂದ ಆ ಮಾವಳ್ಳಿಯಲ್ಲಿ ಇದ್ದ ಜನ. ಈ ಹುಡುಗನನ್ನು ಆ ವಠಾರದ ಸುತ್ತಮುತ್ತಲ ಜನ ಕೃಷ್ಣ ಕೃಷ್ಣಾ ಎಂದು ಕರೆದರು. ಅದೇ ಆ ಹುಡುಗನ ಹೆಸರಾಯಿತು. ಇವರಿಗೆ ನಾಮಕರಣ ಮಾಡಿ ಸಂಭ್ರಮ ಪಡಲಿಕ್ಕೆ ಯಾರಿದ್ದರು? ಅದು ಹೋಗಲಿ ಹುಟ್ಟಿದ ದಿನಾಂಕವೂ ಕರಾರುವಕ್ಕಾಗಿ ಗೊತ್ತಿಲ್ಲ. ಇನ್ನು ಜಾತಕ, ಕುಂಡಲಿ, ಘಳಿಗೆ, ನಕ್ಷತ್ರ ಇದನ್ನೆಲ್ಲ ಕಂಡವರಾರು? ಯಾರೋ ಒಂದು ಹೆಸರಿನಿಂದ ಕರೆದರು, ಮತ್ಯಾರೋ ಇವರ ಹುಟ್ಟಿದ ದಿನಾಂಕವನ್ನು ನಿರ್ಧರಿಸಿದರು. ಅವರು ಕರೆದಿದ್ದೆ ಹೆಸರಾಯಿತು. ಇವರು ಹೇಳಿದ್ದೆ ಬರ್ತಡೇ ಆಯಿತು.

ಈ ಹುಡುಗನಿಗೆ ಹಾಲು ಮೊಸರು ಬೇಕಲ್ಲ, ಆ ಕಾರಣದಿಂದ ಆ ಮನೆಯವರು ಒಂದು ಹಸು ಕಟ್ಟಿದರು. ಆ ಹಸು ಕರು ಹಾಕಿತು. ಒಂದು ಹಸು ಇದ್ದದ್ದು ಎರಡಾಯಿತು. ಎರಡಿದ್ದದ್ದು ನಾಲ್ಕಾಯಿತು. ಇನ್ನು ಇವುಗಳನ್ನು ನೋಡಿಕೊಳ್ಳುವವರಾರು? ಅವಕ್ಕೆ ಹುಲ್ಲು ಹಾಕುವವರರಾರು? ಅವುಗಳ ಸಗಣಿ ಎತ್ತುವವರಾರು? ಗಂಜಲು ಬಳಿಯುವವರಾರು? ಮೈ ತೊಳೆಯುವವರಾರು? ಹಾಲು ಕರೆಯುವವರಾರು? ಆ ಹಾಲನ್ನು ಅವರಿವರ ಮನೆಗೆ ಹಾಕುವವರಾರು? ಅದೆಲ್ಲದರ ಜವಾಬ್ದಾರಿಯನ್ನು ಒಂದೊಂದಾಗಿ ಕೃಷ್ಣನ ತಲೆಗೆ ಕಟ್ಟಿದರು ಆ ಮನೆಯವರು. ಬೆಳಿಗ್ಗೆ ಸೂರ್ಯ ಬರುವ ಮೊದಲೇ ಎದ್ದು ಆ ಎಲ್ಲ ಕೆಲಸವನ್ನು ಮಾಡತೊಡಗಿದ ಪುಟ್ಟ ಗೊಲ್ಲ ಕೃಷ್ಣ.

## ಮಾವಳ್ಳಿ ಒಂದು ಸುಂದರ ನಗರವಳ್ಳಿ

ಆಗ ಮಾವಳ್ಳಿಯ ಸುತ್ತಮುತ್ತಲ ಪ್ರದೇಶ ಈಗ ಇದ್ದ ಹಾಗೇನು ಇರಲಿಲ್ಲ. ಹಳ್ಳಿಗೆ ಹಳ್ಳಿಯೂ ಅಲ್ಲ, ಪಟ್ಟಣಕ್ಕೆ ಪಟ್ಟಣವೂ ಅಲ್ಲ. ಹೆಂಚಿನ ಮನೆಗಳು, ವಠಾರಗಳು, ಸಣ್ಣ ಸಣ್ಣ ರಸ್ತೆಗಳು, ಅಣ್ಣಿಯ್ಯಪ್ಪಗಲ್ಲಿ, ಮರಿಯಪ್ಪನಗಲ್ಲಿ, ಚಿಣ್ಣಣ್ಣಗಲ್ಲಿ, ಇಂತಹ ಅನೇಕ ಗಲ್ಲಿಗಳ ನಡುವೆ ಇದ್ದ ಬ್ರಾಹ್ಮಣರಗಲ್ಲಿಯಿದ್ದ ಮನೆಯಲ್ಲಿ ಆಗಿನ ಎಂ.ಟಿ.ಆರ್ ಹೋಟಲ್, ಭಾರತ್ ಟಾಕೀಸಿನ ಅತ್ತ ಹೋದರೆ ಶಿವಾಜಿ ಟಾಕೀಸ್, ಈ ತುದಿಗೆ ಬಂದರೆ ಸಜ್ಜನರಾವ್ ವೃತ್ತ, ಅಲ್ಲಿ ಒಂದಷ್ಟು ಶೆಟ್ಟರ ಮನೆಗಳು, ನಡುವೆ ಅ.ನ.ಕೃ ಮನೆ. ಅಲ್ಲಲ್ಲಿ ದೇವಸ್ಥಾನಗಳು. ಇನ್ನೂ ಅತ್ತ ಕಡೆ ಬಸವನಗುಡಿ, ಮತ್ತೊಂದು ಭಾಗಕ್ಕೆ ಲಾಲ್‌ಬಾಗ್, ಅದರ ಮುಖ್ಯಗೇಟಿನ ಬಲಭಾಗಕ್ಕೆ ಸಾಬರ ಗೋರಿಗಳು, ಮಸಿದಿ, ಹಿಂದೂಗಳ ಶ್ಮಶಾನ. ಲಾಲ್‌ಬಾಗಿನ ಗೇಟಿನಿಂದ ನೇರವಾಗಿ ಹೊರಟ ಜೋಡಿರಸ್ತೆ, ಆ ರಸ್ತೆಯ ಮೊದಲ ಎಡ ತಿರುವಿನಲ್ಲಿ ಕೊಳದ ಮಠ, ಆ ರಸ್ತೆಯ ಇಕ್ಕೆಲಗಳಲ್ಲಿ ಅಲ್ಲಲ್ಲಿ ಸಾಬರ ಗುಜರಿ ಅಂಗಡಿಗಳು. ಮುಂದೆ ಬಂದು ವೃತ್ತ ಸೇರಿ ಸುತ್ತ ತಿರುಗಿದರೆ ಬಯಲು, ಈಗಿರುವ ಊರ್ವಶಿ ಚಿತ್ರಮಂದಿರದ ಜಾಗದಲ್ಲಿದ್ದ ದೊಡ್ಡ ಕಲ್ಯಾಣಿ. ಮುಂದುವರಿದು ಬಂದರೆ ಒಂದಷ್ಟು ಅಂಗಡಿ ಸಾಲು, ಭಾರತ ಟಾಕೀಸಿನ ಹಿಂಭಾಗ

ಬಯಲು, ಅಲ್ಲಲ್ಲಿ ತೋಟಗಳು, ನರ್ಸರಿಗಳು, ಕೆರೆಗಳು, ಕುಂಟೆಗಳು, ಇದರ ನಡುನಡುವೆ ಗೋವ ಗೊಟ್ಟಗಳು. ಮಾವಳ್ಳಿಯ ಎಡಕ್ಕೆ ತುಸುದೂರದಲ್ಲಿ ಕಲಾಸಿಪಾಳ್ಯ ಬಸ್‌ಸ್ಟಾಂಡ್. ಇನ್ನು ಮುಂದೆ ಹೋದರೆ ಕೋಟೆ ಹೈಸ್ಕೂಲು, ಈಗಿನಂತೆ ಅಬ್ಬರವಿಲ್ಲದ ಗೌಜು ಗದ್ದಲ ಇಲ್ಲದ, ಟ್ರಾಫಿಕ್ ಹಾವಳಿ ಇಲ್ಲದ ನಿರಾಳ ಬೆಂಗಳೂರಿನ ನಿರಾಭರಣ ಸುಂದರಿಯಂತೆ ಮಾವಳ್ಳಿಯ ಸುತ್ತಮುತ್ತಲ ಪ್ರದೇಶವಿತ್ತು.

ಮಾವಳ್ಳಿಯಲ್ಲಿ ಕಣ್ತೆರದ ಸೂರ್ಯ ಮೆಲ್ಲನೆ ಲಾಲ್‌ಬಾಗ್ ಕಡೆ ಸರಿದಂತೆ ಗಾಂಧಿಬಜಾರಿನ ಕಡೆಯಿಂದಲೊ, ಬಸವನಗುಡಿ ಕಡೆಯಿಂದಲೊ ಮೆಲ್ಲನೆ ಹೆಜ್ಜೆ ಹಾಕುತ್ತಾ ಬರುವ ನಿವೃತ್ತರು, ಮುದುಕರು ಹಸುರಿನ ನಡುವೆ ಬಿಸಿಲ ಕಾಯುತ್ತಾ ವಾಕ್ ಮುಗಿಸುತ್ತಿದ್ದರು.

ಸೂರ್ಯ ಮಾವಳ್ಳಿಗೆ ಮುಸುಕಿಗೆ ಬಂದು ಬಿಡುತ್ತಿದ್ದ. ಅಲ್ಲಿದ್ದವರು ಸೂರ್ಯನ ಜೊತೆಯೇ ಕಣ್ ತೆರೆಯುವವರಿದ್ದರು. ಸೂರ್ಯನಿಗೂ ಮೊದಲೇ ಕೆಲಸಕ್ಕೆ ತೆರಳುವವರೂ ಇದ್ದರು. ಸೂರ್ಯ ಲೇಟಾಗಿ ಎದ್ದು ಮಾವಳ್ಳಿಯ ಕಡೆ ಕೆಲಸಕ್ಕೆ ಬರುವುದು ತಡವಾದರೂ ಅಲ್ಲಿಯ ಜನ ತಮ್ಮ ಕೆಲಸಗಳಿಗೆ ತಡವಾಗಿ ಎಂದೂ ಹೋದವರಲ್ಲ. ಹಾಗೆ ಹೋಗಲು ಸಾಧ್ಯವಾಗುತ್ತಿರಲಿಲ್ಲ. ಹಾಗೆ ತಡವಾಗಿ ಹೋದರೆ ಅಂದಿನ ಕೂಲಿಗೆ ಎಲ್ಲಿ ಸಂಚಕಾರವಾಗುತ್ತದೊ ಎಂದು ಬೇಗ ಬೇಗ ಕೆಲಸದ ಕಡೆಗೆ ಹೊರಟು ಬಿಡುತ್ತಿದ್ದರು. ಅವರು ಮಾಡುವ ಕೆಲಸವಾದರೂ ಯಾವುದು? ಗಾರೆ ಕೆಲಸ, ಕೂಲಿಕೆಲಸ, ಕಬ್ಬಿಣ ಚಚ್ಚುವುದು, ನರ್ಸರಿ ಹಮಾಲಿ ಕೆಲಸ, ಮೂಟೆ ಹೊರುವ ಕೆಲಸ, ಬಣ್ಣ ಬಳಿಯುವ ಕೆಲಸ, ಫಿಟ್ಟರ್, ಬಾರ್‌ಬೆಂಡಿಂಗ್, ಸೌದೆ ಒಡೆಯುವ ಕೆಲಸ, ಹಾಲು ಮಾರುವುದು, ಹೂ ಕಟ್ಟುವುದು, ತರಕಾರಿ ಮಾರುವುದು, ಜವಾನ, ದಫೇದಾರ, ಅಮೀನ, ದಫ್ತರಿ ಇಂತದೇ ಸಣ್ಣಪುಟ್ಟ ಕೆಲಸ ಮಾಡುವ ಬಡಪಾಯಿಗಳು. ಸೂರ್ಯ ಸಾರ್ವಭೌಮರು ತಡವಾಗಿ ಬಂದರೆ ಕಾಯಕ್ಕಾಗುತ್ತಾ. ಅಲ್ಲಿದ್ದವರು ತಮ್ಮ ತಮ್ಮ ಕೆಲಸಗಳಿಗೆ ಮುಖ ಮಾಡುತ್ತಿದ್ದರು. ಈ ಕೆಲಸಗಾರರಲ್ಲಿ ಗಂಡಸು ಹೆಂಗಸು, ಹುಡುಗ, ಹುಡುಗಿ, ಯುವಕ ಮುದುಕ ಎನ್ನದೆ ತಮ್ಮ ಕೆಲಸಗಳಿಗೆ ಹೋಗಲೇ ಬೇಕಾಗಿತ್ತು. ದುಡಿದರೆ ಮಾತ್ರವೇ ಅಂದಿನ ಬದುಕು. ಹೊಟ್ಟೆಗೆ ಕೂಳು. ಇಲ್ಲದಿದ್ದರೆ ಇಲ್ಲ. ನಮ್ಮ ಗೊಲ್ಲನೂ ಅಷ್ಟೇ! ಸೂರ್ಯ ಬರುವ ಮುಂಚೆಯೇ ಎದ್ದು ಬಿಡಬೇಕಾಗಿತ್ತು. ದನದ ಕೊಟ್ಟಿಗೆ ಕೆಲಸಕ್ಕೆ ಹಾಜರ್ ಆಗಬೇಕಾಗಿತ್ತು ಪುಟ್ಟ ಕೃಷ್ಣ. ಆ ಮನೆಯಲ್ಲಿ ವೆಂಕಟಸ್ವಾಮಿ ಅಂತ ಒಬ್ಬ ಇದ್ದ. ಆತ ತಂದೆ ಕಡೆ ಬಳಗದವನು. ಅವನಿಗೊಂದು ರೀತಿಯ ಭಾವಣಿಕೆ. ಈ ಕೃಷ್ಣನಿಗೆ ಒಂದು ರೀತಿಯ ಭಾವಣಿಕೆ. ಒಂದು ಕಣ್ಣಿಗೆ ಸುಣ್ಣ ಮತ್ತೊಂದು ಕಣ್ಣಿಗೆ ಬೆಣ್ಣೆ. ತಾಯಿಯ ನೆನಪಾಗಿ ಬಿಡುತ್ತಿತ್ತು ಕೃಷ್ಣನಿಗೆ. ಊರಿಗೆ ಹೋಗಬೇಕೆನಿಸುತ್ತಿತ್ತು. ಊರಿಗೆ ಹೋದರೆ, ಅಲ್ಯಾರಿದ್ದಾರು?

ಅಪ್ಪ, ಗಟಾಣಿ ಚಿಕ್ಕಮ್ಮ, ಆಕೆಯ ಕಿರುಕುಳವನ್ನು ನೆನಪಿಸಿಕೊಂಡರೆ ಭಯವಾಗುತ್ತಿತ್ತು. ಆ ಅವಸ್ಥೆಗಿಂತಲೂ ಇಲ್ಲೇ ಈ ಮನೆಯಲ್ಲೇ ದನ ಕಾಯುತ್ತಾ, ಕೊಟ್ಟಿಗೆ ಗುಡಿಸುತ್ತಾ, ಮನೆ ಮನೆಗೆ ಹಾಲಾಕುತ್ತಾ ಇರುವುದೇ ಎಷ್ಟೋ ವೈನಾದದ್ದು ಅಂದುಕೊಂಡ ಕೃಷ್ಣ. "ಗಂಗೆ ಬಾರೆ, ಗೌರಿ ಬಾರೆ, ತುಂಗಭದ್ರೆ ನೀನು ಬಾರೆ, ಕಪಿಲೆ ನೀನು....." ಎಂದು ಹಾಡು ಗುನುಗುತ್ತಾ ಬೆಳಂಬೆಳಗ್ಗೆ ದನದ ಕೊಟ್ಟಿಗೆಗೆ ಬಂದು ಬಿಡುತ್ತಿದ್ದ.

ಬಾಲ್ಯದಲ್ಲೇ ನೊಂದು ಬೆಂದಿದ್ದರೂ ಪುಟ್ಟ ಕೃಷ್ಣ ಬಲು ಚುರುಕು. ಪಟ ಪಟ ಎಲ್ಲಾ ಕೆಲಸ ಮಾಡಿ ಮುಗಿಸಿಬಿಡುತ್ತಿದ್ದ. ದನ ಕರುಗಳನ್ನೆಲ್ಲ ಆಚೆಗೆ ಕಟ್ಟಿ ತೊಪ್ಪೆ ಬಳಿದು, ಗಂಜಲ ಬಾಚಿ, ರೊಪ್ಪನೆಲ್ಲ ಕ್ಲೀನ್ ಮಾಡಿ ಗೊಂದಲಿನಲ್ಲಿನ ಹಿಂದಿನ ದಿನದ ಹುಲ್ಲನ್ನೆಲ್ಲ ಎತ್ತಿ ಹೊರಗಾಕಿ, ಬಾನಿಯಲ್ಲಿ ನಾರುತ್ತಿದ್ದ ಮುಸುರೆಯನ್ನೆಲ್ಲ ಹೊರಗೆ ಸುರಿದು, ಬಾನಿ ತೊಳೆದು, ಹೊಸ ನೀರಾಕಿ ದನಗಳ ಕೆಚ್ಚಲಿಗೆ ಒಂದಷ್ಟು ಬಿಸಿನೀರು ಎರಚಿ, ದನಗಳ ಮುಂದೆ ಒಂದಷ್ಟು ಹಸಿರು ಹುಲ್ಲಾಕಿ, ಕರುಗಳ ಕುಡಿಯಲುಬಿಟ್ಟು, ಅವು ನೊರೆ ಹಾಲ ಕುಡಿವುದನ್ನು ನೋಡಿ ಆನಂದಪಟ್ಟು, ಎಲ್ಲಾ ಹಾಲನ್ನು ಅವುಗಳು ಕುಡಿಯದಂತೆ ಎಚ್ಚರವಹಿಸಿ ಕರುಗಳನ್ನು ಎಳೆದು ಪಕ್ಕಕ್ಕೆ ಕಟ್ಟಿ, ಸಿಲವಾರದ ಬಕೆಟ್‌ನ ತಳದಲ್ಲಿದ್ದ ನೀರನ್ನು ಮತ್ತೆ ದನಗಳ ಕೆಚ್ಚಲಿಗೆ ಎರಚಿ, ಕೆಚ್ಚಲುನಿಂದ ಹಾಲು ಕರೆಕ್ಟಾಗಿ ಬಕೆಟ್‌ಗೆ ಬೀಳುವಂತೆ ಕೆಚ್ಚಲ ನೇರಕ್ಕೆ ಕರೆಕ್ಟಾಗಿ ಕುಕ್ಕರಗಾಲಲ್ಲಿ ಕುಳಿತು, ಕೆಚ್ಚಲಿನಿಂದ ಹಾಲು ಸರಿಯಾಗಿ ಬಕೆಟ್‌ಗೆ ಬೀಳಬೇಕು ಹಂಗೆ ಎರಡೂ ಕಾಲುಗಳ ಮಧ್ಯ ಅದನ್ನು ಇರುಕಿಕೊಂಡು, ದೇವರನ್ನು ನೆನೆದು ಕೆಚ್ಚಲನ್ನು ಎರಡೂ ಕೈಗಳಿಂದ ಮುಟ್ಟಿ, ಆ ಕೈಗಳನ್ನು ಕಣ್ಣಿಗೊತ್ತಿಕೊಂಡು ತನ್ನೆರಡೂ ಕೈಗಳ ಹೆಬ್ಬೆರಳು ಮತ್ತು ತೋರ್‌ಬೆರಳುಗಳ ನಡುವೆ ಕೆಚ್ಚಲನ್ನು ಸಿಗಾಕಿಸಿಕೊಂಡು ಪ್ರಥಮದಲ್ಲಿ ಹಸುಗಳಿಗೆ ನೋವಾಗದಂತೆ ಕೆಚ್ಚಲನ್ನು ನೀವುತ್ತಾ ಅವುಗಳು ಸ್ವರ ಬಿಟ್ಟವೆಂದು ಖಾತ್ರಿ ಪಡಿಸಿಕೊಂಡು ತದನಂತರ ನಿಧಾನವಾಗಿ ಕೆಚ್ಚಲನ್ನು ಹಿಂಡುತ್ತಾ ಎಡ ಬಲ ಕೈಗಳನ್ನು ಒಂದರ ನಂತರ ಒಂದನ್ನು ಮೇಲೆ ಕೆಳಗೆ ಸೊರಬರ ಅನ್ನಿಸುತ್ತಾ ಹೋದಂತೆ ನೊರೆ ನೊರೆ ಹಾಲು ಆ ಬಕೆಟ್‌ಗಳಿಗೆ ತುಂಬುತ್ತಿತ್ತು. ಒಂದಷ್ಟು ಹಾಲನ್ನು ಕರುಗಳಿಗೆ ಬಿಟ್ಟು, ಕರುಗಳಿಗೆ ಕುಣಿಕೆ ಹಾಕಿದ್ದ ಹಗ್ಗವನ್ನು ಎಳೆದರೆ ಸಾಕು ಕರು ಓಡಿ ಹೋಗಿ ತನ್ನ ಬಾಯನ್ನು ಬಳಿಯಲ್ಲಿ ಇದ್ದ ಕೆಚ್ಚಲಿಗೆ ಹಾಕುತ್ತಿತ್ತು. ಆಗೆಲ್ಲ ಕೃಷ್ಣನಿಗೆ ತನ್ನಮ್ಮನ ನೆನಪಾಗದೆ ಇರುತ್ತಿರಲಿಲ್ಲ. ತುದಿಗಣ್ಣುಗಳಲ್ಲಿ ಒಸರಿದ ಕಣ್ಣೀರನ್ನು ಒರೆಸಿಕೊಂಡು ಮತ್ತೊಂದು ಹಸುವಿನ ಬಳಿ ಹೋಗುತ್ತಿದ್ದನು ಕೃಷ್ಣ. ಅಲ್ಲಿಯೂ ಮತ್ತದೆ ಕಾಯಕ. ಹೀಗೆ ಕೊಟ್ಟಿಗೆಯಲ್ಲಿನ ಎಲ್ಲ ಹಸುಗಳ ಹಾಲು ಕರೆದು ಒಂದು ಕಡೆ ಸಂಗ್ರಹಿಸಿ ಮನೆಯ ಹಿರಿಯರಿಗೆ ಅದರ ಜವಾಬ್ದಾರಿ ವಹಿಸಿ ಅವರು ಹೇಳಿದ ವರ್ತನೆ ಮನೆಗಳಿಗೆ ಹಾಲನ್ನು ತೆಗೆದುಕೊಂಡು ಹೋಗಬೇಕಾಗಿದ್ದುದ್ದು ಪುಟ್ಟ ಕೃಷ್ಣನ ಕೆಲಸವಾಗಿತ್ತು. ಬೆಳ್ಳಂಬೆಳಗ್ಗೆಯೇ ಚುಮು

ಚುಮು ಚಳಿ ಇರಲಿ, ಮಳೆಗಾಲದ ಜಡಿ ಜಡಿ ತುಂತುರು ಮಳೆ ಇರಲಿ. ಮೈಗೆ ಆರಾಮ ಇರಲಿ ಬಿಡಲಿ, ಶೀತ, ಕೆಮ್ಮು, ನೆಗಡಿ, ಚಳಿಜ್ವರ ಇವುಗಳೆಲ್ಲವನ್ನು ನೋಡುವ ಹಾಗಿರಲಿಲ್ಲ. ದಿನನಿತ್ಯ ಕೆಲಸ ಮಾಡಲೇ ಬೇಕಾಗಿತ್ತು. ಅಮ್ಮನ ನೆನಪಾಗಲಿ, ಅಪ್ಪನ ನೆನಪಾಗಲಿ, ಅಕ್ಕಂದಿರು ನೆನಪಿಗೆ ಬರಲಿ, ತನ್ನೂರು ಕಾಡಲಿ, ಅವೆಲ್ಲವನ್ನು ತೊರೆದು ಕೊಟ್ಟಿಗೆ ಕೆಲಸ ಮಾಡಲೇ ಬೇಕಾಗಿತ್ತು. ಹಾಲು ಕರೆಯಲೇಬೇಕಾಗಿತ್ತು. ಮನೆ ಮನೆಗೆ ಹಾಲು ಹಾಕಲೇ ಬೇಕಾಗಿತ್ತು. ಅದನ್ನೆಲ್ಲ ಕೃಷ್ಣ ಚಾಚೂ ತಪ್ಪದೇ ಮಾಡುತ್ತಿದ್ದನು. ದುಸರ ಮಾತಾನಾಡುತ್ತಿರಲಿಲ್ಲ. ಬಾಯಿ ಮುಚ್ಚಿಕೊಂಡು, ಎಲ್ಲ ಕಷ್ಟಗಳನ್ನು ಸಹಿಸಿಕೊಂಡು, ಮೌನಧರಿಸಿ ಕೆಲಸ ಮಾಡುತ್ತಿದ್ದನಲ್ಲ ನಮ್ಮ ಬಾಲಕೃಷ್ಣ. ಕಂಡವರ ನೆರಳಿನಲ್ಲಿ ತನ್ನದಲ್ಲದ ಮನೆಯಲ್ಲಿ ಜೀವನಕ್ಕಾಗಿ ಚೂರು ಪಾರು ಈ ಎಲ್ಲಾ ಬದುಕಿಗಾಗಿ ಕೆಲಸ ಮಾಡಬೇಕಿತ್ತು ಕೃಷ್ಣ.

ಹೂವಿನ ಗಿಡ ಬೆಳೆಸುವುದು, ತರಕಾರಿ ಬೆಳೆಯುವುದು, ಅದನ್ನು ಮಾರುವುದು, ಅದರಲ್ಲಿ ಬಂದ ಅಲ್ಪಸ್ವಲ್ಪ ಹಣದಲ್ಲೇ ಜೀವನ ಸಾಗಿಸುವುದು ಇವರ ವಂಶಸ್ಥರ, ಪೂರ್ವಜರ, ತಾತ, ಅಪ್ಪನ ಆಲೋಚನೆಯಾಗಿತ್ತೆ ಹೊರತು, ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಬೇಕು, ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಕು ಎಂಬುದು ಗೊತ್ತಿರಲಿಲ್ಲ. ಗಿಡಬಳ್ಳಿಗಳನ್ನು ಬೆಳೆಸುವುದು ಗೊತ್ತಿತ್ತು ಆದರೆ ಕರಳು ಬಳ್ಳಿಗಳನ್ನು ಬೆಳೆಸುವುದು ಗೊತ್ತಿರಲಿಲ್ಲ. 'ಹುಟ್ಟಿಸಿದವನು ಹುಲ್ಲ ಮೇಯಿಸದೇ ಇದ್ದಾನೆಯೇ'. ಹೇಗೋ ಬೆಳೆಯುತ್ತವೆ ಹೇಗೋ ಬದುಕುತ್ತವೆ. ಅದಕ್ಯಾಕೆ ತಲೆಕೆಡಿಸಿಕೊಳ್ಳುವುದು. ರೂಢಿಗತವಾಗಿ ಬಂದಿರುವ ಕುಲಕಸುಬಿದೆ. ಅಷ್ಟೋ ಇಷ್ಟೋ ತುಂಡು ನೆಲವಿದೆ, ಹೇಗೋ ಬದುಕುತ್ತಾನೆ ಹುಡುಗ. ಮಗನ ಉಜ್ವಲ ಭವಿಷ್ಯ ಕಾಣಲು, ದಾರಿ ತೋರಲು ತಾಯಿ ಇದ್ದಾಳೆಯೇ? ಆಗಿನ ಕಾಲದ ಆಲೋಚನಾ ಕ್ರಮವೇ ಹಾಗಿತ್ತು. ಆಗಿನ ಸಾಮಾಜಿಕ ಸಂದರ್ಭವೂ ಹಾಗೆ ಇತ್ತು. ಶೂದ್ರರ ಮನೆಯ ಹುಡುಗರಿಗೆ ವಿದ್ಯೆ ಯಾಕೆ? ತಾಯಿ ಇಲ್ಲದ ತಬ್ಬಲಿ ಹೇಗಿದ್ದರೂ ನಡೆದೀತು. ಪ್ರೀತಿ, ಆರೈಕೆ, ಪೋಷಣೆ, ಆಧಾರ ಇವ್ಯಾವವು ಅವಕ್ಕೆ ಯಾಕೆ? ಕಲ್ಲ ಮೇಲಿನ ಹೂಬಳ್ಳಿಗೆ ನೀರೆರೆಯಬೇಕೆ?

ಕೃಷ್ಣ ತನ್ನ ಪಾಲಿಗೆ ಬಂದ ಕೊಟ್ಟಿಗೆ ಕೆಲಸವನ್ನು, ದನ ಕಾಯುವ ಕೆಲಸವನ್ನು ಪರಮ ಕಾಯಕ ಎಂದು ಭಾವಿಸಿ ಅಷ್ಟೂ ಕೆಲಸವನ್ನು ಚಾಚೂ ತಪ್ಪದೆ ಮಾಡಿ ಮುಗಿಸುತ್ತಿದ್ದನು. ಆ ಕೆಲಸ ಮುಂಜಾವು 5 ರಿಂದ 5.30ರ ಹೊತ್ತಿಗೆ ಪ್ರಾರಂಭ ಆದರೆ 9 ರಿಂದ 9.30ಕ್ಕೆ ಮುಗಿದು ಹೋಗುತ್ತಿತ್ತು. ಮುಂದೆ ಕೃಷ್ಣ ಬೆಳೆದಂತೆ ಅವರಿವರ ಜೊತೆ ಸೇರಿ ಪೋಲಿ ಬಿದ್ದಾನು. ಅಲ್ಲಿ ಇಲ್ಲಿ ಅಲೆದು ಹಾಳಾದಾನು ಎಂದು ಶಾಲೆಗೆ ಸೇರಿಸಲು ತೀರ್ಮಾನಿಸಿದರು ಮನೆಯವರು.

## ಕೃಷ್ಣ ಅಪ್ಪ ಆದದ್ದು

ಈ ಮೊದಲೆ ಕೃಷ್ಣ ತನ್ನ ಸ್ವಂತ ಊರು ಹೆನ್ನಾಗರದಲ್ಲಿ ಇಸ್ಕೂಲಿಗೆ ಸೇರಿದ್ದ ಆ ಸಂದರ್ಭ 1950 ದಶಕ ಪ್ರಾರಂಭವಾಗಿತ್ತು. ಆತನ ತಾಯಿ ಇಲ್ಲವಾದ ಕಾರಣ ಅಪ್ಪ ಮತ್ತೊಂದು ಮದುವೆಯಾದ್ದರಿಂದ ಮಲತಾಯಿ ಕೈ ಕೆಳಗೆ ಇರಲಾಗುತ್ತಿರಲಾರದ್ದರಿಂದ ಅಪ್ಪ ಬೆಂಗಳೂರಿನ ಮಾವಳ್ಳಿಯ ಸಂಬಂಧಿಕರ ಮನೆಗೆ ತಂದು ಬಿಟ್ಟಿದ್ದು, ಅಲ್ಲಿ ಈತ ಗೋಪಾಲಕನಾಗಿದ್ದು ಹಳೆಯ ಕತೆ. ಈ ಗೋಪಾಲನು ಬೀದಿ ಬೀದಿ ಅಲೆದು ಹಾಳಾದಾನು ಎಂಬ ಭಯದಿಂದ ಈತನನ್ನು ಶಾಲೆಗೆ ಸೇರಿಸಲು ತೀರ್ಮಾನಿಸಿದರು. ಆಗ ಕೃಷ್ಣನಿಗೆ 4 ವರ್ಷ. ಕೃಷ್ಣನನ್ನು ಮಾವಳ್ಳಿ ಶಾಲೆಗೆ ಸೇರಿಸಬೇಕೆಂದು ಹೋದಾಗ ಅಲ್ಲಿಯ ಮಾಸ್ತರು ಹುಟ್ಟಿದ ದಾಖಲೆಗಳನ್ನು ಕೇಳುತ್ತಾರೆ. ಯಾವುದೇ ದಾಖಲೆಗಳು ಇಲ್ಲದರಿಂದ. ಈತನ ತಂದೆ ಊರಿನಲ್ಲೆ ಶಾಲೆಗೆ ಸೇರಿಸಿ ಕೆಲ ತಿಂಗಳುಗಳಾದ ನಂತರ ಶಾಲೆಯ ದಾಖಲೆಗಳನ್ನು ತಂದು ಕೊಟ್ಟರೆ ನಾವು ಇಲ್ಲಿ ಶಾಲೆಗೆ ಸೇರಿಸಿ ಕೊಳ್ಳುತ್ತೇವೆಂದು ಹೇಳಿದಾಗ, ಕೃಷ್ಣನನ್ನು ಹೆನ್ನಾಗರ ಶಾಲೆಗೆ ಸೇರಿಸುತ್ತಾರೆ. ಆ ಸಂದರ್ಭದಲ್ಲಿ ಅವರ ಜಾತಿ–ಮತ ದಾಖಲಿಸುವ ಸಂದರ್ಭದಲ್ಲಿ ಇವರು ತಂದೆಯವರು ತಾವು 'ತಿಗಳರು' ಎಂದು ಹೇಳಿದಾಗ, ಮಾಸ್ತರರು ಕೃಷ್ಣನನ್ನು – ಕೃಷ್ಣಪ್ಪ ಎಂದು ಹೆಸರಿಸಿ ದಾಖಲೆ ಮಾಡಿಕೊಂಡು ಬಿಡುತ್ತಾರೆ.

ನಂತರ ಮಾಮಳ್ಳಿಗೆ ಬರುತ್ತಾನೆ ಕೃಷ್ಣ. ಅಲ್ಲಿಯ ಶಾಲೆಗೆ ಸೇರುತ್ತಾನೆ. ಕೃಷ್ಣನಾಗಿದ್ದ ಕೃಷ್ಣ ಮಾವಳ್ಳಿ ಶಾಲೆಯಲ್ಲಿ ಕೃಷ್ಣಪ್ಪನಾಗಿ ಬದಲಾಗಿ ಸೇರ್ಪಡೆಯಾಗುತ್ತಾನೆ. ಕೃಷ್ಣಪ್ಪನ ಪ್ರೈಮರಿ ವಿದ್ಯಾಭ್ಯಾಸ ಮಾವಳ್ಳಿಯಲ್ಲಿ ಆಯಿತು. ಮಿಡಲ್‌ಸ್ಕೂಲ್ ಓದಿದ್ದು ಮಿನರ್ವ ಸರ್ಕಲ್‌ನಲ್ಲಿದ್ದ ಶಾಲೆಯಲ್ಲಿ. ಪ್ರೌಢಶಾಲೆಗೆ ಬಂದಿದ್ದು ಫೋರ್ಟ್ ಹೈಸ್ಕೂಲ್ ಅಥವಾ ಕೋಟೆ ಹೈಸ್ಕೂಲ್‌ಗೆ. ಶಾಲೆಗೆ ಹೋಗುವ ನೆಪದಲ್ಲಿ ಕೃಷ್ಣಪ್ಪ ಬಂಧಮುಕ್ತ. ಸಂಬಂಧಿಕರ ಮನೆ ಎಂಬ ಬಂಧೀಖಾನೆಯಿಂದ ಮುಕ್ತ. ಮಾವಳ್ಳಿಯ ಅಕ್ಕಪಕ್ಕದಲ್ಲೇ ಇದ್ದ ಭಾರತ್, ಶಿವಾಜಿ, ನ್ಯೂಸಿಟಿ, ನಾಜ್, ಶಾರದ, ಮಿನರ್ವ, ಸಂಜಯ ಟಾಕೀಸುಗಳಲ್ಲಿ ಕನ್ನಡ, ತಮಿಳು, ತೆಲಗು ಸಿನಮಾಗಳನ್ನು ನೋಡಿದ್ದು ರಾಜಕುಮಾರ್, ಉದಯಕುಮಾರ್, ಕಲ್ಯಾಣಕುಮಾರ್, ಶಿವಾಜಿ ಗಣೇಶನ್, ಎಂಜಿಆರ್, ಎಂಟಿಆರ್, ನಾಗೇಶ್‌ರಾವ್ ಇಂತಹ ಕಲಾವಿದರು ಕೃಷ್ಣಪ್ಪನಿಗೆ ಆರಾಧ್ಯ ದೈವವಾದದ್ದು. ಬೇಡರ ಕಣ್ಣಪ್ಪ, ಸ್ಕೂಲ್‌ಮಾಸ್ಟರ್, ಭಕ್ತ ಕನಕದಾಸ, ರಣಧೀರ ಕಂಠೀರವ, ಚೂರಿಚಿಕ್ಕಣ್ಣ, ಮೇಯರ್ ಮುತ್ತಣ್ಣ, ಬೀದಿ ಬಸವಣ್ಣ, ಸಾಕ್ಷಾತ್ಕಾರ, ವೀರಸಂಕಲ್ಪ, ಓಹಿಲೇಶ್ವರ, ಬೆಟ್ಟದ ಹುಲಿ, ಭೂದಾನ, ಅಮರಶಿಲ್ಪಿ ಜಕಣಾಚಾರಿ, ವೀರಪಾಂಡೆ ಕಟ್ಟೆಬೊಮ್ಮನ್, ಸರ್ವರ್ ಸುಂದರಂ, ಅಲೆಯ ಮಣಿ, ಪಾಸಮಲರ್,

ದೇವದಾಸ್, ಶ್ರೀವೆಂಕಟೇಶ್ವರ ಮಹಾತ್ಮೆ, ಲವಕುಶ ಹೀಗೆ ಸಾಮಾಜಿಕ, ಪೌರಾಣಿಕ, ಐತಿಹಾಸಕ ಸಿನಿಮಾಗಳನ್ನು ನೋಡಿದ ದಿನಗಳು ಆಗಲೇ.

ದೊಡ್ಡ ಮಾರ್ಕೆಟ್ (ಕೆ.ಆರ್. ಮಾರ್ಕೆಟ್) ನ ಎದುರು ಬಯಲಿನಲ್ಲಿದ್ದ ದೊಡ್ಡಣ್ಣ ಹಾಲ್ (ಈಗಿರುವ ಎಸ್.ಎಲ್.ಎನ್ ಕಾಲೇಜು ಆವರಣ) ನಲ್ಲಿ ಮಹದೇವಸ್ವಾಮಿ ಕಂಪನಿ ಟೆಂಟ್ ಹಾಕಿತ್ತು. ಅಲ್ಲೇ 'ರಾಜಾ ವಿಕ್ರಮ' ನಾಟಕ ನೋಡಿದ್ದು. ಸುಭಾಷ್ ನಗರದ ಕೆರೆ ಅಂಗಳ (ಕೆಂಪೇಗೌಡ ಬಸ್‌ಸ್ಟಾಂಡ್ ಇರುವ ಜಾಗ)ದಲ್ಲಿದ್ದ ಮಾಸ್ಟರ್ ಹಿರಣ್ಣಯ್ಯ ಕಂಪೆನಿಯ 'ದೇವದಾಸ, ಲಂಚಾವತಾರ, ಭ್ರಷ್ಟಾಚಾರ,' ಇಂತಹ ನಾಟಕಗಳನ್ನು ನೋಡಿದ್ದು. ಟೀಪು ಸುಲ್ತಾನನ ಕೋಟೆ, ಅರಮನೆ ಬಯಲು, ಧರ್ಮರಾಯರ ದೇವಸ್ಥಾನ, ದೊಡ್ಡ ಬಸವಣ್ಣನ ಕಡಲೇಕಾಯಿ ಪರಿಸೆ, ಗವಿಗಂಗಾಧರ ಗುಡ್ಡ ಇಲ್ಲೆಲ್ಲ ಅಲೆದಾಡಿದ್ದು, ಟಿಪ್ಪು ಸುರಂಗ ಮಾರ್ಗದ ಅನ್ವೇಷಣೆ ಮಾಡಿದ್ದು, ಭಾರತ ಟಾಕೀಸನ ಆ ದೊಡ್ ಬಯಲಲ್ಲಿ ಜರ್ನಲಿಸ್ಟ್ ಕಾಲೋನಿಯ ಕೆರೆ ಆವರಣ, ತಮಿಳರ ಹಬ್ಬದ ಸಂದರ್ಭದಲ್ಲಿ ಆಗುತ್ತಿದ್ದ ಜಾತ್ರೆಗೆ ನಾಟಕದ ಕಂಪೆನಿಗಳು ಬರುತ್ತಿದ್ದವು. ಅಲ್ಲೇ ಹಲವು ನಾಟಕಗಳನ್ನು ನೋಡಿದ್ದು, ಸಂಬಂಧಿಕ ಚನ್ನಪ್ಪನಿಂದ ಚಿಕ್ಕಮಾವಳ್ಳಿ ಗರಡಿಯಲ್ಲಿ ಕುಸ್ತಿ ಕಲಿತಿದ್ದು, ಸಾಮ್ ಮಾಡಿದ್ದು, ಮಟ್ಟಿ ಹೊಡೆದಿದ್ದು, ದಂಡ ತಿರುಗಿಸಿದ್ದು, ಬಸ್ಕಿ ಹೊಡೆದದ್ದು, ಅನೇಕ ಪಟ್ಟುಗಳನ್ನು ಕರತಾಮಲಕ ಮಾಡಿಕೊಂಡದ್ದು, ಬಿಜಲಿ ತಿರಗಿಸಿದ್ದು, ದೊಣ್ಣೆ ವರಸೆ ಮಾಡಿದ್ದು, ಗುಂಡು ಎತ್ತಿದ್ದು, ಕೋಲಾಟ ಹಾಕಿದ್ದು ತರತರದ ಕುಣತ ಕಲಿತದ್ದು, ಭಜನೆ ಮಂದಿರದ ಕಾಯಂ ಸದಸ್ಯನಾಗಿದ್ದು, ಲಾಲ್‌ಬಾಗ್ ಎದುರಿನ ಬಯಲು, ಸಿದ್ದಯ್ಯ ರಸ್ತೆಯ ಬಯಲು, ಊರ್ವಶಿ ಟಾಕೀಸ್‌ನ ಇದ್ದ ಜಾಗದಲ್ಲಿದ್ದ ಕಲ್ಯಾಣಿ ಟೀಪು ಅರಮನೆ, ಹೀಗೆ ಸುತ್ತಮುತ್ತ ಇದ್ದ ಬಯಲುಗಳಲ್ಲಿ ಹೊಲಗಳಲ್ಲಿ ದನಕಾಯ್ದದ್ದು, ಅವುಗಳ ಮೈತೊಳೆದದ್ದು, ತೊಪ್ಪೆ ಎತ್ತಿದ್ದು, ಭರಣಿ ತಟ್ಟಿದ್ದು. ಎಲ್ಲವೂ ಅದೇ ಸಂದರ್ಭದಲ್ಲೇ.

ಶಾಲೆಯಲ್ಲಿ ಮೇಸ್ಟುಗಳು ಇಲ್ಲದ ಸಂದರ್ಭದಲ್ಲಿ ಹಾಡುವುದು, ಕತೆ ಹೇಳುವುದು, ಇಂತದ್ದನೆಲ್ಲ ಸಹಪಾಠಿಗಳು ಮಾಡುತ್ತಿದ್ದರು. ಅಂತಹ ಹುಡುಗರು 'ಸೆಂಟರ್ ಆಫ್ ಅಟ್ರಾಕ್ಷನ್'. ತರಗತಿಯ ಕೇಂದ್ರ ಬಿಂದು ಆಗಿಬಿಡುತ್ತಿದ್ದರು. ಅವರೇ ಶಾಲೆಯ ಹೀರೋಗಳು, ನಾನೂ ಯಾಕೆ ಹೀರೋ ಆಗಬಾರದು ಎಂಬ ಭಾವ ಮೂಡಿ ಆ ಗೆಳೆಯರಿಂದ ಪ್ರಭಾವಿತನಾಗಿ ಏನಾದರೊಂದು ವಿಶೇಷವಾದದ್ದನ್ನು ಸಾಧಿಸಬೇಕೆಂದುಕೊಂಡು ಶಾಲೆಯ ವಾರ್ಷಿಕೋತ್ಸವದಲ್ಲಿ ಫ್ಯಾನ್ಸಿಡ್ರೆಸ್, ಏಕಪಾತ್ರಾಭಿನಯ ಹೀಗೆಲ್ಲ ಮಾಡಲು ಪ್ರಾರಂಭಿಸಿದ್ದು ಅದೇ ದಿನಗಳಲ್ಲೇ. ಕೋಟೆ ಶಾಲೆಯಲ್ಲಿದ್ದ ಡ್ರಿಲ್ ಮಾಸ್ಟರ್ ಜೆ.ಸಿ.ರಾಮಸ್ವಾಮಿ (ಶಕ್ತಿಪ್ರಸಾದ್) ರವರ ಸಂಪರ್ಕ ಸಿಕ್ಕಿತು. ಅವರು ಮಾವಳ್ಳಿಯಲ್ಲೇ ವಾಸವಿದ್ದುದರಿಂದ ಇನ್ನೂ ಹತ್ತಿರವಾದರು. ಅವರು

ಶಾಲೆಯ ಹುಡುಗರಿಗೆ ನಾಟಕಗಳನ್ನು ಕಲಿಸುತ್ತಿದ್ದರು. ಶಾಲೆಯ ವಾರ್ಷಿಕೋತ್ಸವಕ್ಕೆ 'ಟಿಪ್ಪುಸುಲ್ತಾನ್' ನಾಟಕ ಮಾಡಿಸುತ್ತಿದ್ರು. ಟಿಪ್ಪುವಿನ ಮಗನ ಪಾತ್ರವನ್ನು ಕೃಷ್ಣಪ್ಪನವರಿಗೆ ಕೊಟ್ಟುಬಿಟ್ಟರು. ಇವರೂ ಸಹ ಚೆನ್ನಾಗೇ ಅಭಿನಯಿಸಿಬಿಟ್ಟರು. ಆಗ ನೋಡಿ ಗೆಳೆಯರೆಲ್ಲ ಕೃಷ್ಣಪ್ಪನನ್ನು 'ರಾಜ್ಕುಮಾರ್ ತುಂಡು, ರಾಜ್ಕುಮಾರ್ ತುಂಡು' ಎಂದು ಕರೆಯತೊಡಗಿದರು. ಇದರಿಂದ ಖುಷಿಯಾಗಿ ಮತ್ತೆ ಮತ್ತೆ ನಾಟಕಗಳಲ್ಲಿ ಅಭಿನಯಿಸುವ ರುಚಿ ಏರಿ, ಸಿನಿಮಾನಟ ದ್ವಾರಕೀಶ್ ಜೊತೆ ನಟಿಸಿದ್ದು, ಅರುಣ್‌ಕುಮಾರ್ ಮತ್ತಿತರ ನಾಟಕಗಳಲ್ಲಿ ಅಭಿನಯಿಸತೊಡಗಿ, ನಾಟಕದ ಹುಚ್ಚು ಜಾಸ್ತಿಯಾಗಿ, ಎಸ್.ಎಸ್.ಎಲ್.ಸಿಯಲ್ಲಿ ಡುಮ್ಕಿ ಹೊಡೆದ ಕಾರಣ, ಮಾರ್ಚ್ – ಸೆಪ್ಟೆಂಬರ್ – ಸೆಪ್ಟೆಂಬರ್ – ಮಾರ್ಚ್ ದಂಡಯಾತ್ರೆ ನಡೆಯುತ್ತಾನೆ ಇದ್ದುದರಿಂದ ಸಂಬಂಧಿಕ ರಾಮಣ್ಣನವರು ಪಿ.ಡಬ್ಲ್ಯು.ಡಿ ಆಫೀಸ್‌ನಲ್ಲಿ ಗುಮಸ್ತಾರಾಗಿದ್ದವರು ಕನಕಪುರದ ಕಂಟ್ರಾಕ್ಟರ್ ಹೆಚ್.ಕೆ.ಮಾರೇಗೌಡರ ಹತ್ತಿರ ರೈಟರ್ ಆಗಿ ಕೆಲಸಕ್ಕೆ ಸೇರಿಸಿಬಿಟ್ಟರು. ವಾರಕ್ಕೆ 10 ರೂಪಾಯಿ, ತಿಂಗಳಿಗೆ 40 ರೂ. ಸಂಬಳ ಕೊಡುತ್ತಿದ್ದ ಮಾರಪ್ಪ. ಇದೇ ಸಂದರ್ಭದಲ್ಲಿ ಮನೆ ಕಟ್ಟುವ ಕಸುಬನ್ನು, ತಂತ್ರಗಳನ್ನು ಕಲಿತದ್ದು, ಕೆಲಸಗಾರರು ಹಾಗೂ ವಾಚ್‌ಮೆನ್‌ಗಳು ಮಾಡುತ್ತಿದ್ದ ಕುಕೃತ್ಯಗಳನ್ನು, ಬೇಹುಗಾರಿಕೆ ಮಾಡಿ ಕಂಡುಹಿಡಿದು ಮಾಲೀಕರಿಗೆ ಹೇಳಿ ಭೇಷ್‌ಗಿರಿ ಪಡೆಯುತ್ತಿದ್ದೆ. ನನಗೆ ಪ್ರಾಮಾಣಿಕತೆಯ ಬೆಲೆ ಗೊತ್ತಾಗಿ, ಸತ್ಯವಂತನಾಗಿರಬೇಕು, ನ್ಯಾಯಯುತವಾಗಿ ಬಾಳಬೇಕು, ಬದುಕಿಗಾಗಿ ಕೆಲಸ ಮಾಡಬೇಕೆ ವಿನಃ, ದುರಾಸೆಗಾಗಿ ಮೋಸಗೀಸ ಮಾಡಿ ದುಡಿದ ದುಡ್ಡನ್ನು ಗುಡ್ಡೆಹಾಕಬಾರದು ಎನಿಸಿದ್ದು ಅಂತಾರೆ ಕೃಷ್ಣಪ್ಪನವರು. ಆಗ ಕೃಷ್ಣಪ್ಪನವರಿಗೆ ಹದಿನಾರೋ ಹದಿನೇಳೋ ವರ್ಷ. ಕಾಂಟ್ರಕ್ಟರ್ ಮಾರಪ್ಪನವರು ತರುತ್ತಿದ್ದ ಸ್ಕೂಟರ್‌ನಿಂದ ಹಾಗೂ ಹೀಗೂ ಹೇಗೋ ಮಾಡಿ ಸ್ಕೂಟರ್ ಚಾಲನೆಯನ್ನು ಕಲಿತುಬಿಡುತ್ತಾರೆ. ಡ್ರೈವಿಂಗ್ ಕಲಿತ ಖುಷಿಯಿಂದ ಅಲ್ಲಿ ಇಲ್ಲಿ ಚಾಲಿ ಡ್ರೈವಿಂಗ್ ಮಾಡೋ ಮನಸ್ಸಿದ್ದರೂ, ಸಿಮೆಂಟ್, ಮರಳು, ಜೆಲ್ಲಿ, ಚಪ್ಪಡಿಕಲ್ಲು, ದಿಂಡ್ಕಲ್ಲು, ಕಬ್ಬಿಣ, ಸರ್ವೇಮರ, ಸೆಂಟ್ರಿಂಗ್, ಆರ್‌ಸಿಸಿ, ಗೋಡೆ, ಬಾಗಿಲು, ಕಿಟಕಿ, ಗ್ರಿಲ್ಲು, ಕಾಂಪೌಂಡು, ಫ್ಲೋರಿಂಗ್, ವೈರಿಂಗ್, ಪ್ಲಂಬಿಂಗ್, ಪೈಂಟಿಂಗ್, ಗಾರೆ ಕೆಲಸದವರು, ಕೂಲಿಯವರು, ಹೆಲ್ಪರ್, ಹೆಣ್ಣಾಳು, ಗಂಡಾಳು, ಮೇಸ್ತ್ರಿ ಎಂಜನಿಯರ್, ಪಿ.ಡಬ್ಲ್ಯು.ಡಿ ಆಫೀಸ್, ಶನಿವಾರ ಬಂದ್ರೆ ಬಟವಾಡೆ, ತಲೆತುಂಬಾ ಧೂಳು, ಮೈತುಂಬ ಕೊಳೆ, ಮನಸ್ಸಿನ ತುಂಬ ಕತ್ತಲು, ಕನಸಿನ ಕುದುರೆಗೆ ಕಾಲುಕಟ್ಟಿಬಿಟ್ಟರೆ ಓಡುತ್ತಾ? ಕೃಷ್ಣಪ್ಪನವರಿಗೆ 18 ವರ್ಷ ತುಂಬುತ್ತಿದ್ದಂತೆಯೇ ರಾಮಯ್ಯನವರು ಪಿ.ಡಬ್ಲ್ಯು.ಡಿಯಿಂದ ಕಾಂಟ್ರಕ್ಟರ್ ಲೈಸನ್ಸನ್ನು ಕೃಷ್ಣಪ್ಪನವರ ಹೆಸರಿನಲ್ಲಿ ಮಾಡಿಸುತ್ತಾರೆ. ಸರ್ಕಾರಿ ಕಛೇರಿಗಳಿಗೆ ಬಣ್ಣ ಹೊಡೆಯುವ ಕೆಲಸ ಕೃಷ್ಣಪ್ಪನವರದಾಗುತ್ತದೆ. ಒಂದು ಒಂದೂವರೆ ವರ್ಷದಲ್ಲಿ 1.50 ಲಕ್ಷರೂಪಾಯಿಗಳ

ಆದಾಯ ಬರುತ್ತದೆ. ಆದರೆ ಅದು ಇವರ ಕೈ ಸೇರಲ್ಲ, ರಾಮಯ್ಯನವರ ಪಾಲಾಗುತ್ತದೆ. ಆರೆ ಇದೇನಿದು, ದುಡಿದದ್ದು ನಾನು, ಗಳಿಸಿದ್ದು ಆತ, ಶ್ರಮ ನಂದು ಪ್ರತಿಫಲ ಇನ್ನ್ಯಾರದ್ದೋ ಅನಿಸುತ್ತೆ. ಇದರಿಂದ ಬೇಸರವಾಗುತ್ತೆ.

## ಕೈ ಬೀಸಿ ಕರೆಯಿತು ಕನಸಿನ ಮದರಾಸು

ಶಾಲೆಯಲ್ಲಿ ಹೇಗೂ ರಾಜಕುಮಾರ್ ತುಂಡು ಎನಿಸಿಕೊಂಡಿದ್ದ. ಹಾಡು ಹೇಳುವವರು, ಕತೆ ಹೇಳುವವರು, ನಟನೆ ಮಾಡುವವರು, ಶಾಲೆಗಳಲ್ಲಿ ಎಂದಿಗೂ ಹೀರೋಗಳೇ. ಹೆಚ್ಚು ಹೆಚ್ಚು ಹುಡುಗರು ಇಂತಹವರನ್ನು ಇಷ್ಟ ಪಡುತ್ತಾರೆ. ಶಾಲೆಯ ಮೇಸ್ಟ್ರುಗಳಿಗೂ ಇವರು ಅಚ್ಚುಮೆಚ್ಚಿನವರಾಗಿರುತ್ತಾರೆ. ಇದನ್ನೆಲ್ಲ ಕಂಡಿದ್ದ ಕೃಷ್ಣಪ್ಪ ತಾನು ಹಾಗೆ ಆಗಬೇಕು, ಎಲ್ಲರೂ ತನ್ನನ್ನು ಮೆಚ್ಚಬೇಕು, ತನ್ನನ್ನು ಎಲ್ಲರೂ ಆದರಿಸಬೇಕು ಅದಕ್ಕೆ ಮಾರ್ಗವೆಂದರೆ ಸಿನಿಮಾ ನಟನಾಗುವುದು. ಮನೆಯಲ್ಲಿಯೂ ಸಹ ಕಷ್ಟದ ಪರಿಸ್ಥಿತಿ ಇತ್ತಲ್ಲ, ಅನಾಥ ಪ್ರಜ್ಞೆ ಕಾಡುತ್ತಿತ್ತಲ್ಲ, ತನ್ನವರೆಂಬುವರು ಯಾರು ಇಲ್ಲ ಎಂಬ ಭಾವ ಸದಾ ಕೊರೆಯುತ್ತಿತ್ತಲ್ಲ. ಶಾಲೆಯಲ್ಲಿ ಹೇಗೂ ರಾಜಕುಮಾರನ ತುಂಡು ಎನಿಸಿಕೊಂಡಿದ್ದು ಬೇರೆ ತಲೆಯಲ್ಲಿತ್ತು. ರಾಜ್‌ಕುಮಾರ್, ಉದಯ್‌ಕುಮಾರ್, ರಂಗ, ಎಂಜಿಆರ್, ತಾಯ್‌ನಾಗೇಶ, ಬಾಲಕೃಷ್ಣ, ನರಸಿಂಹರಾಜು, ಕಮಿಡಿಯನ್ ಗುಗ್ಗು, ಇಂಥಹ ಅನೇಕಾನೇಕ ನಟರು ಬಡತನ, ಕಷ್ಟ ಕೋಟಲೆಗಳನ್ನು ಭೇದಿಸಿ ಅಥವಾ ಪ್ರತಿಷ್ಠಿತ ಹಿನ್ನೆಲೆಯೂ ಇಲ್ಲದೆ ನೋವು ಸಂಕಟಗಳನ್ನು ಬೆನ್ನಿಗೆ ಕಟ್ಟಿಕೊಂಡೇ ಅಲ್ಲವೇ ಇವರೆಲ್ಲ ನಟರಾದದ್ದು, ಅವರೆಲ್ಲರಿಗೂ ಮದ್ರಾಸೇ ಅಲ್ಲವೇ ಆಶ್ರಯ ನೀಡಿದ್ದು, ನೆರಳು ತೋರಿದ್ದು, ತಾಯಿಯಂತೆ ಸಲಹಿದ್ದು, ತಾಯಿ ಇಲ್ಲದ ಕೃಷ್ಣನಿಗೂ ಮದ್ರಾಸು ತಾಯಿಯಾಗಿ ಕಂಡಿತು. ಎಂತಹ ಕಡುಕಷ್ಟವಿದ್ದರೂ ತಾಯಿ ಮಕ್ಕಳನ್ನು ಸಲಹುತ್ತಾಳಲ್ಲ, ಪ್ರೀತಿಸುತ್ತಾಳಲ್ಲ ಹಾಗೆ ನನ್ನನ್ನು ಮದ್ರಾಸು ಪೋಷಿಸುತ್ತದೆ, ತನ್ನ ಕನಸಿಗೆ ಜೀವ ಕೊಡುತ್ತದೆ, ತನ್ನನ್ನು ನಟನನ್ನಾಗಿ ಅಪ್ಪಿಕೊಳ್ಳುತ್ತದೆ, ಕಲಾವಿದನ್ನನಾಗಿ ರೂಪಿಸುತ್ತದೆ, ನನ್ನ ಈಗಿರುವ ಕಷ್ಟ ಕೋಟಲೆಗಳಿಂದ ಬಂಧಮುಕ್ತಗೊಳಿಸುತ್ತದೆ, ತನ್ನನ್ನು ಎಲ್ಲರೂ ಗುರುತಿಸುವಂತೆ ಮಾಡುತ್ತದೆ, ತಾನು ಎಲ್ಲರಿಂದ ಮಾನ್ಯತೆ ಪಡೆಯುವಂತೆ ಮಾಡುತ್ತದೆ, ಒಟ್ಟಿನಲ್ಲಿ ಮನೆಯ ಉಸಿರುಗಟ್ಟಿಸುವ ವಾತಾವರಣದಿಂದ ತನ್ನನ್ನು ಪಾರುಮಾಡುತ್ತದೆ ಎಂಬ ಭಾವ ಕೃಷ್ಣನ ಮನದೊಳಗೆ' ದಿನರಾತ್ರಿಗಳಲ್ಲಿ ಸುಳಿದಾಡಿ, ನಿದ್ದೆಗೆಡಿಸಿ, ಮನೆಬಿಡುವಂತೆ ಮಾಡುತ್ತದೆ. ನಟನಾಗಬೇಕೆಂಬ ಕನಸುಹೊತ್ತು ಮದ್ರಾಸಿನೆಡೆಗೆ ಹೆಜ್ಜೆ ಹಾಕುತ್ತಾರೆ. ಒಂದು ದಿನ ಮಧ್ಯಾಹ್ನ 3–4 ಗಂಟೆಯ ಸಮಯ ವಿಧಾನಸೌಧ ನೋಡಲೆಂದು ಹೋದ ವೇಳೆಯಲ್ಲಿ ರಾಮಯ್ಯನ ಕೈಗೆ ಸಿಕ್ಕಾಗಿಕೊಂಡು, ಆತ 'ನೀನು ಸಂಜೆ ಕೈಗೆ ಸಿಗು; ನಿನಗೆ ಇದೆ ಮಾರಿ ಹಬ್ಬ' ಎಂಬ ಮಾತುಗಳು ಮಾರ್ದನಿಗೊಂಡು, ಈ

ರಾಮಯ್ಯ ನನ್ನನ್ನು ಏನು ಮಾಡಿಬಿಡುತ್ತಾನೋ, ಪಾತಾಳಕ್ಕೆ ತುಳಿದು ಬಿಡುತ್ತಾನೇನೋ? ಆಕಾಶಕ್ಕೆ ಎಸೆದು ಬಿಟ್ಟಾನೇನೋ, ಪರ್ವತದ ಬಂಡೆಗಳಿಗೆ ಅಪ್ಪಳಿಸಿಬಿಡುತ್ತಾನೇನೋ, ದಪ್ಪ ಮೀಸೆಯ ಪೊಲೀಸರಿಗೆ ಹಿಡಿದುಕೊಟ್ಟು ಬಿಡುತ್ತಾನೇನೋ ಎಂಬ ಭವಭೂತಗಳು ಬಾಲಕೃಷ್ಣನನ್ನು ಕಂಗೆಡಿಸಿದ್ದು ಸಹ ಈತ ಮನೆಬಿಡಲು ಇಂಬು ಕೊಟ್ಟಿತು. ಮದ್ರಾಸು ಕೈ ಬೀಸಿ ಕರೆಯಿತು, ಆಗ ಕೃಷ್ಣನಿಗೆ 18ರ ಪ್ರಾಯ. ದಿಕ್ಕು ದೆಸೆ ಗೊತ್ತಿಲ್ಲ. ಮದ್ರಾಸಿಗೆ ಹೇಗೆ ಹೋಗಬೇಕು ತಿಳಿದಿಲ್ಲ. ಈ ಅಣ್ಣಯ್ಯಪ್ಪ, ಆ ರಾಮಯ್ಯ ಅಂತಾ ಮಾವಳ್ಳಿಯ ಉಸಿರುಗಟ್ಟಿಸುವ ಮನೆಯಿಂದ ಹೇಗಾದರಾಗಲಿ ತಪ್ಪಿಸಿಕೊಳ್ಳಬೇಕು, ಪಾರಾದರೆ ಸಾಕು ಎನ್ನಿಸಿ ಹೊರಟ. ದಾರಿ ಗೊತ್ತಿಲ್ಲದ ಮದ್ರಾಸಿನ ಕಡೆಗೆ. ಜೋಬಲ್ಲಿ ಪುಡಿಗಾಸಿಲ್ಲ, ಕರಳು ಕತ್ತರಿಸುವ ಹಸಿವು, ದೇಹದಲ್ಲಿ ತ್ರಾಣವಿಲ್ಲ. ಪ್ರೀತಿ ಇಲ್ಲದ ಮನೆಯಿಂದ ದೂರಹೋಗೋಣ ಎಂಬ ಮನಸ್ಸು, ನಟನಾಗಬೇಕೆಂಬ ಕನಸು. ಎಲ್ಲರನ್ನೂ ಸಲಹುತ್ತಿರುವ ಮದ್ರಾಸು ತನಗೂ ಒಂದು ಪುಟ್ಟ ಜಾಗ ಕೊಡುತ್ತದೆಂಬ ಭ್ರಮೆಗಳನ್ನು ಹೊತ್ತು ಮದ್ರಾಸಿನ ಕಡೆಗೆ ಪ್ರಯಾಣ ಬೆಳೆಸುತ್ತಾರೆ. ಎಂಜಿ.ರಸ್ತೆ, ಹಲಸೂರು, ದೊಮ್ಮಲೂರು ಮಾರ್ಗವಾಗಿ ಹೆಚ್‌ಎಎಲ್‌ವರೆಗೂ ನಡದೇ ಹೋಗಿದ್ದು. ಅಷ್ಟರಲ್ಲಿ ಸೂರ್ಯ ಮುಳುಗಿದ್ದ. ರಾತ್ರಿಯಾಗುತ್ತಿತ್ತು. ಮನಬಯಲೊಳಗೆಲ್ಲ ಕತ್ತಲು ಆವರಿಸುತ್ತಿತ್ತು. ಎತ್ತ ಹೋಗಬೇಕು ಮುಂದಿನ ಹೆಜ್ಜೆ ಎಲ್ಲಿ. ದಿಕ್ಕು ತೋಚದ್ದರಿಂದ ಎದುರಾದ ದೇವಸ್ಥಾನದಲ್ಲಿ ಆಶ್ರಯ. ಅಲ್ಲಿ ನಡೆಯುತ್ತಿದ್ದ ಹರಿಕತೆ ಕೇಳುತ್ತಾ ನಿದ್ರೆಗೆ ಜಾರಿದ್ದು. ಮಧ್ಯರಾತ್ರಿಗೆ ಕತೆಮುಗಿಯಿತು, ಎಲ್ಲಾ ಹೋದರೂ ಅಲ್ಲೇ ಮಲಗಿದ್ದ ಕೃಷ್ಣನನ್ನು ಜಮಖಾನದವ ಎಬ್ಬಿಸಿ ಇಲ್ಲಿ ಮಲಗಬಾರದು, ಮನೆಗೆ ಹೋಗು ಎಂದು ಕಟ್ಟಪ್ಪಣೆ ಮಾಡಿ ಹೊರಗೆ ಹಾಕಿದ. ಮುಂದೇನು ? ಏನೂ ತೋಚದೇ ರಸ್ತೆ ದಾಟಿದರೆ ಎಚ್.ಎ.ಎಲ್‌ನ ಬಸ್ ಗ್ಯಾರೇಜು. ಅಲ್ಲಿ ನಿಂತಿದ್ದ ಯಾವುದೋ ಬಸ್‌ನೊಳಗೆ ತೂರಿ ಅಂದಿನ ದಿನದ ಸ್ವರ್ಗ ಅದೇ ಎಂದು ಭಾವಿಸಿ ಮೂಲೆಯಲ್ಲಿ ಮುದುಡಿ ಮಲಗಿದ್ದಾಯಿತು. ರಾತ್ರಿ ಪಾಳಿ ಮುಗಿಸಿ ಬರುವ ಕಾರ್ಮಿಕರನ್ನು ಮತ್ತೆ ಅವರ ಮನೆಗಳಿಗೆ ಕರೆದುಕೊಂಡ್ಹೋಗಿ ಮನೆಗೆ ಬಿಡುವ ಕಾರಣ ಆ ಬಸ್‌ನ ಡ್ರೈವರ್ ಹಾಗೂ ಕಂಡೆಕ್ಟರ್‌ಗಳು ಬಸ್ಸತ್ತಿ ಸಿದ್ಧವಾಗುವ ಸಂದರ್ಭದಲ್ಲಿ ಮೂಲೆಯಲ್ಲಿ ಮುದುಡಿ ಮಲಗಿದ್ದ ಹುಡುಗನನ್ನು ಕಂಡು, ಯಾರು ನೀನು, ಇಲ್ಲೇಕೆ ಬಂದೆ, ಎಲ್ಲಿಯವನು, ಯಾವ ಏರಿಯಾದವನು, ಎಂದೆಲ್ಲಾ ವಿಚಾರಿಸಿದರು. ಮಾವಳ್ಳಿ ಸರ್ಕಲ್ ಎಂದು ಹೇಳಿದಾಗ, ಮಾವಳ್ಳಿ ಬಸ್ ಹತ್ತಿಸಿದರು. ಇಳಿ ಎಂದು ಕೋಳಿಕೂಗುವ ಹೊತ್ತು 4.30ಕ್ಕೆ ಕೃಷ್ಣನನ್ನು ಮಾವಳ್ಳಿಯಲ್ಲಿ ಇಳಿಸಿದ ಬಸ್ ಮುಂದೆ ಹೋಗಿತ್ತು.

ಕೃಷ್ಣ ಎಲ್ಲಿ ಹೋದಾನು, ವಿಧಿ ಇಲ್ಲದೆ, ಬೇರೆ ದಾರಿ ಕಾಣದೇ ಮನೆಯವರು

ಹೊಡೆಯುತ್ತಾರೆಂಬ ಭಯದಲ್ಲಿಯೇ ಮತ್ತೆ ಮಾವಳ್ಳಿ ಮನೆಗೆ ಹೋದದ್ದು, ಸುತ್ತಮುತ್ತಲಿನ ಮನೆ ಹುಡುಗರು ಮನೆ ಬಿಡುವುದು, ಓಡಿ ಹೋಗುವುದು ಹೀಗೆಲ್ಲ ನಡೆಯುತ್ತಿದ್ದರಿಂದ ಕೃಷ್ಣನೂ ಎಲ್ಲೋ ಓಡಿಹೋಗಿದ್ದಾನೆಂದು ಭಯಗೊಂಡಿದ್ದರು ಮನೆಯವರು. ಹಾಗಾಗಿ ಹೊಡೆತ ಬೀಳಲಿಲ್ಲ. ಆದರೆ ಬೈಗುಳಗಳ ಸುರಿಮಳೆಯಾಯಿತು. ಬುದ್ದಿಮಾತಿನ ಜಡಿ ಆಗಾಗ ಆಗುತ್ತಲೇ ಇತ್ತು. ಮತ್ತೆ ಮನೆಗೆಲಸ, ಹಸು, ಕರು, ಕೊಟ್ಟಿಗೆ ಹಾಲಾಕಾಗುವುದು ಮುಂದುವರೆಯಿತು. ಮದ್ರಾಸು ದೂರವೇ ಉಳಿಯಿತು. ಸಿನಿಮಾ ನಟನೆ ಮನದಲ್ಲಿ ಗೂಡು ಕಟ್ಟುತ್ತಲೇ ಇತ್ತು. ಬಂಡೆದ್ದು ಬರಿಗೈಯಲಿ ಹೊರ ಬಂದ ಕರಿಭಂಟ ಈ ರಾಮಯ್ಯ ಹೀಗೇಕೆ ಮಾಡಿದ? ನನ್ನ ದುಡ್ಡೆಲ್ಲವನ್ನೂ ಅವನೇಕೆ ತೆಗೆದುಕೊಂಡ ? ಆ ದುಡ್ಡನ್ನು ಅಪ್ಪನಿಗೇನಾದರೂ ಕೊಟ್ಟನಾ? ಪ್ರಶ್ನೆಗಳ ಮೇಲೆ ಪ್ರಶ್ನೆಗಳು, ನಮ್ಮ ಜನಾಂಗಕ್ಕೆ ವಿದ್ಯಾಭ್ಯಾಸ ಕೊಡಿಸಬೇಕು. ಅವರು ಎಲ್ಲರಂತೆ ಆಗಬೇಕು. ವಿದ್ಯಾವಂತರಾಗಿ ಒಳ್ಳೆ ಬದುಕನ್ನು ಸಾಗಿಸಬೇಕು, ಉನ್ನತ ವ್ಯಾಸಂಗ ಕೊಡಿಸಬೇಕು. ಇವುಗಳ ಆಲೋಚನೆ ಇರಲಿಲ್ಲ. ದುಡಿಬೇಕು, ಹಣ ಸಂಪಾದನೆ ಮಾಡಬೇಕು, ಇಷ್ಟೇ ಗೊತ್ತಿದ್ದುದ್ದು. ಹಾಗಾಗಿ ಚಿಕ್ಕ ವಯಸ್ಸಿನಲ್ಲೇ ತನ್ನನ್ನು ದುಡಿಮೆಗೆ ಹಾಕಿ ಬಿಟ್ಟಿದ್ದಾರೆ, ತಾನೂ ಎಲ್ಲರಂತೆ ಓದಬೇಕು, ಶಾಲೆ ಕಾಲೇಜುಗಳಿಗೆ ಹೋಗಬೇಕು, ಎಂಬ ಅದೆಷ್ಟೋ ಆಸೆ ಕೃಷ್ಣನಲ್ಲಿ ಇದ್ದರೂ ಅದಕ್ಕೆ ಮನೆಯ ವಾತಾವರಣ ಆಸ್ಪದ ಕೊಡುತ್ತಿಲ್ಲ, ಈ ರಾಮಯ್ಯ ಬೇರೆ ನನ್ನ ಬಳಸಿಕೊಂಡು ತನ್ನ ಮನೆಯನ್ನು ವೃದ್ಧಿಸಿಕೊಳ್ಳುತ್ತಿದ್ದಾನೆ, ಉದ್ಧಾರ ಮಾಡಿಕೊಳ್ಳುತ್ತಿದ್ದಾನೆ ಎಂಬ ಸಿಟ್ಟು, ತಾನು ತನ್ನದೇ ಬದುಕನ್ನು ರೂಪಿಸಿಕೊಳ್ಳಬೇಕು ಎಂಬ ವಿವೇಕ, ಅಸಹಾಯಕತೆಯಿಂದ ಹೊರಹೊಮ್ಮಿದ ರೋಷ, ಅದಾವುದೋ ತಳಮಳ, ನಾನು ಈ ಕೂಪದಿಂದ ಹೊರಬಂದರೆ ಉದ್ಧಾರವಾಗುವುದೆಂಬ ಕೆಟ್ಟ ಧೈರ್ಯ ದಟ್ಟ ನಿರ್ಧಾರ. ಮನೆಯವರಿಂದ ತಪ್ಪಿಸಿಕೊಳ್ಳಲು, ಗ್ರೂಫ್ ಸ್ಟಡೀ ಮಾಡುತ್ತೇನೆಂದು ಚಾಮರಾಜಪೇಟೆಯ ಮಾದವರಾವ್ ಮನೆ, ಸ್ನೇಹಿತ ರಾಮಕೃಷ್ಣನ ಮನೆಗೆ ಆಗಾಗ ಹೋಗುವುದು, ರಾತ್ರಿ ವೇಳೆ ಅಲ್ಲೇ ತಂಗುವುದು ಸಂಜೆ ಹೊತ್ತು ಸಾಹಿತ್ಯ ಪರಿಷತ್‌ನಲ್ಲಿ ಆಗುತ್ತಿದ್ದ ನಾಟಕಗಳನ್ನು ನೋಡಲು ಹೋಗುತ್ತಿದ್ದುದ್ದು ಇವೆಲ್ಲ ನೆನಪಾಯಿತು. ಅದೊಂದು ರಮ್ಯತೆಯನ್ನು ತಂದಿತು. ನಿರುಮ್ಮಳತೆ ಎನಿಸಿತು. ಮನ ಶಾಂತವಾಯಿತು, ನನಗೆ ನಾನೇ ನನ್ನ ಬದುಕಿನ ದಾರಿಯನ್ನು ಹುಡುಕಿಕೊಳ್ಳಬೇಕು. ನನ್ನ ಜೀವನದ ಮಾರ್ಗವನ್ನು ನಾನೇ ಕಂಡು ಕೊಳ್ಳಬೇಕು ಎಂದು ನಿರ್ಧರಿಸಿ ಬಂಡೆದ್ದು ಕೃಷ್ಣ ಮನೆಯಿಂದ ಹೊರಬಂದು ಬದುಕಿನ ಹುಡುಕಾಟದಲ್ಲಿ, ಆ ಅಲೆದಾಟದಲ್ಲಿ ತೊಡಗಿದಾಗ ಎದುರಾದದ್ದು ನಾಗೇಶ ಎಂಬ ಹುಚ್ಚು ದೊರೆ, ಹುಟ್ಟು ಬಂಡಾಯಗಾರ, ಕೋಟಿ ಕನಸುಗಳನ್ನೊತ್ತು ಅಲೆವ ಅಲೆಮಾರಿ ಬಂಡಕೋರ ಆರ್ ನಾಗೇಶ.

## ಸಾಹಿತ್ಯ ಪರಿಷತ್‌ನ ಸಹವಾಸ

ಆಗ ಕನ್ನಡ ಚಳವಳಿಯ ಉಗಮದ ದಿನಗಳು, ಕನ್ನಡಿ ಭಾಷಿಕರು ಒಗ್ಗೂಡಿದ ದಿನಗಳು, ಅನಕೃ, ರಾಮಮೂರ್ತಿ, ನಾಡಿಗೇರೆ ಕೃಷ್ಣರಾಯರು, ಜಿ.ಪಿ.ರಾಜರತ್ನಂ, ಬೀಚಿ ಕನ್ನಡ ಭಾಷೆಯೆಡೆಗೆ ಅಭಿಮಾನವನ್ನು ಹುಟ್ಟಿ ಹಾಕಿದ್ದ ದಿನಗಳು, ಪೋರ್ಟ್ ಹೈಸ್ಕೂಲ್ ಆವರಣದಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಕುವೆಂಪು ಅವರ ಭಾಷಣ ಕೇಳಿದ್ದು. ಹಾಗೆಯೇ ಇಂತಹ ಮುಂಚೂಣಿಯಲ್ಲಿದ್ದ ಹಿರಿಯ ಸಾಹಿತಿಗಳ ಅಲ್ಲಿ ಇಲ್ಲಿ ಭಾಷಣ ಇದ್ದೇ ಇರುತ್ತಿತ್ತು. ವಿದ್ವತ್‌ಪೂರ್ಣ ಮಾತುಗಳು, ಅನೇಕ ಮಾಹಿತಿಯನ್ನೊಳಗೊಂಡ ಭಾಷಣಗಳು, ಜನರನ್ನು ಭಾಷಾಭಿಮಾನದ ಕಡೆಗೆ ಸೆಳೆಯುವ ಚರ್ಚೆಗಳು, ಹುರಿದುಂಬಿಸುವ ವಿಚಾರಗಳು, ಜ್ಞಾನವೃದ್ಧಿ ಹೆಚ್ಚಿಸಿಕೊಳ್ಳಲು ಇದೊಂದು ಸದಾವಕಾಶ ಕೃಷ್ಣನಿಗೆ. ಎಲ್ಲೆಲ್ಲಿ ಭಾಷಣಗಳಾಗುತ್ತವೋ ಅಲ್ಲೆಲ್ಲ ಹಾಜರ್. ತುಳಸಿತೋಟ ಆಗಿರಬಹುದು, ಆರ್ಟ್ಸ್ ಕಾಲೇಜಿನ ಬಯಲಾಗಿರಬಹುದು, ನ್ಯಾಷನಲ್ ಕಾಲೇಜಿನ ಫೀಲ್ಡ್, ಮಲ್ಲೇಶ್ವರಂ ಗ್ರೌಂಡು, ಸಾಹಿತ್ಯ ಪರಿಷತ್, ಟೌನ್‌ಹಾಲ್, ಅಂತೆಲ್ಲ ಹೋಗುತ್ತಿದ್ದಾಗ ಒಂದು ದಿನ ಸಾಹಿತ್ಯ ಪರಿಷತ್‌ನಲ್ಲಿ ಟಿ.ಪಿ. ಕೈಲಾಸಂ ಅವರ "ಅನುಕೂಲಕ್ಕೊಬ್ಬಣ್ಣ" ನಾಟಕ ನಡೆಯುತ್ತಿತ್ತು. ನಾಟಕ ನೋಡಿದ್ದಾಯಿತು, ನಾಟಕ ಮಾಡಿದವರು ಕನ್ನಡ ಸಾಹಿತ್ಯ ಕಲಾ ಸಂಘದವರು. ನಾಗೇಶ್ ಎಂಬ ನಾಟಕದ ಕುಳ ನಾಟಕ ಮಾಡಿದ್ದು. ನಾಗೇಶನನ್ನು ಬೇಟಿಯಾಗಿ ತನ್ನ ಆಸಕ್ತಿಯನ್ನು ತಿಳಿಸಿದೆ ಅನ್ನುತ್ತಾರೆ ಕೃಷ್ಣಪ್ಪ. ಕೋಡಿಹಳ್ಳಿ ರಾಮಣ್ಣ, ಜೀರಿಗೆ ಲೋಕೇಶ, ಪಿ.ಎಸ್.ಬಿ. ನಾಯ್ಡು, ಈಶ್ವರರಾವ್ ಕಾಳೇಕರ್, ಸಭಾಪತಿ, ಇನ್ನೂ ಮುಂತಾದವರು ನಾಗೇಶ್ ಜೊತೆಗಿದ್ದರು. ಕೃಷ್ಣಪ್ಪನ ಕುಲಗೋತ್ರ, ಹಿನ್ನೆಲೆ ಮುನ್ನಲೆ ಎಲ್ಲಾ ವಿಚಾರಿಸಿದ ನಾಗೇಶ "ಮುಂದಿನ ಭಾನುವಾರ ಮಲ್ಲೇಶ್ವರಂನ ಜೀರಿಗೆ ಪುಸ್ತಕ ಭಂಡಾರಕ್ಕೆ ಬನ್ನಿರಿ ಮಾತಾಡೋಣ", ಎಂದವರು, ಮರುಕ್ಷಣದಲ್ಲೇ "ಬೇಡ ಬೇಡ ಮುಂದಿನವಾರ ಬೇಡ ನಾಳೆಯೇ ಮೆಜೆಸ್ಟಿಕ್‌ನಲ್ಲಿ ಬೇಟಿಯಾಗೋಣ ಬಂದ್ಬಿಡಿ". ಎಂದರು. ಸರಿ ನಾಳೆಯ ಸಂಜೆಗೆ ಕಾಯ್ದಿದ್ದಾಯಿತು, ನಾಗೇಶ್ ಹೇಳಿದ ವೇಳೆಗೆ ಸರಿಯಾಗಿ ಮತ್ತು ತಿಳಿಸಿದ ಜಾಗಕ್ಕೆ ಕರೆಕ್ಟಾಗಿ ಹೋಗಿದ್ದಾಯಿತು. ಹೀಗೆ ನಾಗೇಶ್ ಪರಿಚಯವಾಯಿತು. ಕೆಲಸವೂ ಇಲ್ಲ, ಮನೆಯ ಸಂಪರ್ಕವೂ ಇಲ್ಲದ ಕಾರಣ ಹೆಚ್ಚು ಹೆಚ್ಚು ಸಮಯ ನಾಗೇಶನ ಜೊತೆಯಲ್ಲಿ ಅಲ್ಲಿ ಇಲ್ಲಿ ಎಲ್ಲೆಲ್ಲಿ ನಾಟಕಗಳು ಆಗುತ್ತೋ ಅಲ್ಲೆಲ್ಲಾ ಕಾಲಕಳೆಯಲು, ರಂಗದ ಕೆಲಸ ಮಾಡಲು ಅವಕಾಶ ಸಿಕ್ಕಿತು. ಹೀಗೆ ಪರಿಚಯ ಬೆಳೆದು ಸ್ನೇಹವಾಗಿ ಮುಂದೆ ಗಾಢಬಾಂಧವ್ಯಕ್ಕೆ ತಿರುಗಿತು. ಆಗ ಆಗುತ್ತಿದ್ದ ಎಲ್ಲಾ ನಾಟಕ ತಂಡಗಳ ಜೊತೆ ಒಡನಾಡಲು ಸಾಧ್ಯವಾಯಿತು ಎಂದು ನೆನಪಿಗೆ ಜಾರುತ್ತಾರೆ ಕೃಷ್ಣಪ್ಪ.

## ಕನ್ನಡ ಸಾಹಿತ್ಯ ಕಲಾಸಂಘ ಹಾಗೂ ಬೆಂಗಳೂರು ರಂಗ ತಂಡಗಳೊಡನೆ ಒಡನಾಟ

ತಿಂಗಳ ಮೂರನೇ ಭಾನುವಾರ ಮಲ್ಲೇಶ್ವರಂನ ಜೇರಿಗೆ ಪುಸ್ತಕ ಭಂಡಾರದಲ್ಲಿ ಸಂಘದ ಮೀಟಿಂಗ್, ಅಲ್ಲಿಗೆ ಕೃಷ್ಣಪ್ಪನವರ ಪಾದಾರ್ಪಣೆ, ಮೀಟಿಂಗ್‌ನಲ್ಲಿ ಸಂಘದ ರೂಪುರೇಷೆಗಳು ಚರ್ಚೆಯಾಯಿತು. ಆ ದಿನಗಳು ಕನ್ನಡ ಚಳವಳಿಯ ಒಳವು ಹೆಚ್ಚಾಗಿತ್ತು. ಕನ್ನಡ ಕ್ಯಾಲೆಂಡರ್, ಕನ್ನಡ ಪ್ರಬಂಧ ಸ್ಪರ್ಧೆ, ಕನ್ನಡ ನಾಟಕ ಸ್ಪರ್ಧೆ, ಹೀಗೆ ಸ್ಪರ್ಧೆಗಳನ್ನು ಏರ್ಪಡಿಸುವುದರ ಮೂಲಕ ವಿದ್ಯಾರ್ಥಿಗಳಲ್ಲಿ, ಯುವಜನರಲ್ಲಿ ಕನ್ನಡ ಭಾಷೆಯೆಡೆಗೆ ಅಭಿಮಾನ ಮೂಡಿಸುವುದು, ಕನ್ನಡ ಜ್ಞಾನದ ಕಡೆಗೆ ಅರಿವು ಮೂಡಿಸುವುದು, ಕನ್ನಡ ಭಾಷಾ ಜಾಗೃತಿ ಮಾಡುವುದು ಈ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದೆಂದು ತೀರ್ಮಾನಿಸಲಾಯಿತು. ಕೋಡಿಹೊಸಳ್ಳಿ ರಾಮಣ್ಣನವರಿಗೆ ಕನ್ನಡ ಭಾಷಾ ನೆಲೆಯಲ್ಲಿ ಕೆಲಸ ಮಾಡಲು ಹೆಚ್ಚು ಆಸಕ್ತಿ ಇದ್ದರೆ, ನಾಗೇಶ್‌ರವರಿಗೆ ಕನ್ನಡ ರಂಗಭೂಮಿ ನೆಲೆಯಲ್ಲಿ ಕೆಲಸ ಮಾಡಲು ಹೆಚ್ಚು ಆಸಕ್ತಿ ಇತ್ತು.

1964–65ರ ಸಂದರ್ಭದಲ್ಲಿ ಬಸವನಗುಡಿಯ ನ್ಯಾಷನಲ್ ಕಾಲೇಜಿನ 'ಹಿಸ್ಟ್ರಿಯಾನಿಕ್ ಕ್ಲಬ್' ಬಹಳ ಬಿರುಸಿನಿಂದ ರಂಗ ಚಟುವಟಿಕೆಗಳ ತೊಡಗಿತ್ತು. ನಾಣಿ, ನಾಗರಾಜ್, ಎ.ಟಿ. ಪದ್ದು, (ಪದ್ದಣ್ಣ) ಅಂತಹ ಅನೇಕಾನೇಕ ಘಟಾನುಘಟಿಗಳು ಆಲ್ಲಿದ್ದರು. ಅವರ ಜೊತೆ ಸಿ.ಆರ್.ಸಿಂಹ, ನಾರಾಯಣಸ್ವಾಮಿ (ಶ್ರೀನಾಥ್), ವೆಂಕಟರಾವ್, ಶೇಖರ್ ಇನೂ ಮುಂತಾದವರು. ಇನ್ನಿತರ ಪಂಟ್ರು ಇದ್ದರು. ಇವರಿಗೆಲ್ಲ ಆಶ್ರಯ ನೀಡಿದ್ದವರು ಹೆಚ್. ನರಸಿಂಹಯ್ಯ ನವರು ..... ಇನ್ನೂ ಈ ಕಡೆ ಆನಂದರಾವ್ ಸರ್ಕಲ್ ಬಳಿ 'ಹೆಬ್ಬಾರ್ ವೈಷ್ಣವಿ ಸಭಾ' ದಲ್ಲಿ 'ನಾಟ್ಯ ಸಂಘ' ಕಛೇರಿ ಇತ್ತು. ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಮ್ಯಾನೇಜರ್ ಆಗಿದ್ದ ಪಿ.ವಿ. ವೇಣುಗೋಪಾಲರೆಡ್ಡಿ, ಜಿ.ಎಸ್. ನಾಗರಾಜ್ ಮೈಸೂರು, ಗೊ.ನ. ಎಂದೇ ಹೆಸರಾಗಿದ್ದ ಸತ್ಯನಾರಾಯಣ, ಕಪಿನಯ್ಯ (ಕಪಿನಿ) ಕಿರ್ಲೋಸ್ಕರ್‌ನಲ್ಲಿ ಚೀಫ್ ಎಂಜಿನಿಯರ್ ಆಗಿದ್ದ ಎಸ್.ಜಿ.ರಾಮಚಂದ್ರರಾವ್ ಇಂತಹ ದಿಗ್ಗಜರು ನಾಟ್ಯ ಸಂಘದಲ್ಲಿದ್ದರು. ಇತ್ತ ಮಲ್ಲೇಶ್ವರಂನಲ್ಲಿ 'ಮಿತ್ರಬಳಗ' ರಂಗಭೂಮಿಯಲ್ಲಿ ತೊಡಗಿತ್ತು. ಎಸ್.ಜೆ. ಸೋಮಸುಂದರಂ, ಇನ್ನೂ ಇತರರು, ಅತ್ತ ಎಂ.ಇ.ಎಸ್ ಕಾಲೇಜಿನಲ್ಲಿ ಕ.ವೆಂ. ರಾಜಗೋಪಾಲ್ ಹಾಗೂ ಅವರ ಶಿಷ್ಯ ವೃಂದ, ರೇಣುಕಾಚಾರ್ಯ ಕಾಲೇಜಿನಲ್ಲಿ ಎಂ.ಎಸ್. ನಾಗರಾಜರಾವ್ ಅವರ ಶಿಷ್ಯರುಗಳಾದ, ಚಂದ್ರಕುಮಾರ್ ಸಿಂಗ್, ಟಿ.ಎಸ್. ನಾಗಾಭರಣ, ಎ.ಎನ್.ಸೂರಿ, ಜಿ. ಲೋಕೇಶ್, ಎನ್.ಕೆ. ಮೋಹನ್‌ರಾಮ್, ಎನ್.ಕೆ. ರಾಮಕೃಷ್ಣ (ಮೇಕಪ್) ಮತ್ತು ಇತರರು. ಗಾಂಧಿನಗರದಲ್ಲಿ 'ಕಲಾಕುಂಜ' ತಂಡದಲ್ಲಿ

ಜಿ.ವಿ. ಶಿವಾನಂದ, ಎಂ.ಮಹಾದೇವ, ಮಲ್ಲೇಶ್ವರಂ 'ಕಲಾಘೋಷಣಿ'ಯಲ್ಲಿ ಎಚ್.ಕೆ. ರಾಮಮೂರ್ತಿ, ಗಾಂಧಿಬಜಾರಿನಲ್ಲಿ 'ಚಿತ್ರ ಕಲಾವಿದರು' ತಂಡದಲ್ಲಿ ಎ.ಎಸ್.ಮೂರ್ತಿ, ದಾಶರಥಿ ದೀಕ್ಷಿತ್, ಎ.ಎಲ್. ಶ್ರೀನಿವಾಸಮೂರ್ತಿ, ಚಾಮರಾಜಪೇಟೆಯಲ್ಲಿ 'ಶಶಿಕಲಾವಿದರು' ತಂಡ, ಗಾಂಧಿಬಜಾರಿನಲ್ಲಿ 'ಪ್ರತಿಮಾ ನಾಟಕರಂಗ' ರಂಗದಲ್ಲಿ ಸಕ್ರಿಯವಾಗಿತ್ತು, ಅದರಲ್ಲಿ ಲಂಕೇಶ್, ಕೆ.ಎಂ.ಎಸ್. ಕೀರಂ, ಜಿ.ಕೆ. ಗೋವಿಂದರಾಜು ಇನ್ನಿತರ ಸಾಹಿತಿಗಳು, ಹಾಗೂ ಕಾಲೇಜಿನ ಉಪನ್ಯಾಸಕರುಗಳು ಇದ್ದರು. ಮಲ್ಲೇಶ್ವರಂನ ಇನ್ನೊಂದು ತಂಡ 'ಭೂಮಿಕಾ' ಇತ್ತು, ಇದರಲ್ಲಿ ಡಿ.ಸಿ.ಕೃಷ್ಣಮೂರ್ತಿ ಮತ್ತು ಟಿ.ಎನ್. ಸೀತಾರಾಂ ಹಾಗೂ ಇನ್ನಿತರರು ಇದ್ದರು. ಶಂಕರಪುರಂನಲ್ಲಿ 'ಕಲಾಕ್ಷೇತ್ರ' ರಂಗತಂಡ ನಾಟಕ ಮಾಡುತ್ತಿತ್ತು, ಇದರಲ್ಲಿ ಟಿಂಗಾಣಿ ಶಂಕರ ಎಂದೇ ಹೆಸರಾಗಿದ್ದ ಶಂಕರರಾವ್ ಪ್ರಮುಖರಾಗಿದ್ದರು. ಕೋರಮಂಗಲದಿಂದ ಮಡಿವಾಳಕ್ಕೆ ಹೋಗವ ರಸ್ತೆಯಲ್ಲಿರುವ 'ಫೋರಂ ಮಾಲ್' ಸ್ಥಳದಲ್ಲಿ ಒಂದು ಸ್ಪ್ರಿಂಗ್ ಫ್ಯಾಕ್ಟರಿ ಇತ್ತು, ಅಲ್ಲಿ ಕೆಲಸ ಮಾಡುತ್ತಿದ್ದ ರಾಮಕೃಷ್ಣಬಾಬು (ಲೈಟ್‌ಬಾಬು) ಫ್ಯಾಕ್ಟರಿಯ ಕಾರ್ಮಿಕರನ್ನು ಜೊತೆ ಕಟ್ಟಿಕೊಂಡು 'ಸ್ಫೂರ್ತಿ ಕಲಾವಿದರು' ನಾಟಕ ತಂಡ ಕಟ್ಟಿದ್ದರು, ಅರಣ್ಯ ಇಲಾಖೆಯಲ್ಲಿ ನೌಕರರಾಗಿದ್ದ ನರಸಿಂಗರಾವ್ (ಪರ್ವತವಾಣಿ) ಅವರ ನೇತೃತ್ವದಲ್ಲಿ 'ನಂ ಕಂಪ್ನಿ' ತಂಡ ಇತ್ತು, ಅದರಲ್ಲಿ ಸಿ.ಬಿ. ಜಯರಾವ್, ಸಿ.ಸೀತಾರಾಂ, ಬಿ.ಆರ್. ಜಯರಾಮ್ ಹಾಗೂ ಇನ್ನಿತರರು ಇದ್ದರು. ಜೆ.ಸಿ. ರಸ್ತೆಯಲ್ಲಿದ್ದ ಕೆ.ವಿ. ಅಯ್ಯರ್ ಅವರ ಗರಡಿಯಲ್ಲಿ 'ರವಿ ಕಲಾವಿದರು' ನಾಟಕ ಮಾಡುತ್ತಿದ್ದರು. ಅವರ ಜೊತೆ ಸಿ.ಎಚ್. ಲೋಕನಾಥ್, ಬಿ.ಎಸ್. ನಾರಾಯಣರಾವ್, ಬಿ.ಎಸ್. ವೆಂಕಟರಾವ್, ಕಾನಕಾನಹಳ್ಳಿ ಗೋಪಿ ಹಾಗೂ ಇನ್ನಿತರ ರಾವ್‌ಗಳು ಸೇರಿದ್ದರು, ಹೀಗೆ ಬೆಂಗಳೂರಿನ ಹಲವು ಬಡಾವಣೆಗಳಲ್ಲಿ ರಂಗ ಚಟುವಟಿಕೆಯಲ್ಲಿ ತೊಡಗಿಕೊಂಡ ತಂಡಗಳು ಇದ್ದವು, ಅದರಲ್ಲಿ ಹವ್ಯಾಸಿಗಳು, ಕಾರ್ಮಿಕರು, ವಿದ್ಯಾರ್ಥಿಗಳು, ಉಪಾಧ್ಯಾಯರು, ಉಪನ್ಯಾಸಕರು, ನೌಕರರೆನ್ನದೇ ಹಲವು ವರ್ಗದ ಜನರಿದ್ದರು. ಇವರೆಲ್ಲರಿಗೂ ಸೀನರಿ, ಲೈಟು, ಸೌಂಡು ಸಪ್ಲೈ ಮಾಡುತ್ತಿದ್ದ ಪ್ರಭಾತ್ ಕಲಾವಿದರು ಎಂಬ ಸಕುಟುಂಬ ಪರಿವಾರದ ನೂರಾರು ಜನ ಕಲಾವಿದರು, ನೌಕರರು ಬೆಂಗಳೂರಿನ ರಂಗಭೂಮಿಯನ್ನು ಎಚ್ಚರವಾಗಿಟ್ಟಿದ್ದರು.

## ನಾಗೇಶನ ಜೊತೆ ತಿರುಗಾಟ

ಬೆಂಗಳೂರಿನ ಬಹುತೇಕ ರಂಗ ತಂಡಗಳ ರಂಗ ಚಟುವಟಿಕೆಗಳಿಗೆ ಪ್ರಭಾತ್ ಕಲಾವಿದರೇ ರಂಗವೇದಿಕೆ, ರಂಗಪರಿಕರಗಳು, ಲೈಟ್ ಮತ್ತು ಸೌಂಡ್‌ಗಳನ್ನು ಹಾಗೂ ಉಡುಪು, ಪ್ರಸಾದನ ಈ ಎಲ್ಲವನ್ನೂ ಒದಗಿಸುತ್ತಿದ್ದರು. ಪ್ರಭಾತ್‌ನ ಕೆಲಸಗಾರರು ತಂಡದ ನಾಟಕಗಳು ಅಥವಾ ಸ್ಪರ್ಧೆಗಳು ಇದ್ದ ದಿನ ಬಂದು ಈ ಕೆಲಸಗಳನ್ನು

ಮಾಡುತ್ತಿದ್ದರು. ಇದು ಲಾಗಾಯ್ತಿನಿಂದ ಬಂದ ರಂಗಪದ್ಧತಿ, ರಂಗ ಸಂಪ್ರದಾಯ ಹಾಗೂ ರಂಗ ವ್ಯವಹಾರವೂ ಆಗಿತ್ತು.

'ಅರರೇ ಈ ಕೆಲಸವನ್ನು ನಾವೂ ಮಾಡಬಹುದಲ್ಲ' ಅನಿಸಿತು, ಇದು ನಮ್ಮಿಂದಲೂ ಸಾಧ್ಯವಿಲ್ಲವೇ, ಒಂದು ಪ್ರಯತ್ನವನ್ನು ಮಾಡಿ ನೋಡೋಣ ಅನ್ನಿಸಿ ಕನ್ನಡ ಸಾಹಿತ್ಯ ಕಲಾಸಂಘದಿಂದ ಒಂದು ಯೂನಿಟ್ ಮಾಡಿಕೊಂಡದ್ದು ಆಗಲೇ, ಕನ್ನಡ ಸಾಹಿತ್ಯ ಕಲಾಸಂಘದ ನೇಪಥ್ಯದ ವಿಂಗ್ ವಿ-4 ಪ್ರಾರಂಭವಾದದ್ದು. ವಿ-4 ನಲ್ಲಿ 'ಕನ್ನಡ ಸಾಹಿತ್ಯ ಕಲಾಸಂಘ' ಎಲ್ಲಾ ಸದಸ್ಯರೇನೂ ಇರಲಿಲ್ಲ. ರಂಗದಲ್ಲಿ ಆಸಕ್ತರಾಗಿದ್ದು ಅದರಲ್ಲೂ ನೇಪಥ್ಯದಲ್ಲಿ ತೊಡಗಿಸಿಕೊಳ್ಳಬೇಕೆಂಬ ಇಚ್ಛೆ ಇದ್ದ ಆರ್ ನಾಗೇಶ್, ಎಲ್.ಕೃಷ್ಣಪ್ಪ ಎಂ.ಬಸವರಾಜ್, ಶಿವಸ್ವಾಮಿ ಇವರೆಲ್ಲ ಸೇರಿ ನೇಪಥ್ಯಕ್ಕಾಗಿ ಒಂದು ತಂಡವನ್ನು ಮಾಡಿಕೊಂಡಿದ್ದರು. 1. ಹೌಸ್ ಪ್ಲಾಟ್, (ಹೌಸ್ ಪ್ಲಾಟ್ ಅಂದರೆ 2 ಬಾಗಿಲು, 2 ಕಿಟಕಿ, ಗೋಡೆ, ಸೆಲ್ಫ್, ಅಲ್ಮೇರ, ಇವನೆಲ್ಲ 3/1 ರೀಪರ್‌ಗೆ ಕೋರಾಬಟ್ಟೆ ಹೊಡೆದು ಮಾಡಿದ್ದವು) 2) ಬ್ಯಾಟನ್ (100 ವೋಲ್ಟ್ 7-8 ಬಲ್ಬಗಳು ಇದ್ದ ಬೆಳಕಿನ ವ್ಯವಸ್ಥೆ, ಜಿ ಐ ಸೀಟ್ ಜಗ್‌ಸೀಟ್‌ನಿಂದ ಆಯುತಾಕಾರದಲ್ಲಿ ಮಾಡಿದ್ದ ಚೌಕಟ್ಟು) 3) ಸ್ವಿಚ್ ಬೋರ್ಡ್, 4) ಡಿಮ್ಮರ್ (ನೀರಿನ ಟಿನ್ ಬಾಕ್ಸ್ ಬಳಸಿ ಬೆಳಕಿನ ಪ್ರಖರತೆಯನ್ನು ಹೆಚ್ಚು ಕಡಿಮೆ ಮಾಡುತ್ತಿದ್ದ ಸಾಧನ) 5) ಪರದೆ, ಫ್ರಿಲ್, ಸೈಡ್‌ವಿಂಗ್‌ಗಳು 6) ಮೇಕಪ್ ಕಿಟ್ 7) ವರ್ಕಿಂಗ್ ಕಿಟ್, ಈ ರೀತಿಯ 2-3 ಸೆಟ್‌ಗಳನ್ನು ಮಾಡಿಕೊಂಡಿರುತ್ತಾರೆ. ಇದಕ್ಕಾಗಿ 3-4 ಸಾವಿರ ಬಂಡವಾಳ ಹೊಂದಿಸಿರುತ್ತಾರೆ. ಅದೂ ಸಾಲ ಸೋಲ ಮಾಡಿ. 2 ವರ್ಷ ನಿರಂತರವಾಗಿ ಎಲ್ಲೆಲ್ಲಿ ಶಾಲಾ ವಾರ್ಷಿಕೋತ್ಸವ ನಡೆಯುತ್ತತ್ತೋ, ಎಲ್ಲೆಲ್ಲಿ ನಾಟಕ ಸ್ಪರ್ಧೆಗಳು ನಡೆಯುತ್ತಿತ್ತೋ. ಟೌನ್‌ಹಾಲು, ಪೋರ್ಟ್ ಹೈಸ್ಕೂಲ್, ನ್ಯಾಷನಲ್ ಕಾಲೇಜು, ಎಂ.ಇ.ಎಸ್ ಕಾಲೇಜು, ಕಾರ್ಖಾನೆಗಳಲ್ಲಿ ನಡೆಯುತ್ತಿದ್ದ ನಾಟಕಗಳು ಅಲ್ಲೆಲ್ಲಾ ವಿ-4 ನ ಬಂಟರು ಇರುತ್ತಿದ್ದರು, ಇವರು ಎಲ್ಲೆಲ್ಲೋ ಕೆಲಸ ಮಾಡಿದರೂ ಇವರ ಸಾಲ ತೀರಿರಲಿಲ್ಲ, ಆ ಸಮಯದಲ್ಲಿ ಆಪದ್‌ಬಾಂಧವನ ರೀತಿಯಲ್ಲಿ ಇವರಿಗೆ ಪತ್ರ ಬರುತ್ತದೆ. ಹೆಬ್ಬಾಳದ ಕೃಷಿ ಕಾಲೇಜಿನಿಂದ. 'ನಮ್ಮಲ್ಲಿ 6 ದಿನಗಳ ಕಾಲ ನಾಟಕೋತ್ಸವ ನಡೆಯುತ್ತಿದೆ ನೀವು ಬಂದು ನಿಮ್ಮ ಹೌಸ್ ಪ್ಲಾಟ್ ಇತ್ಯಾದಿಗಳನ್ನು ತಂದು ರಂಗವೇದಿಕೆ ನಿರ್ಮಿಸಿ ನಮ್ಮ ನಾಟಕೋತ್ಸವವು ಯಶಸ್ವಿಯಾಗಲು ಕಾರಣವಾಗುವುದು, ಹಾಗೂ ಇದಕ್ಕೆಲ್ಲ ತಗುಲುವ ವೆಚ್ಚವನ್ನು ಬರಿಸಲಾಗುವುದು' ಎಂದು. ಪತ್ರವನ್ನು ಕಂಡು ಇವರಿಗೆಲ್ಲ ಬಹಳ ಸಂತೋಷವಾಗಿ ಬಿಡುತ್ತೆ. ಇದ್ದ ಬದ್ದ ಸಾಲವನ್ನೆಲ್ಲ ತೀರಿಸಿಕೊಳ್ಳಬಹುದಲ್ಲ ! ದಿನನಿತ್ಯದ ಖರ್ಚಿಗೂ ಒಂದಷ್ಟು ಕಾಸು ಸಿಗುತ್ತಲ್ಲ ಎಂದು ಖುಷಿಯಿಂದ ಕುಣಿದಾಡುತ್ತಾರೆ. ಇದಕ್ಕೆ ಕಾರಣ ಇದೆ. ಇವರ್‍ಯಾರು ಹಣವಂತರಲ್ಲ, ಜೇಬಿನಲ್ಲಿ ಕಾಸು ಮೊದಲೇ ಇರುತ್ತಿರಲಿಲ್ಲ,

ನಾಟಕದವರ ಹತ್ತಿರ ದುಡ್ಡು ಇರುತ್ತಾ ! ? ಇವರೆಲ್ಲ ಅರೆ ವೃತ್ತಿವಂತರು, ವಿದ್ಯಾರ್ಥಿಗಳಾಗಿದ್ದವರು, ಅಲ್ಲಿ ಇಲ್ಲಿ ಹೀಗೆ ಬಂದ ಹಣದಲ್ಲಿ ಅಲ್ಪಸ್ವಲ್ಪ ತಮ್ಮ ಖರ್ಚುಗಳನ್ನು ಸರಿದೂಗಿಸಿಕೊಂಡು ಉಳಿದ ಹಣವನ್ನು ಕನ್ನಡ ಸಾಹಿತ್ಯ ಕಲಾಸಂಘದ ಪ್ರೊಡಕ್ಷನ್‌ಗಳಿಗೆ, ಕಾರ್ಯಕ್ರಮಗಳಿಗೆ ಬಳಸಿಕೊಳ್ಳುತ್ತಿದ್ದರು. 'ಬೇರೆ ತಂಡಗಳ ವಿಶ್ವಾಸ ಗಳಿಸಲಿಕ್ಕೆ, ನಮ್ಮ ಬಗ್ಗೆ ನಂಬಿಕೆ ಬರಲಿಕ್ಕೆ ನಾವು ಬಹಳ ಶ್ರದ್ಧೆಯಿಂದ ಹಾಗೂ ಕಲಾತ್ಮಕವಾಗಿ ನಮ್ಮ ಕೆಲಸವನ್ನು ನಿರ್ವಹಿಸುತ್ತಿದ್ದೆವು' ಎನ್ನುತ್ತಾರೆ ಕೃಷ್ಣಪ್ಪನವರು.

ಆ ಸಂದರ್ಭದಲ್ಲಿ ತಕ್ಕಮಟ್ಟಿಗೆ ಸ್ಥಿತಿವಂತ ತಂಡಗಳಾಗಿದ್ದ ನ್ಯಾಷನಲ್ ಕಾಲೇಜಿನ ಹಿಸ್ಟ್ರಿಯಾನಿಕ್ ಕ್ಲಬ್, ಬಿಎಲ್‌ಟಿ, ನಾಟ್ಯಸಂಘ, ರವಿ ಕಲಾವಿದರು, ಸಂಸ್ಥೆಗಳಲ್ಲಿ ತಮ್ಮದೇ ಆದ ಹಾಗೂ ವ್ಯವಸ್ಥಿತವಾದ ರಂಗಸಾಮಾಗ್ರಿಗಳು ಸಿದ್ಧವಿದ್ದವು. ಪ್ರಭಾತ್‌ನ ಕೆಲಸಗಾರರಿಂದ ಅಚ್ಚುಕಟ್ಟಾದ ಕೆಲಸವನ್ನು ನಿರೀಕ್ಷಿಸಲು ಸಾಧ್ಯವಿಲ್ಲ, ಅದು ಏನಿದ್ದರೂ, ವಿ–4 ನಿಂದ ಮಾತ್ರ ಸಾಧ್ಯ ಎಂದು ಭಾವಿಸಿದ ಬೆಂಗಳೂರಿನ ಬಹುತೇಕ ಎಲ್ಲಾ ರಂಗತಂಡಗಳು ಹಾಗೂ ಸ್ಥಿತಿವಂತತಂಡಗಳೂ ಸಹ ನೇಪಥ್ಯಕ್ಕೆ ಹೆಸರಾಗಿದ್ದ ಅದರಲ್ಲಿ ಕುಶಲತೆ ಮೆರೆದಿದ್ದ ವೃತ್ತಿಪರತೆ ಹೊಂದಿದ್ದ ನಮ್ಮ ಟೀಮ್‌ನ್ನು ತಮ್ಮ ನಾಟಕದ ಕೆಲಸಗಳಿಗೆ ಕರೆಯುತ್ತಿದ್ದರು ಎನ್ನುತ್ತಾರೆ ಕೃಷ್ಣಪ್ಪನವರು.

ಇಂತಹ ಸಂದರ್ಭದಲ್ಲಿ ಹೆಬ್ಬಾಳದ ಕೃಷಿ ಕಾಲೇಜಿನಿಂದ ಕರೆ ಬಂದಿದ್ದೇ ತಡ ಇವರು ಕೆಲಸವನ್ನು ಒಪ್ಪಿಕೊಂಡು ಬಿಡುತ್ತಾರೆ. ಆಗ ಬಂತು ನೋಡಿ ಪೀಕಲಾಟ ! ಹೆಬ್ಬಾಳ ಏನು ಹತ್ತಿರ ಇದೆಯಾ..? ಏನಿಲ್ಲ ಅಂದ್ರೂ 10–15 ಕಿಲೋ ಮೀಟರ್. ಕೆ.ಆರ್. ಸರ್ಕಲ್, ವಿಧಾನಸೌಧ, ಬಳ್ಳಾರಿ ರಸ್ತೆ, ಮೇಕ್ರಿ ಸರ್ಕಲ್ ದಾಟಿ, ಹೆಬ್ಬಾಳ ದಾಟಿ ಒಳರಸ್ತೆ ಬಳಸಿ ಹೋದರೆ, ಕೃಷಿ ಕಾಲೇಜು ಸಿಗುತ್ತಿತ್ತು, ಅಲ್ಲಿಗೆ ತಲುಪುವ ಮಾರ್ಗ ಯಾವುದು, ಹೋಗೋದು ಹೇಗೆ, ಅದು ಈಪಾಟಿ ಸಾಮಾನು ಹೊತ್ತುಕೊಂಡು ? ಶಿವ ದಾರಿ ತೋರಿಸದೇ ಇರ್ತಾನಾ ? ಮಾರ್ಗ ಇದ್ದೇ ಇರುತ್ತೆ ? ಮನಸ್ಸಿದ್ದರೆ ಮಾರ್ಗ ಅಲ್ಲವೇ ? ಅವರು ಕೊಡುವ ದುಡ್ಡೆಲ್ಲ ಜಟಕಾಗಾಡಿಗೇ ಖರ್ಚಾಗಿ ಬಿಟ್ಟರೆ ಏನಪ್ಪ ಮಾಡೋದು ಎಂದು ಲೆಕ್ಕಾಚಾರ ಹಾಕಿ ಕುಂತಿದ್ದಾಗ, ಒಂದು ಐಡಿಯಾ ಬಂತು. ದುಡ್ಡು ಉಳಿಸಬೇಕು, ಕೆಲಸನೂ ಆಗಬೇಕಲ್ಲ,

ಸಿನಿಮಾದ ಬ್ಯಾನರ್ ಕಲಾವಿದರು ದೊಡ್ಡ ದೊಡ್ಡ ಬ್ಯಾನರ್‌ಗಳನ್ನು ಹೊತ್ತೊಯ್ಯುವಂತೆ ಕೃಷ್ಣಪ್ಪಾದಿಗಳು 4 ಜನವೂ ಹೌಸ್ ಪ್ಲಾಟು ಪರದೆಗಳನ್ನು ಹೊತ್ತುಕೊಂಡು ಆದದ್ದಾಗಲೀ ಅಂತ ನಡೆದೇಬಿಟ್ಟರು. ಅಷ್ಟು ದೂರ. ವೇದಿಕೇನೂ ನಿರ್ಮಾಣ ಮಾಡಿಬಿಡುತ್ತಿದ್ದರು. ಇದಲ್ಲದೇ ನಾಟಕ ಚಾಲು ಆದಮೇಲೆ, ಪರದೆ ಎಳೆಯುವುದು, ಲೈಟ್ ಬಿಡುವುದು, ಇತ್ಯಾದಿ ಇತ್ಯಾದಿ ಕೆಲಸಗಳನ್ನು ನಾಟಕಗಳು

ಮುಗಿಯುವವರೆಗೂ ಮಾಡುತ್ತಿದ್ದರು. ಬಿದ್ದ ಚಪ್ಪಾಳೆಯಲ್ಲಿ ತಮ್ಮದೂ ಒಂದಷ್ಟು ಭಾಗ ಇದೆ ಎಂದು ಖುಷಿ ಪಡುತ್ತಿದ್ದರು. 64–66ರವರೆಗೆ ಈ ಕೆಲಸ ಸಾಗಿತು. ಹೊಸ ಹೊಸ ಪ್ರಯೋಗಗಳಿಗೆ ಇವರ ಮಾರ್ಗದರ್ಶನಕ್ಕೆ ನಾಣಿ, ಪದ್ದಣ್ಣ, ಎಸ್.ಜಿ. ರಾಮಚಂದ್ರರಾವ್ ಅಂತಹ ಪರಿಣಿತರು ಇದ್ದರು. ಇನ್ನೂ ಹೆಚ್ಚು ಕಲಿಯಲಿಕ್ಕೆ ಹಾತೊರೆಯುತ್ತಿದ್ದ ಇವರು ಬಿಎಲ್‌ಟಿ. ಎ.ಡಿ.ಎ. ಇನ್ನು ಇಂಗ್ಲೀಷ್ ನಾಟಕ ಮಾಡುತ್ತಿದ್ದ ತಂಡಗಳ ತಂತ್ರಜ್ಞರ ಬಳಿ ಹೋಗಿ ಕೆಲಸ ಮಾಡುತ್ತಿದ್ದರು. ಇದೆಲ್ಲಾ ಅವರ ಪ್ರಾರಂಭದ ದಿನಗಳಾಗಿದ್ದರಿಂದ ಇವರು ಎಲ್ಲಾ ಕಡೆಯೂ ಹೋಗುವ ಅಗತ್ಯವೂ ಇತ್ತು.

60ರ ದಶಕದಲ್ಲಿ ಸಿನಿಮಾಗಳಿಗೆ ಯಾವ ರೀತಿ ಸೆಟ್‌ಗಳನ್ನು ಹೇಗೆ ಹೇಗೆ ಹಾಕುತ್ತಿದ್ದರು. ಅವುಗಳ ನಿರ್ಮಾಣವನ್ನು ಹೇಗೆಲ್ಲ ಮಾಡುತ್ತಿದ್ದರು ಎಂಬುದನ್ನು ಗಮನಿಸಿ ನಾವೂ ಅದೇ ತಂತ್ರಗಳನ್ನು ವಿಧಾನಗಳನ್ನು ಬಳಸಿ ಸೆಟ್‌ಗಳನ್ನು ಹಾಕುತ್ತಿದ್ದೆವು. ಜಿ.ವಿ.ಎಸ್ ನಾರಾಯಣ್ ಅವರ ತಂಡದ 'ಗೀತಾರಾಕ್ಷಸ', ನಾಟಕ ಟೌನ್‌ಹಾಲ್‌ನಲ್ಲಿ ನಡೆದಾಗ ಆ ರೀತಿಯ ಸೆಟ್ ಹಾಕಿದ್ದೆವು. ಈ ಸಂದರ್ಭದಲ್ಲಿ ನಾಗೇಶ ತನ್ನ ಕೈಚಳಕ ತೋರಿದ್ದನು, ಟೌನ್‌ಹಾಲ್‌ನ ಗೋಡೆಗಳಿಗೆ ಹಾಕಿದ್ದ ಫ್ಯಾನ್ಸಿ ಲೈಟ್‌ಗಳನ್ನು ತೆಗೆದು ನಾಟಕದ ಸೆಟ್‌ಗೆ ಬಳಸಿಬಿಟ್ಟಿದ್ದ. ಇದು ರಂಗದಲ್ಲಿ ಒಂದು ಕ್ರಾಂತಿಯನ್ನು ಸೃಷ್ಟಿ ಮಾಡಿತ್ತು. ಅಲ್ಲದೆ ತುಂಬಾ ಆಕರ್ಷಕವಾಗಿ ಮತ್ತು ಪ್ರಯೋಗಾತ್ಮಕವಾಗಿ ಬಿಂಬಿತವಾದ್ದರಿಂದ ನಮಗೆ ಹೆಚ್ಚಿನ ಮಾನ್ಯತೆಯೂ ಸಿಕ್ಕಿತು ಎಂದು ಆ ದಿನಗಳನ್ನು ಕೃಷ್ಣಪ್ಪನವರು ನೆನಪಿಸಿಕೊಳ್ಳುತ್ತಾರೆ. ಇದೇ ಸಂದರ್ಭದಲ್ಲಿ ಆದ ಪರ್ವತವಾಣಿಯವರು ಅನುವಾದಿಸಿ ನಿರ್ದೇಶನ ಮಾಡಿದ್ದ ನಾಟಕ ಸಹ ಮಾಡ್ಡಿದ ನೇಪಥ್ಯ ಕೆಲಸ ಅದ್ಭುತವಾಗಿ ಮೂಡಿ ಬಂದಿತ್ತು. ಅಲ್ಲಿಂದಾಚೆಗೆ ಮೊಳೆ ಹೊಡೆಯುವ ಕೆಲಸ ಹೆಚ್ಚು ಹೆಚ್ಚು ಆಗುತ್ತಾ ಹೋಗಿತ್ತು, ಮೊಳೆ ಹೊಡೆಯುವುದರ ಜೊತೆಗೆ, ಸೈಕಲ್ ಹೊಡೆಯೋದು, ಸೈಕಲ್ ಹೊಡೆಯುವುದರ ಜೊತೆಗೆ, ಮೊಳೆ ಹೊಡೆಯುವುದು ನಡೀತಾನೇ ಇತ್ತು.

ಕನ್ನಡ ಸಾಹಿತ್ಯ ಕಲಾಸಂಘವು ಮಾತ್ರ ನೇಪಥ್ಯದ ಕೆಲಸಗಳಿಗೆ ಸೀಮಿತವಾಗಿರಲಿಲ್ಲ, ಅದು ನಾಗೇಶ್ ಅವರ ನೇತೃತ್ವದಲ್ಲಿ ನಾಟಕಗಳನ್ನು ಮಾಡುತ್ತಿತ್ತು, ಹಾಗೂ ಸ್ಪರ್ಧೆಗಳನ್ನು ನಡೆಸುತ್ತಿತ್ತು. ಮೊದಮೊದಲು ಕನ್ನಡ ಸಾಹಿತ್ಯ ಪರಿಷತ್‌ನ ಸಭಾಂಗಣದಲ್ಲಿ ನಡೆಸುತ್ತಿದ್ದ ಸ್ಪರ್ಧೆಗಳನ್ನು ಟೌನ್‌ಹಾಲ್‌ಗೆ ಶಿಫ್ಟ್ ಮಾಡುತ್ತಾರೆ. ಆಗ ಬೆಂಗಳೂರಿನ ಸಾಂಸ್ಕೃತಿಕ ಕೇಂದ್ರಗಳು ಎಂದರೆ ಸಾಹಿತ್ಯ ಪರಿಷತ್ ಸಭಾಂಗಣ ಹಾಗೂ ಪುಟ್ಟಣ್ಣ ಚೆಟ್ಟಿ ಪುರಭವನ ಅಂದರೆ ಟೌನ್‌ಹಾಲ್‌ಗಳು ಮಾತ್ರವಾಗಿದ್ದವು. ಆಗಷ್ಟೇ ರವೀಂದ್ರ ಕಲಾಕ್ಷೇತ್ರ ಕಣ್ಣು ತೆರೆಯುತ್ತಿತ್ತು ಅಷ್ಟೇ. ಅದಿನ್ನೂ ಆಗ ಕೂಸು. ಆ

ಕೂಸಿಗೆ ನಂತರದ ದಿನಗಳಲ್ಲಿ ಕುಲಾಯಿಯನ್ನು ಅನೇಕರು ತೊಡಿಸಿದರು. ಅದು ಮುಂದಿನ ಕಥೆ, ಆ ಕಥೆಯಲ್ಲಿ ಕೃಷ್ಣಪ್ಪನವರ ಪಾತ್ರವೂ ಇದೆ.

## ಮಾಸ್ತರುಗಳ ರಂಗಶಿಬಿರ – ಶ್ರೀ ರಂಗರ ಆಹ್ವಾನ

ಇವತ್ತು ರಂಗಭೂಮಿನಲ್ಲಿ ಅನೇಕ ಅನುಕೂಲತೆಗಳಿವೆ, ಎಂತಹಾ ರಂಗ ಪರಿಕರಗಳೂ ದೊರೆಯುತ್ತವೆ. ಎಂತಹಾ ವೇದಿಕೆಯನ್ನು ಬೇಕಾದರೂ ಸೃಷ್ಟಿ ಮಾಡಲು ಬೇಕಾದ ಮೂಲ ವಸ್ತುಗಳು ಸಿಗುತ್ತವೆ. ಈಗ ನಾಟಕ ಮಾಡಲೆಂದು, ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲೆಂದು ಧನ ಸಹಾಯ ನೀಡುವ ಸಂಸ್ಕೃತಿ ಇಲಾಖೆ ಇದೆ, ಅಕಾಡೆಮಿಗಳು ಇದ್ದಾವೆ, ಕೇಂದ್ರಸರ್ಕಾರ ಅನುದಾನಗಳನ್ನು ನೀಡುತ್ತಿದೆ, ರಂಗ ವಿದ್ಯಾಭ್ಯಾಸಕ್ಕೆ ಅನೇಕ ರಂಗ ಶಾಲಾ – ಕಾಲೇಜುಗಳಿದ್ದಾವೆ. ಇಂದು ರಂಗಭೂಮಿಯಲ್ಲಿ ಕೆಲಸ ಮಾಡುವವರಿಗೆ ದಾರಿ ಸುಗಮವಾಗಿದೆ. ಹಣದ ಕೊರತೆಯಿಲ್ಲ, ಜ್ಞಾನದ ಕೊರತೆ ಇಲ್ಲ, ಇಂದು ಎಷ್ಟೆಲ್ಲಾ ಅನುಕೂಲತೆಗಳು ತೆರೆದುಕೊಂಡಿವೆ. ಇಂದು ಈ ಕ್ಷೇತ್ರಕ್ಕೆ ಬರುವವರು ಭಾಗ್ಯವಂತರೇ ಸರಿ. ಅವರು ಈ ಕ್ಷೇತ್ರಕ್ಕೆ ಬರುವ ಮುನ್ನವೇ ಅವಕಾಶಗಳು ಕಾಯ್ದಿರುತ್ತವೆ. ಆದರೆ ಅಂದು ಈ ಪರಿಸ್ಥಿತಿ ಇರಲಿಲ್ಲ. ನಮ್ಮ ಇಚ್ಛಾಶಕ್ತಿಯೇ ಮೂಲ ಬಂಡವಾಳವಾಗಿತ್ತು. ನಾವು ಕಲಿಯಬೇಕು, ಕೆಲಸ ಮಾಡಬೇಕು ಎಂಬ ಆಶಯವೇ ನಾವಿಲ್ಲಿ ಉಳಿಯಲು ಸಾಧ್ಯವಾಗುತ್ತಿತ್ತು. ಆದ್ದರಿಂದ ನಾನು ಕಲಿಕೆಯ ಕಡೆ ಹೆಚ್ಚು ಗಮನ ಕೊಡಲು ಪ್ರಾರಂಭಿಸಿದೆ, ಎಲ್ಲೇ ಶಿಬಿರಗಳಾಗಲಿ, ಎಲ್ಲೇ ನಾಟಕಗಳಾಗಲಿ, ಅಲ್ಲಿ ನಾನು ಇರುತ್ತಿದ್ದೆ, ತಿಳಿಯಬೇಕೆಂಬ ಕುತೂಹಲ ಹಾಗೂ ಅಗತ್ಯಕ್ಕಾಗಿ ಕೆಲಸವನ್ನು ಪರಿಪೂರ್ಣವಾಗಿ ತಿಳಿದು ಮಾಡಬೇಕೆಂಬ ಹಂಬಲದಿಂದ ನಾನು ಇದನ್ನೆಲ್ಲ ಬಯಸುತ್ತಿದ್ದೆ ಎನ್ನುತ್ತಾರೆ ಕೃಷ್ಣಪ್ಪನವರು. ಎನ್.ರಾಮಚಂದ್ರಮೂರ್ತಿ, ಮೈಕೋ ವೆಂಕಟಸುಬ್ಬರಾವ್, ಪುಟ್ಟಯ್ಯ, ಕೆ.ಸಿ. ಶೇಖರ್, ತಮ್ಮಣ್ಣ, ಗುರುರಾಜ್, ಹರೀಶ್ ಇವರೆಲ್ಲ ಆಗ್ಗೆ ಬ್ಯಾಕ್‌ಸ್ಟೇಜ್‌ನಲ್ಲಿ ಪಳಗಿದ ಕೈಗಳು. ಸುಮಾರಾಗಿ ಎಲ್ಲರೂ ಒಟ್ಟೊಟ್ಟಿಗೆ ಕೆಲಸ ಮಾಡುತ್ತಿದ್ದರು. ಇವರಿಗೆಲ್ಲ ಗುರುವಾಗಿದ್ದವರು ನಾಣಿಯವರು. ನಟನಾಗಬೇಕೆಂದು ಬಂದ ಕೃಷ್ಣಪ್ಪನವರು ಸಂದರ್ಭದ ಕೂಸಾಗಬೇಕಾಯಿತು. ನೇಪಥ್ಯಕ್ಕೆ ಒತ್ತು ಕೊಡಬೇಕಾಯಿತು ಮುಂದೆ ಅಲ್ಲೇ ಮುಳುಗಬೇಕಾಯಿತು. ಅಂದಿನ ಕಾಲದ ನಾಟಕಕಾರರಾದ ಶ್ರೀರಂಗ, ಪರ್ವತವಾಣಿ, ಎ.ಎಸ್.ಮೂರ್ತಿ, ದಾಶರಥಿ ದೀಕ್ಷಿತ್, ಗುಂಡಣ್ಣ ಅವರು ತಮ್ಮ ನಾಟಕಗಳ ಪ್ರದರ್ಶನ ಸಂದರ್ಭಕ್ಕೆ ಮೇಲಿನೆಲ್ಲಾ ನೇಪಥ್ಯಗಾರರನ್ನು ತೊಡಗಿಸುತ್ತಿದ್ದರು.

ಆಗ ಶ್ರೀರಂಗರು, ಮೈಸೂರು ಸಂಗೀತ ನಾಟಕ ಅಕಾಡೆಮಿ ಸ್ಟಾಡಿಂಗ್ ಕಮಿಟಿಯ ಸದಸ್ಯ ಆಗಿರುತ್ತಾರೆ. ಆಗಿನ ವಿದ್ಯಾಇಲಾಖೆಯ ಅಡಿಯಲ್ಲಿ ಅಕಾಡೆಮಿ ಕೆಲಸ

ನಿರ್ವಹಿಸುತ್ತಾ ಇರುತ್ತದೆ. ಅದರ ಅಧ್ಯಕ್ಷರಾಗಿ ಇದ್ದವರು ಆಗಿನ ವಿದ್ಯಾಮಂತ್ರಿಗಳಾದ ಕೆ.ವಿ. ಶಂಕರೇಗೌಡರು, ಶ್ರೀರಂಗರು ಮೈಸೂರು ಸಂಗೀತ ನಾಟಕ ಅಕಾಡೆಮಿ ಹಾಗೂ ನಾಟ್ಯ ಸಂಘ ಥಿಯೇಟರ್ ಸೆಂಟರ್ ವತಿಯಿಂದ 1965–66 ರ ಸಂದರ್ಭದಲ್ಲಿ 'ಶಾಲಾಮಾಸ್ತರು'ಗಳಿಗಾಗಿ ರಂಗ ಶಿಬಿರವನ್ನು ಆಯೋಜಿಸಿರುತ್ತಾರೆ ಆ ಶಿಬಿರಕ್ಕೆ ಬಿ.ವಿ.ಕಾರಂತರು, ಜಿ.ವಿ.ಶಿವಾನಂದ, ಪ್ರೇಮಕಾರಂತ, ಎಸ್.ಜಿ.ರಾಮಚಂದ್ರರಾವ್ ಇನ್ನೂ ಮುಂತಾದ ಪರಿಣತರನ್ನು ಉಪನ್ಯಾಸಕರಾಗಿ ಆಹ್ವಾನಿಸಿರುತ್ತಾರೆ ಮತ್ತು ಶ್ರೀರಂಗರೇ ಆ ಶಿಬಿರದ ನಿರ್ದೇಶಕರಾಗಿರುತ್ತಾರೆ, ಶಿವಾನಂದವರು ಧ್ವನಿಯನ್ನು ಕುರಿತು, ಪ್ರೇಮಕಾರಂತರು ವಸ್ತ್ರವಿನ್ಯಾಸದ ಬಗ್ಗೆ, ಎಸ್.ಜಿ. ರಾಮಚಂದ್ರರಾವ್ (ಕಿರ್ಲೋಸ್ಕರ್‌ನಲ್ಲಿ ಎಂಜನಿಯರ್ ಆಗಿದ್ದವರು) ಬೆಳಕಿನ ವಿನ್ಯಾಸದ ಬಗ್ಗೆ ಉಪನ್ಯಾಸ ನೀಡುತ್ತಿದ್ದರು. ವಿ–4 ನಲ್ಲಿ ಮತ್ತು ನೇಪಥ್ಯದ ಗುಂಪಿನಲ್ಲಿದ್ದ ಕೃಷ್ಣಪ್ಪ ಮತ್ತು ಗೆಳೆಯರನ್ನು ಶಿಬಿರದ ನೇಪಥ್ಯದ ಕೆಲಸಗಳಿಗೆ ಶ್ರೀರಂಗರು ಆಹ್ವಾನಿಸುತ್ತಾರೆ. ಆ ಶಿಬಿರದಲ್ಲೇ ಕಾರಂತರು ಮತ್ತು ಕೃಷ್ಣಪ್ಪನವರ ಪರಿಚಯವಾಗುತ್ತದೆ.

## ಕಾರಂತರವರನು ಬಾರಂತ ಕರೆದಾರು ಕೃಷ್ಣಪ್ಪ

ಶ್ರೀರಂಗರು ಆಯೋಜಿಸಿದ ರಂಗಶಿಬಿರದಲ್ಲಿ ಪರಿಚಯವಾದ ಬಿ.ವಿ.ಕಾರಂತರು ಅಲ್ಲಿದ್ದವರೆಲ್ಲರ ಮನದಲ್ಲಿಯೂ ಹೊಸ ಕನಸುಗಳನ್ನು ಬಿತ್ತುತ್ತಾರೆ. ರಂಗಭೂಮಿ ಹೊಸ ಸಾಧ್ಯತೆಗಳ, ಅಂದರೆ ನವಮಾಧರಿಯ ರಂಗ ಕೌಶಲ್ಯಗಳು, ನಟನಾ ಶೈಲಿಗಳು, ರಾಗಸಂಗೀತಗಳು, ವೇದಿಕಾ ಕಲ್ಪನೆಗಳು, ಬೆಳಕು ವಿನ್ಯಾಸಗಳು, ಎಲ್ಲ ಎಲ್ಲದರಲ್ಲಿಯೂ, ಎಲ್ಲಾ ವಿಷಯಗಳಲ್ಲಿಯೂ ಪರಿಪೂರ್ಣರಾಗಿದ್ದ ಕಾರಂತರು ಶಿಬಿರಾರ್ಥಿಗಳ ಮೇಲೆ ಪ್ರಭಾವವನ್ನು ಬೀರಿ ಬಿಡುತ್ತಾರೆ. ನಾಟಕವನ್ನು ಹೀಗೆ ಮಾಡಬಹುದೇ ? ರಂಗಕಲೆಯ ಮಾರ್ಗ ಹೀಗೂ ಇದ್ದೀತೇ ? ರಂಗಪಠ್ಯವನ್ನು ಹೀಗೂ ರಂಗದ ಮೇಲೆ ತರಬಹುದೇ ? ಆ ನಾಟಕವನ್ನು ಹಾಗೆಲ್ಲ ನೋಡಬಹುದೇ ? ರಂಗದಲ್ಲಿ ಹೀಗೂ ಉಂಟೆ ? ಎಂಬ ಸಂದೇಹದೊಳಗಿನ ಪ್ರಶ್ನೆಗಳಿಗೆ, ಕೌತಕಗಳಿಗೆ, ವಿಸ್ಮಯಗಳ ಉತ್ತರವನ್ನು ಕೊಡುತ್ತಾರೆ ಕಾರಂತರು. ತಾವು ದೆಹಲಿಯಲ್ಲಿ ಕಲಿತದ್ದನ್ನು ಅದರೊಡನೆ ತಮ್ಮದೇ ತನವನ್ನು, ಅಂದರೆ ತಾವು ವೃತ್ತಿರಂಗದಲ್ಲಿ ಅನುಭವಿಸಿದ್ದು, ಸಂಗೀತದಲ್ಲಿ ಕಂಡದ್ದು ಎಲ್ಲವನ್ನೂ ಕಡೆದು ಹೊಸದೊಂದು ಪಾಕವನ್ನು ಬಟ್ಟಿ ಇಳಿಸಿ ಉಣಬಡಿಸುತ್ತಾರೆ ಕಾರಂತರು. ಆ ಮೂಲಕ ಹೊಸ ರಂಗ ಲೋಕವನ್ನು ತೆರೆದಿಡುತ್ತಾರೆ. ನಿಬ್ಬೆರಗಾಗುತ್ತಾರೆ ಕೃಷ್ಣಪ್ಪನವರು. ಸರಿಯಾದ 'ಗುರು' ಸಿಕ್ಕ ಎಂದು ಮನ ಕುಣಿದಾಡುತ್ತದೆ. ಅನೇಕ ಕನಸುಗಳು ಗರಿಗೆದರುತ್ತವೆ. ಕಾರಂತರೊಟ್ಟಿಗೆ ಇದ್ದರೆ ಹೊಸದೇನನ್ನೂ ಸಾಧಿಸಲು ಸಾಧ್ಯವಾಗುತ್ತದೆ ಎಂದು ಕೃಷ್ಣಪ್ಪನವರ ಮನ ಹೇಳುತ್ತದೆ.

ದೇಹ ದಂಡಿಸಿದ್ದ ಕಟ್ಟಾಳು ಕೃಷ್ಣಪ್ಪ, ಕೆಲಸದಲ್ಲಿ ನಿಷ್ಠೆ ತೋರುತ್ತಿದ್ದ ಕೃಷ್ಣಪ್ಪ,

ರಂಗಭೂಮಿಗೆ ಬದ್ಧನಾಗಿದ್ದ ಕೃಷ್ಣಪ್ಪ, ಹೊಸದನ್ನು ಕಲಿಯಲು ಹಾತೊರೆಯುತ್ತಿದ್ದ ಕೃಷ್ಣಪ್ಪ, ರಂಗ ಸೂಕ್ಷ್ಮಗಳನ್ನು ಅರಿತಿದ್ದ ಕೃಷ್ಣಪ್ಪ, ದುಡಿಮೆಗೆ ಸಿದ್ಧನಾಗಿದ್ದ ಕೃಷ್ಣಪ್ಪನವರನ್ನು ಕಂಡು ಕಾರಂತರಿಗೆ ಸೋಜಿಗವಾಗುತ್ತದೆ. ಕೃಷ್ಣಪ್ಪನವರಲ್ಲಿ ಕಾರಂತರು ಅದ್ಭುತವನ್ನು ಕಾಣುತ್ತಾರೆ. ಈ ಪರಿಯ ಭಯಂಕರ ರಂಗ ಪರಿಚಾರಕನನ್ನು ಕಂಡು ಕಾರಂತರು ಖುಷಿ ಪಡುತ್ತಾರೆ. ಇರಬೇಕು ಇಂತಹವರೊಬ್ಬರು ಇರಬೇಕು, ಎಂದು ನಿರ್ಧರಿಸುತ್ತದೆ ಕಾರಂತರ ಮನಸ್ಸು.

ಕಾರಂತರು ದೆಹಲಿ ಬಿಡುವಾಗಲೇ ತಾನು ಮೈಸೂರು ರಾಜ್ಯದಲ್ಲಿ (ಕರ್ನಾಟಕ) ಏನು ಮಾಡಬೇಕು, ಎಂತಹ ನಾಟಕಗಳನ್ನು ಆಡಿಸಬೇಕು, ಹೇಗೆಲ್ಲ ರಂಗವನ್ನು ಬಿತ್ತಬೇಕು, ತನ್ನ ಪಾದಾರ್ಪಣೆ ಅಲ್ಲಿ ಹೇಗಿರಬೇಕು, ತನ್ನ ಅಸ್ತಿತ್ವ ಆ ನೆಲದಲ್ಲಿ ಬೇರು ಬಿಡುವಂತೆ ಹೇಗೆ ಶ್ರಮಿಕನಾಗಬೇಕು, ಕೃಷಿಕನಾಗಬೇಕು, ಬಿತ್ತುವ ಭೂಮಿಯ ಫಲವತ್ತತೆ ಏನು ? ಬೀಜದ ಸಾರ್ಥಕತೆ ಹೇಗೆ ? ಫಸಲಿನ ಫಲವೇನು ? ಇವೆಲ್ಲವನ್ನೂ ಮನದಲ್ಲೇ ಮಸೆದು, ಗುಣಕಾರ ಭಾಗಕಾರ ಮಾಡಿರುತ್ತಾರೆ, ಶುದ್ಧ ನೆಲದಲ್ಲಿ ಬಿದ್ದ ಬೀಜ ಎದ್ದು ಬಟಾಬಯಲಿನಲ್ಲಿ ಹಸಿರ ಚಿಗುರು ಕಣ್ಣು ತೆರೆಯುತ್ತದೆ ಎಂಬ ಜ್ಞಾನ ಅವರಿಗಿರುತ್ತದೆ. ಅವರ ಲೆಕ್ಕಾಚಾರಗಳು ಎಲ್ಲವೂ ಪರಿಶುದ್ಧವಾಗಿರುತ್ತವೆ. ಆದ್ದರಿಂದಲೇ ಆ ಪರಿಶುದ್ಧತೆ ಇದ್ದುದ್ದರಿಂದಲೇ ಕನ್ನಡನಾಡಿನ ರಂಗಭೂಮಿಯಲ್ಲಿ ಹೊಸಸೂರ್ಯ ತನ್ನ ಪ್ರಖರ ಬೆಳಕನ್ನು ಪ್ರವಹಿಸಲು ಸಾಧ್ಯವಾಗುತ್ತದೆ.

'ಬೀಜ ಬಿತ್ತುವುದು' ಸುಲಭದ ಮಾತಾದರೂ, ಬಿತ್ತಿದ ಬೀಜ ಫಲಿಸಬೇಕಲ್ಲ ? ಕೃಷಿ ಎಂಬುದು ಒಬ್ಬನ ಕೆಲಸವಲ್ಲ, ಅದೊಂದು ಸಮೂಹದ ಕೆಲಸ. ಹತ್ತಾರು ಜನ ಸೇರಿ ಮಾಡಬೇಕಾದ ಪರಿಶ್ರಮ. ಕನಸು ಬಿತ್ತುವವನು ಒಬ್ಬನಾದರೆ, ನನಸು ಮಾಡಲಿಕ್ಕೆ ಸಿದ್ಧರಾಗಿರುವವರು, ಬದ್ಧರಾಗಿರುವವರು ಬೇಕು. ಕಾರಂತರು ಕೃಷ್ಣಪ್ಪನವರಲ್ಲಿ ಅಂತಹ ಒಬ್ಬ ನಿಷ್ಠಾವಂತನನ್ನು ಕಂಡರು. ಇಷ್ಟಪಟ್ಟು ಕೆಲಸ ಮಾಡುವವನ್ನು ಕಂಡರು. ತನ್ನ ಕನಸಿಗೆ ನನಸಾಗುತ್ತಾನೆ, ಜೊತೆಜೊತೆಯಾಗುತ್ತಾನೆ, ಹೆಗಲಿಗೆ ಹೆಗಲಾಗುತ್ತಾನೆ ಎಂದು ನಿರ್ಧರಿಸಿದರು. ಕೃಷ್ಣಪ್ಪನವರೂ ಸಹ ಕಾರಂತರಲ್ಲಿ ಒಬ್ಬ ಅಸೀಮ ರಂಗತಪಸ್ವಿಯನ್ನು ಕಂಡರು. ರಂಗ ಹರಿಕಾರನನ್ನು ಕಂಡರು. ಬರದನಾಡಿಗೆ ಬಂದು ರಂಗಗಂಗೆಯ ತರುವ ಭಗೀರಥನನ್ನು ಕಂಡರು, ರಂಗವೇ ಉಸಿರಾಗಿದ್ದ ಅಲೆಮಾರಿ ಅವದೂತನನ್ನು ಕಂಡರು. ತೊರೆ, ನದಿಯು ಸೇರಲು ತಹತಹಿಸುತ್ತಿತ್ತು. ಘಟ್ಟ ಬೆಟ್ಟಗಳನು ಬಳಸಿ ಬಂದ ನದಿಯು ಬಯಲಲಿ ಹೊಳೆ ತೊರೆಗಳನು ತನ್ನೊಡಲೊಳಗೆ ಸೇರಿಸಿಕೊಂಡು ಬೆಳೆವಂತೆ, ಮುಂದೆ ಹರಿವಂತೆ ಕಾರಂತರು ಕೃಷ್ಣಪ್ಪನವರನ್ನು ಸೆಳೆದರು. ಕೃಷ್ಣಪ್ಪನವರು ಕಾರಂತರೆಡೆಗೆ ಸರಿದರು. ಪರಿಚಯ, ಒಡನಾಟವಾಯಿತು, ಒಡನಾಟ ಸ್ನೇಹವಾಯಿತು. ಆ ಸ್ನೇಹ ಗಾಢವಾಯಿತು. 1966

ರಲ್ಲಿ ಕನ್ನಡ ಸಾಹಿತ್ಯ ಕಲಾ ಸಂಘದ ಸ್ನೇಹಿತರೊಡನೆ ಕಾರಂತರ ಬೇಟಿ ಅಗುತ್ತದೆ. ಅಂದು ಕಾರಂತರು ಕನ್ನಡ ಸಾಹಿತ್ಯ ಕಲಾ ಸಂಘದ ಕಲಾವಿದರನ್ನು ಕುರಿತು "ನಾನು ಕರ್ನಾಟಕವನ್ನು ನನ್ನ ಕರ್ಮಭೂಮಿಯಾಗಿ ಮಾಡಿಕೊಳ್ಳುತ್ತೇನೆ, ನಾನು ಇಲ್ಲೇ ನೆಲೆನಿಂತು ರಂಗಭೂಮಿಯಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುತ್ತೇನೆ, ಅದಕ್ಕಾಗಿ ನಿಮ್ಮೆಲ್ಲರ ಸಂಪೂರ್ಣ ಸಹಾಯ ಸಹಕಾರ ಬೇಕಾಗುತ್ತದೆ ಎಂಬ ಅಹವಾಲನ್ನು ಮುಂದಿಡುತ್ತಾರೆ. ಇದನ್ನು ಕೇಳಿದ ಅವರಿಗೆಲ್ಲ ರಂಗಭೂಮಿಯಲ್ಲಿ ಅಭೂತಪೂರ್ವವಾದ ಕೆಲಸ ಮಾಡಬೇಕು, ಉನ್ನತವಾದ ಸಾಧನೆಯನ್ನು ಮಾಡಬೇಕೆಂಬ ಆಕಾಂಕ್ಷೆ ಇದ್ದಿದ್ದರಿಂದ ಕಾರಂತರ ಮಾತಿನಿಂದ ಉತ್ತೇಜಿತರಾಗಿ, ಕಾರಂತರೊಡನೆ ಜೊತೆಜೊತೆಯಾಗಿ ಕೆಲಸ ಮಾಡಲು ಸಂಘ ಒಪ್ಪುತ್ತದೆ. ಸಂಘದ ಮುಂದಿನ ಆಗು–ಹೋಗಳ ಜವಾಬ್ದಾರಿಗಳನ್ನು ಹೊತ್ತವರಲ್ಲಿ ಒಬ್ಬರಾದ ಕೃಷ್ಣಪ್ಪನವರು ಕಾರಂತರೊಡನೆ ಸಾಗುತ್ತಾರೆ. ಮುಂದೆ ಕಾರಂತರು ಕರ್ನಾಟಕದಲ್ಲಿ ರಂಗತೇರನೆಳೆದ ಸದಾ ಕಾಲವು ಕೃಷ್ಣಪ್ಪನವರು ಅವರಿಗೆ ಹೆಗಲಿಗೆ ಹೆಗಲು ಕೊಡುತ್ತಾರೆ.

ಈ ಕೃತಿಯ ಬರಹಗಾರನಾದ ನಾನು ಈಗ ಹಿಂದೆ ಸರಿಯುತ್ತೇನೆ. ಈ ಕೃತಿಗೆ ನಾನು ನೇರವಾಗಿ ಕಾರಂತರನ್ನು ಕರೆದುಕೊಂಡು ಬರುತ್ತೇನೆ. ಅವರಾಡಿದ ಮಾತುಗಳನ್ನು ನೀವು ಅವರಿಂದಲೇ ಕೇಳಿದರೆ ಚೆನ್ನಾಗಿರುತ್ತದೆ. ಕಾರಂತ ಮತ್ತು ಕೃಷ್ಣಪ್ಪನವರ ಸಂಬಂಧ ಅಭಿಜಾತವಾದದ್ದು, ಅನೋನ್ಯವಾದದ್ದು. ಕೃಷ್ಣಪ್ಪನವರ ಬಗ್ಗೆ ಕಾರಂತರು ಹೇಳಿರುವ ಮಾತುಗಳುನ್ನು ನಾನು ಹೇಳಲು ನಾನೇನು ? ನಾನ್ಯಾರು ? ನಾನೊಬ್ಬ ಥರ್ಡ್ ಪರ್ಸನ್ ಅಷ್ಟೇ. ಈ ಥರ್ಡ್ ಪರ್ಸನ್; ಇವನದ್ದು ಬರೇ ನಿರೂಪಕನ ಪಾತ್ರ ಕಂಡದ್ದನ್ನು ಕಂಡಂತೆ ಬರೆಯುವವರು ಅಷ್ಟೆ, ಸ್ವತಃ ಕಂಡದ್ದನ್ನು ಹೇಳುವವರು ಇರುವಾಗ, ಅನುಭವಿಸಿದ್ದನ್ನು ಹಂಚಿಕೊಂಡುವರು ಇರುವಾಗ ನಾನ್ಯಾಕೆ, ಎಂದಿನಷ್ಟೇ. ಯಾವುದೇ ಉತ್ಪ್ರೇಕ್ಷೆ ಇಲ್ಲದೆ ಇರಲೆಂದು, ಯಾವುದೇ ಅನವಶ್ಯಕ ರಂಜಕ ಕಲಾಕೌಶಲ ಇಲ್ಲದೇ ಇರಲೆಂದು ನಿರೂಪಕನಾದ (ಲೇಖಕ) ನಾನು ಇಲ್ಲಿ ಹಿಂದೆ ಸರಿಯುತ್ತಿದ್ದೇನೆ, ಹಾಗೂ ಅವರಿಬ್ಬರ ನಡುವಿನ ಸಂಬಂಧವನ್ನು ಹಿಡಿದಿಡುವಲ್ಲಿ ನಾನು ಅವರಷ್ಟು ನ್ಯಾಯ ಸಲ್ಲಿಸಲಾರೆನು ಎಂಬ ನಿಜವಿರುವುದರಿಂದಲೂ ನಾನು ನೇರವಾಗಿ ಕಾರಂತರನ್ನೇ ಆಹ್ವಾನಿಸಿದ್ದೇನೆ. ಹಾಗಾಗಿ ಕೃಷ್ಣಪ್ಪನವರನ್ನು ಕಂಡಿರುವ ಕಾರಂತರೇ ನೇರವಾಗಿ ಈ ಬರಹಕ್ಕೆ ಬರುತ್ತಿದ್ದಾರೆ. ಅವರನ್ನು ಇಲ್ಲಿಗೆ ಕರೆತರುವ ಸಾಹಸವನ್ನಷ್ಟೇ ನಾನು ಇಲ್ಲಿ ಮಾಡುತ್ತಿರುವ ಕೆಲಸ ಎಂದು ನಾನು ಭಾವಿಸುತ್ತೇನೆ.

ಕಾರಂತರು ಬಂದಿದ್ದಾರೆ, ಉತ್ತಮ ಪುರುಷರಾದ ಅವರೇ ಹೇಳುತ್ತಾರೆ.

## ನನ್ನ ಮತ್ತು ಎಲ್. ಕೃಷ್ಣಪ್ಪನವರ ಸಂಬಂಧ

ರಾಷ್ಟ್ರೀಯ ನಾಟಕ ಶಾಲೆಯಿಂದ ಹೊರಬಿದ್ದು, ಬೆಂಗಳೂರಿಗೆ ಅದೇ ತಾನೇ ಬಂದಿದ್ದೆ, ಹೊಸಪರಿಚಯ, ನಾಗೇಶರ ಅಪೇಕ್ಷೆಯಂತೆ ಶ್ರೀರಂಗರ 'ನೀ ಕೊಡೆ ನಾ ಬಿಡೆ' ನಾಟಕ ಮಾಡಿಸಬೇಕೆಂಬ ನಿರ್ಧಾರ ತೆಗೆದುಕೊಂಡಾಗ, ಅಲ್ಲೇ ನಮಗಾಗಿಯೇ ಹುಟ್ಟಿದ್ದಾರೋ ಎಂಬಂತೆ ಈ ಕೃಷ್ಣಪ್ಪ ನನ್ನನ್ನು ಎದುರುಗೊಂಡರು. ಆ ಮೇಲಂತೂ ಎದುರು ಬದುರು ಅಲ್ಲ ನಾವಿಬ್ಬರೂ ಬೆನ್ನಿಗೆ ಬೆನ್ನು ಕೊಟ್ಟು ರಂಗಭೂಮಿಯ ಕೆಲಸ ಬೊಗಸೆ ನೋಡಿಕೊಳ್ಳಲು ಆರಂಭಿಸಿದೆವು.

ಬೆಂಗಳೂರಿನ ನಾಟಕ ಚಳವಳಿ ಎಂಬ ನಮ್ಮ ಹುರುಪಿನ ಹಾರಾಟ ನಡೆಯುತ್ತಿದ್ದಾಗಲೆಲ್ಲ ನನಗೆ ಚರ್ಚೆಗೆ ಸಿಗುತ್ತಿದ್ದವರು ಹೆಚ್ಚಾಗಿ ಈ ಕೃಷ್ಣಪ್ಪನವರೇ ಮೊದಮೊದಲಂತೂ ಗಾಂಧಿನಗರದಲ್ಲಿ ಶಿವಾನಂದರ ಮನೆಯಲ್ಲಿ ವಾಸ ಮಾಡಿಕೊಂಡಿದ್ದಾಗ ಎಲ್. ಕೃಷ್ಣಪ್ಪ ನಾನು ಬರೇ ಕನಸುಗಳನ್ನು ಕಾಣುತ್ತಿದ್ದೆವು. ನನ್ನ ಕನಸೆಲ ಹೊಸ ನಾಟಕಗಳನ್ನು ಆರಿಸಿಕೊಳ್ಳಬೇಕು ಎಂಬುದು ಮತ್ತೆ ಜನರು ಈ ನಾಟಕ ನೋಡುವುದಕ್ಕೆ ಬರಲೇ ಬೇಕು ಎಂದು ಕೃಷ್ಣಪ್ಪನವರ ಕನಸು ಇವನ್ನೆಲ್ಲ ಹೇಗೆ, ಎಲ್ಲಿ ಯಾವಾಗ ಯಾರ ಜೊತೆಗೆ ಆಡಬೇಕೆಂಬುದರ ಬಗ್ಗೆ, ಅಂತೂ ಕನಸು ಕಾಣುವ ಹುಮ್ಮಸ್ಸು ನಮ್ಮಿಬ್ಬರಲ್ಲೂ ತುಂಬಿತ್ತು. ಮತ್ತೆ ಎರಡ್ಹೊತ್ತು ಊಟ ಕೃಷ್ಣಪ್ಪನವರ ಜೊತೆಯಲ್ಲೇ ಸಾಗುತ್ತಿತ್ತು. ಆಗೆಲ್ಲ ಈ ಕನಸು–ಊಟ ಎರಡನ್ನೂ ಕೃಷ್ಣಪ್ಪನವರೇ ಕಾಣಿಸುತ್ತಿದ್ದರು.

ಅವರ ರಂಗಭೂಮಿಯ ಶತಪದಿ ತನ, ಅಂದರೆ ಎಲ್ಲಾ ಕ್ಷೇತ್ರಗಳಲ್ಲಿ ಅವರ ಆಸಕ್ತಿಯ ಆಳವನ್ನು ನಾನು ಕಂಡಿದ್ದು ಹೆಗ್ಗೋಡಿನಲ್ಲಿ. ಗುಡ್ಡದ ಮೇಲೆ ರಂಗಸ್ಥಳ ಕಟ್ಟಿ, ಎಲ್ಲೆಲ್ಲಿಂದಲೋ ಸ್ಪಾಟ್ ಲೈಟ್‌ಗಳನ್ನು ತಂದು, ದೃಶ್ಯಾಲಂಕಾರ ಮಾಡಿಸಿ 'ಪಂಜರ ಶಾಲೆ' ನಾಟಕವನ್ನು ರೂಪಿಸಿದಾಗ 80 ಬಾಲಕರ ಜೀವಂತ ಸ್ಪರ್ಶದೊಡನೆ ಅದಕ್ಕೆ ಅನುಕೂಲವಾಗುವಂತೆ ಜೀವಂತ ಚಲನ ದೃಶ್ಯಗಳನ್ನು ಅಳವಡಿಸಿ, 'ಪಂಜರಶಾಲೆ' ಯನ್ನು ಬಹುದಿನಗಳವರೆಗೂ ನೆನಪಿನಲ್ಲಿರುವಂತೆ ಮಾಡಿದ ಕೃಷ್ಣಪ್ಪನವರ ಎಡೆಬಿಡದ ತುಡಿತ ದುಡಿತವನ್ನು ನಾನು ಕಣ್ಣಾರೆ ಕಂಡು ಅನುಭವಿಸಿದೆ.

'ಏವಂ ಇಂದ್ರಜಿತ್'ನಲ್ಲಂತೂ ಕೃಷ್ಣಪ್ಪನವರ ಸ್ಪೆಷಲ್ ಸ್ಪಾಟ್ ಲೈಟ್ ನಮ್ಮೊಂದಿಗೆ ತಿರುಗಾಡದೇ ಹೋಗಿದ್ದರೆ ನಾನು ಅಂದರೆ, ನನ್ನ ಲೇಖಕನ ಪಾತ್ರ ಬೆಳಕಿಗೆ ಬರುತ್ತಿರಲಿಲ್ಲ.

ಕೃಷ್ಣಪ್ಪನವರ ರಂಗಸೃಷ್ಟಿಯ ವಿರಾಟ ಸ್ವರೂಪವನ್ನು ಕಂಡಿದ್ದು ಶ್ರೀರಂಗರ ನಾಟಕ 'ಸ್ವರ್ಗಕ್ಕೆ ಮೂರೇ ಬಾಗಿಲು'ನಲ್ಲಿ. ಆಗ ಅವರಲ್ಲಿದ್ದ ಹರಕು ಜೇಬು, ಕನಸುಗಳ ತಲೆ,

ಮತ್ತೆ ಕೆಲಸದ ಹುಮ್ಮಸ್ಸು ಎಲ್ಲವೂ ಈ ನಾಟಕ ಪ್ರಯೋಗದಲ್ಲಿ ಸಾಕ್ಷಾತ್ಕಾರ ಪಡೆದವು ಎನ್ನಬೇಕು.

ಮುಂದೆ 'ಹಯವದನ'ದಲ್ಲಿ ಹೀರೋ 'ಹಯವದನ', ಮುಖವಾಡದ ಪಾತ್ರ ಮಾಡಿದ್ದಲ್ಲದೇ ಉಳಿದ ಪಾತ್ರಗಳಿಗೂ ತಕ್ಕ ಮುಖವಾಡವನ್ನು ಕಲ್ಪಿಸಿಕೊಟ್ಟರು. ಬೆಳಗ್ಗೆನಿಂದ ರಾತ್ರಿಯವರೆಗೆ ರಿಹರ್ಸಲ್‌ಗೆ ವ್ಯವಸ್ಥೆ ಮಾಡಿಸಿ, ನಾಟಕದ ಪ್ರದರ್ಶನಕ್ಕೆ ಮೊದಲೇ ಸಿನಿಮಾ ಟ್ರೈಲರ್‌ನಂತೆ ಕಲಾಕ್ಷೇತ್ರದಲ್ಲಿ ಕೆಲವು ಆರಿಸಿಕೊಂಡ ದೃಶ್ಯಗಳನ್ನು ಪತ್ರಕರ್ತರ ಮುಂದೆ ಧೈರ್ಯವಾಗಿ ತೋರಿಸುವ ಆತ್ಮವಿಶ್ವಾಸ ತುಂಬಿದರು. ನಿಶ್ಚಿತ ಪ್ರಯೋಗಕ್ಕೆ ಮೊದಲೇ ನಾಟಕದ ದೃಶ್ಯಗಳನ್ನು ಸಾದರ ಪಡಿಸುವಷ್ಟು ವಿಶ್ವಾಸ ಹುಟ್ಟಿದ್ದು ನನಗಂತೂ ಅದೇ ಮೊದಲು, ಅದೇ ಕೊನೆ !

ಲಂಕೇಶರ ಹಿರಿತನದಲ್ಲಿ ನಡೆದ, ಬಯಲು ನಾಟಕಗಳಿಗೆ ಕೃಷ್ಣಪ್ಪನವರ ನೆರವು ಸಿಗದೇ ಹೋಗಿದ್ದರೆ ಆ ಮೂರು ನಾಟಕಗಳೂ, ನಾವೂ ಹಾಗೆಯೇ ಬಯಲಾಗಿಬಿಡುತ್ತಿದ್ದೆವೇನೋ..? ಸಂಪೂರ್ಣವಾಗಿ ಒಂದಾಗಿದ್ದ ಕಲಾಕ್ಷೇತ್ರದ ಆಜುಬಾಜು, ಎಡ–ಬಲ, ಪ್ರದಕ್ಷಣೆ ಮಾಡಿ ಆ ಮೂರು ನಾಟಕಗಳು ಆಡುವುದಕ್ಕೆ 'ರಂಗಸ್ಥಳ' ಹುಡುಕಿಕೊಂಡದ್ದು, ನಮ್ಮಿಬ್ಬರ ಸಂಬಂಧವನ್ನು ಮತ್ತಷ್ಟು ಬಲಗೊಳಿಸಿತು.

'ನಾಟಕಕಾರನ ಶೋಧದಲ್ಲಿ ಆರು ಪಾತ್ರಗಳು' ನಾಟಕಕ್ಕೆ ಕಲಾಕ್ಷೇತ್ರದ ಒಳಗಡೆಯೇ ಒಂದು ಹೊಸ ಸಾಧ್ಯತೆಯನ್ನು ಕಂಡುಕೊಂಡಿದ್ದು, ನಮ್ಮಿಬ್ಬರ ಒಂದು ಸಹ ಸುಯೋಗವನ್ನಬೇಕೀಗ.

ಕೃಷ್ಣಪ್ಪನವರ ಸಹಯೋಗದಿಂದಾಗಿ ಬೆಂಗಳೂರಿನಲ್ಲಿ 'ಶಕಶೈಲುಶರು', ಧಾರವಾಡದಲ್ಲಿ 'ಅಂತರಂಗ', ಮತ್ತೆ ದಾವಣಗೆರೆಯಲ್ಲಿ 'ಪ್ರತಿಮಾ ಸಭಾ' ಎಂಬ ಹೊಸ ಸಂಸ್ಥೆಗಳು ಹುಟ್ಟಿದವು. ಉಡುಪಿ ಎಂಜಿಎಂ ಕಾಲೇಜಿನಲ್ಲಿ 2–3 ನಾಟಕಗಳ ದೊಡ್ಡ ಹಾಗೂ ದೀರ್ಘಕಾಲದ ಕಾರ್ಯಾಗಾರಗಳು ಹಿಂದೆಯೂ ಕೃಷ್ಣಪ್ಪನವರ ಮೂರ್ತ ಚೇತನವಿತ್ತು. ನನಗಂತೂ ಆಗ ನಾ ಎಲ್ಲಿ ಹೋದರೂ ಕೃಷ್ಣಪ್ಪನವರು ಬೇಕೇ ಬೇಕು ಅನ್ನುಷ್ಟು ಅನಿವಾರ್ಯವಾದರು.

'ರಂಗಭೂಮಿ' ಎಂದೂ ಒಬ್ಬ ವ್ಯಕ್ತಿಯ ಸ್ವತ್ತಲ್ಲ, ಅದರ ಭಾರ ಹೊತ್ತವರು ಹತ್ತಾರು ಮಂದಿ, ಹಿನ್ನೆಲೆಯಲ್ಲಿ ಕೆಲಸ ಮಾಡುವವರು, ಎಲೆ ಮರೆಯ ಕಾಯಿಗಳಾಗಿದ್ದರೂ, ಅವರಿಗೂ ಒಂದು ಗೌರವ ಅಂತಸ್ತು ಇದೆ ಎಂದು ಸಿದ್ಧಪಡಿಸಿ ರಂಗಕಾಯಕಕ್ಕೆ ಒಂದು ಮೌಲ್ಯ ಅವರು ಕೊಡಿಸಿದ್ದಾರೆ.

ಈ ರೀತಿಯಲ್ಲಿ ಅಂದಿನಿಂದ ಇಂದಿನವರೆಗೆ ಕೃಷ್ಣಪ್ಪನವರು ಎಲ್ಲಾ ಕಡೆಯಿಂದ ಬಂದ ಜವಾಬ್ದಾರಿಗಳನ್ನು ಹೊತ್ತುಕೊಂಡು ರಂಗಾವಧೂತರಂತೆ ಸುತ್ತಿ, ತಿರುಗಿ ಕೆಲಸ

ಮಾಡುತ್ತಾ ಬಂದಿದ್ದಾರೆ. ಕೃಷ್ಣಪ್ಪನವರ ಬದುಕೇ ರಂಗಭೂಮಿಯಲ್ಲಿನ ಸುಪ್ತ ಚೇತನದಂತೆ. ಅದಕ್ಕೇ ರಂಗಕಾಯಕ ಅವರಿಗೆ ಒಂದು ದೀಕ್ಷೆಯಂತೆ.

ಬಹುಶಃ 'ಜೀವದ ಗೊಂಬೆ' ನಾಟಕ ಪ್ರದರ್ಶನವಾದ ಮೇಲೆ ನಮ್ಮ ಅವರ ಪಾತ್ರಗಳ ವಿನಿಮಯವಾಯಿತೇನೋ ನನಗೆ ಥಿಯೇಟರ್ ಪ್ರೊಫೆಷನ್ ಆಯಿತು. ಅವರಿಗೆ ಈಗಲೂ ಅದು ಒಂದು 'ಮಿಶನ್' ಆಗಿ ಉಳಿದಿದೆ. ಅದಕ್ಕೇ ಅವರು ಒಬ್ಬ ದೀಕ್ಷಾಮತಿಗಳಂತೆ ತನ್ನ ಕನಸುಗಳನ್ನು ಗಟ್ಟಿ ನೆಲದಲ್ಲಿ ನನಸಾಗಲು ಪ್ರಯತ್ನಿಸಿದರು. ಅದಕ್ಕೆ ಒಂದು ಸೈದ್ಧಾಂತಿಕ ಅರ್ಥವನ್ನು ಕೊಡುವುದಕ್ಕಾಗಿ 'ಮುಕ್ತ ಪತ್ರಿಕೆ' ತಂದರು. ಮುಕ್ತವಾಗಿ ಮುಕ್ತದಲ್ಲಿ ವಿಚಾರಕ್ಕೆಗೆ ಗ್ರಾಸವನ್ನು ಒದಗಿಸಿಕೊಟ್ಟರು. ಮೊದಮೊದಲು ರಂಗಭೂಮಿಯಲ್ಲಿಯ ನೇಪಥ್ಯದವರಂಥೆ ತಮ್ಮ ಸ್ವಂತ ಹೆಸರುಗಳನ್ನು ನೇಪಥ್ಯದಲ್ಲಿ ಕಂಡಿದ್ದರೂ, ಕಾಲಕ್ರಮೇಣ ನೇಪಥ್ಯದ ಹೆಸರುಗಳೇ ಧೈರ್ಯವಾಗಿ ಶೀರ್ಷರಂಗಕ್ಕೆ ಬಂದವು. ರಂಗಭೂಮಿಯ ಚಟುವಟಿಕೆಗಳು ಬರೀ ಒಬ್ಬರ ಖುಷಿಗಾಗಿ ಅಲ್ಲ, ಅವುಗಳ ಬಗ್ಗೆ ಚರ್ಚೆಯಾಗಬೇಕು. ಸಾಮುದಾಯಿಕವಾಗಿ ವಿಚಾರಣೆಯಾಗಬೇಕೆಂಬುದೇ ಇದರ ಹಿಂದಿರುವ ಧೋರಣೆ ಅಂತ ನಾನು ಭಾವಿಸಿಕೊಂಡಿದ್ದೇನೆ.

ಈ ಮಧ್ಯೆ ಸೂರ್ಯಶಿಕಾರಿ, ಶೂದ್ರ ತಪಸ್ವಿ, ತಿರುಕರಾಜ, ಕವಿಭಿಕ್ಷೆ, ಕ್ರಾಂತಿ ಬಂತು ಕ್ರಾಂತಿ ಮುಂತಾದ ನಾಟಕಗಳನ್ನು ರಂಗಶಿಲ್ಪಿಯಂತೆ ಕಡೆದು ಸಿಂಗರಿಸಿ, ನಿರ್ದೇಶನದಲ್ಲೂ ಕೃಷ್ಣಪ್ಪ ಸೈ ಎನಿಸಿಕೊಂಡಿದ್ದಾರೆ. ಆಶ್ಚರ್ಯವೆಂದರೆ ಕೃಷ್ಣಪ್ಪ ಇಷ್ಟೆಲ್ಲ ಕೆಲಸ ಮಾಡಿದ್ದರೂ ಪ್ರತಿಫಲಾಪೇಕ್ಷೆ ಎಂದೂ ಇಟ್ಟುಕೊಂಡವರಲ್ಲ ಅವರು ತಮ್ಮ ಕಾರ್ಯದ ವಿರುದ್ಧ ಬಂದ ಪ್ರತಿಕ್ರಿಯೆಗಳ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳುವುದಿಲ್ಲ. ಕಾರಣವಿಷ್ಟೇ, ರಂಗಭೂಮಿಗೂ, ಕೃಷ್ಣಪ್ಪನವರಿಗೂ ಕರುಳು ಬಳ್ಳಿಯ ಸಂಬಂಧ. ಆ 'ಸಂಬಂಧ' ಗುಪ್ತವಾಗಿ ಅಲ್ಲ ಮುಕ್ತವಾಗಿ ಚರ್ಚಿತವಾಗಬೇಕು ಎಂಬುದೇ ಅವರ ಮುಖ್ಯ ಧೋರಣೆ.

ಈ ಸಂಬಂಧದಿಂದಲೇ ಕೃಷ್ಣಪ್ಪ ಮತ್ತೆ ಹುರಿದುಂಬಿಸಿಕೊಂಡಂತವರಾಗಿ 'ಈ ಮಾಸ ನಾಟಕ'ವನ್ನು ಮುಂದಿಟ್ಟಿದ್ದಾರೆ. ಆಗಲೇ ಹತ್ತಿರ ಹತ್ತಿರ ಎರಡು ವರ್ಷಗಳಿಂದ ಕನ್ನಡ ರಂಗಭೂಮಿಯ ವರ್ತಮಾನ, ಭವಿಷತ್ತುಗಳನ್ನು ಎದೆಗೊತ್ತಿ ಕಾಪಾಡುವಂತೆ ನಡೆಸಿಕೊಂಡು ಬಂದಿದ್ದಾರೆ. ಯಾವ ಅಡೆತಡೆಗಳನ್ನೂ ಲೆಕ್ಕಿಸದೇ, ಅತ್ತ ಇತ್ತ ಮುನ್ನುಗ್ಗುತ್ತಿದ್ದಾರೆ. ಅವರ ಜೊತೆಗೆ ಇನ್ನೂ ಹತ್ತಾರು ಜನ ಬಂದರೆ, ಅವರ ಅತ್ತಾ-ಇತ್ತಾಗಳ ಪ್ರಯಾಸವನ್ನು ಅರ್ಥ ಮಾಡಿಕೊಂಡರೆ, ಕನ್ನಡ ರಂಗಭೂಮಿಯ ಕನಸುಗಳು ಅವರ ಕೈಯಲ್ಲಿ ಸುರಕ್ಷಿತ ಎಂದು ನಾವೆಲ್ಲ ಸಮಾಧಾನದ ಉಸಿರು

ತೆಗೆದುಕೊಂಡು ಅವರ ಜೊತೆಜೊತೆಯಾಗಿ ರಂಗಕಾಯಕಕ್ಕೆ ಮುನ್ನುಗ್ಗ ಬಹುದಲ್ಲವೇ..?

## ಬಿ.ವಿ.ಕಾರಂತ

ಇವಿಷ್ಟು ಕೃಷ್ಣಪ್ಪನವರ ಬಗ್ಗೆ ಅವರ ಕಾಲಮಾನದ ರಂಗಭೂಮಿಯ ಕುರಿತು ಕಾರಂತರು ಆಡಿರುವ ಮಾತುಗಳು, ನೀವು ಇದನ್ನು ಕೇಳಿಸಿಕೊಂಡಿರುತ್ತೀರಿ, ಅಥವಾ ಲೋಕಾರೂಢಿಯಲ್ಲಿ ಹೇಳುವುದಾದರೆ ಓದಿರುತ್ತೀರಿ.

ಈ ಮೇಲ್ಕಂಡ ಮಾತುಗಳನ್ನು ನಾನು ನನ್ನ ಮಾತುಗಳಲ್ಲಿ ಇಲ್ಲಿ ನಿರೂಪಿಸಿದ್ದರೆ, ಅಷ್ಟು ತೂಕವಿರುತ್ತಿರಲಿಲ್ಲ ಎಂದು ಅಂದುಕೊಂಡಿದ್ದೇನೆ. ನೇರವಾಗಿ ಕಾರಂತರೇಇಲ್ಲಿ ತಮ್ಮ ಮಾತುಗಳನ್ನು ಆಡಿರುವುದು ಈ ಬರಹಕ್ಕೊಂದು, ಈ ಪುಸ್ತಕಕ್ಕೊಂದು ಮೆರುಗು ತಂದಿದೆ ಹಾಗೂ ಕೃಷ್ಣಪ್ಪನವರ ಈ ರಂಗಚರಿತ್ರೆಯ ಈ ಹೊತ್ತಿಗೆಗೆ ಒಂದು ಮೌಲ್ಯ ಹೆಚ್ಚಿಸಿದೆ.

ಈಗ ನಾನು ಕೃತಿಯ ಕೇಂದ್ರ ಬಿಂದುವಾದ, ಈ ವಸ್ತುವಿಗೆ ಆಕರವಾಗಿರುವ ಒಂದು ರೀತಿಯಲ್ಲಿ ಹೇಳಬೇಕೆಂದರೆ, ನಾಯಕನಾಗಿರುವ ನನಗೆ ತಮ್ಮ ರಂಗಕಥೆಯನ್ನು ಹೇಳುತ್ತಿರುವ ಕೃಷ್ಣಪ್ಪ ಅಲಿಯಾಸ್ ಎಲ್ ಕೃಷ್ಣಪ್ಪನವರನ್ನೇ ನನ್ನ ಬರಹಕ್ಕೆ ಕರೆತರುತ್ತೇನೆ. ಅವರು ತಮ್ಮ ಮತ್ತು ಕಾರಂತರೊಡನೆಯ ಒಡನಾಟಗಳನ್ನು ರಂಗಚಟುವಟಿಕೆಗಳನ್ನು, ಹೇಳಲಿದ್ದಾರೆ, ನಾನು, ಕೃಷ್ಣಪ್ಪನವರ ಅಂದಿನ ದಿನಗಳ ನೆನಪುಗಳನ್ನು ಕೆದರುತ್ತಾ ಹೋಗುತ್ತೇನೆ. ಅವರು ನಾನು ಕೇಳಿದ ಪ್ರಶ್ನೆಗಳಿಗೆ ಉತ್ತರ ನೀಡುವ ಮೂಲಕ ಅಂದಿನ ದಿನಗಳ ರಂಗಚರಿತ್ರೆಯತ್ತ ಹೋಗುತ್ತೇವೆ.

ಈಗಾಗಲೇ ಕೃಷ್ಣಪ್ಪನವರ ಬಗ್ಗೆ ಕಾರಂತರು ಹೇಳಿರುವ ವಿಚಾರಗಳು ಮತ್ತೆ ಮರುಕಳಿಸಿದಂತೆ ನಾವು ಅಂದಿನ ದಿನಗಳನ್ನು ನೆನಪಿಸಿಕೊಳ್ಳುತ್ತೇವೆ.

ಬನ್ನಿ ನಮ್ಮ ಮಾತುಕತೆಯಲ್ಲಿ ನೀವೂ ಬಾಗಿಯಾಗಿ

ಮಹಾಮನೆ : ಸಾರ್ ಶ್ರೀರಂಗರ ನೇತೃತ್ವದಲ್ಲಿ 1970 ರಲ್ಲಿ ನಡೆದ ಅಂದಿನ ಶಿಬಿರದಲ್ಲಿ ಯಾರು ಯಾರು ಉಪನ್ಯಾಸಕರಾಗಿ ಎನ್.ಎಸ್.ಡಿ. ಯಿಂದ ಬಂದಿದ್ದರು.

ಕೃಷ್ಣಪ್ಪ : ನೋಡಿ ಮಹಾಮನೆ, ಆಗ ಕಾರಂತರನ್ನು ಡೆಲ್ಲಿಯ ಎನ್.ಎಸ್.ಡಿ. ಯಿಂದ ವಾಪಸ್ ಬೆಂಗಳೂರಿಗೆ ಶ್ರೀರಂಗರು ಕರೆಸಿದ್ದರು. ಕಾರಂತರೊಟ್ಟಿಗೆ ಬಿ.ಎಂ.ಶಾ .ಅರುಣ್ ಜೋಗ್ಳೆಕರ್, ಬಜಾಜ್, ಸಾಯಿಪರಂಜಪೆ, ಪ್ರೇಮಕಾರಂತ, ಎನ್‌ಎಸ್ ವೆಂಕಟರಾಂ ಅಂದೊಂದು ಒಳ್ಳೆ ಎಕ್ಸ್‌ಪಿರಿಯನ್ಸ್ ಬಿಡ್ರಿ,

ಮಹಾಮನೆ : ಶಿಬಿರ ಎಲ್ಲಿ ನಡಿಯಿತು, ಎಷ್ಟು ದಿನ ನಡೀತು ?

ಕೃಷ್ಣಪ : ಶಿಬಿರ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಸುಮಾರು 45 ದಿನಗಳ ಕಾಲ ನಡೆಯಿತು. ದಿನಾ ಬೆಳಿಗ್ಗೆಯಿಂದ ಸಂಜೆಯವರೆಗೂ ನಡೆಯುತ್ತಿತ್ತು. ಸ್ಕೂಲ್ ಮಾಸ್ಟರ್‌ಗಳಿಗೆ ಅಂತ ಶಿಬಿರ ನಡೆದರೂ, ನಮ್ಮಂತ ಆಸಕ್ತರು ಆ ಶಿಬಿರದಲ್ಲಿ ಇದ್ದೆವು. ನಮಗೆ ತುಂಬಾ ವಿಷಯಗಳನ್ನು ತಿಳಿದುಕೊಳ್ಳಲು ಅನುಕೂಲವಾಯಿತು.

ಮಹಾಮನೆ : ಆ ಶಿಬಿರದಲ್ಲಿ ನಿಮ್ಮ ಜೊತೆ ಮತ್ತೆ ಯಾರ‍್ಯಾರು ಶಿಬಿರಾರ್ಥಿಗಳಾಗಿ ಇದ್ದರು ನಿಮಗೆ ನೆನಪಿದೆಯಾ ?

ಕೃಷ್ಣಪ : ಇದೆ, ಇದೆ, ನೆನಪಿದೆ ಅಯ್ಯೋ ನೀವೊಳ್ಳೆ, ಆಯ್ತು.... ಹ್ಹ ಹ್ಹ ಹ್ಹ ಎಂಗ್ರಿ ಮರೆಯೋದಕ್ಕೆ ಆಗುತ್ತೆ ಆ ದಿನಗಳನ್ನು, ಸಾಧ್ಯನೇ ಇಲ್ಲ, ಬೇರೆಯವರು ಮರೀಬಹುದು. ನಾನು ಮರೀತೇನೇನ್ರೀ....ಹ್ಞಾಂ.

ಮಹಾಮನೆ : ಅದೇ ಸಾರ್, ನಿಮ್ಮ ಜೊತೆ ಯಾರು ಯಾರು ಇದ್ರು ಅಂತ......

ಕೃಷ್ಣಪ್ಪ : ಸ್ವಲ್ಪ ಇರ್ರೀ ಹೇಳ್ತೀನಿ, ಹೂಂ ಬರ್ಕೊಳ್ಳಿ, ಆಗ ನನ್ನ ಜೊತೆ ಜೆ. ಲೋಕೇಶ, ಅದೇ ರಂಗಸಂಪದ ಲೋಕೇಶ, ಎನ್.ಕೆ. ಮೋಹನರಾಂ, ಎನ್.ಎ. ಸೂರಿ ಇವರಿಬ್ಬರೂ ದೂರದರ್ಶನದಲ್ಲಿದ್ದವರು ಆಮೇಲೆ, ಟಿ.ಎಸ್.ನಾಗಾಭರಣ. ನಾಗಾಭರಣ ಗೊತ್ತಲ್ಲ ನಂತರ ಬಿ. ಜಯಶ್ರೀ ಇವರೆಲ್ಲ ಇದ್ರು, ನಾನಾಗಲೇ ಎಸ್ಟಾಬ್ಲಿಷ್ಡ್ ನೇಪಥ್ಯಗಾರನಾಗಿದ್ದೆ ಕಂಡ್ರಿ.... ರಂಗಭೂಮಿ ಬಗ್ಗೆ ಇನ್ನೂ ಹೆಚ್ಚಿನದನ್ನು ತಿಳ್ಕೋಬೇಕು ಅಂತ ಆ ಶಿಬಿರಕ್ಕೆ ಹೋಗಿದ್ದೆ. ಹ್ಞಾಂ... ಇನ್ನೊಂದು ಹೇಳೋದನ್ನು ಮರೆತಿದ್ದೆ, ಡೆಲ್ಲಿಯಿಂದ ಬಂದಿದ್ದ ಎನ್‌ಎಸ್‌ಡಿ ಡೈರೆಕ್ಟರ್‌ಗಳು ಎಲ್ಲಿ ಉಳಕೊಂಡಿದ್ದರೂ ಅಂತೀರಾ, ನೋಡಿ ಇದನ್ನೆಲ್ಲ ನೀವು ದಾಖಲೇ ಮಾಡ್ಲೇ ಬೇಕು, ರಂಗ ಚರಿತ್ರೆಯ ದೃಷ್ಟಿಯಿಂದ ಇಂಥದ್ದೆಲ್ಲಾ ತುಂಬಾ ಇಂಪಾರ್ಟ್‌ಟೆಂಟ್ ಕಂಡ್ರಿ, ಸಣ್ಣ ಸಣ್ಣ ವಿಚಾರಗಳು ಮುಖ್ಯ.....ಬರೀರಿ ಬರೀರಿ, ಇದನ್ನೆಲ್ಲ ಬರೀರಿ.

ಮಹಾಮನೆ : ಹೇಳಿ ಸಾರ್, ಎಲ್ಲಿ ಅಂತ ?

ಕೃಷ್ಣಪ್ಪ : ನೀವು ಕೇಳ್ಬಿಟ್ಟರೆ ನಗ್ತೀರಾ, ಇದನ್ನು ಯಾರೂ ನಂಬಲ್ಲ, ಕೃಷ್ಣಪ್ಪ ಸುಳ್ಳು ಹೇಳ್ತಾ ಇದಾನೆ ಅಂದ್ಕೋತ್ತಾರೆ, ಏಕೆಂದರೆ ಈಗಿನವರಿಗೆಲ್ಲ ದೊಡ್ಡ

ದೊಡ್ಡ ಹೋಟೆಲ್‌ಗಳು ಬೇಕು. ಫೈವ್‌ಸ್ಟಾರ್ ಹೋಟೆಲ್‌ಗಳೇ ಬೇಕು ಅಂತಾರೆ ನೋಡ್ರೀ. ಮಹಾಮನೆ, ಅವರೆಲ್ಲ ಆ ಹೊತ್ತಿಗಾಗಲೇ, ದೊಡ್ಡ ದೊಡ್ಡ ಡೈರೆಕ್ಟರ್ ಅಂತ ಎಸ್ಟಾಬ್ಲಿಷ್ ಆಗಿದ್ದವರು. ಬೇರೆ ಬೇರೆ ದೇಶಗಳಲ್ಲಿ ಹೋಗಿ ಬಿ.ಎಂ. ಶಾ. ಅಂತವರೆಲ್ಲ ಕೆಲಸ ಮಾಡಿದ್ದವರು, ಅಂತವರು ಎಲ್ಲಿದ್ದರು ಅಂತೀರ.... ನೀವು ನಂಬಿದರೆ ನಂಬಿ ಬಿಟ್ಟರೆ ಬಿಡಿ, ಅವರೆಲ್ಲ ಕಲಾಕ್ಷೇತ್ರದ ಗ್ರೀನ್ ರೂಂ ಇದೆಯಲ್ಲ ಎಡಬಾಗದ್ದು ಅದರ ಮೇಲೆ ರೂಮ್‌ಗಳು ಇವೆ. ಅಲ್ಲೇ ಅವರೆಲ್ಲ ಉಳಿದುಕೊಂಡಿದ್ದರು. ಕಲಾಕ್ಷೇತ್ರ ಸ್ಟೇಜ್‌ನ ಪಕ್ಕದಲ್ಲಿ ಕಬ್ಬಿಣದ ಮೌಲ್ಡ್‌ಗಳು ಇದೆಯಲ್ಲ, ಅಂಗಾಸಿ ಹೋಗಬೇಕಾಗಿತ್ತು ಮೇಲಕ್ಕೆ.

**ಮಹಾಮನೆ** : ಸಾರ್ ಆ ರಂಗ ಶಿಬಿರ ನಿಮಗೆ ಹೇಗೆ ಸಹಾಯಕ್ಕೆ ಬಂತು, ನೀವು ಏನೇನು ಕಲಿತ್ರಿ, ನಿಮ್ಮ ಮುಂದಿನ ರಂಗ ಚಟುವಟಿಕೆಗೆ ಅದರಿಂದ ಹೇಗೆ ಸಹಾಯವಾಯಿತು.

**ಕೃಷ್ಣಪ್ಪ** : ಹೋ ಹೋ ತುಂಬಾ, ತುಂಬಾ ಕಲಿತೆ ಕಂಡ್ರಿ, ನಾನು ನಿಮಗೆ ಮೊದಲೇ ಹೇಳಿದ್ದೀನಲ್ಲ, ನನಗೆ ಸರಿಯಾದ ಶಿಕ್ಷಣ ಇಲ್ಲ ಅಂತ. ಕಲೀಬೇಕು ಎಂಬ ಆಸಕ್ತಿ ಇದ್ದರೂ ಅವಕಾಶ ಕಡಿಮೆ ಇತ್ತು ಅಂತ. ರಂಗಭೂಮಿಯಲ್ಲಿ ಹಾಗೆ ನೋಡ್ತಾ ನೋಡ್ತಾ ಕಲಿತದ್ದು, ಮಾಡ್ತಾ ಮಾಡ್ತಾ ಕಲಿತದ್ದು, ನಾಗೇಶ್ ಜೊತೆ ಸೇರಿ ಕಲಿತಿದ್ದೆ ಹೆಚ್ಚು ಅಂದ್ರೆ ತಪ್ಪಾಗಲ್ಲ ಕಂಡ್ರಿ, ಆಮೇಲೆ ನಾಣಿಯವರು, ಹೀಗೆ ಮುಂದುವರೀತಲ್ಲ, ಈ ಶಿಬಿರ ನನಗೊಂದು ದೊಡ್ಡ ಅವಕಾಶ ಕಲಿಯಲಿಕ್ಕೆ ಅಂತ ಬಂದೆ. ರಂಗಪರಿದಿಯ ಒಳಗೆ ಮತ್ತೇನೇನಿದೆ ಅದನ್ನೆಲ್ಲ ಕಲೀಬೇಕು ಅನ್ನುವ ಆಸೆ ಇತ್ತಲ್ಲ, ಹಾಗಾಗಿ ಇಲ್ಲಿ ತುಂಬ ಕಲಿತೆ. ಬೇರೆ ಬೇರೆ ಸ್ನೇಹಿತರ ಪರಿಚಯ ಆಯಿತು. ಹಾಂ ನೋಡಿ, ಈ ಶಿಬಿರಕ್ಕೆ ಬರುವ ಮೊದಲು ನಾವೆಲ್ಲ ಎಂಥಹ ನಾಟಕ ಆಡುತ್ತಿದ್ದೂ ಅನ್ನುವ ವಿಚಾರವನ್ನು ಹೇಳುತ್ತೇನೆ. ಆಗ ನಾವು ಡ್ರಾಯಿಂಗ್ ರೂಂ ನಾಟಕಗಳನ್ನು ಮಾಡುತ್ತಿದ್ದೋ, ಸ್ಪರ್ಧೆಗಳಲ್ಲಿ ಶಾಲಾ ಕಾಲೇಜುಗಳಲ್ಲಿ ನಾಟಕ ಮಾಡುತ್ತಿದ್ದೋ ಪರ್ವತವಾಣಿ, ಎ.ಎಸ್.ಮೂರ್ತಿ, ದಾಶರಥಿ ದೀಕ್ಷಿತ್ ಆಮೇಲೆ ಶ್ರೀರಂಗರು, ಕೈಲಾಸಂ ನಾಟಕಗಳನ್ನು ಆಡುತ್ತಿದ್ದೋ ನಮ್ಮ ಕಾಲಕ್ಕೆ ಬಿ.ಎಸ್. ನಾರಾಯಣಸ್ವಾಮಿ ಅವರು ದೊಡ್ಡ ನಿರ್ದೇಶಕರು, ಅವರು ಡೈಲಾಗ್

ಡೆಲೆವರಿ ಮೇಲೆ ನಾಟಕವನ್ನು ನಿಲ್ಲಿಸುತ್ತಿದ್ದರು. ಇವರು ನಾಟಕ ಪ್ರದರ್ಶನಗಳಲ್ಲಿ ಬದಲಾವಣೆಗಳನ್ನು ತಂದವರಲ್ಲಿ ಮೊದಲ ಸಾಲಿಗರು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ ಕಂಡ್ರಿ, ರೀ ಮಹಾಮನೆ ಇಲ್ಲಿ ಕೇಳ್ರೀ... ಇವರು ಏನ್ ಮಾಡಿದರು ಅಂತ ಹೇಳ್ತೀನಿ.

**ಮಹಾಮನೆ** : ಹೇಳಿ ಸಾರ್, ಕೇಳ್ತಾ ಇದೀನಿ.

**ಕೃಷ್ಣಪ್ಪ** : ಪೂರ್ತಿ ಕೇಳ್ಬಿಡಿ, ಆಮೇಲೆ ಬರ್ಕೊಳ್ಳಿರ್ವಂತೆ

**ಮಹಾಮನೆ** : ಆಗಲಿ ಸರ್

**ಕೃಷ್ಣಪ್ಪ** : ಅವರೇನು ಮಾಡಿದರು ಅಂದ್ರೆ ನಾಟಕಗಳನ್ನು ಕಂಪನಿ ಶೈಲಿಯಿಂದ ಡ್ರಾಯಿಂಗ್ ರೂಂ ಕಾನ್ಸೆಪ್ಟಿಗೆ ತಂದು ನಿಲ್ಲಿಸಿದರು. ಆ ಕೀರ್ತಿ ಅವರಿಗೆ ಸಲ್ಲಬೇಕು ಕಂಡ್ರಿ, ಕಂಪನಿ ಶೈಲಿಯಲ್ಲಿ ನಟರು ಹೋಗಿ ಹೋಗಿ ಮೈಕ್ ಮುಂದೆ ಮಾತನಾಡುವುದು, ಡ್ರಾಯಿಂಗ್‌ರೂಂ ಶೈಲಿಯಂತೆ ಕುರ್ಚಿ, ಮೇಜು, ಸೋಪ, ಹೌಸ್ ಸೆಟ್ಟು ಇಂತಹ ರಂಗಪರಿಕಗಳನ್ನು ಬಳಸಿ, ಅಲ್ಲೆಲ್ಲಾ ಕುಳಿತು ನಿಂತು ಮಾತನಾಡುವುದು, ನಟರು ಎಲ್ಲೆಲ್ಲಿ ನಟನೆ ಮಾಡುತ್ತಿದ್ದರೋ ಅಲ್ಲಲ್ಲೇ ಸ್ಟಾಂಡ್ ಮೈಕ್ ಇರುತ್ತಿದ್ದವು. ಇದು ನಾಟಕದ ಚಲನೆಗೆ ಭಂಗ ತರುವಂತೆ ಇರುತ್ತಿದ್ದವು. ಇದರಿಂದ ನೋಡಗರಿಗೆ ಮುಜಗರವನ್ನು ಮಾಡದೇ ಇರುತ್ತಿರಲಿಲ್ಲ. ಏನ್ ಮಾಡೋದು ಹೇಳಿ ಆಗಿನ ಕಾಲಕ್ಕೆ ನಮಗೆ ಗೊತ್ತಿದ್ದುದೇ ಅದು. ಹೊಸದನ್ನು ಕಲೀಬೇಕು ಅನ್ನುವ ಆಸೇ ಇದ್ದರೂ ನಮ್ಮಂತವರಿಗೆ ಅವಕಾಶ ಎಲ್ಲಿತ್ತು ಹೇಳಿ ? ಆದರೆ ಶಿಬಿರದಲ್ಲಿ ಭಾಗವಹಿಸಿದ ಮೇಲೆ ನಮ್ಮ ದೃಷ್ಟಿಕೋನವೇ ಬದಲಾಯಿತು. ಆಲೋಚನಾ ಕ್ರಮ ಬೇರೆಯಾಯಿತು. ರಂಗಭೂಮಿಯನ್ನು ಅಕಾಡೆಮಿಕ್ ಆಗಿ ಗ್ರಹಿಸಿದೆನು. ರಂಗಭೂಮಿಯನ್ನು ಕ್ರಮಬದ್ಧ ಶಿಕ್ಷಣದ ಮೂಲಕ ಕಲಿತುಕೊಳ್ಳಬೇಕೆಂಬ ನನಗಿದ್ದ ಮಹಾದಾಸೆ ಸ್ವಲ್ಪಮಟ್ಟಿಗೆ ಪೂರೈಸಿತು ಕಂಡ್ರಿ,

**ಮಹಾಮನೆ** : ಸಾರ್ ಶಿಬಿರ ಬರೀ ಅಕಾಡೆಮಿಕ್ ಆಗಿ ಮಾತ್ರ ಇದ್ದವಾ ಅಂದರೆ ರಂಗಭಾಷೆಯನ್ನು ಬರೀ ಪಠ್ಯಪ್ರವಚನಗಳು, ಉಪನ್ಯಾಸಗಳಲ್ಲಿ ಮಾತ್ರ ತಿಳಿಸುತ್ತಿದ್ದರಾ ಅಥವಾ ಪ್ರಾಯೋಗಿಕವಾಗಿಯೂ ತಿಳಿ ಹೇಳುತ್ತಿದ್ದರಾ.

**ಕೃಷ್ಣಪ್ಪ** : ಇಲ್ಲ ಇಲ್ಲ ಬರೀ ಪಾಠ ಪ್ರವಚನ ಮಾತ್ರ ಇರಲಿಲ್ಲ. ಈ ಶಿಬಿರದ

ಅಭ್ಯಾಸಕ್ಕಾಗಿ ಭಿನ್ನ ಶೈಲಿಯ 3 ನಾಟಕಗಳನ್ನು ತೆಗೆದುಕೊಂಡು ಅಭ್ಯಾಸ ಹಾಗು ಪ್ರಾಯೋಗಿಕವಾಗಿ ಪ್ರದರ್ಶನವನ್ನೂ ಸಹ 3 ದಿನಗಳ ಕಾಲ ರವೀಂದ್ರ ಕಲಾಕ್ಷೇತ್ರದಲ್ಲಿ ಏರ್ಪಡಿಸಲಾಗಿತ್ತು. ಮೋಲಿಯರ್‌ನ 'ಬೂರ್ಜ್ವಾದಿ ಜಂಟಲ್‌ಮನ್,' ಆಮೇಲೆ ಸುಂಸರ 'ಬಿರುದೆಂತೆಂ ಬರಗಂಡ', ಅನಂತರ ಮೂರನೇ ನಾಟಕವಾಗಿ ಲಂಕೇಶರ 'ಪೊಲೀಸರಿದ್ದಾರೆ ಎಚ್ಚರಿಕೆ,' ಚಂಪಾ ಅವರ 'ಕೊಡೆಗಳು', ನಾ.ರತ್ನಾರ 'ಬೊಂತೆ' ನಾಟಕಗಳು ಪ್ರದರ್ಶನಗೊಂಡವು. ಈ ಮೂರು ನಾಟಕಗಳು ಬೇರೆ ಬೇರೆ ನೆಲೆಗಳಲ್ಲಿ ಅಂದರೆ, ರಂಗಭೂಮಿಯ ಹಲವು ಆಯಾಮಗಳನ್ನು, ವಿಚಾರಗಳನ್ನು ತಿಳಿದುಕೊಳ್ಳಲು ಈ ನಾಟಕಗಳನ್ನು ತೆಗೆದುಕೊಳ್ಳಲಾಗಿತ್ತು.

ಮಹಾಮನೆ : ಸಾರ್, ನೀವು ನಾಟಕಗಳಲ್ಲಿ ನೇಪಥ್ಯದಲ್ಲಿ ಕೆಲಸ ಮಾಡಿದ್ರಾ, ಅಥವಾ ನಟನಾಗಿ ಅಭಿನಯವನ್ನು ಮಾಡಿದ್ರಾ?

ಕೃಷ್ಣಪ್ಪ : ನೋಡ್ರೀ ಮಹಾಮನೆ, ನನಗೆ ಮೊದಲಿಂದಲೂ ನಟ ಆಗಬೇಕು, ಕಲಾವಿದ ಆಗಬೇಕು ಅನ್ನೋ ಹುಚ್ಚು ಇತ್ತಲ್ಲ ಹಾಗಾಗಿ ಪಾತ್ರಗಳನ್ನು ಮಾಡಿದೆ. ಮುಖ್ಯವಾಗಿ ನಾನು ಮಾಡಿದ್ದು ಬೆಳಕಿನ ವಿನ್ಯಾಸ ಹಾಗೂ ರಂಗ ನಿರ್ವಹಣೆ ವಿಭಾಗದಲ್ಲಿ ಹೆಚ್ಚು ಕೆಲಸ ಮಾಡಿದ್ದು.

ಮಹಾಮನೆ : ಯಾವ ಯಾವ ನಾಟಕದಲ್ಲಿ ಪಾತ್ರ ಮಾಡಿದಿರಿ ಎಂದು ಹೇಳ್ಳೇ ಇಲ್ಲ.?

ಕೃಷ್ಣಪ್ಪ : ಎಲ್ಲ ಸಣ್ಣ ಸಣ್ಣ ಪಾತ್ರಗಳು ಕಂಡ್ರಿ, 'ಬೂರ್ಜ್ವಾದಿ ಜಂಟಲ್‌ಮನ್' ನಾಟಕದಲ್ಲಿ ಫೆನ್ಸರ್ ಮಾಸ್ತರ್ (ಕತ್ತಿವರಸೆ ಮಾಸ್ಟರ್). 'ಬಿರುದೆಂತೆಂಬರ ಗಂಡ'ದಲ್ಲಿ ಪುರಜನರಲ್ಲೊಬ್ಬ ಹೀಗೆ ಆದ್ರೆ ಮಹಾಮನೆ, ಉಪನ್ಯಾಸಕರೆಲ್ಲರೂ ಪರಿಣಿತರು ಇದ್ದದ್ದರಿಂದ ರಂಗಭೂಮಿಯ, ನಾಟಕ ನಿರ್ಮಾಣದ ಪ್ರತಿಯೊಂದ ವಿಭಾಗಗಳಲ್ಲಿಯೂ ಹೊಸಹೊಸದನ್ನು ಕಲಿಯಲು ಅನುವಾಗಿತ್ತು ಆ ಶಿಬಿರ. ಅಭಿನಯ, ನೇಪಥ್ಯದ ಕೆಲಸಗಳು, ಸ್ಟೇಜ್ ಮಾಡಲೆಂಗ್, ವಸ್ತ್ರವಿನ್ಯಾಸ, ಬ್ರೋಚರ್ ನಿರ್ಮಾಣ ಹೀಗೆ ಹಲವು ರಂಗಪ್ರಕಾರಗಳ ಮೇಲೆ ಶಿಬಿರ ಬೆಳಕು ಚೆಲ್ಲಿತ್ತು ಕಂಡ್ರಿ,

ಮಹಾಮನೆ : ಸಾರ್ ಕಾರಂತರ ವಿಚಾರಕ್ಕೆ ಬರೋಣ, ನಿಮ್ಮ – ಅವರ ಮೊದಲ ಬೇಟಿ, 1965–66 ನಡೆದ ಮಾಸ್ತರ ಶಿಬಿರದಲ್ಲಿ ಆಯಿತು ಎಂದು ಹೇಳಿದ್ದಿರಿ. ಆ ಪರಿಚಯ ಹೇಗೆ ಮುಂದು ವರಿಯಿತು ?

ಕೃಷ್ಣಪ್ಪ : ಮುಂದೆ ಏನಾಯಿತಪ್ಪ, ಅಂದ್ರೆ ಅವರಿಗೆ ಈ ನೆಲವನ್ನೇ ತಮ್ಮ ಕಾರ್ಯಕ್ಷೇತ್ರ ಮಾಡಿಕೊಳ್ಳಬೇಕೆಂಬ ಮನಸ್ಸಿತ್ತು. ಬೆಂಗಳೂರನ್ನು ಕೇಂದ್ರ ಮಾಡಿಕೊಳ್ಳಬೇಕೆಂದು ನಿರ್ಧರಿಸಿದ್ದರು. ಅವರ ಕರ್ಮಭೂಮಿಯ ತಾಣ ಬೆಂಗಳೂರು, ಮೈಸೂರು ಎಂದು ತೀರ್ಮಾನಿಸಿದ್ದರು. ಹಾಗಾಗಿ ಅವರು ನಮ್ಮ ಮುಂದೆ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸುತ್ತಾರೆ. ನಾನು ನಿಮಗೆ ನಾಟಕ ಮಾಡಿಸುತ್ತೇನೆ, ನಿಮ್ಮ ಸಂಘದ ಹಾಗೂ ನಿಮ್ಮೆಲ್ಲರ ಸಂಪೂರ್ಣ ಸಹಕಾರ ಬೇಕು ಎಂದಾಗ ನಮಗೆಲ್ಲ ಖುಷಿಯೋ ಖುಷಿ. ಕಾರಂತರಿಂದ ಉತ್ತೇಜಿತರಾಗಿ ಅವರ ಜೊತೆ ಕೆಲಸ ಮಾಡಲು ಸಂಘ ಒಪ್ಪಿಕೊಳ್ಳುತ್ತದೆ.

ಮಹಾಮನೆ : ಕಾರಂತರು ಯಾವ ನಾಟಕ ಮಾಡಿಸಿದರು ನಿಮಗೆ ?

ಕೃಷ್ಣಪ್ಪ : ನಮ್ಮ ಕೋರಿಕೆಯಂತೆ ನಮಗಾಗಿ ಶ್ರೀರಂಗರು ನಾಟಕ ಬರೆದರು. ಆ ಸಂದರ್ಭದಲ್ಲಿ ಹೊರಬಂದ ನಾಟಕವೇ 'ನಾ ಕೊಡೆ ನೀ ಬಿಡೆ' ಆ ನಾಟಕವನ್ನು ಕಾರಂತರು ನಿರ್ದೇಶನ ಮಾಡಿದರು. ಈ ಸಂದರ್ಭ 1967–68.

ಮಹಾಮನೆ : ಆ ನಾಟಕದ ಕಥಾ ವಸ್ತು ಏನು ? ಅದನ್ನು ಕಾರಂತರು ಹೇಗೆ ಪ್ರೆಸೆಂಟ್ ಮಾಡಿದರು. ಅದರ ಬಗ್ಗೆ ಹೇಳ್ತೀರಾ ಸಾರ್?

ಕೃಷ್ಣಪ್ಪ : ನಾಟಕದ ಸಂಪೂರ್ಣ ಕಥೆ ಹೇಳಕ್ಕಾಗಲ್ಲ, ಇಲ್ಲಿ ಒಂದು ಸಾಲಲ್ಲಿ ಹೇಳಬೇಕು. ಅಂದ್ರೆ, ರಾಜಕೀಯ ವ್ಯಕ್ತಿಯ ಸಂಸಾರದ ಕಥೆ ಕಂಡ್ರಿ. ಅಂಕದ ನಾಟಕ ಅದು, ಈ ವಸ್ತುವನ್ನು ನಟರು ಹೇಗೆ ಭಿನ್ನ ಶೈಲಿಯಲ್ಲಿ ಪ್ರೇಕ್ಷಕರಿಗೆ ತಲುಪಿಸಬೇಕು ಎಂಬ ಹೊಸ ನಟನಾ ಸಿದ್ಧಾಂತವನ್ನು ಕಾರಂತರು ನಮಗೆ ತೋರಿದರು. ಅದು ಹೇಗಿತ್ತಪ್ಪ ಅಂದ್ರೆ, ನಟರ ದೇಹಸಾಮರ್ಥ್ಯ, ಭಾಷಾ ಸಾಮರ್ಥ್ಯ, ರಂಗವೇದಿಕೆಯ ಆವರಣವನ್ನು ಅರ್ಥಬದ್ಧವಾಗಿ ಬಳಸುವ ವಿಧಾನ, ಇದರ ಜೊತೆಜೊತೆಗೆ ಧ್ವನಿ, ಬೆಳಕು, ಸಂಗೀತವನ್ನು ಪೂರಕವಾಗಿ ಹಾಗೂ ಸಾಕೇಂತಿಕವಾಗಿ ಬಳಸುವ ವಿಧಾನ ಮತ್ತು ರಂಗಪರಿಕರವನ್ನು ನಾಟಕದ ವಸ್ತುವನ್ನು ಹೇಳಲು ಸಾಂಕೇತಿಕವಾದ ಪ್ರತಿಮೆಗಳನ್ನು ಸೃಷ್ಟಿಸುತ್ತಿದ್ದ ವಿಧಾನ ಹೊಸತನದ್ದಾಗಿರುತ್ತಿತ್ತು. ರೀ ಅದೊಂದು ಹೊಸ ಅನುಭವ ಬಿಡ್ರಿ ಮಹಾಮನೆ, ಕಾರಂತರಿಗೆ ಕಾರಂತರೇ ಸವಾಲು ಕಂಡ್ರಿ, ಅದೊಂದು ವಿಸ್ಮಯ ಕಂಡ್ರಿ.

ಮಹಾಮನೆ : ನಾಟಕದ ತಾಲೀಮು ಎಲ್ಲಿ ಮಾಡುತ್ತಿದ್ರಿ, ನಿಮ್ಮ ಜೊತೆ ಯಾರ್‍ಯಾರು ನಾಟಕದಲ್ಲಿ ಕಲಾವಿದರಾಗಿದ್ರು.

ಕೃಷ್ಣಪ್ಪ : ನಾವು ನಾಟಕದ ತಾಲೀಮನ್ನು ಕೆ.ಆರ್. ಸರ್ಕಲ್‌ನಲ್ಲಿರುವ ಇಂಜನಿಯರಿಂಗ್ ಕಾಲೇಜಿನ ಆವರಣದಲ್ಲಿ ಮಾಡುತ್ತಿದ್ದೆವು. ನನ್ನ ಜೊತೆ ಯಾರ್‍ಯಾರು ಪಾತ್ರ ಮಾಡಿದರು ಅಂತ ಹೇಳ್ಬೇಕು ಅಂದ್ರೆ ಆರ್. ನಾಗೇಶ, ಲಿಂಗಯ್ಯ, ಚಂದ್ರ, ಸತ್ಯವತಿ, ಕೊಂಡಜ್ಜಿರಾಜಶೇಖರ್ ಇವರೆಲ್ಲ ಪ್ರಮುಖ ಪಾತ್ರಧಾರಿಗಳಾಗಿದ್ದರು. ಜಿ.ವಿ.ಶಿವಾನಂದ್, ಹೆಚ್.ಕೆ.ರಾಮಮೂರ್ತಿ, ಎನ್.ನರಸಿಂಹಮೂರ್ತಿ, ಶಿವಸ್ವಾಮಿ, ಡಿ.ಸಿ.ಕೃಷ್ಣಮೂರ್ತಿ, ನಾನೆಲ್ಲ ಸಮವಸ್ತ್ರಧಾರಿಗಳಾಗಿ ಅಂದರೆ ಗುಂಪು ಕಲಾವಿದರಾಗಿದ್ದೆವು. ಜಿ.ವಿ.ಶಿವಾನಂದ್ ಸ್ಟೇಜ್ ಮ್ಯಾನೇಜರ್ ಆಗಿದ್ದರು, ನಾಣಿ ಮೇಕಪ್ ಮಾಡಿದ್ದರು. ನಾನು ಪ್ರಮುಖವಾಗಿ ನೇಪಥ್ಯ ಕೆಲಸ ಮಾಡಿದ್ದಲ್ಲದೆ ಸಂಸ್ಥೆಯ ಸಂಪೂರ್ಣ ಜವಾಬ್ದಾರಿಯನ್ನು ತೆಗೆದುಕೊಂಡು, ಅದರ ಆಗುಹೋಗುಗಳು, ಅದರ ಹಣಕಾಸು ಪರಿಸ್ಥಿತಿಯನ್ನು ನೋಡಿಕೊಳ್ಳುತ್ತಿದ್ದೆನು. ಒಂದು ವಿಚಾರ ಹೇಳಬೇಕು ನಿಮಗೆ ಮಹಾಮನೆ, ಈ ನಾಟಕದ ಕೈಪಿಡಿ, ಟಿಕೆಟ್ ಇಂತಹದನ್ನೆಲ್ಲ ನಾವು ಶೇಷಾದ್ರಿಪುರಂನಲ್ಲಿನ ಮನುಪಾಟೀಲರ ಗಜಾನನ ಮುದ್ರಣಾಲಯದಲ್ಲಿ ಮುದ್ರಿಸಿದ್ದೆವು. ಆದರೆ ದುಡ್ಡು ಕೊಟ್ಟಿರಲಿಲ್ಲ. ಆಮೇಲ್ ಕೊಡ್ತೀವಿ ಅಂತ ಹೇಳಿದ್ದೊ, ನಾಟಕ ಮುಗಿದ ಮೇಲೂ ಕೊಡಲಿಕ್ಕೇ ಆಗಿರಲಿಲ್ಲ. ಮನುಪಾಟೀಲರಿಂದ ತಲೆತಪ್ಪಿಸಿಕೊಂಡು ಓಡಾಡಿದ್ದೊ. ಇದನ್ನು ಯಾಕೆ ಹೇಳ್ತಾ ಇದೀನಿ ಅಂದ್ರೆ, ಆಗ಼್ೂ ನಮ್ಮ ಹತ್ತಿರ ಹಣ ಇರಲಿಲ್ಲ. ನಾಟಕ ಮಾಡಬೇಕು ಎಂಬ ಆಸಕ್ತಿ ಹಾಗೂ ಉಮೇದು ಅಷ್ಟೇ ನಮ್ಮ ಹತ್ತಿರ ಇದ್ದದ್ದು. ಹೀಗೆಲ್ಲ ಕಷ್ಟಗಳನ್ನು ಅನುಭವಿಸಿ ಸಾಲ ಸೋಲಗಳನ್ನು ಮಾಡಿ ನಾಟಕಗಳನ್ನು ಮಾಡ್ತಾ ಇದ್ದಿವಿ. ಆದರೆ ನಮಗೆ ನಮ್ಮ ಸಂಘಕ್ಕೆ ಕಾರಂತರು ಮಾಡಿಸಿದ ನಾಟಕ ಯಶಸ್ಸನ್ನು ತಂದು ಕೊಡ್ತು.

ಮಹಾಮನೆ : ಸಾರ್ ಆ ನಾಟಕ ಬೆಂಗಳೂರು ಹಾಗೂ ಕನ್ನಡ ರಂಗಭೂಮಿಯಲ್ಲಿ ಕಾರಂತರು ಮಾಡಿಸಿದ ಮೊದಲ ನಾಟಕವ. ಅದನ್ನು ಹೇಗೆಲ್ಲಾ ಜನಗಳಿಗೆ ತಲುಪಿಸುವ ಕೆಲಸ ಮಾಡಿದಿರಿ, ಮಾಧ್ಯಮಗಳು ಹೇಗೆ ಪ್ರತಿಕ್ರಿಯಿಸಿದೊ ?

ಕೃಷ್ಣಪ್ಪ : ಈ ವಿಚಾರವನ್ನು ಹೇಳಲೇಬೇಕು, ನೀವು ಕೇಳಿದ್ದು ಒಳ್ಳೆಯದೇ ಆಯಿತು. ಇಲ್ಲದೇ ಇದ್ದಿದ್ದರೆ ನಾನೂ ಮರೆತೂ ಬಿಡುತ್ತಿದ್ದೆ. ಅದು ಅಂಗೇ ಬಿಟ್ಟು ಹೋಗುತ್ತಿತ್ತು. ನೋಡಿ ಮಹಾಮನೆ, ಕಾರಂತರು ಎನ್‌ಎಸ್‌ಡಿಯಿಂದ ಮರಳಿ ಬೆಂಗಳೂರಿಗೆ ಬಂದಾಗ ಮಾಡಿಸಿದ ಮೊದಲ ನಾಟಕವೇ ನಮ್ಮದು. ಆ ನಂತರ ಅವರು ಜಿ.ವಿ.ಶಿವಾನಂದ ಅವರ 'ಕಲಾಕುಂಜ' ಹಾಗೂ ಇತರ ತಂಡಗಳಿಗೆ ನಾಟಕ ಮಾಡಿಸಿದರು. ಅದೆಲ್ಲ ಮುಂದಿನ ಕತೆ, ಆಮೇಲೆ ನೀವು ಇನ್ನೊಂದು ಪ್ರಶ್ನೆ ಕೇಳಿದ್ರಲ್ಲ, ಅದು ಏನಪ್ಪ ಅಂದ್ರೆ, ನಾವು ನಾಟಕದ ಸಾರ್ವಜನಿಕ ಪ್ರದರ್ಶನಕ್ಕೆ ಮೊದಲೇ ಪತ್ರಿಕಾ ಮಾಧ್ಯಮದವರಿಗೆ ಅಂತ ನಾಟಕದ ಕೆಲವು ಪ್ರಸಂಗಗಳನ್ನು ಪೂರ್ವಭಾವಿಯಾಗಿ ಪ್ರಚುರ ಪಡಿಸಿದ್ದೆವು. 'ಟೆಕ್ನಿಕಲ್ ಫೋ' ಅಂತಾರಲ್ಲ ಅಂಗೆ ಪ್ರದರ್ಶನಕ್ಕೆ ಕೆಲವು ರಂಗಗಣ್ಯರನ್ನು ಕರೆದಿದ್ದೆವು. ನಾವು ಮಾಡಿದ ವಿಶಿಷ್ಟವಾದ ಪ್ರಚಾರಶೈಲಿಗೆ ಹೆಚ್ಚಿನ ಪ್ರೋತ್ಸಾಹ ಸಿಕ್ಕಿ ನಾಟಕದ ದಿನ ನಮ್ಮ ನಿರೀಕ್ಷೆಗೆ ಮೀರಿ ಹೆಚ್ಚು ಜನ ಬಂದು ಬಿಟ್ಟಿದ್ದರಿಂದ ಅದೇ ದಿನ ಮತ್ತೊಂದು ಪ್ರದರ್ಶನವನ್ನು ಏರ್ಪಡಿಸಿದ್ದು ರಂಗಭೂಮಿಯ ಸುವರ್ಣ ಚರಿತ್ರೆ ಎನ್ನಬಹುದು ಮಹಾಮನೆ.

ಮಹಾಮನೆ : ಯಾವ ದಿನದಂದು ನಾಟಕ ಮಾಡಿದಿರಿ ಅಂತೇನಾದರು ನೆನಪಿದೆಯಾ ಸಾರ್ ನಿಮಗೆ.

ಕೃಷ್ಣಪ್ಪ : ಓಹೋ, ಓಹೋ, 3/7/1968, ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಮಾಡಿದ್ದು.

ಮಹಾಮನೆ : ಶಿವಾನಂದರ 'ಕಲಾಕುಂಜ' ತಂಡಕ್ಕೆ ಕಾರಂತರು ನಾಟಕ ಮಾಡಿಸಿದರು ಎಂದು ಹೇಳಿದಿರಲ್ಲ, ಅದು ಯಾವ ನಾಟಕ. ಅದರಲ್ಲೂ ನೀವು ಪಾತ್ರ ವಹಿಸಿದ್ದರ ಅಥವಾ ನೇಪಥ್ಯದಲ್ಲಿ ಕೆಲಸ ಮಾಡಿದ್ದರಾ..?

ಕೃಷ್ಣಪ್ಪ : ಹೌದು ಆ ನಾಟಕ ಯಾವುದು ಅಂದ್ರೆ 'ಸದ್ದು ವಿಚಾರಣೆ ನಡೀತಾ ಇದೆ' ಈ ನಾಟಕ ಆಗಿದ್ದು 1969ರಲ್ಲಿ. ಅದರಲ್ಲಿ ನಾನೊಂದು ಸಣ್ಣ ಪಾತ್ರ ಮಾಡಿದ್ದೆ. ರಂಗದ ಮೇಲೆ ಕಾಣಿಸಿಕೊಳ್ಳಬೇಕೆಂಬ ಹಠದಿಂದ ಆ ಪಾತ್ರ ಮಾಡಿದೆ ಕಂಡ್ರಿ, ಆ ಪಾತ್ರ ಯಾವುದು ಅಂದ್ರೆ 'ಪೋಸ್ಟ್‌ಮ್ಯಾನ್' ಪಾತ್ರ, ಕಾರಂತರೂ ಸಹ ಒಂದು ಪಾತ್ರ

ಮಾಡಿದ್ದರು. ಅವರದೂ ಸಹ ಒಂದು ಸಣ್ಣ ಪಾತ್ರ. ಅವರಿಗೂ ನನ್ನ ಹಾಗೆ ಪಾತ್ರ ಮಾಡುವ ಹುಚ್ಚು ಇದ್ದುದ್ದರಿಂದ ನಾಟಕದಲ್ಲಿ ಬರುವ 'ಜಡ್ಜ್' ಪಾತ್ರ ಮಾಡಿದ್ದರು. ಕಾರಂತರಿಗೂ ಪಾತ್ರ ಮಾಡುವ ಹಠ ನನಗೂ ಪಾತ್ರ ಮಾಡುವ ಹುಚ್ಚು ಹಾಗಾಗಿ ನೇಪಥ್ಯದ ಜೊತೆ ಜೊತೆಗೆ ಸಣ್ಣ ಸಣ್ಣ ಪಾತ್ರಗಳನ್ನು ಮಾಡಿ ತೃಪ್ತಿಪಟ್ಟುಕೊಳ್ಳುತ್ತಿದ್ದೆ. ಕಾರಂತರಿಗೂ ಆ ತೃಪ್ತಿ ಸಿಗುತ್ತಿದ್ದಿರಬಹುದು. ಒಟ್ಟಿನಲ್ಲಿ ನಾವು ಸಮಾನ ತೃಪ್ತಿಗಳಾಗಿದ್ದವು.

ಮಹಾಮನೆ : ತಾವು ನೇಪಥ್ಯದಲ್ಲಿ ಕೆಲಸ ಮಾಡಿದ್ದು ಹೇಳಲೇ ಇಲ್ವಲ್ಲ ?

ಕೃಷ್ಣಪ್ಪ : ಮರೆತು ಬಿಟ್ಟೆ ಕಂಡ್ರಿ, ನಾನು ನಾಟಕದಲ್ಲಿ ಪ್ರಮುಖವಾಗಿ ನೇಪಥ್ಯದ ಕೆಲಸ ಮಾಡಿದೆ. ಅಂದರೆ ರಂಗ ವೇದಿಕೆಯನ್ನು ಸಿದ್ಧಪಡಿಸುವ ಕೆಲಸ. ಈ ನಾಟಕ ಆಗಿದ್ದು ಎಲ್ಲಪ್ಪ ಅಂದ್ರೆ ಬೆಂಗಳೂರಿನ ಗಾಯನ ಸಮಾಜದಲ್ಲಿ, ನಾಟಕದ ಹಿಂದಿನ ದಿನವೇ ಪ್ರಭಾತ್ ಶಿಶುವಿಹಾರದಿಂದ ಪರದೆಗಳು, ಹೌಸ್‌ಪ್ಲಾಟ್‌ಗಳು, ಲೈಟ್‌ಗಳನ್ನು ತಂದು ರಂಗವೇದಿಕೆಯನ್ನು ನಾಟಕದ ಸಂದರ್ಭಕ್ಕೆ ಸರಿಯಾಗಿ ಸಿದ್ಧಗೊಳಿಸಿದ್ದೆ. ಪೂರಕವಾಗಿ ಸ್ಟೇಜ್‌ವರ್ಕ್ ಜವಾಬ್ದಾರಿಯನ್ನು ಹೊತ್ತಿದ್ದಲ್ಲದೇ ಪ್ರಮುಖವಾಗಿ ಬೆಳಕಿನ ವಿನ್ಯಾಸವನ್ನು ಸಹ ಮಾಡಿದ್ದೆ. ಆಗ ನನ್ನ ಜೊತೆಗೆ ಪ್ರಟ್ಟಯ್ಯ, ರಮೇಶ, ತಮ್ಮಯ್ಯ ಇವರೆಲ್ಲ ಕೆಲಸ ಮಾಡಿದ್ದರು.

ಮಹಾಮನೆ : ಓಹೋ ನೀವು ಹೀಗೆ ಎಲ್ಲಾ ನಾಟಕಗಳಿಗೂ ಬೆಳಕಿನ ವಿನ್ಯಾಸ ಮಾಡುತ್ತಿದ್ದರಿಂದಲೇ ನಿಮ್ಮನ್ನು 'ದೀವಟಿಗೆ ಕೃಷ್ಣಪ್ಪ' ಎಂದು ಕರೆಯುತ್ತಿದ್ದರು ಅಂತ ಕಾಣುತ್ತೆ.

ಕೃಷ್ಣಪ್ಪ : ಹ್ಹ, ಹ್ಹ ಹ್ಹ ಹೌದು, ಹೌದು, ನಾಟಕಗಳು ಎಲ್ಲೇ ಆಗಲಿ ಅಲ್ಲಿ ನಾನು ಇರುತ್ತಿದ್ದೆ. ಬರೇ ಬೆಳಕಿನ ವಿನ್ಯಾಸ ಮಾಡೋದಷ್ಟೆ ನನ್ನ ಕೆಲಸ ಆಗಿರಲಿಲ್ಲ. ಲೈಟ್ಸ್‌ಗಳೂ, ಡಿಮ್ಮರ್‌ಗಳೂ, ಸ್ಟ್ಯಾಂಡ್‌ಗಳು, ಕೇಬಲ್‌ಗಳು ಎಲ್ಲವನ್ನೂ ಪ್ರಭಾತ್‌ನಿಂದ ಹೊತ್ತುಕೊಂಡು ಹೋಗಿ ನಾಟಕದ ಹಿಂದಿನ ದಿನವೇ ಫಿಕ್ಸ ಮಾಡಿ ಚೆಕ್ ಮಾಡಿಕೊಂಡು ಆ ನಂತರ ಲೈಟ್ ಡಿಸೈನ್‌ನನ್ನೂ ನಾನೇ ಮಾಡುತ್ತಿದ್ದೆ ಮಹಾಮನೆ. ಅದು ಬಹಳ ಪರಿಶ್ರಮದ ಕೆಲಸವಾಗಿತ್ತು ಕಂಡ್ರಿ.

ಹೀಗೆ ನನ್ನ ಮತ್ತು ಕೃಷ್ಣಪ್ಪನವರ ಮಾತುಕತೆಯ ನಡುವೆ ಕೃಷ್ಣಪ್ಪ ಮತ್ತು

ಕಾರಂತರೊಟ್ಟಿಗಿನ ಒಡನಾಟ, ಅಂದಿನ ರಂಗಭೂಮಿ ಪರಿಸ್ಥಿತಿ, ಕಲಾವಿದರ ಪರಿಚಯ, ರಂಗಭೂಮಿಯ 70ರ ದಶಕಕ್ಕೂ ಮೊದಲು ನಡೆದು ಬಂದ ಬಗೆ, ಹೀಗೆ ಕೃಷ್ಣಪ್ಪನವರ ರಂಗವೃತ್ತಾಂತದ ಜೊತೆ ಜೊತೆಗೆ ಅಂದಿನ ರಂಗಚರಿತ್ರೆಯೂ ಬಿಚ್ಚಿಕೊಳ್ಳುತ್ತದೆ. ಹಲವು ಮಾಹಿತಿಗಳು ತೆರೆದುಕೊಳ್ಳುತ್ತವೆ. ಮರೆಯಾಗಿರುವ ಹಲವಾರು ಕಲಾವಿದರು ನಮ್ಮ ಮುಂದೆ ನಿಂತು ಬಿಡುತ್ತಾರೆ. ಕೃಷ್ಣಪ್ಪನವರ ಕುರಿತು ಬರೆಯುತ್ತಲೇ ನಾನು ಬೇರೆ ಬೇರೆಯಾದ ರಂಗಕಥೆಯನ್ನು ಹೇಳಿ ಬಿಡುತ್ತಿದ್ದೇನೇ ಎಂದು ಭಾಸವಾಗುತ್ತದೆ. ಕೃಷ್ಣಪ್ಪನವರ ರಂಗಚರಿತ್ರೆಯನ್ನು ಕಟ್ಟಿಕೊಡುವುದರೊಡನೆ ಅಂದಿನ ದಿನಮಾನವನ್ನು, ಅಂದಿನ ರಂಗ ಚರಿತ್ರೆಯನ್ನು, ಅಂದಿನ ಕಲಾವಿದರನ್ನು ಪರಿಚಯಿಸುವ ಸೌಭಾಗ್ಯವು ನನ್ನದಾಗಿದೆ. ಆ ಕಾಲಮಾನವನ್ನು ಹೇಳದೆ ಕೃಷ್ಣಪ್ಪನವರ ಕುರಿತು ಹೇಳುವುದು ಕಷ್ಟ ಸಾಧ್ಯವಾದದ್ದೇ. ಅನಿವಾರ್ಯತೆ ಇದ್ದಾಗ ಮಾತ್ರ ಬೇರೆಯವರ ಉಲ್ಲೇಖ ಮಾಡುತ್ತಾ ಕೃಷ್ಣ ಕತೆಯನ್ನು ಮುಂದುವರೆಸುತ್ತೇನೆ.

## ಶಕಶೈಲೂಷರು, ಕನ್ನಡ ಸಾಹಿತ್ಯ ಕಲಾಸಂಘ, ಹಳೇಬೇರು ಹೊಸಚಿಗುರು

ಮೈಸೂರು ಸಂಗೀತ  ನಾಟಕ ಅಕಾಡಮಿಯಿಂದ ನಡೆದ ಶಿಬಿರದ ಅಂತ್ಯದ ವೇಳೆಗೆ ಶ್ರೀರಂಗರು ಅಲ್ಲಿಯ ಶಿಬಿರಾರ್ಥಿಗಳನ್ನು ಕರೆದು ಹೊಸದೊಂದು ನಾಟಕ ತಂಡ ಕಟ್ಟಿ ಎಂದು ಸಲಹೆ ನೀಡುತ್ತಾರೆ. ಅವರ ಸಲಹೆಯಂತೆ 'ಶಕಶೈಲೂಷರು' ತಂಡ ಪ್ರಾರಂಭವಾಗುತ್ತದೆ. ಈ ತಂಡಕ್ಕೆ ಬಿ.ವಿ.ಕಾರಂತರು ಶ್ರೀರಂಗರ ಏಕಾಂಕ ನಾಟಕ 'ಸಹನೌಭುನಕ್ತು' ಸಹನೆ ಮೀರಿತು ನಾಟಕವನ್ನು ಹಾಗೂ ಎ.ಕೆ.ರಾಮಾನುಜಂ ಅವರ 'ಗಾನಪ್ರಿಯ' ನಾಟಕವನ್ನು ನಿರ್ದೇಶಿಸುತ್ತಾರೆ. ಈ ನಾಟಕ 8 ಸೆಪ್ಟೆಂಬರ್ 1970ರ ಸಂಜೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶಿತವಾಗುತ್ತದೆ. ಈ ಎರಡೂ ನಾಟಕಗಳಿಗೂ ಕೃಷ್ಣಪ್ಪನವರು ಬೆಳಕಿನ ವಿನ್ಯಾಸ ಮಾಡಿದ್ದು ಅಲ್ಲದೆ ರಂಗಸಜ್ಜಿಕೆಯ ನಿರ್ಮಾಣಕ್ಕೆ ಕೈ ಜೋಡಿಸುತ್ತಾರೆ. 1 ಡಿಸೆಂಬರ್ 1970ರಲ್ಲಿ ಶಕಶೈಲೂಷರು ನಾಟಕ ತಂಡದಿಂದ ಶ್ರೀರಂಗರ 'ಸಂಧ್ಯಾಕಾಲ' ನಾಟಕ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶನವಾಗುತ್ತದೆ. ಈ ನಾಟಕ ಪ್ರದರ್ಶನದ ವಿಶೇಷತೆ ಏನೆಂದರೆ ಶ್ರೀರಂಗರು ಮತ್ತು ಬಿ.ವಿ.ಕಾರಂತರು ಈ ನಾಟಕದಲ್ಲಿ ಅಭಿನಯಿಸುತ್ತಾರೆ. ಈ ಪ್ರದರ್ಶನದ ಮತ್ತೊಂದು ವಿಚಾರ ಏನೆಂದರೆ ನಾಟ್ಯ ಮತ್ತು ರಂಗಭೂಮಿಗೆ ಸಂಬಂಧಿಸಿದ ಗ್ರಂಥ ಸಂಗ್ರಹಕ್ಕಾಗಿ ಈ ನಾಟಕ ಸಿದ್ಧಗೊಂಡು ಪ್ರದರ್ಶಿತವಾಗುತ್ತದೆ. ಅಂದಿನ ಟಿಕೆಟ್ ಬೆಲೆ ಎಷ್ಟು ಇತ್ತಪ್ಪಾ ಅಂದ್ರೆ 1, 2 ಮತ್ತು 3 ರೂಪಾಯಿಗಳು.

ಬೆಂಗಳೂರಿನಿಂದ ಮರಳಿದ ಕಾರಂತರು ದೆಹಲಿಯ ಸರ್ದಾರ್ ಪಟೇಲ್ ಸ್ಕೂಲಿನಲ್ಲಿ ಉಪಾಧ್ಯಾಯರಾಗಿರುತ್ತಾರೆ. ಕಾರಂತರು ಬೆಂಗಳೂರಿಗೆ ಬಂದು ಮತ್ತೆ ನಾಟಕಗಳನ್ನು ಮಾಡಿಸಬೇಕೆಂಬ ಉದ್ದೇಶದಿಂದ ಶಾಲೆಯ ಕೆಲಸಕ್ಕೆ ರಜೆ ಹಾಕಿ

ಬೆಂಗಳೂರಿಗೆ ಬರುತ್ತಾರೆ. ಆ ಸಂದರ್ಭದಲ್ಲಿ ಕೃಷ್ಣಪ್ಪನವರ ವಾಸಸ್ಥಾನ ರವೀಂದ್ರ ಕಲಾಕ್ಷೇತ್ರದಲ್ಲಿ. ತಾಲೀಮು ವೀಕ್ಷಣೆ, ನಾಟಕ ಪ್ರದರ್ಶನದ ಸಿದ್ಧತೆಗಳು, ಬೆಳಕು ವಿನ್ಯಾಸ, ಸೆಟ್ಸ್, ನೇಪಥ್ಯ ಕೆಲಸ ಅಂತೆಲ್ಲ ಸುತ್ತಾಡಿದ್ದೂ ಅಲ್ಲದೆ ಸಣ್ಣ ಪುಟ್ಟ ಕಂಟ್ರಾಕ್ಟರ್ ಕೆಲಸವನ್ನೂ ಮುಗಿಸಿ ಕೃಷ್ಣಪ್ಪನವರು ರಾತ್ರಿ ಕಳೆಯುತ್ತಿದ ಜಾಗ ರವೀಂದ್ರ ಕಲಾಕ್ಷೇತ್ರವಾಗಿತ್ತು. ಮನೆ ಮಠ ಎಲ್ಲವೂ ಅದೇ ಆಗಿತ್ತು. ಆಗ ಮೈಸೂರು ಸಂಗೀತ ನಾಟಕ ಅಕಾಡೆಮಿಯೂ ಸಹ ರವೀಂದ್ರ ಕಲಾಕ್ಷೇತ್ರದ ಮೇಲ್ಭಾಗದ ಆವರಣದಲ್ಲಿತ್ತು. ಅದರ ವ್ಯವಸ್ಥಾಪಕರಾಗಿದ್ದವರು ಗೋವಿಂದರಾಜು ಅನ್ನುವವರು. ಆಗಿನ ಕಾಲಕ್ಕೆ ದೂರವಾಣಿ ಎಂಬುದು ವಿರಳ. ಆದರೆ ರವೀಂದ್ರ ಕಲಾಕ್ಷೇತ್ರದಲ್ಲಿ ದೂರವಾಣಿ ಇತ್ತು. ಕಾರಂತರು ಯಾವಾಗ ಯಾವಾಗ ಬೆಂಗಳೂರಿಗೆ ಬರುತ್ತಿದ್ದರೂ ಆವಾಗೆಲ್ಲಾ ಕೃಷ್ಣಪ್ಪನವರಿಗೆ ತಿಳಿಸುವಂತೆ ಗೋವಿಂದರಾಜುರವರಿಗೆ ಫೋನ್ ಮಾಡಿ ಹೇಳುತ್ತಿದ್ದರು. ಒಮ್ಮೊಮ್ಮೆ ಕಲಾಕ್ಷೇತ್ರದಲ್ಲೇನಾದರೂ ಕೃಷ್ಣಪ್ಪನವರು ಇದ್ದರೆ ಮುಖತಃ ಸಂಭಾಷಣೆ ನಡೆಯುತ್ತಿತ್ತು. ಇವೆರಡೂ ಅಲ್ಲದೆ ಕೃಷ್ಣಪ್ಪ, ಲಾಲ್‌ಬಾಗ್ ಪೋರ್ಟರಸ್ತೆ, ದೊಡ್ಡಮಾವಳ್ಳಿ, ನಂ.45, ಚಿನ್ನಯ್ಯ ಗಾರ್ಡನ್‌ಗೆ ಪತ್ರ ಹಾಕಿಬಿಡುತ್ತಿದ್ರು. ಹೀಗೆ ನನ್ನ ಮತ್ತು ಕಾರಂತರ ನಡುವೆ ಸಂವಹನೆ ನಡೆಯುತ್ತಿತ್ತು ಅಂತ ಕೃಷ್ಣಪ್ಪನವರು ಹೇಳುತ್ತಾರೆ.

ಹೀಗೆ ಬೆಂಗಳೂರಿಗೆ ಬಂದ ಕಾರಂತರು 'ನಾಟ್ಯ ಸಂಘ' ಅರ್ಪಿಸಿ 'ಕಲಾಕುಂಜ' ಅಭಿನಯಿಸಿದ ನಾಟಕ 'ಶಾಂತಾತಾ ಕೋರ್ಟ್ ಚಾಲು ಹೈ' (ಸದ್ದು ವಿಚಾರಣೆ ನಡೀತಾ ಇದೆ) ನಾಟಕವನ್ನು ನಿರ್ದೇಶಿಸಿದರು. ಅದರಲ್ಲಿ ಕೃಷ್ಣಪ್ಪನವರು ಪಾತ್ರ ಮಾಡಿರುವ ವಿಚಾರಗಳನ್ನು ಈಗಾಗಲೇ ಹೇಳಿದ್ದವಾದ್ದರಿಂದ ಅದನ್ನು ಮುಂದುವರಿಸುವುದಿಲ್ಲ. ಈ ನಾಟಕದ ತಾಲೀಮಾಗಿದ್ದು ರವೀಂದ್ರಕಲಾಕ್ಷೇತ್ರದ 3ನೇ ಮಹಡಿಯಲ್ಲಿ. ಈ ನಾಟಕದ ತಾಲೂಮು ಸಂಜೆಯ ಹೊತ್ತು ನಡೆಯುತ್ತಿದ್ದರೆ, ಬೆಳಗಿನ ವೇಳೆಯಲ್ಲಿ 'ಕನ್ನಡ ಸಾಹಿತ್ಯ ಕಲಾಸಂಘಕ್ಕೆ' 'ಏವಂ ಇಂದ್ರಜಿತ್' ನಾಟಕವನ್ನು ಕಾರಂತರು ತಾಲೀಮು ನಡೆಸುತ್ತಿದ್ದರು. ಈ ನಾಟಕದ ತಾಲೀಮು ಸಹ ರವೀಂದ್ರ ಕಲಾಕ್ಷೇತ್ರದ 3ನೇ ಮಹಡಿಯಲ್ಲಿ ನಡೆಯುತ್ತಿತ್ತು. ಈ ನಾಟಕದಲ್ಲಿ 75 ದೃಶ್ಯಗಳಿದ್ದವು. ಈ 75 ದೃಶ್ಯಗಳನ್ನು ವಿಶೇಷವಾದ ಬೆಳಕಿನ ವಿನ್ಯಾಸದ ಪ್ರದರ್ಶನ ಮಾಡಬೇಕಾದ ಬಹು ದೊಡ್ಡದಾದ ಜವಾಬ್ದಾರಿ ಕೃಷ್ಣನವರದಾಗಿರುತ್ತದೆ. ಕನಸಿನ ದೃಶ್ಯಕ್ಕೆ ಬೆಳಕನ್ನು ಬಳಸಿದ್ದು ರಾತ್ರಿ – ಹಗಲಿನ ದೃಶ್ಯಗಳನ್ನು ಕಟ್ಟಿಕೊಟ್ಟದ್ದು, ಸೂತ್ರಧಾರನಾಗಿ, ಕವಿಯಾಗಿ ಬರುವ ಒಬ್ಬನೇ ಪಾತ್ರಧಾರಿಯನ್ನು ಬೇರೆ ಬೇರೆ ಕೋನಗಳಿಂದ ಬೆಳಕನ್ನು ಬೀರಿ ಬೇರೆ ಬೇರೆಯಾಗಿ ತೋರಿದ್ದು ವಿಶೇಷ ಹಾಗೂ ವಿಭಿನ್ನವಾಗಿತ್ತು. ಈ ಕುರಿತು ಕಾರಂತರು ಲೇಖನದಲ್ಲಿ ಬರೆದಿರುವುದನ್ನು ತಾವು ಈಗಾಗಲೇ ಓದಿರುತ್ತೀರಿ. ಈ ನಾಟಕಕ್ಕೆ ಕೃಷ್ಣಪ್ಪನವರು 20 ಸ್ಪಾಟ್‌ಗಳನ್ನು ಬಳಸುತ್ತಾರೆ. ಇದರಲ್ಲಿ ವಿಶೇಷವಾದ ಎಫೆಕ್ಟ್‌ಗಳಿಗೆ ಬಳಸುವಂತಾ ಲೈಟ್‌ಗಲಾದ ಸ್ಪೋಕರ್, ಡಿಂಕಿ, ಫಿಜ್ನರ್‌ಗಳನ್ನು ಬಳಸಲಾಗುತ್ತಿತ್ತು.

## ಸ್ನೋಕರ್, ಡಿಂಕಿ, ಪ್ರಜ್ನರ್ ಹಾಗೂ ನೇಪಥ್ಯದ ಮೇಲೆ ಬೆಳಕು

ಹೇಳಿ ಕೇಳಿ ಕೃಷ್ಣಪ್ಪನವರು ನೇಪಥ್ಯದ ಹಿನ್ನಲೆಯಿಂದ ಬಂದವರು. ಸಂಘಟನೆ, ನೇಪಥ್ಯ, ಬೆಳಕು, ಈ ಕ್ಷೇತ್ರಗಳಿಗೆ ತಮ್ಮನ್ನು ಅರ್ಪಿಸಿಕೊಂಡವರಾಗಿದ್ದರು. ತಮ್ಮ ರಂಗಭೂಮಿಯ ಪ್ರಾರಂಭದ ದಿನಗಳಲ್ಲಿ ಅಂದರೆ ಸ್ವತಃ ಅವರು ನಿರ್ದೇಶನಕ್ಕೆ ಮುಖ ಮಾಡುವ ಮುನ್ನ ನೇಪಥ್ಯವನ್ನು ತಮ್ಮ ಕಾರ್ಯಕ್ಷೇತ್ರ ಮಾಡಿಕೊಂಡಿದ್ದರು. ಬೆಳಕಿನ ವಿನ್ಯಾಸದಲ್ಲಿ ಹೆಸರು ಮಾಡಿದ್ದವರು, ಆಗಿನ ಕಾಲಕ್ಕೆ ಅವರು ಹೆಸರಾಂತ ರಂಗ ತಂತ್ರಜ್ಞರಾಗಿದ್ದವರು. ಇಂತಹವರ ಬಗ್ಗೆ ಪುಸ್ತಕ ಬರೆಯಬೇಕಾದರೆ ಅವರು ಬಳಸುತ್ತಿದ್ದ ಲೈಟ್ಸ್‌ಗಳು, ರಂಗಪರಿಕರಗಳು, ಹೊಸ ಪ್ಲಾಟುಗಳು, ಪ್ರಚಾರ ಪರಿಕರಗಳು ಹಾಗೂ ತಂತ್ರಗಳು, ಕಟ್‌ಹೌಟ್‌ಗಳು, ಉಳಿ, ಸುತ್ತಿಕೆ, ರಂಪ, ಅತ್ತರಿ, ಮೊಳೆ, ನಯಲ್‌ಪಿಂಚರ್, ಇವುಗಳ ಬಗ್ಗೆ ನಾನು ಇಲ್ಲಿ ಹೇಳಲಿಲ್ಲ ಎಂದರೆ ಕೃಷ್ಣಪ್ಪನವರ ರಂಗ ಚರಿತ್ರೆ ಪೂರ್ಣವಾಗಲ್ಲ. ಹಾಗೂ ಅಂದಿನ ದಿನಗಳ ರಂಗತಂತ್ರಜ್ಞಾನದ ಮೇಲೂ ನಾನು ಬೆಳಕು ಚಲ್ಲಿದ ಹಾಗೆ ಆಗುವುದಿಲ್ಲ. ಆದ್ದರಿಂದ ನಾನು ಅವುಗಳ ಕುರಿತು ಸ್ವಲ್ಪ ವಿವರಕ್ಕೆ ಹೋಗುತ್ತೇನೆ.

**ಸ್ನೋಕರ್ :** ಪರ್ಟಿಕಿಲರ್ರಾಗಿ ಈ ಲೈಟನ್ನು ಸ್ಪಾಟ್‌ಲೈಟಾಗಿ ಬಳಸಲಾಗುತ್ತಿತ್ತು. ಕೇಂದ್ರಪಾತ್ರ, ಕೇಂದ್ರ ವಿಷಯ, ಪ್ರಧಾನ ಸಂದರ್ಭಗಳಲ್ಲಿ ಇದರ ಉಪಯೋಗವಾಗುತ್ತಿತ್ತು. ಲೈಟಿನ ಏರಿಯ ಮಾಡಿಕೊಂಡರೆ ಆ ಬೆಳಕು ಮತ್ತೆಲ್ಲೂ ಸೋರಿ ಹೋಗುತ್ತಿರಲಿಲ್ಲ. ಬೇರೆ ಕಡೆಗೆ ಹರಡುತ್ತಿರಲಿಲ್ಲ. ಬಹಳ ಸೂಕ್ಷ್ಮ ವಿನ್ಯಾಸಗಳನ್ನು ಮಾಡಲು ಈ ಲೈಟನ್ನು ಬಳಸಲಾಗುತ್ತಿತ್ತು. ಈ ಲೈಟ್ 500 ವಾಟ್ಸ್ ಸಾಮರ್ಥ್ಯವನ್ನು ಹೊಂದಿದ್ದ ಲೈಟ್ ಆಗಿರುತ್ತಿತ್ತು.

**ಡಿಂಕಿ :** ಇದೂ ಸಹ ಪರ್ಟಿಕುಲರಾಗಿ ಸ್ಪಾಟ್‌ಗೆ ಹಾಗೂ ಎಫೆಕ್ಟ್‌ಗಾಗಿ ಬಳಸಬಹುದಾಗಿತ್ತು. ಸ್ನೋಕರ್ ಮತ್ತು ಡಿಂಕಿ ಎರಡೂ ಒಂದೇ ಪರಿಣಾಮಕ್ಕೆ ಬಳಸುತ್ತಿದ್ದರೂ ಇವುಗಳ ರೂಪ ಬೇರೆ ಬೇರೆಯಾಗಿರುತ್ತಿತ್ತು. ಇವುಗಳನ್ನು ಸಾಂಕೇತಿಕವಾಗಿ ವಸ್ತುಗಳನ್ನು ಹೇಳಬೇಕಾದ ಸಂದರ್ಭಗಳಲ್ಲಿ ಬಳಸಲಾಗುತ್ತಿತ್ತು. ಉದಾಹರಣೆಗೆ : ಏವಂ ಇಂದ್ರಜಿತು ನಾಟಕದಲ್ಲಿ ಸೂತ್ರಧಾರ ಪ್ರವೇಶಿಸಿದಾಗ ಅವನ ಮುಖದ ಮೇಲೆ ಮಾತ್ರವೇ ಬೆಳಕು ಬಿಡಲಾಗುತ್ತಿತ್ತು ಹಾಗೂ ಅದೇ ವ್ಯಕ್ತಿ ಕವಿಯಾಗಿ ಬಂದಾಗ ಆತನ ದೇಹದ ಮೇಲೆ ಬೆಳಕನ್ನು ಬಿಡಲಾಗುತ್ತಿತ್ತು. ಹೀಗೆ ಈ ಲೈಟ್ಸ್‌ಗಳಿಂದ ವಿನ್ಯಾಸ ಮಾಡಲಾಗುತ್ತಿತ್ತು.

**ಪ್ರಜ್ನರ್ :** ರಂಗದ ತುಂಬಾ ಸಂಯೋಜಿತವಾದ ದೃಶ್ಯಗಳನ್ನು ತೋರಲಿಕ್ಕೆ ಈ ಲೈಟ್ಸ್‌ಗಳನ್ನು ಬಳಸಲಾಗುತ್ತಿತ್ತು. ರಂಗದ ಎಲ್ಲಾ ಭಾಗಗಳಿಗೆ ಬೆಳಕು ಹರೆಸುವ ಶಕ್ತಿ ಈ

ಲೈಟ್ಸ್‌ಗಳಿಗೆ ಇರುತ್ತದೆ. ಇವು 2000 ವ್ಯಾಟ್ಸ್‌ನ ಸಾಮರ್ಥ್ಯವನ್ನು ಪಡೆವ ಬೆಳಕಿನ ಬುರುಡೆಯಾಗಿರುತ್ತದೆ.

**ಜನರಲ್ ಲೈಟ್ಸ್ :** ಈ ರೀತಿಯ ಲೈಟ್ಸ್‌ಗಳಿಂದಲೂ ಸಹ ಬೆಳಕನ್ನು ರಂಗದ ತುಂಬಾ ಹರಡಬಹುದಾಗಿತ್ತು. ಇದರಲ್ಲಿ ವಿಶೇಷವೆಂದರೆ 500, 1000 ವ್ಯಾಟ್ಸ್‌ನ ಸಾಮರ್ಥ್ಯವುಳ್ಳ ಲೈಟ್ಸ್‌ಗಳು ಬರುತ್ತಿದ್ದವು. ಕನಸಿನ ದೃಶ್ಯಗಳು, ರಾತ್ರಿ ದೃಶ್ಯಗಳು, ರಮ್ಯ ದೃಶ್ಯಗಳು, ಕಾಯಂ ದೃಶ್ಯಗಳಿಗಾಗಿ ಈ ಲೈಟ್ಸ್‌ಗಳಿಗೆ ಸಂದರ್ಭಕ್ಕೆ ತಕ್ಕ ಹಾಗೆ, ಅರ್ಥಪೂರ್ಣವಾಗಿ ದೃಶ್ಯವನ್ನು ಸಂಕೇತಿಸಲು, ಅಥವಾ ದೃಶ್ಯದ ಅರ್ಥಕ್ಕೆ ಸರಿಹೊಂದುವಂತೆ ಹಳದಿ, ನೀಲಿ, ಕೆಂಪು, ಹಸಿರು ಬಣ್ಣದ ಫಿಲ್ಟರ್‌ಗಳನ್ನು ಬಳಲಾಗುತ್ತಿತ್ತು. ಈ ರೀತಿಯ ಫಿಲ್ಟರ್ಸ್‌ಗಳನ್ನು ಬಳಸಿದಾಗ ಆ ದೃಶ್ಯಕ್ಕೆ ವಿಶೇಷ ಅರ್ಥಕಲ್ಪನೆಗಳು ಬಂದುಬಿಡುತ್ತಿತ್ತು. ಆ ಮೂಲಕ ಪ್ರೇಕ್ಷಕನ ರಸೋತ್ಪತ್ತಿಗೆ, ನಾಟಕದ ಸೌಂದರ್ಯವರ್ಧನಕ್ಕೆ ಅಥವಾ ದೃಶ್ಯವನ್ನು ಅರ್ಥೈಸಲಿಕ್ಕೆ ಈ ಲೈಟ್ಸ್‌ಗಳನ್ನು ಹಾಗೂ ಫಿಲ್ಟರ್‌ಗಳನ್ನು ಬಳಸಲಾಗುತ್ತಿತ್ತು.

ಬೆಳಕಿನ ವಿನ್ಯಾಸಕ್ಕೆ ಅನ್ನುವುದಕ್ಕೆ ಬದಲಾಗಿ ಬೆಳಕಿನ ಉಪಯೋಗಕ್ಕಾಗಿ 1964–65ರ ಸಮಯದಲ್ಲಿ ಇದ್ದ ಬೆಳಕ ಪರಿಕರಗಳು ಎಂದರೆ 'ಬ್ಯಾಸನ್ ಲೈಟ್ಸ್‌ಗಳು', 'ಫುಟ್‌ಲೈಟ್'ಗಳು ಹಾಗೂ 'ಸ್ಟಿಕ್ ಲೈಟ್ಸ್‌ಗಳು' ಆಗೇನು 'ಡಿಮರ್'ಗಳ ಪರಿಕಲ್ಪನೆಯೇ ಇರಲಿಲ್ಲ. ಸ್ವಿಚ್‌ಗಳು ಮಾತ್ರ ಇದ್ದವು. ಅವುಗಳನ್ನು ಬಳಸಿಯೇ ಅಂದರೆ ಸ್ವಿಚ್‌ಗಳ ಆನ್ ಆಫ್ ಮಾಡಿಯೇ ದೃಶ್ಯ ಬದಲಾವಣೆ ಮಾಡಲಾಗುತ್ತಿತ್ತು. ಡಿಮ್ಮರ್ ಬೇಕು ಎಂದವರು ಪ್ರಭಾತ್‌ನಿಂದ ಹೆಚ್ಚು ಹಣ ಕೊಟ್ಟು ಡಿಮ್ಮರ್ ಮತ್ತು ಪ್ಲಾಟ್‌ಗಳನ್ನು ತರಬೇಕಾಗಿತ್ತು. ಇವುಗಳ ಬಳಕೆ ಹೆಚ್ಚಾಗಿದ್ದು ಯಾವಾಗ ಎಂದರೆ 1970 ನಂತರ ದಿನಗಳಲ್ಲಿ ಎಂದರೆ ತಪ್ಪಾಗಲಿಕ್ಕಿಲ್ಲ. ಅಂದರೆ ಎನ್.ಎಸ್.ಡಿ.ಯಿಂದ ನಿರ್ದೇಶಕರು ಇಲ್ಲಿ ನಾಟಕ ಮಾಡಲು ಬಂದ ನಂತರವೇ. ಆಧುನಿಕ ಬೆಳಕಿನ ಪರಿಕರಗಳು ಸಹ ಕನ್ನಡ ರಂಗಭೂಮಿಗೆ ಪರಿಚಿತವಾದವು! ಏವಂ ಇಂದ್ರಜಿತು ನಾಟಕದ 72 ದೃಶ್ಯಗಳನ್ನು ಆಧುನಿಕ ಬೆಳಕಿನ ವಿನ್ಯಾಸ ಬಳಸಿಕೊಂಡು ಪ್ರದರ್ಶಿಸಲಾಯಿತು.

**ಪರಿಕರಗಳು :** ರಂಗಕ್ಕೆ ಬಳಸುತ್ತಿದ್ದ 'ಫ್ರಂಟ್ ಕರ್ಟನ್,' 'ಬ್ಯಾಕ್ ಕರ್ಟನ್,' 'ಸೈಕ್ಲೋರಾಮ', 'ಸೈಡ್‌ಮಿಗ್ಸ್', 'ಫ್ರಿಲ್‌ಗಳು', ಇವುಗಳನ್ನು ಸ್ಪರ್ಧಾ ನಾಟಕಗಳಿಗೆ ಬಳಸಲಾಗುತ್ತಿತ್ತು. ಇವಿಷ್ಟು ಒಂದು ನಾಟಕಕ್ಕೆ ಅತ್ಯಗತ್ಯವಾಗಿ ಬೇಕಾಗಿದ್ದ ಪರಿಕರಗಳು, ಇವುಗಳು ಹಾಗೂ ಲೈಟ್ಸ್‌ಗಳನ್ನು ಕಟ್ಟಲು 'ಸರ್ವೆ ಮರಗಳು', 'ಗ್ಯೆವೈರ್'ಗಳನ್ನು ಬಳಸಲಾಗುತ್ತಿತ್ತು. ಆಗ ನಾಟಕಕ್ಕೆ ಸೆಟ್ ಹಾಕುವುದು ಎಂದರೆ ಹೌಸ್ ಪ್ಲಾಟ್‌ಗಳನ್ನು (ಮನೆ ನಿರ್ಮಾಣ) ನಿರ್ಮಿಸುವುದು ಎಂತಲೇ ಅರ್ಥ. ಈಗಾಗಲೇ ಸಿದ್ಧವಿದ್ದ ಅಥವಾ ಹೊಸದಾಗಿ ನಾಟಕಕ್ಕೆ ನಿರ್ಮಿಸಿದ್ದ ಬಾಗಿಲು, ಕಿಟಕಿ, ಫ್ರೇಂಗಳು, ಸೆಲ್ಫ್‌ಗಳ ಚಿತ್ರ

ಅಂದರೆ ಪುಸ್ತಕಗಳ ಕಪಾಟಿನ ಚಿತ್ರ, ಬೇರೆ ಬೇರೆ ರೀತಿಯ ಕ್ಯಾಲೆಂಡರ್‌ಗಳು ದೇವರ ಚಿತ್ರವಿರುವ ಫೋಟೋಗಳು, ಕುರ್ಚಿ, ಸೋಫಾಗಳು, ಟೇಬಲ್‌ಗಳು, ಹೂಗುಚ್ಛದ ಸ್ಟ್ಯಾಂಡುಗಳು, ಪೋನ್ ಮತ್ತು ಅದರ ಸ್ಟ್ಯಾಂಡುಗಳು, ನಂತರ ಕಛೇರಿ ದೃಶ್ಯಕ್ಕೆ, ಕುರ್ಚಿಮೇಜುಗಳು, ಆಸ್ಪತ್ರೆ ದೃಶ್ಯಕ್ಕೆ ಬಿಳಿಯ ಬಣ್ಣದ ಪರದೆ, ಕುರ್ಚಿ ಮೇಜುಗಳು, ಬಣ್ಣದ ನೀರು ತುಂಬಿದ ದೊಡ್ಡ ಚಿಕ್ಕ ಸೀಸೆಗಳು, ವಿಶಿಷ್ಟವಾದ ಶ್ರೀಮಂತರ ಮನೆ ತೋರಲು ಗ್ರಾಮ ಫೋನು, ಸೋಫಾ, ಟೀಪಾಯಿ ಫೋನು, ಉದ್ದನೆಯ ಫೋನ್ ಸ್ಟಾಂಡ್, ರೇಡಿಯೋ ಇತರ ರಿಯಲಿಸ್ಟಿಕ್ ಪರಿಕರಗಳು 1967ರ ನಂತರ ರಂಗದ ಮೇಲೆ ಬಂದವು. ಇವು ಸಹ 70ರ ದಶಕದ ನಂತರ ಕಣ್ಮರೆಯಾಗಿ ಸಾಕೇಂತಿಕ ರಂಗಸಜ್ಜಿಕೆ ರಂಗವನ್ನು ಆಕ್ರಮಿಸಿತು. ಏವಂ ಇಂದ್ರಜಿತು ನಾಟಕದಲ್ಲಿ ಯಾವುದೇ ರಂಗಸಜ್ಜಿಕೆಯನ್ನು ಬಳಸದೆ ಖಾಲಿರಂಗದಲ್ಲಿ ಬರೆ ಸೈಕ್ಲೋರಾಮವನ್ನು ಬಳಸಿ, ಗುಂಪುನಟರಿಂದಲೇ ವಿನ್ಯಾಸಗೊಳಿಸಿದ ದೃಶ್ಯಸಂಯೋಜನೆಗಳ ಮೂಲಕ ನಾಟಕವನ್ನು ರಂಗಕ್ಕೆ ತರಲಾಯಿತು. ರಂಗ ಪ್ರಚಾರಿಕೆಗಳು :1. ಕರಪತ್ರ, 2. ಲೀಥೋ ಪೋಸ್ಟರ್, 3. ಬ್ಯಾನರ್, 4. ಜಟಕಗಾಡಿ ಅಥವಾ ಆಟೋಪ್ರಚಾರ, ಇವುಗಳಾಗಿದ್ದವು.

**1. ಕರಪತ್ರಗಳು :** ನಾಟಕ ಪ್ರದರ್ಶನದ ವಿವರಗಳನ್ನು ಕುರಿತು ಕರಪತ್ರಗಳನ್ನು ಮುದ್ರಿಸಿ ಅದನ್ನು ಕೆಲವು ನಿರ್ದಿಷ್ಟ ಜಾಗಗಳಲ್ಲಿ ಹಂಚಲಾಗುತ್ತಿತ್ತು. ಮೊದಮೊದಲು ಜಾಬ್ ಪ್ರಿಂಟರ್ಸ್ ಬಳಿ ಇವುಗಳನ್ನು ಮುದ್ರಿಸಲಾಗುತ್ತಿತ್ತು. ಆನಂತರ ಕಲಾತ್ಮಕ ಕರಪತ್ರಗಳು ಪರಿಚಯವಾದ ನಂತರ ಗಾಂಧಿಬಜಾರ್‌ನ ಬಾ.ಕಿ.ನ. ಅವರ 'ಲಿಪಿ' ಮುದ್ರಣಾಲಯ ಹಾಗೂ ಶೇಷಾದ್ರಿಪುರಂನಲ್ಲಿನ ಮನುಪಾಟೀಲರ 'ರಜನಿ ಪ್ರಿಂಟರ್ಸ್' ಮುದ್ರಣಾಲಯದಲ್ಲಿ 2000 ಅಥವಾ 3000 ಪ್ರತಿಗಳನ್ನು ಮುದ್ರಿಸಲಾಗುತ್ತಿತ್ತು. ಈ ಕರಪತ್ರಗಳನ್ನು ಗಾಂಧಿನಗರದಲ್ಲಿದ್ದ ಗುಬ್ಬಿ ವೀರಣ್ಣ ರಂಗಮಂದಿರ, ಸುಭಾಷ್‌ನಗರ ಕೆರೆ (ಈಗಿನ ಬಿ.ಎಂ.ಟಿ.ಎಸ್.ಬಸ್ ನಿಲ್ದಾಣ) ಆವರಣದಲ್ಲಿದ್ದ ಹಿರಣ್ಣಯ್ಯ ಮಿತ್ರ ಮಂಡಲಿಯವರು ನಿರ್ಮಿಸಿದ ರಂಗಮಂದಿರ, ಕಲಾಸಿಪಾಳ್ಯದ ಬಳಿಯಿದ್ದ ಎಸ್‌ಎಲ್‌ಎಸ್ ಕಾಲೇಜಿನ ಆವರಣದ ಮಹದೇವಸ್ವಾಮಿ ಕಂಪನಿ ನಿರ್ಮಿಸಿದ್ದ ರಂಗಮಂದಿರ, ಕನ್ನಡ ಸಾಹಿತ್ಯ ಪರಿಚತ್‌ನ ಸಭಾಂಗಣ, ಗಾಂಧಿಬಜಾರಿನ ನ್ಯಾಷನಲ್ ಕಾಲೇಜು, ಹಾಗೆಯೇ ಇನ್ನಿತರ ಶಾಲಾ ಕಾಲೇಜುಗಳು, ಕಾರ್ಖಾನೆಗಳಲ್ಲಿ ಈ ಕರಪತ್ರಗಳನ್ನು ಹಂಚಲಾಗುತ್ತಿತ್ತು. ಇದರ ಮುದ್ರಣದ ಜವಾಬ್ದಾರಿ ಹಾಗೂ ಹಂಚಿಕೆಯ ಜವಾಬ್ದಾರಿ ಎಲ್ಲವೂ ಬ್ಯಾಕ್‌ಸ್ಟೇಜ್ ಪಡೆಯಾಗಿದ್ದ ವಿ–4ನದಾಗಿತ್ತು. ಇವರ ಜೊತೆಗೆ ಆಯಾ ನಾಟಕ ತಂಡಗಳ ಕಲಾವಿದರೂ ಸಹ ಕರಪತ್ರಗಳನ್ನು ಹಂಚುತ್ತಿದ್ದರು.

**2. ಲಿಥೋ ಪೋಸ್ಟರ್ :** ಎರಡು ಎರಡೂವರೆ ಅಡಿ ಅಳತೆಯಲ್ಲಿ, 500 ಅಥವಾ

1000 ಪ್ರತಿಗಳನ್ನು ಗಾಂಧಿನಗರದಲ್ಲಿದ್ದ ಲಿಥೋಪ್ರೆಸ್ (ಸಿನಿಮಾ ಪೋಸ್ಟರ್‌ಗಳನ್ನು ಮಾಡುತ್ತಿದ್ದ ಜಾಗ) ಗಳಲ್ಲಿ ಈ ಪೋಸ್ಟರ್‌ಗಳನ್ನು ಅಚ್ಚು ಹಾಕಿಸಲಾಗುತ್ತಿತ್ತು. ಇವುಗಳನ್ನು ವಿ–4 ಕಲಾವಿದರು ಸರ್ವ ಸನ್ನದ್ಧರಾಗಿ ಅಂದರೆ ಸೈಕಲ್, ಮೈಲ್‌ತುತ್ತ ಹಾಕಿದ್ದ ಮೈದಾ, ಪೋಸ್ಟರ್‌ಗಳ ಸುರುಳಿ, ಎಲ್ಲವನ್ನು ಸಿದ್ಧ ಮಾಡಿಕೊಂಡು ಗಾಂದಿಬಜಾರ್‌ನ ಕೆಲಸ್ಥಳಗಳು, ಮಿನರ್ವಸರ್ಕಲ್, ಮೆಜಸ್ಟಿಕ್ ಏರಿಯಾ, ಮಲ್ಲೇಶ್ವರಂ, ಶೇಷಾದ್ರಿಪುರಂ, ಕೆ.ಆರ್.ಸರ್ಕಲ್, ಇನ್ನಿತರ ಸ್ಥಳಗಳ ಸರ್ಕಾರಿ ಶಾಲೆ, ಸರ್ಕಾರಿ ಕಛೇರಿಯ ಕಾಂಪೌಂಡ್‌ಗಳಿಗೆ ಪೋಸ್ಟರ್‌ಗಳನ್ನು ಅಂಟಿಸಲಾಗುತ್ತಿತ್ತು. ಸಾಹಿತ್ಯ ಪರಿಷತ್‌ನಲ್ಲಿ ಸ್ಪರ್ಧೆ ಇದ್ದಾಗ ಅಲ್ಲಿ, ಟೌನ್ ಹಾಲ್‌ನಲ್ಲಿ ಸ್ಪರ್ಧೆ ಇದ್ದಾಗ ಅಲ್ಲಿ, ಕಲಾಕ್ಷೇತ್ರದಲ್ಲಿ ನಾಟಕವಿದ್ದಾಗ ಅಲ್ಲಿ, ಈ ಎಲ್ಲಾ ಸ್ಥಳಗಳಲ್ಲಿ ಬೆಳಿಗ್ಗೆ 3–4 ಗಂಟೆಗೇ ಎದ್ದು ಗಮ್ ತಯಾರಿ ಮಾಡಿಕೊಂಡು ಬೆಳಿಗ್ಗೆ 4.30 ರಿಂದ 6.30ರವರೆಗೂ ಮೇಲ್ಕಾಣಿಸಿದ ಏರಿಯಾಗಳನ್ನೆಲ್ಲ ಸುತ್ತಾಡಿ ಅಲ್ಲಲ್ಲೇ ಪೋಸ್ಟರ್‌ಗಳನ್ನು ಅಂಟಿಸಲಾಗುತ್ತಿತ್ತು.

ಕೃಷ್ಣಪ್ಪನವರ ಬಳಿಯಲ್ಲಾಗಲೀ, ಆರ್.ನಾಗೇಶ್‌ರವರ ಬಳಿಯಲ್ಲಾಗಲಿ ಸೈಕಲ್ ಇರಲಿಲ್ಲ, ಮಿನರ್ವಸರ್ಕಲ್‌ನಲ್ಲಿದ್ದ ಸೈಕಲ್ ಶಾಪಿನಿಂದ ಕೃಷ್ಣಪ್ಪನವರು ಅಥವಾ ಮಲ್ಲೇಶ್ವರಂನಲ್ಲಿದ್ದ ಸೈಕಲ್ ಶಾಪಿನಿಂದ ಆರ್.ನಾಗೇಶ್‌ರವರು ಸೈಕಲ್‌ನ್ನು ಬಾಡಿಗೆ ತರುತ್ತಿದ್ದರು. ಬಸವರಾಜು ಬಳಿ ಸ್ವಂತ ಸೈಕಲ್ ಇದ್ದು ಆತನ ಸೈಕಲ್‌ನ್ನು ಈ ಕೆಲಸಗಳಿಗೆ ಬಳಸಲಾಗುತ್ತಿತ್ತು. ಶಿವಸ್ವಾಮಿ ಹ್ಯಾಂಡಿಕ್ಯಾಪ್ಡ್ ಆಗಿದ್ದರಿಂದ ಇಂತಹ ಕೆಲಸಗಳಿಗೆ ಬರಲಾಗುತ್ತಿರಲಿಲ್ಲ. ಆದರೆ ಅವನ ರಂಗನಿಷ್ಠೆ, ಕಾಯಕನಿಷ್ಠೆಗಾಗಿ ಅವನನ್ನು ನಾವು ನಮ್ಮ ಬಳಗದಲ್ಲಿ ಅಂದರೆ ವಿ–4ನ ಒಬ್ಬ ಸದಸ್ಯನನ್ನಾಗಿ ಮಾಡಿಕೊಂಡಿದ್ದೆವು ಎನ್ನುತ್ತಾರೆ ಕೃಷ್ಣಪ್ಪನವರು.

**3. ಬ್ಯಾನರ್‌ಗಳು :** ಆಗೆಲ್ಲ ಬಟ್ಟೆಯನ್ನು ಬಳಸಿ ಬ್ಯಾನರ್‌ಗಳನ್ನು ಸಿದ್ಧಮಾಡಲಾಗುತ್ತಿತ್ತು. ಮರದ ರಿಪೀಸ್ ಪಟ್ಟಿಯ ಫ್ರೇಂಗಳನ್ನು ತಯಾರಿಸಿಕೊಂಡು ಆ ಫ್ರೇಂಗಳಿಗೆ ಬಟ್ಟೆ ಹೊಡೆದು ಅವುಗಳಿಗೆ ಬಣ್ಣಗಳನ್ನು ಬಳಿದು ಅದರ ಮೇಲೆ ನಾಟಕದ ವಿವರಗಳು ಹಾಗೂ ಸಾಂಕೇತಿಕ ಚಿತ್ರಗಳನ್ನು ಕಲಾವಿದರಿಂದ ಬರೆಸಿ ಬ್ಯಾನರ್‌ಗಳನ್ನು ಸಿದ್ಧವಾಗುತ್ತಿದ್ದ ಕ್ರಮ ಇತ್ತು.

5x8 ಅಡಿ ಅಳತೆಯ ಬ್ಯಾನರ್‌ಗಳನ್ನು ಕಲಾಕ್ಷೇತ್ರದ ಮುಂದೆಯೂ ಹಾಗೂ 3x4 ಅಡಿ ಅಳತೆಯ ಬ್ಯಾನರ್‌ಗಳನ್ನು ಟೌನ್ ಹಾಲ್ ಮುಂದೆ, ಅಲ್ಲದೆ ಸ್ಪರ್ಧೆ ಎಲ್ಲೆಲ್ಲಿ ನಡೆಯುತ್ತಿದ್ದವೋ ಅಲ್ಲಲ್ಲೆ ಮಾತ್ರ ಬ್ಯಾನರ್‌ಗಳನ್ನು ಕಟ್ಟಲಾಗುತ್ತಿತ್ತು. ಏಕೆಂದರೆ ಇದರ ನಿರ್ಮಾಣ ದುಬಾರಿ. ಮತ್ತೂ ಹೆಚ್ಚು, ಹೆಚ್ಚು, ಮಾನವ ಸಂಪನ್ಮೂಲವನ್ನೂ ದೈಹಿಕ

ಶಕ್ತಿಯನ್ನೂ ಅವಲಂಬಿಸುತ್ತಾದ್ದರಿಂದ 1 ಅಥವಾ 2 ಬ್ಯಾನರ್‌ಗಳನ್ನು ಮಾತ್ರ ಮಾಡಲಾಗುತ್ತಿತ್ತು.

2 ಅಥವಾ 3 ಇಂಚಿನ ರೀಪರ್ ಪಟ್ಟಿಗಳನ್ನು ಬೊಂಬು ಬಜಾರ್‌ನಲ್ಲಿ ಕೊಂಡು ತಂದು ಅದನ್ನು ಬೇಕಾದ ಅಳತೆಗೆ ಕಟ್ ಮಾಡಿಕೊಂಡು ನಾಲ್ಕೂ ಮೂಲೆಗಳನ್ನು ಜೋಡಿಸಿಕೊಂಡು, ನಾಲ್ಕೂ ಕಾರ್ನರ್‌ಗಳಿಗೆ ಒಂದೂವರೆ ಇಂಚಿನ ಮೊಳಗಳನ್ನು ಹೊಡೆದ ಫ್ರೇಂಗಳನ್ನು ಸಿದ್ಧಮಾಡಿಕೊಳ್ಳಲಾಗುತ್ತಿತ್ತು. ಸುತ್ತಿಗೆ, ಒಂದೂವರೆ ಅಥವಾ ಎರಡು ಅಂಗುಲದ ಮೊಳೆ, ನೈಲ್‌ಪಿಂಚರ್, ಅತ್ತರಿ, ರಂಪ, ಬಾಚಿಉಳಿ, ಗಾಡಿ ಉಳಿ, ಆಸ್ಕಾ ಬ್ಲೇಡು, ಫ್ರೇಮು, ಸ್ಕ್ರೂ ಡ್ರೈವರ್ ಈ ಎಲ್ಲಾ ಸಾಮಾಗ್ರಿಗಳು ಇದ್ದ ಟೂಲ್‌ಕಿಟ್ ವಿ–4ನಲ್ಲಿದ್ದವು. ಈ ಎಲ್ಲಾ ಸಾಧನಗಳಿಂದ ತಯಾರಿ ಮಾಡಿಟ್ಟುಕೊಂಡಿದ್ದ ಫ್ರೇಮ್‌ಗೆ ಕೋರಾಬಟ್ಟೆಯನ್ನು ಸ್ಟ್ರಿಪಾಗಿ ಎಳೆದು ಟ್ಯಾಕ್ಸ್‌ನೈಲ್‌ಗಳಿಂದ ಹೊಡೆದು ಖಾಲಿ ಬ್ಯಾನರ್ ಸಿದ್ಧಮಾಡಿಕೊಳ್ಳಲಾಗುತ್ತಿತ್ತು. ಈ ಖಾಲಿ ಬ್ಯಾನರ್ ಮೇಲೆ ವಿ–4ನ ಮತ್ತೊಬ್ಬ ಸಹಪಾಠಿಯಾಗಿದ್ದ ಆರ್ಕಿಟೆಕ್ಟ್ ವಿದ್ಯಾರ್ಥಿ ಸಭಾಪತಿಯು ಲೆಟರಿಂಗ್ಸ್ ಮಾಡುತ್ತಿದ್ದರು.

ಇವುಗಳನ್ನು ಕೆಲವು ದಿನಗಳು ನಾಗೇಶ ಅವರ ಮಲ್ಲೇಶ್ವರಂನಲ್ಲಿನ ಮನೆಯ ಬಳಿಯೇ ಸಿದ್ಧಪಡಿಸುತ್ತಿದ್ದೆವು. ಆ ನಂತರ ಅದನ್ನು ಹೊತ್ತು ತಂದು ರಂಗಮಂದಿರಗಳ ಮುಂದೆ ನಿಲ್ಲಿಸಲಾಗುತ್ತಿತ್ತು. ಮುಂದೆ ಕಲಾಕ್ಷೇತ್ರದ ಹಿಂಭಾಗದಲ್ಲಿ ಈಗ ಸಂಸ ರಂಗಮಂದಿರ ಇರುವ ಜಾಗದಲ್ಲಿ ಸೈಕಲ್ ಸ್ಟ್ಯಾಂಡ್ ಇದ್ದು ಆ ಸ್ಥಳದಲ್ಲಿ ಬ್ಯಾನರ್‌ಗಳನ್ನು ಸಿದ್ಧಪಡಿಸಲಾಗುತ್ತಿತ್ತು. ಒಂದು ಸ್ಪರ್ಧೆಗೆ ಒಮ್ಮೊಮ್ಮೆ 2–3 ಬ್ಯಾನರ್‌ಗಳನ್ನು ಮಾಡಲಾಗುತ್ತಿತ್ತು. ಇದೇ ಮಾದರಿಯಲ್ಲೇ ಹೌಸ್‌ಪ್ಲಾಟ್‌ಗಳನ್ನು ನಿರ್ಮಾಣ ಮಾಡಿ ನಾಟಕಗಳಿಗೆ ಬಳಸಿಕೊಳ್ಳಲಾಗುತ್ತಿತ್ತು ಎಂದು ನೆನಪು ಮಾಡಿಕೊಳ್ಳುತ್ತಾರೆ ಕೃಷ್ಣಪ್ಪನವರು.

**4. ಜಟಕಾ ಗಾಡಿ ಅಥವಾ ಆಟೋಪ್ರಚಾರ :** ಅಂದಿನ ದಿನಗಳಲ್ಲಿ ಬೆಂಗಳೂರಿನ ಬಡಾವಣೆಗಳಿಗೆ ಸಂಪರ್ಕ ಕಲ್ಪಿಸುತ್ತಿದ್ದ ವಾಹನ ಎಂದರೆ ಜಟಕಾಗಾಡಿಗಳು, ತದನಂತರದಲ್ಲಿ ಆಟೋಗಳು ಬಂದವು. ಮಧ್ಯಮ ವರ್ಗದವರು ಹೆಚ್ಚಾಗಿ ಬಳಸುತ್ತಿದ್ದುದು ಜಟಕಾಗಾಡಿಗಳನ್ನೇ. ಹಾಗಾಗಿ ಬೆಂಗಳೂರು ತುಂಬೆಲ್ಲಾ ಜಟಕಾಗಾಡಿಗಳೇ, ಆಗ ಬೆಂಗಳೂರಿನ ಗಾಂಧಿಬಜಾರಿನ ಕೃಷ್ಣರಾವ್ ಪಾರ್ಕ್ ಬಳಿ, ನಂತರ ಚಾಮರಾಜಪೇಟೆಯ ಅಂಗಡಿ ಸಾಲಿನಲ್ಲಿ ಹಾಗೂ ಮಲ್ಲೇಶ್ವರಂನ ಕೆ.ಸಿ.ಜನರಲ್ ಆಸ್ಪತ್ರೆ ಎದುರು, ಮಾಗಡಿ ರಸ್ತೆಯ ತರಕಾರಿ ಮಾರ್ಕೆಟ್ ಬಳಿ ಜಟಕಾಗಾಡಿ ಸ್ಟ್ಯಾಂಡ್‌ಗಳು ಇರುತ್ತಿದ್ದವು. ನಾಟಕ ಸ್ಪರ್ಧೆಗಳು, ಹಾಗೂ ನಾಟಕ ಪ್ರದರ್ಶನಗಳು ಇದ್ದ 2–3 ದಿನ ಮೊದಲೇ ಪ್ರಚಾರ ಪ್ರಾರಂಭವಾಗುತ್ತಿದ್ದವು.

ಗಾಂಧಿಬಜಾರಿನಿಂದಲೊ, ಚಾಮರಾಜಪೇಟೆಯಿಂದಲೊ ಜಟಕಾಗಾಡಿಗಳನ್ನು ದಿನಕ್ಕೆ 25–30 ರೂ ಬಾಡಿಗೆ ಕೊಟ್ಟು ತರಲಾಗುತ್ತಿತ್ತು. ಅದಕ್ಕೆ ಮೈಕ್‌ಸೆಟ್, ಲೌಡ್‌ಸ್ಪೀಕರ್‌ಗಳನ್ನು ರೂಪಾಯಿ 150–200 ಒಂದು ಹೊತ್ತಿಗೆ ಬಾಡಿಗೆಗೆ ತಂದು ಅವುಗಳನ್ನು ಜಟಕಾಗಾಡಿಗೆ ಕಟ್ಟಿ ಪ್ರಚಾರ ಮಾಡಲಾಗುತ್ತಿತ್ತು. ನಾಟಕಕ್ಕೆ 2–3 ದಿನ ಮೊದಲು ಹಾಗೂ ಭಾನುವಾರಗಳಂದು ಪ್ರಚಾರ ನಡೆಯುತ್ತಿತ್ತು. ಈ ಪ್ರಚಾರದ ಜವಾಬ್ದಾರಿಯನ್ನು ನಾಗೇಶ ಅವರೇ ಹೆಚ್ಚಾಗಿ ನಿರ್ವಹಿಸುತ್ತಿದ್ದರು. ಅವರಿಗೆ ಜಟಕಾಗಾಡಿಯಲ್ಲಿ ಕುಳಿತುಕೊಳ್ಳುವುದು, ಮಾತನಾಡುವುದು ಹೆಚ್ಚಿನ ಖುಷಿಯ ವಿಚಾರವಾಗಿದ್ದರಿಂದ ಅವರು ಇತರರಿಗೆ ಆ ಜವಾಬ್ದಾರಿಯನ್ನು ಕೊಡುತ್ತಿರಲಿಲ್ಲ. ನಾಟಕದ ವಿವರಗಳನ್ನು ಹೇಳುತ್ತಾ ಕರಪತ್ರಗಳನ್ನು ಅಲ್ಲಲ್ಲಿ ಹಂಚುತ್ತಾ ಪ್ರಚಾರ ನಡೆಯುತ್ತಿತ್ತು..

ಜಟಕಾಗಾಡಿಗಳಿಗೆ 25–30 ರೂ ಬಾಡಿಗೆಯಾದರೆ ಆಟೋಗಳಿಗೆ 50 ರೂಗಳನ್ನು ಬಾಡಿಗೆ ಕೊಡಲಾಗುತ್ತಿತ್ತು. ಆಟೋಗಳಲ್ಲಿಯೂ ಮೇಲಿನ ರೀತಿಯಲ್ಲೇ ಪ್ರಚಾರ ಮಾಡಲಾಗುತ್ತಿತ್ತು. ಆದರೆ ಏನಪ್ಪ ಎಂದರೆ ಆಟೋದಲ್ಲಿ ಬೇಗ ಕೆಲಸವಾಗುತ್ತಿತ್ತು. ಅದೊಂದು ಪ್ರೆಸ್ಟೇಜಿಯಸ್ ವಿಷಯವೂ ಆಗಿತ್ತು. ಆಗೆಲ್ಲ ಆಟೋದಲ್ಲಿ ಕುಳಿತು ಕೊಳ್ಳುವುವವರೆಂದರೆ ಅವರೆಲ್ಲ ಶ್ರೀಮಂತರೇ ಎಂದು ಭಾವಿಸಲಾಗುತ್ತಿತ್ತು. ನಮಗೂ ಹಾಗೆಯೇ ಭಾಸವಾಗುತ್ತಿತ್ತು. ಆಟೋದಲ್ಲಿ ಪ್ರಚಾರ ಮುಗಿಸಿ ಕಲಾಕ್ಷೇತ್ರದ ಮುಂದೆ ಬಂದು ಇಳಿದರೆ ಯಾವುದೋ ಒಂದು ಮಹಾದಾನಂದವಾಗುತ್ತಿತ್ತು. ನಾವು ಏನನ್ನೋ ದೊಡ್ಡದು ಸಾಧನೆ. ಮಾಡಿದ್ದೇವೆಂದು ಬೀಗುತ್ತಾ ಆಟೋದಿಂದ ಕೆಳಗಿಳಿಯುತ್ತಿದ್ದೆವು. ಆ ದಿನಗಳನ್ನು ನೆನೆಸಿಕೊಂಡರೆ ನಮಗೆ ತಮಾಷೆ ಎನಿಸುತ್ತಿದೆ ಎನ್ನುತ್ತಾರೆ ಕೃಷ್ಣಪ್ಪನವರು.

## ಏವಂ ಇಂದ್ರಜಿತು ನಾಟಕದ ರಾಜ್ಯ ಪರ್ಯಟನೆ

ಈ ನಾಟಕ, ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ 10 ಸೆಪ್ಟೆಂಬರ್ 1970 ಗುರುವಾರದಂದು ಪ್ರದರ್ಶಿತವಾಯಿತು.

ಬೆಂಗಳೂರಿನಲ್ಲೇ 2 ಯಶಸ್ವಿ ಪ್ರದರ್ಶನವನ್ನು ಈ ನಾಟಕ ಕಾಣುತ್ತದೆ. ಹೀಗೆ ಯಶಸ್ವಿಯಾದ ನಾಟಕವನ್ನು ಕರ್ನಾಟಕದಾಂದ್ಯಂತ ಮಾಡಬೇಕೆಂದು ತೀರ್ಮಾನಿಸಲಾಗುತ್ತದೆ. ಮೈಸೂರು, ಹೆಗ್ಗೋಡು, ಮಂಗಳೂರು, ಉಡುಪಿ, ದಾವಣಗೆರೆ, ಧಾರವಾಡ ಹೀಗೆ ಇನ್ನಿತರ ಕಡೆಗಳಲ್ಲಿ ಕರೆಗಳು ಬಂದಿದ್ದರಿಂದ ಸ್ಥಳೀಯ ತಂಡದ ಸಹಕಾರದೊಡನೆ ಪ್ರದರ್ಶಿಸಲಾಗುತ್ತಿತ್ತು. ಮೈಸೂರಿನ ಯು.ಆರ್. ಅನಂತಮೂರ್ತಿ, ಎಂ.ಎಚ್. ಚೆನ್ನಯ್ಯ, ಸಿಂದುವಳ್ಳಿ ಅನಂತಮೂರ್ತಿ, ನಾ. ರತ್ನ,

ಮಿರ್ಲೆ ಇವರೆಲ್ಲರೂ ಸೇರಿ ಕಟ್ಟಿದ್ದ ಸಮತಂತೊ (ಸರಸ್ವತಿಪುರಂ ಮಧ್ವದ ತೆಂಗಿನತೋಟದ ಕಲಾವಿದರು) ತಂಡದ ಆಹ್ವಾನದ ಮೇರೆಗೆ ಈ ನಾಟಕವನ್ನು ಮೈಸೂರಿನ ಸೆಂಟಿನರಿ ಹಾಲ್‌ನಲ್ಲಿ ಪ್ರದರ್ಶಿಸಲಾಯಿತು. ಆಯಾ ಊರಿನ ಆಯಾ ಬಯಲು ವೇದಿಕೆಗಳನ್ನು ಈ ನಾಟಕ ಪ್ರದರ್ಶನಕ್ಕೆಂದೇ ಸಿದ್ಧಗೊಳಿಸಲಾಗುತ್ತಿತ್ತು. ಪ್ರತಿ ಕಡೆಯೂ ಪರದೆ, ಸೈಡ್‌ವಿಂಗ್ಸ್, ಫ್ರಿಲ್ಸ್, ಸೈಕ್ಲೋರಾಮ ಮುಂತಾದವನ್ನು ಕಟ್ಟಿ ರಂಗವನ್ನು ಸಜ್ಜು ಗೊಳಿಸಲಾಗುತ್ತಿತ್ತು.

ಕಾರಂತರು ಒಂದೇ ಊರಿನಲ್ಲೇ 2 ಅಥವಾ 3 ಕಡೆ ಶಿಬಿರಗಳನ್ನು ಹಮ್ಮಿಕೊಂಡಿರುತ್ತಿದ್ದರು. ಆ ಶಿಬಿರಗಳಿಗೂ ನಾಟಕಗಳನ್ನು ನಿರ್ದೇಶಿಸಿರುತ್ತಿದ್ದರು. ಆ ನಾಟಕಗಳ ಮೊದಲು 'ಏವಂ ಇಂದ್ರಜಿತು' ನಾಟಕವನ್ನು ಆ ಊರಿನಲ್ಲಿ ಪ್ರದರ್ಶಿಸಿ ನಂತರ ಶಿಬಿರಾರ್ಥಿಗಳಿಗೆ ನಿರ್ದೇಶಿಸಲ್ಪಟ್ಟಿದ್ದ ನಾಟಕಗಳನ್ನು ಅದೇ ಊರಿನ ಮತ್ತೊಂದು ಜಾಗದಲ್ಲಿ ಪ್ರದರ್ಶಿಸುತ್ತಿದ್ದರು. ಆ ನಾಟಕಗಳಿಗೂ ಸಹ ಕೃಷ್ಣಪ್ಪನವರು ಸಜ್ಜು ಗೊಳಿಸಿದ್ದ ರಂಗ ಸಜ್ಜಿಕೆಗಳೇ ಬಳಕೆಯಾಗುವಂತೆ ಯೋಜನೆ ರೂಪಿಸುತ್ತಿದ್ದರು. 'ಏವಂ ಇಂದ್ರಜಿತು' ನಾಟಕ ಯಾವುದೇ ರಂಗವಿನ್ಯಾಸ ಇಲ್ಲದೆ ಖಾಲಿ ರಂಗವೇದಿಕೆಯಲ್ಲಿ ವಿಶೇಷ ಬೆಳಕಿನ ವಿನ್ಯಾಸದೊಂದಿಗೆ ಪ್ರದರ್ಶನ ಗೊಂಡರೆ ಇತರ ನಾಟಕಗಳು ಆಯಾ ನಾಟಕಗಳು ಬಯಸುವ ರಂಗವಿನ್ಯಾಸ, ರಂಗಸಜ್ಜನಿಕೆ, ರಂಗ ಪರಿಕರ, ಬೆಳಕಿನ ವಿನ್ಯಾಸ ಈ ಎಲ್ಲವನ್ನೂ ಒಳಗೊಂಡಿರುತ್ತಿತ್ತು. ಈ ಎಲ್ಲಾ ಜವಾಬ್ದಾರಿಗಳನ್ನು ಕೃಷ್ಣಪ್ಪನವರು ಆಯಾ ಸ್ಥಳಗಳಲ್ಲೇ, ಅಲ್ಲೇ ಸಿಕ್ಕ ಅನುಕೂಲಗಳನ್ನು ಬಳಸಿಕೊಂಡು ರಂಗವೇದಿಕೆಯನ್ನು ಸಿದ್ಧಗೊಳಿಸುತ್ತಿದ್ದರು. ಹೀಗೆ ಕೃಷ್ಣಪ್ಪನವರು ಸಿದ್ಧಗೊಳಿಸಿದ ರಂಗವೇದಿಕೆಯಲ್ಲೇ ಆಯಾ ಊರಿನ ರಂಗಶಿಬಿರಗಳಲ್ಲಿ ತಯಾರಾದ ನಾಟಕಗಳು ಪ್ರದರ್ಶಿತವಾಗುತ್ತಿದ್ದವು. ಉದಾಹರಣೆಗೆಂದರೆ ಉಡುಪಿಯಲ್ಲಿ ಎಂ.ಜಿ.ಎಂ. ಕಾಲೇಜಿನಲ್ಲಿ 3 ದಿನಗಳ ರಂಗೋತ್ಸವವನ್ನು ಏರ್ಪಡಿಸಲಾಗಿತ್ತು. ಉತ್ಸವಕ್ಕೆ ಸಿದ್ಧಗೊಳಿಸಿದ ನಾಟಕಗಳೆಂದರೆ ಅಲ್ಲಿಯ ಕಾಲೇಜು ಅಧ್ಯಾಪಕರುಗಳಿಗಾಗಿ ನಿರ್ದೇಶಿಸಿದ್ದ ಬಿ.ಎಂ.ಶ್ರೀ ಅವರ 'ಅಶ್ವತ್ಥಾಮನ್', ಕಾಲೇಜು ವಿದ್ಯಾರ್ಥಿಗಳಿಗಾಗಿ ನಿರ್ದೇಶಿಸಿದ್ದ ಎರಡು ಅಸಂಗತ ನಾಟಕಗಳು. ಅಂದರೆ ಲಂಕೇಶರ 'ಸಿದ್ಧತೆ' ಹಾಗೂ ಚಂಪಾ ಅವರ 'ಎಲ್ಲಿಗೆ' ನಾಟಕಗಳು. 2ನೇ ದಿನ ಪ್ರದರ್ಶನಕಂಡವು. 3ನೇ ದಿನಕ್ಕಾಗಿ ಶಾಲೆಯ ಮಕ್ಕಳಿಗಾಗಿ ನಿರ್ದೇಶಿಸಿದ್ದ 'ಹೆಡ್ಡಾಯಣ' ನಾಟಕ ಪ್ರದರ್ಶಿತವಾಯಿತು. ಹೀಗೆ ವಿಭಿನ್ನ ನಾಟಕಗಳು, ವಿಭಿನ್ನ ವಯೋಮಾನದ ಕಲಾವಿದರಿಗಾಗಿ ನಿರ್ದೇಶಿಸಲ್ಪಟ್ಟವು. ಈ ಎಲ್ಲಾ ವಿಭಿನ್ನ ನಾಟಕಗಳಿಗೂ ವಿಭಿನ್ನ ಶೈಲಿಯ ರಂಗವಿನ್ಯಾಸ, ರಂಗಪರಿಕರಗಳನ್ನು ಸಜ್ಜುಗೊಳಿಸಿ ಬೆಳಕಿನ ವಿನ್ಯಾಸವನ್ನು ಸಹ ನಾನೇ ಮಾಡುತ್ತಿದ್ದೆನು ಎನ್ನುತ್ತಾರೆ. ಈ ಎಲ್ಲಾ ಸಿದ್ಧತೆ ಮಾಡಲು ಕಾರಂತರು ಕೃಷ್ಣಪ್ಪನವರನ್ನು

ಎಲ್ಲಾ ಊರುಗಳಿಗೂ ಆಹ್ವಾನಿಸುತ್ತಿದ್ದರು. ಇದೇ ಉಡುಪಿಯ ಎಂ.ಜಿ.ಎಂ ಕಾಲೇಜಿನ ಸಭಾಭವನದಲ್ಲಿ 'ಏವಂ ಇಂದ್ರಜಿತು' ನಾಟಕ ಪ್ರದರ್ಶನವಾದರೆ, ಅದೇ ಕಾಲೇಜಿನ ಮುದ್ದಣ್ಣ ಮಂಟಪದ ಬಯಲಿನಲ್ಲಿ ಶಿಬಿರಾರ್ಥಿಗಳಿಗೆ ಸಿದ್ಧಪಡಿಸಿದ್ದ ನಾಟಕಗಳು ಪ್ರದರ್ಶನವಾಗುತ್ತಿದ್ದವು. ನಾನು 'ಏವಂ ಇಂದ್ರಜಿತು' ನಾಟಕ ಸಿದ್ಧಗೊಳಿಸಿದ ರಂಗಸಜ್ಜಿಕೆ ಹಾಗೂ ಬೆಳಕಿನ ವ್ಯವಸ್ಥೆಯನ್ನೇ ಸ್ಥಳೀಯರ ಸಹಕಾರ ಹಾಗೂ ಅಲ್ಲಿಯ ಅನುಕೂಲಗಳನ್ನು ಬಳಸಿಕೊಂಡು ಶಿಬಿರದ ನಾಟಕಗಳಿಗೂ ವ್ಯವಸ್ಥೆಗೊಳಿಸಿದೆ ಎನ್ನುತ್ತಾರೆ ಕೃಷ್ಣಪ್ಪನವರು.

ಹೀಗೆ ಕಾರಂತರು ಎಲ್ಲೆಲ್ಲಿ ರಂಗಶಿಬಿರ, ಹಾಗೂ ನಾಟಕಗಳನ್ನು ನಿರ್ದೇಶಿಸು ತ್ತಿದ್ದರೋ ಅಲ್ಲೆಲ್ಲಾ ಕೃಷ್ಣಪ್ಪನವರೇ ನೇಪಥ್ಯದ ಹಾಗೂ ಬೆಳಕಿನ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರು.

ಸಾಗರದ ಹೆಗ್ಗೋಡಿನಲ್ಲಿ ಸಹ 'ಏವಂ ಇಂದ್ರಜಿತು' ನಾಟಕ ಪ್ರದರ್ಶನವಾದ ನಂತರ ಹೆಗ್ಗೋಡಿನ ಶಾಲಾಮಕ್ಕಳಿಗಾಗಿ ಕಾರಂತರು ರಚಿಸಿ, ನಿರ್ದೇಶಿಸಿದ್ದ 'ಪಂಜರಶಾಲೆ' ನಾಟಕ ಪ್ರದರ್ಶಿತವಾಯಿತು ಮತ್ತು ಈ ನಾಟಕದಲ್ಲಿ 100ಕ್ಕೂ ಹೆಚ್ಚು ಮಕ್ಕಳು ಅಭಿನಯಿಸಿದ್ದರು. 'ಏವಂ ಇಂದ್ರಜಿತು' ನಾಟಕ ಸಾಗರದಲ್ಲಿ ಪ್ರದರ್ಶನ ಕಂಡಿರುತ್ತದೆ. ಆಗ ನಾಟಕಕ್ಕೆ ಬಳಸಿನ ಎಲ್ಲಾ ಪರಿಕರಗಳು ಹಾಗೂ ಲೈಟ್ಸ್‌ಗಳನ್ನು ಅಂದೇ ರಾತ್ರಿ ಬಿಚ್ಚಿ ಮತ್ತೆ ಅದೇ ರಾತ್ರಿ ಹೆಗ್ಗೋಡಿಗೆ ತಂದು 'ಪಂಜರದ ಶಾಲೆ' ನಾಟಕಕ್ಕೆ ರಂಗ ಸಿದ್ಧತೆ ಮಾಡುತ್ತಾರೆ ಕೃಷ್ಣಪ್ಪನವರು. ರಾತ್ರಿ 3ಕ್ಕೆ ಸಾಗರದಿಂದ ಹೆಗ್ಗೋಡಿಗೆ ಬಂದ ಕೃಷ್ಣಪ್ಪನವರು ಒಂದೆರಡು ಗಂಟೆ ವಿಶ್ರಮಿಸಿಕೊಂಡು ಮತ್ತೆ 'ಪಂಜರದಶಾಲೆ' ನಾಟಕದ ವೇದಿಕೆಯನ್ನು ಕಟ್ಟಿದ್ದು, ಲೈಟ್ಸ್‌ಗಳನ್ನು ಕಟ್ಟಿದ್ದು, ಅಲ್ಲದೇ ಮತ್ತೆ ಪ್ರದರ್ಶನದ ದಿನ ಬೆಳಕಿನ ವಿನ್ಯಾಸ ಮಾಡಿಕೊಳ್ಳಲು ರಾತ್ರಿಗಾಗಿ ಕಾಯ್ದು ಬೆಳಕಿನ ವಿನ್ಯಾಸವನ್ನು ಅಣಿಗೊಳಿಸಿ, ನಾಟಕದ ವೇಳೆಯಲ್ಲಿ ಸ್ವಂತ ತಾವೇ ಬೆಳಕಿನ ಆಪರೇಟರ್ ಆಗಿಯೂ ಕೆಲಸ ನಿರ್ವಹಿಸುತ್ತಾರೆ ಕೃಷ್ಣಪ್ಪನವರು.

ಈ ನಾಟಕವು 1971ನೇ ಜನವರಿ 11ರ ಗುರುವಾರ ಪ್ರದರ್ಶನ ಕಾಣುತ್ತದೆ. ನಾಟಕ ತುಂಬಾ ಅದ್ಭುತವಾಗಿ ಪ್ರದರ್ಶನ ಕಂಡು ಜನರಿಂದ, ಪತ್ರಿಕೆಗಳಿಂದ ಪ್ರಶಂಸೆ ಗೊಂಡಿದ್ದರಿಂದ, ಕಾರಂತರು ಮತ್ತು ಕೆ.ವಿ. ಸುಬ್ಬಣ್ಣನವರು ಬೆಂಗಳೂರಿನಲ್ಲಿ ಈ ನಾಟಕದ ಪ್ರದರ್ಶನವನ್ನು ಹೇಗಾದರೂ ಮಾಡಿ ಪ್ರದರ್ಶನ ಮಾಡಲು ವ್ಯವಸ್ಥೆ ಮಾಡುವಂತೆ ಕೃಷ್ಣಪ್ಪನವರಿಗೆ ಒತ್ತಾಯಿಸುತ್ತಾರೆ.

ಆ ದಿನಗಳಲ್ಲಿ ಕೃಷ್ಣಪ್ಪನವರು ಪಿ.ಡಬ್ಲ್ಯೂ.ಡಿನಲ್ಲಿ ಸಣ್ಣಪುಟ್ಟ ಕಂಟ್ರಾಕ್ಟರ್ ಕೆಲಸ ಮಾಡಿಸುತ್ತಿರುತ್ತಾರೆ. ರವೀಂದ್ರ ಕಲಾಕ್ಷೇತ್ರ ಪಿ.ಡಬ್ಲ್ಯೂ.ಡಿಯ ಅಧೀನದಲ್ಲಿರುತ್ತದೆ.

ರವೀಂದ್ರ ಕಲಾಕ್ಷೇತ್ರದ ಬುಕ್ಕಿಂಗ್ ಜವಾಬ್ದಾರಿ ಪಿ.ಡಬ್ಲ್ಯೂ.ಡಿ ನೌಕರರಾದ ಶಾಸ್ತ್ರಿಯವರಾಗಿರುತ್ತದೆ. 1971ರ ಫೆಬ್ರವರಿ 26-27 ದಿನಾಂಕಗಳು ಸರ್ಕಾರಿ ಕಾರ್ಯಕ್ರಮಗಳಿಗಾಗಿ ಮೀಸಲಾಗಿದ್ದ ಆ ದಿನಗಳನ್ನು ಕೃಷ್ಣಪ್ಪನವರು ತಮ್ಮ ಪ್ರಭಾವ ಹಾಗೂ ಕಾರಂತರ ಹೆಸರನ್ನು ಬಳಸಿ ಪೂರ್ತಿ ದಿನಗಳ ಕಾಲ 'ಪಂಜರಶಾಲೆ' ನಾಟಕ ಪ್ರದರ್ಶನಕ್ಕಾಗಿ ಮೀಸಲಿಡುತ್ತಾರೆ. ನಂತರ ಬೆಂಗಳೂರಿನ ಶಾಲಾ ವಿದ್ಯಾರ್ಥಿಗಳಿಗಾಗಿ ಈ ನಾಟಕವನ್ನು ಪ್ರದರ್ಶಿಸಲು ಅಣಿಗೊಳಿಸುತ್ತಾರೆ. ಈ ನಾಟಕದ ರಂಗವೇದಿಕೆ ಹಾಗೂ ಸಂಪೂರ್ಣ ಸಂಘಟನೆಯ ಜವಾಬ್ದಾರಿಯನ್ನು ಕೃಷ್ಣಪ್ಪನವರೇ ನಿರ್ವಹಿಸುತ್ತಾರೆ. ಬೆಂಗಳೂರಿನಲ್ಲಿ ಕೃಷ್ಣಪ್ಪನವರು 6-7ಪ್ರದರ್ಶನಗಳನ್ನು ಸಂಘಟಿಸಿ ತುಂಬಿದ ಗ್ರಹದಲ್ಲಿ ನಾಟಕ ಪ್ರದರ್ಶನವಾಗುವಂತೆ ವ್ಯವಸ್ಥೆಗೊಳಿಸಿರುತ್ತಾರೆ.

## ಸ್ವರ್ಗಕ್ಕೆ ಮೂರೇ ಬಾಗಿಲು ಆದರೆ ಕೃಷ್ಣಪ್ಪನವರ ದುಡಿಮೆಗೆ ?

1970-71ರ ಹಿಂದುಮುಂದಿನ ದಿನಗಳಲ್ಲೇ ಕಾರಂತರು ಬೇರೆ ಬೇರೆ ತಂಡಕ್ಕೆ ಬೇರೆ ಬೇರೆ ನಾಟಕಗಳನ್ನು ನಿರ್ದೇಶಿಸುತ್ತಿದ್ದರು ಎಂಬ ವಿಷಯವನ್ನು ನಾನು ನಿಮಗೆ ಮೊದಲೇ ತಿಳಿಸಿರುತ್ತೇನೆ. ಅದರಂತೆ 1970ರ ಆಗಸ್ಟ್‌ನಲ್ಲಿ ಶ್ರೀರಂಗರ 'ಸ್ವರ್ಗಕ್ಕೆ ಮೂರೇಬಾಗಿಲು' ನಾಟಕವನ್ನು ಕಾರಂತರು ನಿರ್ದೇಶಿಸುತ್ತಾರೆ. ದೆಹಲಿಯ ಎನ್‌ಎಸ್‌ಡಿಯ ಬಿ.ಎಂ.ಶಾ ಅವರು ರಂಗಸಜ್ಜಿಕೆಯನ್ನು ವಿನ್ಯಾಸ ಮಾಡುತ್ತಾರೆ. ಈ ನಾಟಕವನ್ನು ಕನ್ನಡ ಸಾಹಿತ್ಯ ಕಲಾಸಂಘದ ಕಲಾವಿದರು ಅಭಿನಯಿಸುತ್ತಾರೆ. ಈ ನಾಟಕದ ರಂಗಸಜ್ಜಿಕೆಗಾಗಿ ನೇಪಥ್ಯದಲ್ಲಿ ದುಡಿದ ಕೃಷ್ಣಪ್ಪನವರ ಕುರಿತು ಡಾ.ವಿಜಯ ಅವರು ಹೇಳಿರುವ ಮಾತುಗಳನ್ನು ದಾಖಲಿಸಬೇಕೆನಿಸುತ್ತಿದೆ. ಅವರು ಹೀಗೆ ಹೇಳುತ್ತಾರೆ. "ಕನ್ನಡ ರಂಗಭೂಮಿಯಲ್ಲಿ ಅದ್ಭುತ ಪ್ರಯೋಗವೆನ್ನಿಸಿದ 'ಸ್ವರ್ಗಕ್ಕೆ ಮೂರೇ ಬಾಗಿಲು' ನಾಟಕದ ನೇಪಥ್ಯದಲ್ಲೂ ಕೃಷ್ಣಪ್ಪನವರದು ಪ್ರಮುಖ ಪಾತ್ರ. ಒಂದೊಂದು ಅಂಕ ಮುಗಿಯುವಾಗ ಆ ಇಡೀ ಸೆಟ್ ಬಿದ್ದು ರಂಗದ ಮೇಲೆಲ್ಲಾ ಧೂಳು ತುಂಬಿ ಬಂದು ಭೂಕಂಪ, ಪ್ರಳಯದಂಥ ಅನುಭವ ಬರಬೇಕು. ಆಳೆತ್ತರದ ಕಂಬಗಳವು. ಅವು ಬಿದ್ದರೂ ಅಂದಗೆಡದೇ ಮತ್ತೊಂದು ಪ್ರಯೋಗಕ್ಕೆ ಬಳಸಲು ಅನುವಾಗಬೇಕಿತ್ತು. ಹೀಗಾಗಬೇಕಾದರೆ ಅವು ಬೀಳಲು, ಬಿದ್ದರೂ ಡ್ಯಾಮೇಜು ಆಗದೇ ಉಳಿಯಲು ತುಂಬಾ ಜಾಗರೂಕತೆ ವಹಿಸಬೇಕಿತ್ತು. ಈ ಕಾರ್ಯದಲ್ಲಿ ಎಚ್.ವಿ. ವೆಂಕಟಸುಬ್ಬಯ್ಯನವರೊಂದಿಗೆ ಕೃಷ್ಣಪ್ಪನವರೂ ಕೈ ಜೋಡಿಸಿದ್ದರು. ಈ ನೇಪಥ್ಯ ವಿನ್ಯಾಸದ ಎಲ್ಲ ಹೊಣೆ ಹೊತ್ತು ಚೊಕ್ಕವಾಗಿ ನಿರ್ವಹಿಸಿದ್ದರು. ಅಂದು ನಾಟಕ ನೋಡಿದ್ದ ಕಣ್ಣುಗಳು, ಅನುಭವಿಸಿದ ಮನಸ್ಸುಗಳು ಈ ದೃಶ್ಯಗಳನ್ನು ಮರೆಯುವುದು ಸಾಧ್ಯವೇ ಇಲ್ಲ. ಅಂಥ ಪವಾಡವನ್ನು ನೋಡಿ ಸಂತೋಷಪಟ್ಟಿದ್ದೆ. ವಿಮರ್ಶೆ ಬರೆದಿದ್ದೆ. ಸ್ವತಃ ಶ್ರೀರಂಗರೇ ನನ್ನೆದೆರು ಕೃಷ್ಣಪ್ಪನವರನ್ನು ಹೊಗಳಿದ್ದನ್ನೂ ಮರೆಯಲಾರೆ'.

ಹೀಗೆ ಕೃಷ್ಣಪ್ಪನವರ ಬಗ್ಗೆ ಆಡುವ ಮಾತುಗಳನ್ನು ದಾಖಲಿಸದೇ ಇರಲಾರೆ. ಆ ದಿನದ ಕೃಷ್ಣಪ್ಪನವರ ಕಾರ್ಯವೈಖರಿಯ ಬಗ್ಗೆ ಹೇಳುತ್ತಾ ವಿಜಯಮ್ಮನವರು ಆ ನಾಟಕದ ರಂಗವಿನ್ಯಾಸದ ಮೇಲೂ ಬೆಳಕು ಚೆಲ್ಲುತ್ತಾರೆ. ಆ ನಾಟಕಕ್ಕೆ ಬಳಸಿದ ಎಲ್ಲಾ ಫ್ಲಾಟ್‌ಫಾರಂಗಳನ್ನು ಅಂದರೆ ಈಗಿನ ಬಿ.ಆರ್.ವಿ. ಟಾಕೀಸಿನ ಹಿಂಭಾಗದಲ್ಲಿದ್ದ 'ಫಕೂರ್ ಬ್ರದರ್ಸ್' ಅಂಗಡಿ ಹಾಗೂ ಅದರ ಸುತ್ತಮುತ್ತಲಿದ್ದ ಅಂಗಡಿಗಳಿಂದ 3x 3x1 1/2 ಅಡಿ ಅಳತೆಯ ಫ್ಲಾಟ್‌ಫಾರಂಗಳನ್ನು ತಂದು, ಇದಲ್ಲದೆ ಪ್ಲೇವುಡ್‌ನ 3x3 ಅಡಿ ಅಗಲ ಹಾಗೂ ಎತ್ತರದ ಬಾಕ್ಸ್ ಪೆಟ್ಟಿಗೆಗಳನ್ನು ಜೋಡಿಸಿ ಕಂಬಗಳನ್ನು ನಿರ್ಮಿಸಲಾಯಿತು. ಈ ಕಂಬಗಳಿಗೆ ವಿವಿಧ ಆಕೃತಿಯ ಮುಖವಾಡಗಳನ್ನು ನಿರ್ಮಿಸಿ ಜೋಡಿಸಲಾಯಿತು. ಹೀಗೆ 3 ಅಡಿ ಮಟ್ಟಕ್ಕೆ ಒಂದು ಸ್ಟೇಜ್, 6 ಅಡಿ ಮಟ್ಟಕ್ಕೆ ಮತ್ತೊಂದು ಸ್ಟೇಜ್, 9 ಅಡಿ ಮಟ್ಟಕ್ಕೆ ಮಗದೊಂದು ಸ್ಟೇಜ್ ಹೀಗೆ ಮೂರು ಲೆವೆಲ್‌ಗಳಲ್ಲಿ ರಂಗಸಜ್ಜಿಕೆಯನ್ನು ನಿರ್ಮಿಸಿ ಅದರ ಎಡಬಲಭಾಗಗಳಲ್ಲಿ 10 ಹಾಗೂ 12 ಅಡಿಯ ಬೃಹತ್ ಕಂಬಗಳನ್ನು ಕಲ್ಲುಕಟ್ಟಡದ ಮಾದರಿ ನಿರ್ಮಿಸಿ ನಿಲ್ಲಿಸಲಾಯಿತು. ಹೀಗೆ ನೋಡುಗರಿಗೆ ಬೆರಗಾಗುವಂತೆ ಬೃಹತ್ ರಂಗಸಜ್ಜಿಕೆ ನಿರ್ಮಾಣವಾಗಿತ್ತು. ಇಡೀ ನಾಟಕದ ನಿರ್ಮಾಣದ ವೆಚ್ಚ ಆಗಿನ ಕಾಲಕ್ಕೆ 18 ಸಾವಿರ ರೂಗಳಷ್ಟಾಗಿತ್ತು. ಈ ನಾಟಕದ ನಿರ್ಮಾಣದ ಸಂಪೂರ್ಣ ಹೊಣೆ ಕೃಷ್ಣಪ್ಪನವರದೇ ಆಗಿತ್ತು. ಈ ನಾಟಕದಲ್ಲಿ ಒಟ್ಟು 50 ಕಲಾವಿದರು ಭಾಗವಹಿಸಿದ್ದರು. ಈ ನಾಟಕ ನಿರ್ಮಾಣ ಮಾಡಿ, ಸ್ಟೇಜ್ ಮ್ಯಾನೇಜರ್ ಆಗಿ, ಕೃಷ್ಣಪ್ಪನವರು ಈ ನಾಟಕದಲ್ಲಿ ಒಂದು ಪುಟ್ಟ ಪಾತ್ರವನ್ನು ಮಾಡಿ ತಮ್ಮ ನಟನಾ ಕೌಶಲ್ಯವನ್ನು ಮರೆದು ಅಭಿನಯಿಸಬೇಕೆಂಬ ಹೆಬ್ಬಯಕೆಯನ್ನು, ನಟನೆ ಮಾಡಲೇಬೇಕೆಂಬ ಹುಚ್ಚನ್ನು ಈಡೇರಿಸಿಕೊಂಡರು! ಈ ನಾಟಕದ 'ರಂಗವಿನ್ಯಾಸ' ಹೊಣೆಯನ್ನು ಎಚ್.ವಿ. ವೆಂಕಟಸುಬ್ಬಯ್ಯನವರು ಹಾಗೂ ಕೃಷ್ಣಪ್ಪನವರಿಬ್ಬರೂ ಹೊತ್ತಿರುತ್ತಾರೆ.

## ಕತ್ತಲೆ ಬೆಳಕು ನಾಟಕದಲ್ಲಿ ಕೃಷ್ಣಪ್ಪನವರ ಬೆಳಕಿನ ಝಳಕು

ಧಾರವಾಡದ ವಿಶ್ವವಿದ್ಯಾನಿಲಯದ ರಂಗಾಸಕ್ತರಿಗಾಗಿ ಕಾರಂತರು 'ರಂಗಶಿಬಿರ' ವನ್ನು 1971ರ ಸಂದರ್ಭದಲ್ಲಿ ಮಾಡುತ್ತಾರೆ. ಈ ಶಿಬಿರದಲ್ಲಿ ಅಲ್ಲಿಯ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸುತ್ತಾರೆ. ಶಿಬಿರದ ಶಿಬಿರಾರ್ಥಿಗಳಿಗಾಗಿ ಕಾರಂತರು ಒಂದು ಪೂರ್ಣಪ್ರಮಾಣದ ನಾಟಕವನ್ನು ಶಿಬಿರದ ಪ್ರಮುಖ ನಾಟಕವಾಗಿ ಪ್ರದರ್ಶನಕ್ಕೆ ಸಿದ್ಧಗೊಳಿಸುತ್ತಾರೆ. ಅದು ಶ್ರೀರಂಗರ 'ಕತ್ತಲೆಬೆಳಕು'. ವಿಶ್ವವಿದ್ಯಾನಿಲಯದ ಬಯಲಿನಲ್ಲಿ 9/1/1971ರ ಸಂಜೆ ಪ್ರದರ್ಶನಗೊಳ್ಳುತ್ತದೆ. ಇದೇ ಸಂಧರ್ಭದಲ್ಲಿ ಚಂಪಾರವರ 'ಗುರ್ತಿನವರು' ಲಂಕೇಶರ 'ಸಿದ್ಧತೆ' ಹಾಗೂ ನಾ ರತ್ನ ಅವರ 'ಎಲ್ಲಿಗೆ' ಎಂಬ ಅಸಂಗತ ನಾಟಕಗಳನ್ನು ನಿರ್ದೇಶಿಸುತ್ತಾರೆ. ಇವು 10-11-

1971 ರಂದು ಅಲ್ಲಿಯ ಗಾಂಧಿಭವನದಲ್ಲಿ ಪ್ರದರ್ಶನ ಕಾಣುತ್ತವೆ. ಶಿಬಿರಾರ್ಥಿಗಳು ಹಾಗೂ ಪ್ರಾಧ್ಯಾಪಕರು ಪ್ರದರ್ಶಿಸಿದ ಈ ನಾಟಕಗಳು ಯಶಸ್ವಿಯಾಗಿ ಅಲ್ಲಿ ಒಂದು ರಂಗತಂಡ ಪ್ರಾರಂಭವಾಗಲು ಕಾರಣವಾಯಿತು. ಈ ತಂಡಕ್ಕೆ 'ಕಣವಿ'ಯವರ ಸಲಹೆ ಮೇರೆಗೆ 'ಅಂತರಂಗ' ಎಂದು ಹೆಸರಿಸಲಾಗುತ್ತದೆ. ಹೀಗೆ ಧಾರವಾಡದಲ್ಲೊಂದು ಹೊಸ ತಂಡ ಉದಯವಾಗುತ್ತದೆ. ಈ ತಂಡದ ನಿರಂತರತೆಯನ್ನು ಕಾಯ್ದುಕೊಳ್ಳಲು ಬೆಂಗಳೂರಿನ 'ಏವಂ ಇಂದ್ರಜಿತು' ನಾಟಕವನ್ನು 4/4/1971ರಂದು 'ಅಂತರಂಗ'ದ ಸಹಕಾರದೊಡನೆ ಧಾರವಾಡದಲ್ಲಿ ಪ್ರದರ್ಶಿಸಲಾಗುತ್ತದೆ.

9-11-1971ರಂದು ಪ್ರದರ್ಶನಗೊಂಡ 'ಕತ್ತಲೆ ಬೆಳಕು' ನಾಟಕದ ಎಲ್. ಕೃಷ್ಣಪ್ಪನವರ ಬೆಳಕಿನ ವಿನ್ಯಾಸದ ಅದ್ಭುತ ಶೈಲಿಯನ್ನು, ಕಂಡ ಪ್ರೊ.ಸಿದ್ಧಲಿಂಗಪಟ್ಟಣಶೆಟ್ಟಿಯವರು ಕಾರಂತ ಹಾಗೂ ಬಾ.ಕಿ.ನ.ರವರು ಹೊರತರುತ್ತಿದ್ದ ನಟನ ಪತ್ರಿಕೆಯ ನವೆಂಬರ್-ಡಿಸೆಂಬರ್ 1972ರ ಸಂಚಿಕೆಯಲ್ಲಿ ಬರೆದ 'ಧಾರವಾಡದ ರಂಗವೃತ್ತಾಂತ' ಲೇಖನದಲ್ಲಿ "ವಿಶ್ವವಿದ್ಯಾಲಯದ ಗಾಂಧೀಭವನದಲ್ಲಿ 9-1-1971ರ ಸಂಜೆಗೆ ಶ್ರೀರಂಗರ 'ಕತ್ತಲೆ ಬೆಳಕು' ಪ್ರದರ್ಶಿತವಾಯಿತು. ಬೆಂಗಳೂರಿನ ಎಲ್. ಕೃಷ್ಣಪ್ಪ ಇಲ್ಲಿ ತಂದ ಬೆಳಕನ್ನು ಧಾರವಾಡದಲ್ಲಿ ಯಾರೂ ಇನ್ನೂ ಮರೆತಿಲ್ಲ ಎಂದು ದಾಖಲಿಸುತ್ತಾರೆ.

## ಬಾಲಭವನದ ನವೀಕರಣದಲ್ಲಿ ಕೃಷ್ಣಪ್ಪನವರ ಜವಾಬ್ದಾರಿ

ವಿಮಲಾರಂಗಾಚಾರ್ಯ ಅವರ ತಂಡಕ್ಕೆ 'ಬರ್ನಾಡ್‌ಶಾ' ಅವರ 'ಪಿಗ್ಮೇಲಿಯನ್' ನಾಟಕವನ್ನು ಕಾರಂತರು ನಿರ್ದೇಶಿಸುತ್ತಾರೆ 27 ಮತ್ತು 28 ಆಗಸ್ಟ್ 1972ರಂದು ಈಗಿನ 'ಬಾಲಭವನ' ಇರುವ ಸ್ಥಳದಲ್ಲಿದ್ದ 'ವಿಜಯರಂಗ' ರಂಗಮಂದಿರದಲ್ಲಿ ಈ ನಾಟಕ ಪ್ರದರ್ಶನಗೊಳ್ಳುತ್ತದೆ. ಈ ನಾಟಕಕ್ಕೆ 'ರಂಗಸಜ್ಜಿಕೆ'ಯನ್ನು ಕೃಷ್ಣಪ್ಪನವರು ನಿರ್ಮಾಣ ಮಾಡಿರುತ್ತಾರೆ. ಇದೇ ಸಂದರ್ಭದಲ್ಲಿಯೇ ಬಾಲಭವನದ ರಂಗಮಂದಿರದ ನವೀಕರಣವೂ ನಡೆಯುತ್ತದೆ. ಅದರ ಜವಾಬ್ದಾರಿಯನ್ನೂ ಸಹ ಕೃಷ್ಣಪ್ಪನವರೇ ನಿರ್ವಹಿಸುತ್ತಾರೆ. ಆಗ ದೊಡ್ಡದೊಂದು ಖಾಲಿ ಹಾಲ್ ಆಗಿದ್ದ ಜಾಗವನ್ನು ಉತ್ತಮ ರಂಗವೇದಿಕೆಯಾಗುವಂತೆ ಹಾಗೂ ನಾಟಕಗಳ ಪ್ರದರ್ಶನಗಳು ನಡೆಯಲು ಯೋಗ್ಯವಾಗುವಂತೆ ಸ್ಟೇಜ್, ಸೌಂಡ್‌ಪ್ರೂಫ್, ಪರದೆಗಳು, ಫ್ರಿಲ್‌ಗಳು ಇದೆಲ್ಲವನ್ನು ಕೃಷ್ಣಪ್ಪನವರು ಅಣಿಗೊಳಿಸುತ್ತಾರೆ. ಹೀಗೆ ಸುಸಜ್ಜಿತಗೊಂಡ ರಂಗಮಂದಿರದಲ್ಲಿ ಬರ್ನಾಡ್ ಪಿಗ್ಮೇಲಿಯನ್, ಡಾ. ಆರ್ ರಂಗಾಚಾರ್‌ರಿಂದ ರೂಪಾಂತರವಾದ 'ಜೀವದಗೊಂಬೆ' ನಾಟಕ ತನ್ನ ಮೊದಲ ಪ್ರದರ್ಶನವನ್ನು ಕಾಣುತ್ತದೆ. ಎಂ.ಎಸ್.ಸತ್ಯರವರು ಬೆಳಕಿನ ವಿನ್ಯಾಸವನ್ನು ಮಾಡುತ್ತಾರೆ.

**ರವೀಂದ್ರ ಕಲಾಕ್ಷೇತ್ರಕ್ಕೆ ಹೊಸರೂಪ** : ರವೀಂದ್ರ ಕಲಾಕ್ಷೇತ್ರವು ನಿರ್ಮಾಣವಾದ ಮೇಲೆ ಅದರ ನಿರ್ವಹಣಾ ಜವಾಬ್ದಾರಿ ಹೊತ್ತಿದ್ದ ಮಹಾದೇವ ಸ್ವಾಮಿಯವರ ಕಲ್ಪನೆಯಲ್ಲಿ ಪೌರಾಣಿಕ ನಾಟಕಗಳ ರಂಗ ಸಜ್ಜಿಕೆಯಿಂದ ಕಲಾಕ್ಷೇತ್ರ ಆವೃತವಾಗಿರುತ್ತದೆ. ಅಂದರೆ ದರ್ಬಾರ್ ಸೀನಿನ ಪರದೆ, ಜಂಗಲ್ ಸೀನ್‌ಪರದೆ, ರಸ್ತಾ ಪರದೆ, ಸೈಡ್ ವಿಂಗುಗಳಿಗೆ ದರ್ಬಾರ್ ಸೀನಿನ ಕಂಬಗಳು, ಝಗಮಗಿಸುವ ದೀಪಾಲಂಕಾರ ಈ ಮಾದರಿಯಲ್ಲಿ ಇರುತ್ತದೆ ಕಲಾಕ್ಷೇತ್ರ, ಹೀಗೆ ವೃತ್ತಿ ಶೈಲಿಯಲ್ಲಿ ಇರುವ ವೇದಿಕೆಯನ್ನು ಆಧುನಿಕ, ಹವ್ಯಾಸಿ ಶೈಲಿಗೆ ಹೊಂದಿಸಿಕೊಳ್ಳಲಿಕ್ಕೆ 5–6 ಜನ ನೇಪಥ್ಯಗಾರರು ರಾತ್ರಿಯಲ್ಲಾ ವೃತ್ತಿ ಶೈಲಿಯ ರಂಗಸಜ್ಜಿಕೆಯನ್ನು ಬಿಚ್ಚಿ ಅಥವಾ ಅದರ ಮೇಲೆಯೇ ಕಪ್ಪು ಪರದೆಗಳನ್ನು ಹೊದಿಸಿ ಹೌಸ್‌ಪ್ಲಾಟ್‌ಗಳನ್ನು ಹಾಕಬೇಕಾಗಿತ್ತು. ನಂತರ ಲೈಟ್‌ಗಳನ್ನು ಕಟ್ಟಿಕೊಳ್ಳಬೇಕಾಗಿರುತ್ತಿತ್ತು. ಇಡೀ ರಂಗವೇದಿಕೆಯನ್ನು ಆಧುನಿಕ ಶೈಲಿಗೆ ಮಾರ್ಪಡಿಸಬೇಕಾಗಿತ್ತು ಹಾಗೂ ನಾಟಕ ಮುಗಿದ ಮೇಲೆ ಯಥಾಸ್ಥಿತಿಗೆ ತರಬೇಕಾಗುತ್ತಿತ್ತು. ಹೀಗೆ ಸುಮಾರು 10 ವರ್ಷಗಳ ಕಾಲ ಪ್ರತಿ ನಾಟಕಕ್ಕೂ ಈ ರೀತಿ ಬದಲಾವಣೆ ಮಾಡಿಕೊಳ್ಳುತ್ತಿತ್ತು ಕೃಷ್ಣಪ್ಪ ಅವರ ಗುಂಪು. ಈ ರೀತಿಯ ಬದಲಾವಣೆ ಕಷ್ಟಸಾಧ್ಯವಾದ್ದರಿಂದ ನಾಟಕ ಪ್ರದರ್ಶನಕ್ಕೂ ತ್ರಾಸ ಕೊಡುತ್ತಿದ್ದರಿಂದ ರವೀಂದ್ರಕಲಾಕ್ಷೇತ್ರದ ಒಳರೂಪವನ್ನು ಬದಲಿಸಿ ಆಧುನಿಕತೆ ತರಲು ನವೀನ ರೀತಿಯ ರಂಗಸಜ್ಜಿಕೆ ನಿರ್ಮಾಣ ಮಾಡಲು ಮೈಸೂರು ಸಂಗೀತ ನಾಟಕ ಅಕಾಡೆಮಿಯು ಒತ್ತಾಯಿಸಿದ್ದರಿಂದ ರವೀಂದ್ರಕಲಾಕ್ಷೇತ್ರವನ್ನು ನವೀಕರಿಸಲು 8–9 ತಿಂಗಳ ಕಾಲ ಮುಚ್ಚಲಾಯಿತು.

## ಬಯಲುರಂಗಕ್ಕೆ ಬುನಾದಿ ಹಾಕಿದ ಕಾರಂತ – ಕೃಷ್ಣಪ್ಪ

ರಂಗ ಚಟುವಟಿಕೆ; ರಂಗಮಂದಿರ ಇರಲಿ ಇಲ್ಲದೇ ಇರಲಿ, ಅಗತ್ಯ ಅನುಕೂಲಗಳು ಇರಲಿ ಇಲ್ಲದೇ ಇರಲಿ, ಅದು ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ಅದು ನಿಲ್ಲುವುದಿಲ್ಲ, ಯಾರಲ್ಲಿದಿದ್ದರೂ ನಡೆಯುತ್ತೆ. ನಾಟಕ ಮಾಡೋಕ್ಕೆ ರವೀಂದ್ರಕಲಾಕ್ಷೇತ್ರವೇ ಅಂತಿಮವಲ್ಲ. ಅದು ಇಲ್ಲ ಎಂದರೆ ಇನ್ನೊಂದು ಕಡೆ ನಾಟಕ ಆಗೇ ಆಗುತ್ತದೆ. ರಂಗಭೂಮಿಯ ಹಾಗೆಯೆ ತನ್ನ ಇರುವನ್ನು, ತನ್ನ ಅಸ್ತಿತ್ವವನ್ನು ಎಲ್ಲಾದರೂ ಒಂದೆಡೆ ಕಂಡುಕೊಳ್ಳುತ್ತದೆ. ಅದರ ಶಕ್ತಿಯೇ ಹಾಗೆ, ಯಾರೋ ಒಬ್ಬ ಕಾರಣ ಪುರುಷ ಆ ಸಂದರ್ಭಕ್ಕೆ ಬೇಕಷ್ಟೇ. ಇಲ್ಲಿ ಯಾರೋ ಒಬ್ಬ ಅನಾಮಿಕ ಹುಟ್ಟಿಕೊಳ್ಳುತ್ತಾನೆ. ಅವನು ಈ ತೇರನ್ನು ಮುಂದೆ ಎಳೆದುಕೊಂಡು ಹೋಗುತ್ತಾನೆ. ತನಗೆ ಕಂಡ ಜಾಗವನ್ನು ಹಸನುಗೊಳಿಸಿ ಅಲ್ಲಿ ತೇರನ್ನು ನಿಲ್ಲಿಸುತ್ತಾನೆ. ವಲಸೆ ಬರುವವರೆಷ್ಟೋ ಹೋಗುವವರೆಷ್ಟೋ ಜನ. ಅಲ್ಲಿ ಬಂದು ಆನಂದಪಡುವವರು ಕೈ ಜೋಡಿಸಲಿ ಎಂದು ಯಾರೂ ಕಾಯುವುದಿಲ್ಲ. ಯಾರೋ ಒಬ್ಬ ತಂದು ನಿಲ್ಲಿಸಿದ

ರಥವನ್ನು ಮತ್ತ್ಯಾರೋ ಮುಂದೆ ಎಳೆಯುತ್ತಾರೆ. ಯಾರಿಗೆ ಯಾರೂ ಕಾಯುವುದಿಲ್ಲ. ಅದು ಯಾವ ಕಾರಣಕ್ಕೂ ನಿಲ್ಲುವುದಿಲ್ಲ. ರಂಗ ರಥವ ಎಳೆಯುವವರು ಬರುತ್ತಲೇ ಇರುತ್ತಾರೆ. ಅದು ಮುಂದೆ ಹೋಗುತ್ತಲೇ ಇರುತ್ತದೆ. ರಂಗಭೂಮಿಯ ಈ ಸಂದರ್ಭದಲ್ಲಿ ಆದದ್ದೂ ಸಹ ಅದೇ. ರವೀಂದ್ರಕಲಾಕ್ಷೇತ್ರ ಕಾರಣಾಂತರಗಳಿಂದ ಮುಚ್ಚಲ್ಪಟ್ಟಿತು. ರಂಗ ಚಟುವಟಿಕೆಯೇನೂ ನಿಲ್ಲಲಿಲ್ಲ. ನಾಟಕ ಮಾಡಬೇಕೆಂಬ ಜೀಲ್ ಇದ್ದವರಿಗೆ ಮಾರ್ಗ ತನಗೆ ತಾನೇ ಕಾಣುತ್ತದೆ. ಆಗ ಆದದ್ದು ಅದೇ. ರಾಮ ಆಂಜನೇಯನಂತಿದ್ದ ಕಾರಂತ ಮತ್ತು ಕೃಷ್ಣಪ್ಪ ಜೋಡಿಗೆ ಕಲಾಕ್ಷೇತ್ರದ ಹಿಂಭಾಗದ ಜಾಗ ಕಣ್ಣಿಗೆ ಬಿತ್ತು. ಈಗ ಸಂಸ ಬಯಲು ರಂಗಮಂದಿರವಿರುವ ಸ್ಥಳ, ಕಲಾಕ್ಷೇತ್ರದೊಳಗೆ ಕಂಪನಿ ನಾಟಕಗಳ ಸೀನರಿ ತುಂಬಿದ್ದ ಲೋಡ್‌ಲಾರಿಯು ಒಳ ಹೋಗಲು ಇದ್ದ ಮಹಾದ್ವಾರ. ಅಂದರೆ ಈಗ ಕಾಣುವ ಬೃಹದಾಕಾದ ಶೆಟರ್‌ನ ಮುಂಭಾಗ. ಹಾಗೂ ಅಲ್ಲಿದ್ದ ಎಪಿಕ್ ಥಿಯೇಟರ್ ಮಾದರಿಯ 4–6 ದೊಡ್ಡ ದೊಡ್ಡ ಕಂಬಗಳು, ಇದನ್ನು ಕಂಡ ಕೃಷ್ಣಪ್ಪನವರಿಗೆ ಲಂಕೆಯ ಅಶೋಕವನದಲ್ಲಿ ಸೀತೆಯನ್ನು ಕಂಡ ಹನುಮಂತನಿಗೆ ಆದ ಆನಂದದಷ್ಟು ಪರಮಾನಂದ ಆಗಿ ಅವರು ತಕ್ಷಣ ಕಾರಂತರಿಗೆ ವಿಷಯ ತಿಳಿಸುತ್ತಾರೆ. ಆಹಾ ಇದೇ ಇದೇ ಪ್ರಶಸ್ತವಾದ ಸ್ಥಳ. ಇದೇ ಸೂಕ್ತವಾದ ಜಾಗ.......'ಈಡಿಪಸ್' ನಾಟಕ ಪ್ರದರ್ಶಿಸಲು ಈ ಜಾಗ ಬಿಟ್ಟರೆ ಮತ್ತೊಂದು ಇರಲಿಕ್ಕೆ ಸಾಧ್ಯವೇ ಇಲ್ಲ. ಕಲಾಕ್ಷೇತ್ರ ಮುಚ್ಚಿದ್ದೇ ಒಳ್ಳೆಯದಾಯಿತು. ನಾಟಕವನ್ನು ಕಲಾಕ್ಷೇತ್ರದಲ್ಲಿ ಮಾಡಿದ್ದರೂ ಈ ರೀತಿಯ ಬೃಹತ್ ರಂಗಸಜ್ಜಿಕೆಯನ್ನು ನಿರ್ಮಾಣ ಮಾಡಲಾಗುತ್ತಿತ್ತೋ. ಇಲ್ಲವೋ, 'ಈಡಿಪಸ್‌ಗೆ' ಹೇಳಿ ಮಾಡಿಸಿದ ಜಾಗ ಎಂದು ಉದ್ಗಾರ ತೆಗೆಯುತ್ತಾರೆ ಕಾರಂತರು.

ಕಾರಂತರು ಎಲ್ಲ ಕಲಾವಿದರೊಡನೆ ಸಮಾಲೋಚಿಸಿ ಈಡಿಪಸ್ ನಾಟಕವನ್ನು ಆ ಬಯಲಿನಲ್ಲೇ ಪ್ರದರ್ಶಿಸುತ್ತಾರೆ. ಈ ಸಂಧರ್ಭವನ್ನು ನೆನೆದು ಕಾರಂತರು ಹೇಳಿರುವ ಮಾತುಗಳನ್ನು ನಾನು ಈಗಾಗಲೇ ದಾಖಲಿಸಿದ್ದೇನಾದ್ದರಿಂದ ಮತ್ತೊಮ್ಮೆ ಅವನ್ನು ಇಲ್ಲಿ ತರುವುದಿಲ್ಲ.

ಹಾಗೆ ಅನ್ವೇಷಣೆಗೊಂಡಿದ್ದೆ 'ಬಯಲು ರಂಗಮಂದಿರ'. ಈ ಕೀರ್ತಿಗೆ ಕೃಷ್ಣಪ್ಪ–ಕಾರಂತರಲ್ಲದೆ ಮತ್ಯಾರು ಭಾಜನರಾಗಲು ಸಾಧ್ಯ. ನೀವೇ ಹೇಳಿ?

## ಚರಿತ್ರೆ ಬರೆದ ಬಯಲು ರಂಗೋತ್ಸವ

70ರ ದಶಕ 70 ದಶಕ ಎಂದು ಈಗಲೂ ಹಾಗೂ ಸದಾಕಾಲವು ರಂಗವಲಯದಲ್ಲಿ ಜನಜನಿತವಾಗಿರುವ ಅಥವಾ ಯಾವುದೇ ಸಂವಾದ, ಸೆಮಿನಾರ್‌ಗಳಲ್ಲಿ ಘಂಟಾನಾದದಂತೆ ರಿಂಗುಣಿಸುವ ಅಥವಾ ಯಾರಾದರೂ ಹಿರಿಯ

ಕಾಲದ ರಂಗ ಗೆಳೆಯರು ಸೇರಿದಾಗ ಅವರ ಸಹಜ ಮಾತುಕತೆಯಲ್ಲಿ ಹರಿದಾಡುವ ಹಾಗೆ ಹರಿದಾಡುತ್ತಾ ಕಿರಿಯರಿಗೆ ನಾವೇನು ಮಾಡೇ ಇಲ್ಲವೇ, ನಮ್ಮ ಕಾಲದಲ್ಲಿ ರಂಗಭೂಮಿ ಸಾಗೇ ಇಲ್ಲವೇ, ಇದೇನು ಇದು ಈಗಲೂ 70ರ ದಶಕದ ಭಜನೆ ಮಾಡುತ್ತಲೇ ಇದ್ದಾರಲ್ಲ, ಎಂತೆನಿಸುವ ಆ 70ರ ದಶಕ ಇದೆಯಲ್ಲ ಇದು ಎಲ್ಲರೂ ಹೇಳುವಂತೆ ಆಧುನಿಕ ರಂಗಭೂಮಿಯ ಸುವರ್ಣಕಾಲ ಅಂತಾರಲ್ಲ, ಆ 70ರ ದಶಕ, ಅದು ಪ್ರಾರಂಭವಾದದ್ದೇ ಒಂದು ಅನಿವಾರ್ಯತೆಯಿಂದ ಹಾಗೂ ಕಲಾವಿದರ, ಸಾಹಸಿ ಅನ್ವೇಷಣಾ ಗುಣದಿಂದ. ಈ ಕ್ರಿಯೆಗೆ ಕಾಲವೂ ಪಕ್ವವಾಗಿತ್ತು. ಅನೇಕ ಶ್ರೇಷ್ಠ ಮನಸ್ಸುಗಳು ಒಗ್ಗೂಡಿದ್ದವು. ಕೆಲಸ ಮಾಡಲು ತುಡಿಯುತ್ತಿದ್ದ ಒಂದು ರಂಗಪಡೆ ಟೊಂಕಕಟ್ಟಿ ನಿಂತಿತ್ತು. ಬೆಂಗಳೂರಿನ ಇಡೀ ಸಾಂಸ್ಕೃತಿಕವಲಯ, ಸಾಹಿತ್ಯವಲಯ, ರಂಗಭೂಮಿವಲಯ, ಪರಸ್ಪರ ಹತ್ತಿರ ಬಂದಿದ್ದವು. ಕಾಲ ಕಾಯುತ್ತಿತ್ತು. ಇಷ್ಟೆಲ್ಲ ಇದ್ದ ಮೇಲೆ ಅದ್ಭುತ ಜರುಗಲೇ ಬೇಕಲ್ಲ. ಚರಿತ್ರೆ ಸೃಷ್ಟಿಯಾಗಲೇ ಬೇಕಲ್ಲ. ಒಳ್ಳೆಯದು, ಶ್ರೇಷ್ಠವಾದದ್ದು ಸಂಭವಿಸಲೇ ಬೇಕಲ್ಲ. ಕಾರಂತ, ಕಂಬಾರ, ಕಾರ್ನಾಡ್, ಬಿ.ಸಿನಾಣಿ, ಶ್ರೀರಂಗ, ಎ.ರಾಮಮೂರ್ತಿ, ಎಚ್.ವಿ.ವೆಂಕಟಸುಬ್ಬಯ್ಯ, ನಾಗೇಶ, ಕೃಷ್ಣಪ್ಪ, ಸಿಂಹ, ಕಪ್ಪಣ್ಣ, ಲೋಕೇಶ, ಪ್ರಸನ್ನ ಇನ್ನೂ ಮುಂತಾದ ಘಟಾನುಘಟಿಗಳು ಒಗ್ಗೂಡಿದ್ದ ಸಂದರ್ಭ ಅದು.

ಕಲಾಕ್ಷೇತ್ರ ರಿಪೇರಿಗೆಂದು ಮುಚ್ಚುತ್ತೆ. ಅಷ್ಟರಲ್ಲಾಗಲೇ ಲಂಕೇಶ್ ಮತ್ತು ಗೆಳೆಯರ ತಂಡವಾಗಿದ್ದ 'ಪ್ರತಿಮಾ ನಾಟಕರಂಗದ' ಸಲುವಾಗಿ ಕಾರಂತರು 3 ನಾಟಕಗಳನ್ನು ಪ್ರದರ್ಶನಕ್ಕೆ ಸಿದ್ಧಗೊಳಿಸಿದ್ದರು. ಮುಂದೆ ಏನು ದಾರಿ ಎಂದು ಪ್ರಶ್ನೆ ಬಂದಾಗಲೇ ಆ 'ಬಯಲು' ಉತ್ತರ ಕೊಟ್ಟಿತ್ತು. ಯಾವುದೇ ಕಾರಣಕ್ಕೂ ಪ್ರದರ್ಶನಗಳನ್ನು ನಿಲ್ಲಿಸಲು ಬಯಸದ ಕಾರಂತರು ಆ ಬಯಲಿನಲ್ಲಿ ನಾಟಕಗಳನ್ನು ಮಾಡಲು ತೀರ್ಮಾನಿಸುತ್ತಾರೆ. ಕರ್ನಾಟಕ ರಂಗಭೂಮಿಯಲ್ಲಿ ಚರಿತಾರ್ಹ ಘಟನೆಯಂದೇ ಎನಿಸಿಕೊಂಡಿರುವ ಈ ಬಯಲು ರಂಗೋತ್ಸವ ನಡೆದದ್ದು 11, 12, 13ರ ಫೆಬ್ರವರಿ 1972ರಲ್ಲಿ. ಆಗ ಪ್ರದರ್ಶನಕಂಡ ನಾಟಕಗಳೆಂದರೆ ಡಾ.ಚಂದ್ರಶೇಖರಕಂಬಾರರ 'ಜೋಕುಮಾರಸ್ವಾಮಿ', ಲಂಕೇಶರ 'ಸಂಕ್ರಾಂತಿ' ಗ್ರೀಕ್ ನಾಟಕಕಾರ ಸಾಫೋಕ್ಲಿಸ್‌ನ 'ಈಡಿಪಸ್' (ಅನುವಾದ ಪಿ. ಲಂಕೇಶ್) ಈ ಮೂರೂ ನಾಟಕಗಳು ಅಂದು ಪ್ರದರ್ಶನಗೊಳ್ಳುತ್ತವೆ. ಮೈಸೂರು ರಾಜ್ಯ ಸಂಗೀತ ನಾಟಕ ಅಕಾಡೆಮಿ ನೆರವು ಹಾಗೂ ಪ್ರತಿಮಾ ನಾಟಕರಂಗ ಮತ್ತು ಕನ್ನಡ ಸಾಹಿತ್ಯ ಕಲಾಸಂಘದ ಅರ್ಪಣೆಯೊಂದಿಗೆ ಈ ನಾಟಕೋತ್ಸವ ನಡೆಯುತ್ತದೆ. ಈಗ ಇರುವ 'ಸಂಸ' ರಂಗಮಂದಿರದ ಭಾಗದಲ್ಲಿ ಈಡಿಪಸ್, ಕಲಾಕ್ಷೇತ್ರದ ಪೂರ್ವ ಅಂಗಳದಲ್ಲಿ 'ಸಂಕ್ರಾಂತಿ', ಕಲಾಕ್ಷೇತ್ರದ ಪೂರ್ವಭಾಗದ ಮೆಟ್ಟಿಲೂ ಸೇರಿದಂತೆ ಆ ಜಗಲಿಯ ಆವರಣವನ್ನು ಬಳಸಿಕೊಂಡ ಸ್ಥಳದಲ್ಲಿ 'ಜೋಕುಮಾರಸ್ವಾಮಿ' ನಾಟಕಗಳು ಪ್ರದರ್ಶಿಸಿತವಾಗುತ್ತದೆ.

ಈ ಉತ್ಸವದಲ್ಲಿ ಪ್ರದರ್ಶಿತವಾದ ನಾಟಕಗಳ ಬೆಳಕಿನ ವಿನ್ಯಾಸ ಆದಾಗ ತಾನೇ ಹೊರದೇಶದಿಂದ ರಂಗಭೂಮಿಯ ಬಗ್ಗೆ ವ್ಯಾಸಂಗ ಮಾಡಿ ಬಂದಿದ್ದ ವಿ.ರಾಮಮೂರ್ತಿಯವರದಾಗಿರುತ್ತದೆ. ನೇಪಥ್ಯ ಹಾಗೂ ಬೆಳಕಿನ ಮುಖ್ಯ ಹೊಣೆ ಕೃಷ್ಣಪ್ಪನವರದಾಗಿತ್ತು. ಜೋಕುಮಾರಸ್ವಾಮಿ ನಾಟಕದ ಸ್ಟೇಜ್ ಮ್ಯಾನೇಜರ್ ಆಗಿದ್ದವರು ಪ್ರಸನ್ನ. ಹೀಗೆ ಸಂಕ್ರಾಂತಿಗೆ ಸ್ಟೇಜ್ ಮ್ಯಾನೇಜರ್ ಆಗಿದ್ದವರು ಮತ್ತು ಈಡಿಪಸ್ ನಾಟಕಕ್ಕೆ ಸ್ಟೇಜ್ ಮ್ಯಾನೇಜರ್ ಆಗಿದ್ದವರು ಕೃಷ್ಣಪ್ಪನವರು. ಇವರ ಜೊತೆ ಎನ್.ಕೆ. ಮೋಹನರಾಂ ಇರುತ್ತಾರೆ. ನೇಪಥ್ಯದಲ್ಲೂ ಕೆಲಸ ಮಾಡುತ್ತಾ, ನಾಟಕದ ಮ್ಯಾನೇಜ್‌ಮೆಂಟ್ ಮಾಡುತ್ತಾ, ಬೆಳಕಿನ ವಿನ್ಯಾಸವನ್ನೂ ಮಾಡುತ್ತಾ, ಇಡೀ ಉತ್ಸವದ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತು ಮುನಿರಂಗಪ್ಪನ ಹಾಗೆ ರಂಗದ ಎಲ್ಲಾ ವಿಭಾಗಗಳಿಗೂ ಕಣ್ಣು ಹರಿಸುತ್ತಿದ್ದ, ಬೆಳಕು ಕೊಡುವ ನೀನು 'ದೀವಟಿಗೆ ಕೃಷ್ಣಪ್ಪ' ಎಂದವರು ಪ್ರಸನ್ನ ಅವರು. ಹೀಗೆ ಎಲ್. ಕೃಷ್ಣಪ್ಪನವರು ದೀವಟಿಗೆ ಕೃಷ್ಣಪ್ಪನಾಗುತ್ತಾರೆ.

ಈ ಬಯಲು ರಂಗೋತ್ಸವದಲ್ಲಿ ಇಡೀ ಬೆಂಗಳೂರಿನ ರಂಗಕರ್ಮಿಗಳು, ಕಲಾವಿದರು, ಸಾಹಿತಿಗಳು ಒಗ್ಗೂಡಿದ್ದರೂ ಅಂದೇನಲ್ಲ ನಾನು ಆ ಉತ್ಸವದಲ್ಲಿ ಯಾರ್ಯಾರೆಲ್ಲ ಇದ್ದರು, ಅದು ಹೇಗೆ ಜರುಗಿತು. ಪತ್ರಿಕೆಗಳು ಆ ಕುರಿತು ಏನನ್ನ ಬರೆದವು. ಪ್ರೇಕ್ಷಕರ ಸ್ಪಂದನ ಹೇಗಿತ್ತು. ಯಾರು ಯಾರು ಯಾವ ಪಾತ್ರಗಳನ್ನು ನಿರ್ವಹಿಸಿದ್ದರು. ಆ ನಾಟಕಗಳಲ್ಲಿ ಭಾಗವಹಿಸಿದ್ದ ಕಲಾವಿದೆಯರು ಯಾರು ಯಾರು, ನೇಪಥ್ಯದಲ್ಲಿದ್ದವರು ಎಷ್ಟು ಜನ, ಸಂಗೀತ ಕಲಾವಿದರು ಯಾರ್ಯಾರು, ಹಿನ್ನಲೆಯಲ್ಲಿ ನಿಂತವರಾರು, ಪ್ರಚಾರದ ಹೊಣೆ ಯಾರದಾಗಿತ್ತು, ಯಾರು ಟಿಕೇಟ್ ಹರಿದರು, ಲೈಟ್ ಕಟ್ಟಿದವರಾರು, ಮೊಳೆ ಹೊಡೆದವರಾರು, ಸೈಕಲ್ ತುಳಿದವರಾರು, ಇಡೀ ಉತ್ಸವದಲ್ಲಿ ತೊಡಗಿಕೊಂಡವರು ಎಷ್ಟು ಜನ, ಇದೇ ಸಂಥರ್ಭದಲ್ಲಿ ರಂಗಭೂಮಿ ಕುರಿತು ನಡೆದ ವಿಚಾರ ಸಂಕಿರಣಕ್ಕೆ ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗ ಯಾವ ರೀತಿ ಸಹಕಾರ ನೀಡಿತು. ಈ ಸಂಕಿರಣದಲ್ಲಿ ಯಾರು ಯಾರು ಯಾವ ವಿಷಯ ಮಂಡನೆ ಮಾಡಿದರು. ಒಟ್ಟು ಉತ್ಸವವು ಕನ್ನಡ ರಂಗಭೂಮಿಯ ಮೇಲೆ ಬೀರಿದ ಪ್ರಭಾವ ಯಾವುದು, ಪರಿಣಾಮ ಏನು, ಈ ಎಲ್ಲಾ ವಿವರಣೆಗೆ ಹೋಗುವುದಿಲ್ಲ, ಕಾರಣ ಬಯಲು ರಂಗೋತ್ಸವದ್ದೇ ಒಂದು ಪ್ರತ್ಯೇಕ ರಂಗಚರಿತ್ರೆಯಾಗುತ್ತದೆ. ಅದನ್ನೇ ಪ್ರತ್ಯೇಕವಾಗಿ ಬರೆದರೆ ಮಾತ್ರವೇ ಆ ಚರಿತ್ರೆಗೆ ನ್ಯಾಯಸಲ್ಲಿಸಿದಂತಾಗುತ್ತದೆ. ಆ ಕಾರಣದಿಂದ ಅದರ ಗೊಡವೆಗೆ ಇಲ್ಲಿ ನಾನು ಹೋಗುವುದಿಲ್ಲ.

ಬಯಲು ರಂಗೋತ್ಸವದ ಕಲ್ಪನೆ ಮತ್ತು ನೇತೃತ್ವ ಲಂಕೇಶ್ ಅವರದಾಗಿರುತ್ತದೆ. ಕನ್ನಡ ಸಾಹಿತ್ಯ ಕಲಾಸಂಘದ ಕೋಶಾಧಿಕಾರಿಯಾಗಿದ್ದ ಕಾರಣ ಹಾಗೂ ಕಾರಂತರೊಟ್ಟಿಗೆ ಒಡನಾಟವಿದ್ದುದ್ದರಿಂದ ಮತ್ತು ರಂಗಬದ್ಧತೆಯೂ ಇದ್ದ ಕಾರಣ

ಲಂಕೇಶರು ಕೃಷ್ಣಪ್ಪನವರಿಗೆ ಇಡೀ ಉತ್ಸವದ ಹಾಗೂ ಮೂರು ನಾಟಕಗಳ ಸಂಪೂರ್ಣ ಜವಾಬ್ದಾರಿಯನ್ನು ಹೊರಿಸುತ್ತಾರೆ. ಯಥಾ ಪ್ರಕಾರ ತಮ್ಮ ನಟನಾ ಗೀಳನ್ನು, ಅಭಿನಯಿಸುವ ಹುಚ್ಚನ್ನು ಕೃಷ್ಣಪ್ಪನವರು ಸಣ್ಣ ಸಣ್ಣ ಪಾತ್ರ ಮಾಡುವುದರ ಮೂಲಕ ತೀರಿಸಿಕೊಳ್ಳುತ್ತಾರೆ !

## ಸಂಕ್ರಮಣ ಸ್ಥಿತಿ – ಪರಿವರ್ತನೆಯ ಕಾಲ

ಕೃಷ್ಣಪ್ಪನವರ ಹುಟ್ಟು, ಅವರ ಬದುಕು, ಅವರ ಬೆಳವಣಿಗೆ, ಅವರ ಜೀವನ, ಒಂದು ಅಧ್ಯಾಯ. ಅವರ ಬದುಕಿನ ಅಧ್ಯಾಯ ಇನ್ನೊಂದು ಮಗ್ಗುಲಿಗೆ ತಿರುಗಿದ್ದು ರಂಗಭೂಮಿಗೆ ಅವರು ಪಾದಾರ್ಪಣೆ ಮಾಡಿದ ಮೇಲೆ ರಂಗಭೂಮಿಯೇನು ಅವರಿಗೆ ರತ್ನಗಂಬಳಿ ಹಾಸಿ ಬರಮಾಡಿಕೊಳ್ಳಲಿಲ್ಲ. ಮನೆಯ ಕತ್ತಲ ಕೂಪದಿಂದ ಬೆಳಕನರಸಿ ಬಂದ ಕೃಷ್ಣ; ಹೊತ್ತು ಸವೆಯದೆ ಗೊತ್ತುಗುರಿ ಇಲ್ಲದೆ; ಕನಸ ಕನವರಿಸಿ ಎಡವಿದಾಗ ಹಸಿರಿಲ್ಲದ ಗರಿಕೆಯಂತಾ ರಂಗಭೂಮಿ ಎದುರಾಗುತ್ತದೆ. ಆ ಗರಿಕೆ ಚಿಗುರೊಡೆಯುತ್ತಾ, ಚಿಗುರೊಡೆಯುತ್ತಾ ಯುವಕ ಕೃಷ್ಣನೊಳಗೂ ಕನಸುಗಳು ಚಿಗುರೊಡೆಯುತ್ತವೆ. ಅರಿವು ತೆರೆ ಸರಿಸುತ್ತದೆ. ಆಗಬೇಕು ಜ್ಞಾನವಂತರಂತೆ, ಆಗಬೇಕು ವಿದ್ಯಾವಂತರಂತೆ, ಆಗಬೇಕು ಎಲ್ಲರಂತೆ ಎಂದೆನಿಸುತ್ತದೆ.

ಆ ದಿನಗಳಲ್ಲಿ ಕೃಷ್ಣಪ್ಪನವರಲ್ಲಾದ ಸಂಕ್ರಮಣವನ್ನು ನೀವು ಅವರ ಬಾಯಿಂದಲೇ ಕೇಳಿ.

ಇವರ ಪಂಗಡದವರ ಎಲ್ಲಾ ಮನೆಯಲ್ಲೂ ಇದೇ ಚಾಕರಿ, ಕೈಯಾಳು, ಕಾಲಾಳಿನಂತೆ ಕೆಲಸ, ದುಡಿಮೆ, ವಿದ್ಯೆಯ ಅರಿವಿಲ್ಲ, ಜ್ಞಾನದ ಗಂಧವಿಲ್ಲ, ಗಂಜಲದ ಗಂಧ, ತೊಪ್ಪೆ ವಾಸನೆ, ಕೈಗೆ ಸೋಕಿದ ಹಾಲನ್ನು ನೆಕ್ಕಿದರಷ್ಟೇ ಅದರ ಸವಿ. ಇಲ್ಲದಿದ್ದರೆ ಅದೂ ಇಲ್ಲ. ತಾನು ಕರೆದ ಹಾಲನ್ನು ಮತ್ಯಾರೋ ಕಡೀತಾರೆ. ತನಗೆ ಅದರಲ್ಲಿ ಒಂದು ಚಟಾಕು ಪಾಲಿಲ್ಲವೇ ಅಂತ ನನಗೆ ಅನ್ನಿಸುತ್ತಿತ್ತು. ಅಂತಹದೇ ಸ್ಥಿತಿ ಇಲ್ಲೂ ಮುಂದುವರೆಯಬೇಕೇ ಅನ್ನಿಸಿತು. ಶಾಲೆಯ ಪಠ್ಯದಲ್ಲಿದ್ದ ಬುದ್ಧ, ಬಸವನ ಮಾತುಗಳು, ಅವರ ವಿಚಾರಧಾರೆಗಳು ನನ್ನನ್ನು ಎಚ್ಚರಿಸಿದವು. ಆಗ ನನ್ನ ಅಸ್ತಿತ್ವದ ಪ್ರಶ್ನೆ ನನ್ನ ಮುಂದೆ ಬೃಹದಾಕಾರ ತಾಳಿತು. ನಾನೇನು? ನನ್ನ ಸ್ಥಾನಮಾನಗಳೇನು? ನನ್ನ ಇರುವಿಕೆ ಬರಿ ಕೆಲಸ ಮಾಡುವುದಾ? ಮೊಳೆ ಹೊಡೆಯುವುದಷ್ಟೇ ನನ್ನ ಕೆಲಸವಾ? ನಾನು ಕೂಲಿ ಕಾರ್ಮಿಕನಂತೆ ಇರಬೇಕಾ? ಬರುವ ಯಶಸ್ಸಿನಲ್ಲಿ ನನ್ನ ಪಾಲಿಲ್ಲವೇ? ಕಾಯುವವನು ಭಟ, ಹೆಸರು ದಳಪತಿಗೆ, ಅನ್ನುವ ಸ್ಥಿತಿಯಾಗುತ್ತಿತ್ತು. ಯಶಸ್ಸಿನಲ್ಲಿ ನನ್ನ ಪಾಲಿಲ್ಲವೇ ? ಎಂಬ ಪ್ರಶ್ನೆ ಕಾಡಿದ್ದರಿಂದ ನನ್ನ ಅಗತ್ಯತೆ ಬೇರೆಯವರಿಗೂ ತಿಳಿಯಬೇಕು. ನನ್ನ ಇರಿವು ಇತರರಿಗೂ ಕಾಣಬೇಕು. ಇಲ್ಲಿ

ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ, ಬುದ್ಧ ಬಸವ ಸಾರಿದ ಸಮಾನತೆ ನನ್ನ ಕಿವಿಗಳಲ್ಲಿ ಮಾರ್ಧನಿಸುತ್ತಿತ್ತು. ಜ್ಞಾನದ ಮೂಲ ವಿದ್ಯೆ ಅನಿಸಿತು ನನಗೆ.

ವಿದ್ಯಾವಂತನಾಗಬೇಕು, ಅರಿವು ಪಡೆಯಬೇಕು, ಎಲ್ಲರಂತೆ ಮಾನ್ಯತೆ ಗಳಿಸಬೇಕು. ಎಂಬ ಆಸೆಯಿಂದ ಇದೇ ಕ್ಷೇತ್ರದಲ್ಲಿ ಪರಿಣತಿ ಪಡೆಯಬೇಕೆಂಬ ಛಲದಿಂದ, ತಜ್ಞನಾಗಬೇಕೆಂಬ ತುಡಿತದಿಂದ, ಅರಿವನ್ನು ಪಡೆಯಲು ವಿದ್ಯಾವಂತರಂತೆ ಹೆಚ್ಚು ಹೆಚ್ಚು ತಿಳಿದುಕೊಳ್ಳಬೇಕು. ಜ್ಞಾನವಂತರಾಗಬೇಕು. ಇತರರರಂತೆ ಹೇಗೆ ಬೆಳೆಯಬೇಕು, ಹೊಸ ಹೊಸ ವಿಚಾರಗಳಿಂದ ಎತ್ತರೆತ್ತರಕ್ಕೆ ಬೆಳೆಯಬಹುದೆಂಬ ತಿಳುವಳಿಕೆ ಆ ದಿನಗಳಲ್ಲಿ ಮೂಡುತ್ತಾ ಹೋಯಿತು. ವಿದ್ಯಾವಂತಿಕೆಯಿಂದ ಅವಕಾಶ ವಂಚಿತನಾದ ನಾನು, ಕೀಳರಿಮೆಯಿಂದ ಬಳಲುತ್ತಿದ್ದ ನನಗೆ ಇದರಿಂದ ಹೇಗೆ ಪಾರಾಗಬೇಕು, ಇದರಿಂದ ಹೊರಬರುವ ದಾರಿ ಯಾವುದು, ಎಂಬ ಪ್ರಶ್ನೆ ಬಂದಾಗಲೆಲ್ಲ ನಾನು ವಿಭಿನ್ನವಾಗಿರಬೇಕು, ಕಲಿಬೇಕು, ತಿಳಿದುಕೊಳ್ಳಬೇಕು, ಸೂಕ್ಷ್ಮಗಳನ್ನು ಗ್ರಹಿಸಬೇಕು, ಕೂಲಿ ಆಳಿನಂತೆ ಕೆಲಸ ಮಾಡುತ್ತಾ ಹೋದರೆ ಜೀವನಪೂರ್ತಿ ಅದನ್ನೇ ಮಾಡಿಸುತ್ತದೆ ಈ ಜಗತ್ತು. ಆ ಬದುಕು ನನ್ನದಾಗಬಾರದು ಅನ್ನಿಸಿತು. ಇದುವರೆಗಿನ ಕೃಷ್ಣಪ್ಪನಿಗಿಂತ ಈ ಮುಂದಿನ ಕೃಷ್ಣಪ್ಪ ಬೇರೆಯಾಗಬೇಕು. ಅನ್ನಿಸುತ್ತಿತ್ತು. ಹೆಚ್ಚು ಹೆಚ್ಚು ತಿಳಿದವರಿಗೆ ಮಾತ್ರ ಬೆಲೆ, ಶ್ರಮಜೀವಿಗಳಿಗೆ ಈ ಜಗತ್ತು ಎಂದೂ ಬೆಲೆ ಕೊಟ್ಟಿಲ್ಲ ಎಂಬ ಸತ್ಯ ಅರಿವಾಯಿತು. ಈ ಎಲ್ಲಾ ಕಾರಣಗಳಿಂದ ನನ್ನ ಐಡಂಟಿಟಿಯ ಪ್ರಶ್ನೆ ಕಾಡುತ್ತಿತ್ತು. ಮನ ಭಿನ್ನತೆಯನ್ನು ಬಯಸಿದ್ದರಿಂದ ಎಲ್ಲೇ ರಂಗ ವಿಚಾರಸಂಕಿರಣಗಳಾಗಲಿ ರಂಗ ಉಪನ್ಯಾಸಗಳು ನಡೆಯಲಿ ಅಲ್ಲೆಲ್ಲ ನಾನಿರುತ್ತಿದ್ದೆ. ವಿದ್ವಾಂಸರಾಡುತ್ತಿದ್ದ ಮಾತುಗಳನ್ನು ಕೇಳುತ್ತಿದ್ದೆ, ಭಿನ್ನ ಶೈಲಿಯ ನಾಟಕಗಳ ವಿಮರ್ಶೆಗಳನ್ನು ಓದುವುದು, ಚರ್ಚೆಯಲ್ಲಿ ಭಾಗಿಯಾಗುವುದು ತಿಳುವಳಿಕಸ್ತರ ಜೊತೆ ಬೆರೆಯಲು ಹೆಚ್ಚಿನ ಕಾಲಾವಕಾಶವನ್ನು ಮೀಸಲಾಗಿಡುತ್ತಿದ್ದೆನು. ನಾನೇನು ಸ್ಥಿತಿವಂತನಲ್ಲದಿದ್ದ ಕಾರಣ, ಆ ಸಂದರ್ಭದಲ್ಲಿ ಹಣವೂ ಸಹ ನನಗೆ ಮುಖ್ಯವಾಗಿತ್ತು, ದುಡಿಮೆಗೂ ಹಾತೊರೆಯುತ್ತಿದ್ದೆ. ಆ ಸಂದರ್ಭದಲ್ಲಿಯೇ ರಂಗದ ಕೆಲಸವನ್ನು ಮಾಡುತ್ತಾ ಸಣ್ಣಪುಟ್ಟ ಕಟ್ಟಡದ ಕೆಲಸಗಳಲ್ಲಿಯೂ ನಾನು ತೊಡಗಿಸಿ ಕೊಳುತ್ತಿದ್ದೆ.

## ರಂಗಭೂಮಿಗೆ ಯುಕ್ತವಾದ 'ಮುಕ್ತ'ಪತ್ರಿಕೆ

ರಂಗಭೂಮಿಯ ಸಂದರ್ಭದಲ್ಲಿ ಅನೇಕ ಪತ್ರಿಕೆಗಳು ಕೆಲಸ ಮಾಡಿರುವ ಹಾಗೆಯೇ ಜನಪ್ರಿಯ ವಾರಪತ್ರಿಕೆಗಳು, ದಿನಪತ್ರಿಕೆಗಳು, ರಂಗಭೂಮಿ ಕುರಿತು ಲೇಖನಗಳು, ಸುದ್ದಿಗಳು, ವಿಮರ್ಶೆಗಳು, ವ್ಯಕ್ತಿ ಚಿತ್ರಗಳು ಹಾಗೂ ಸಂದರ್ಶನಗಳನ್ನು ಪ್ರಕಟಣೆ ಮಾಡುತ್ತಿದ್ದವು. ಹಾಗೆ ಮಾಡುತ್ತಿರುವುದಕ್ಕೆ ಒಂದು ಪರಂಪರೆ ಇದೆ. ಹಾಗೆಯೇ ಸಾಹಿತ್ಯ ಪತ್ರಿಕೆಗಳೂ ರಂಗಭೂಮಿ ಕುರಿತು ಕಾಳಜಿ ವಹಿಸಿವೆ.

ರಂಗಭೂಮಿಯಲ್ಲಿ ರಂಗಪತ್ರಿಕೆಗಳದ್ದೇ ಒಂದು ಚರಿತ್ರೆ ಇದೆ. 1930–40ರ ಸಮಯದಲ್ಲಿ ಬರುತ್ತಿದ್ದ 'ರಂಗಭೂಮಿ' ಪತ್ರಿಕೆ ಬಹಳ ದೊಡ್ಡ ಜವಾಬ್ದಾರಿ ಹೊತ್ತು ಚರಿತ್ರಾರ್ಹ ಕೆಲಸ ಮಾಡಿದೆ. 'ಮುಕ್ತ' ಪತ್ರಿಕೆಗೂ ಅದರದೇ ಆದ ಭಾಮು ಇದೆ.

'ಮುಕ್ತ' ದ ಪ್ರವೇಶ – ಪ್ರಾರಂಭವೂ ಸಹ 70 ದಶಕದಲ್ಲೇ ಆದದ್ದು. ಬಯಲು ರಂಗೋತ್ಸವಕ್ಕೆ 3–4 ತಿಂಗಳ ಮೊದಲೇ ಪತ್ರಿಕೆಯು ಪ್ರಾರಂಭವಾಗುತ್ತದೆ. ಪತ್ರಿಕಾ ವಲಯದಲ್ಲಿ ಶೇಷಣ್ಣನ 'ಕಿಡಿ' ಯಾವ ಪಾತ್ರವನ್ನೂ ವಹಿಸಿತ್ತೋ; ರಂಗಭೂಮಿಯಲ್ಲಿ ಆ ಪಾತ್ರವನ್ನು 'ಮುಕ್ತ' ಪತ್ರಿಕೆ ವಹಿಸುತ್ತದೆ. ರಂಗಭೂಮಿಯಲ್ಲಿ ಹಸಿದ ಹೆಬ್ಬುಲಿಗಳಂತೆ ಇದ್ದ ಒಂದು ಯುವಪಡೆ ಇದರ ಮುಂದಾಳತ್ವ ವಹಿಸಿರುತ್ತದೆ. ಅದಾಗತಾನೇ ಮೀಸೆ ಚಿಗುರಿ ಮೈ ಹುರಿಗಟ್ಟುತ್ತಿದ್ದ, ಕಣ್ಣುಗಳು ಉರಿಕಾರುತ್ತಿದ್ದ ಸುಡು ವಯಸ್ಸಿನ ಹುಡುಗರು ಮುಕ್ತದ ಮುಂಚೂಣಿಯಲ್ಲಿ ಇರುತ್ತಾರೆ. ವ್ಯವಸ್ಥೆಯ ವಿರುದ್ಧ ಸಿಡಿದೇಳುವ ವಯಸ್ಸು, ಎಲ್ಲವನ್ನು ಪ್ರಶ್ನಿಸುವ ಮನಸ್ಸು, ಕಂಡದ್ದನ್ನು ಲೇವಡಿ ಮಾಡುವ, ಹಿರಿಯ ಕಿರಿಯರೆನ್ನದೇ ಕಾಲೆಳೆಯುವ ಹುಡುಗ ವ್ಯಾಘ್ರಗಳು ರಂಗಭೂಮಿಯಲ್ಲಿ ಓಡಾಡುತ್ತಿದ್ದ ಕಾಲ ಅದು. ಎಂತಹವರನ್ನು ಎದುರಾಕಿಕೊಂಡು ಬದುಕಬಹುದೆಂಬ ಕಿಚ್ಚಿನ ಹುಡುಗರು ಮುಕ್ತ ಪ್ರಾರಂಭಿಸಿದ್ದರು. ಪತ್ರಿಕೆಯ ಸಂಪಾದಕತ್ವವನ್ನು 'ಪ್ರಸನ್ನ' ವಹಿಸಿಕೊಂಡಿದ್ದರು. 'ಮೈಗಳ್ಳ' ಹೆಸರಿನಲ್ಲಿ ಲಂಕೇಶ್ ಬರೆಯುತ್ತಿದ್ದರು, 'ಗಾವಿಲ' ಹೆಸರಿನಲ್ಲಿ ಕಾ.ನಂ.ನಾಗರಾಜು ಬರೆಯುತ್ತಿದ್ದು. 'ಪಾಳೇಗಾರ' ಹೆಸರಿನಲ್ಲಿ ಎನ್.ಸೀತಾರಾಮ್ ಬರೆಯುತ್ತಿದ್ದರು, ಕೃಷ್ಣಪ್ಪ, ಎನ್.ಕೆ. ಮೋಹರಾಮ್, ಸಿಂಹ ಕೊಳ್ಳೆಗಾಲ, ಎಲ್.ಎನ್. ಶ್ರೀನಿವಾಸ್ ಇನ್ನೂ ಮುಂತಾದ ತುಂಟ ಹುಡುಗರ ಪಡೆ ಮುಕ್ತದಲ್ಲಿತ್ತು. ಸಂಪಾದಕ ಮಂಡಲಿಯಲ್ಲಿ ಪ್ರಸನ್ನ, ದಿನೇಶ್, ಶ್ರೀನಿವಾಸ (ಶೂದ್ರ) ಇರುತ್ತಾರೆ. ಎಂ.ಎಸ್. ಶ್ರೀನಿವಾಸ್, ಕೆ.ವಿ.ನಾರಾಯಣ್, ಬಿ. ಚಂದ್ರಶೇಖರ್, ದೊಡ್ಡರಂಗೇಗೌಡ, ಕಿ.ರ. ನಾಗರಾಜ್, ಜಿ.ಕೆ.ಗೋವಿಂದರಾವ್, ಇನ್ನೂ ಹಲವು ಯುವ ಲೇಖಕರು ಈ ಪತ್ರಿಕೆಗೆ ಬರೆಯುತ್ತಿದ್ದರು. ಬೇರೆ ಬೇರೆಯವರ ಸಂಪಾದಕತ್ವದಲ್ಲಿ 18 ತಿಂಗಳ ಕಾಲ ಹೊರಬರುತ್ತದೆ. ಮೊದಲ 4 ತಿಂಗಳು ಪ್ರಸನ್ನ ಅವರ ಸಂಪಾದಕತ್ವದಲ್ಲಿ ಹೊರ ಬಂದು ಪ್ರಸನ್ನ ಅವರು ದೆಹಲಿಯ ಎನ್.ಎಸ್.ಡಿ.ಗೆ ಹೋಗಿದ್ದರಿಂದ 5ನೇ ತಿಂಗಳಿನಿಂದ ಟಿ.ಎಸ್. ಸೀತಾರಾಮ್ ಹಾಗೂ ಎಲ್. ಕೃಷ್ಣಪ್ಪನವರು ಈ ಪತ್ರಿಕೆಯ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಾರೆ. ಒಂದು ಸಂಚಿಕೆಗೆ ಡಿ.ಆರ್.ನಾಗರಾಜ್ ಹಾಗೂ ಕಾಳೇಗೌಡ ನಾಗವಾರ ಸಂಪದಕರಾಗಿರುತ್ತಾರೆ. ಬರವಣಿಗೆ, ಲೇಖನಗಳು, ಈ ರೀತಿಯ ಜವಾಬ್ದಾರಿಗಳನ್ನು ಟಿ.ಎನ್.ಸೀತಾರಾಂ ಅವರು ಪತ್ರಿಕೆಯ ವಿನ್ಯಾಸ, ಪ್ರಿಟಿಂಗ್, ಪೋಸ್ಟಿಂಗ್, ಚಂದ ನವೀಕರಣ ಇಂತಹ ಜವಾಬ್ದಾರಿಯನ್ನು ಕೃಷ್ಣಪ್ಪನವರು ವಹಿಸಿಕೊಳ್ಳುತ್ತಾರೆ. ಈ ಪತ್ರಿಕೆಯು ರಾಜಾಮಹಲ್

ಗುಟ್ಟಳ್ಳಿಯಲ್ಲಿ ಇದ್ದ ಡೆಕ್ಕನ್‌ಹೆರಾಲ್ಡ್‌ನಲ್ಲಿ ಕೆಲಸ ಮಾಡುತ್ತಾ ಪ್ರಿಂಟಿಂಗ್ ಪ್ರೆಸ್‌ನ್ನು ನಡೆಸುತ್ತಿದ್ದ ಪಿ.ಎಸ್.ಬಿ.ನಾಯ್ಡುರವರ 'ಬೆಸ್ಟ್ ಪ್ರಿಂಟರ್ಸ್' ನಲ್ಲಿ ಅಚ್ಚಾಗುತ್ತಿತ್ತು.

ವ್ಯವಸ್ಥೆಯ ವಿರುದ್ಧ ಸಿಡಿದೇಳುವುದು, ಕುಟುಕುವುದು, ಕಟುವಿಮರ್ಶೆಗೆ ಒಡ್ಡುವುದು, ಬಂಡಕೋರತನ, ಗೇಲಿ ಎಬ್ಬಿಸುವುದು, ವ್ಯಂಗನುಡಿ, ರಂಗಒಳಗುಟ್ಟುಗಳನ್ನು ಬಯಲಾಗಿಸುವುದು. ಕಿಚಾಯಿಸುವುದು ಇದರ ಜೊತೆ ಜೊತೆ ಗಂಭೀರವಾದ ಲೇಖನಗಳನ್ನ ಪ್ರಕಟಿಸುವುದು, ಈ ಪತ್ರಿಕೆಯ ಮುಖವಾಣಿಯಾಗಿರುತ್ತದೆ. ಇಂತಹ ಗುಣದಿಂದಲೇ ಈ ಪತ್ರಿಕೆಯೂ ಹೆಚ್ಚು ಪ್ರಚಲಿತವೂ, ಪ್ರಸಿದ್ಧವೂ ಆಗಿರುತ್ತದೆ.

1972ರಲ್ಲಿ ಬಂದ ಈ ಪತ್ರಿಕೆಯ ಸಂಚಿಕೆಯಲ್ಲಿ ಪ್ರಕಟವಾದ ಲೇಖನವನ್ನು ವಿಶೇಷವಾಗಿ ಕಾರಂತರ ಬಗ್ಗೆ ಬರೆದ ಲೇಖನವನ್ನು ದೆಹಲಿಯಿಂದ ಬರುತ್ತಿದ್ದ ರಂಗಭೂಮಿಯ ಪ್ರಮುಖವಾದ ಪತ್ರಿಕೆಗಳಲ್ಲಿ ಒಂದಾದ 'ಎನಾಕ್ಟ್' ರಂಗಪತ್ರಿಕೆಯಲ್ಲಿ ಭಾಷಾಂತರಿಸಿ ಕಾರಂತರು ಪ್ರಕಟಗೊಳಿಸುವ ವ್ಯವಸ್ಥೆ ಮಾಡುತ್ತಾರೆ. 'ಎನಾಕ್ಟ್' ಪತ್ರಿಕೆಗೆ 'ಪಾಲ್ ಜೇಕಬ್' ರವರು ಬರದ ಇಂಗ್ಲಿಷ್ ಲೇಖನದಲ್ಲಿ ಈ ಕುರಿತು ದಾಖಲಿಸುತ್ತಾರೆ.

ಮುಕ್ತದ ಇನ್ನೊಂದು ವಿಶೇಷವೆಂದರೆ ಈ ಪತ್ರಿಕೆಯಲ್ಲಿ ಬಂದ ಲೇಖನಗಳು ಆ ಕಾಲದ ಉದಯವಾಣಿ ಪತ್ರಿಕೆಯಲ್ಲಿ ಉತ್ತರ–ಪ್ರತಿಉತ್ತರ–ಪ್ರತಿಕ್ರಿಯೆ–ಸಂವಾದ ರೂಪದಲ್ಲಿ ಬಿತ್ತರವಾಗಿ ಓದುಗರಲ್ಲಿ ಸಂಚಲನವನ್ನುಂಟು ಮಾಡುತ್ತಿತ್ತು. ಆ ದಿನದ ರಂಗಾಸಕ್ತರೆಲ್ಲ 'ಮುಕ್ತ ಬಳಗ'ವನ್ನು ಅದರಲ್ಲಿಯೂ ಕೃಷ್ಣಪ್ಪನವರನ್ನು ಬಹಳ ಗುಮಾನಿಯಿಂದ ನೋಡುತ್ತಿದ್ದರು. ಕೃಷ್ಣಪ್ಪನವರು ರವೀಂದ್ರ ಕಲಾಕ್ಷೇತ್ರದ ಸುತ್ತ ಮುತ್ತ ಸುಳಿದಾಡಿದರೆ ಸಾಕು ಅನೇಕ ರಂಗ ಮಿತ್ರಶತ್ರುಗಳ ಕೈಯಲ್ಲಿ ನಿಂದನೆಗಳನ್ನು ಕೇಳಬೇಕಾದ ಪರಿಸ್ಥಿತಿ ಉಂಟಾಗುತ್ತಿತ್ತು ಅವರಿಗೆ. ಕೃಷ್ಣಪ್ಪನನ್ನು ಗೂಡಾಚಾರನನ್ನು ನೋಡಿದ ಹಾಗೆ ನೋಡುತ್ತಿದ್ದರು. ಇದನ್ನೆಲ್ಲ ಲೆಕ್ಕಿಸದ 'ಮುಕ್ತ' ತನ್ನ ನಿಲುವನ್ನು ಬದಲಿಸದೆ ನಂತರದ ಕೆಲವು ತಿಂಗಳವರೆಗೂ ಮುಂದುವರೆಯಿತು. 1972ರಲ್ಲಿ ಬಂದ ಮುಕ್ತ 9 ರಲ್ಲಿ ಬರೆದ ಲೇಖನದಲ್ಲಿ 'ಮುಕ್ತ'ತನ್ನ ಸ್ಪಷ್ಟ ನಿಲುವನ್ನು ಪ್ರಕಟಿಸುತ್ತದೆ. ಈ ಲೇಖನ ರಂಗಭೂಮಿಯ ದೃಷ್ಟಿಯಿಂದ ಸರ್ವಕಾಲಕ್ಕೂ ಪ್ರಸ್ತುತವಾದದೆಂದು ಕೃಷ್ಣಪ್ಪನವರು ಹೇಳುತ್ತಾರೆ.

ಮುಕ್ತ–8ರ ವಿಶೇಷ ಸಂಚಿಕೆಯ ಕಾಂಟ್ರವರ್ಸಿಗಳ ಕುರಿತಾಗಿ ಬಾ.ಕಿ.ನ. ನೇತೃತ್ವದಲ್ಲಿ ಬರುತ್ತಿದ್ದ 'ನಟನ' ಪತ್ರಿಕೆಯು ಡಿಸೆಂಬರ್ 1972ರಲ್ಲಿ ಪ್ರಕಟಿಸಿದ ತನ್ನ ಪತ್ರಿಕೆಯಲ್ಲಿ ಮುಕ್ತಕ್ಕೆ ಉತ್ತರವಾಗಿ 'ಬಾ.ಕಿ.ನ' ಅವರು ಲೇಖನವನ್ನು ದಾಖಲಿಸುತ್ತಾರೆ.

ಹೀಗೆ 'ಮುಕ್ತ' ಪತ್ರಿಕೆ ಅಂದಿನ ರಂಗಭೂಮಿಯಲ್ಲಿ ದೂಳೆಬ್ಬಿಸಿ ಚರಿತ್ರೆ ಮಾಡುತ್ತದೆ. ಈ ಪತ್ರಿಕೆಯಿಂದ ಕೃಷ್ಣಪ್ಪನವರಿಗೆ ಬರವಣಿಗೆಯ ತಂತ್ರ, ರಚನಾಶೈಲಿ, ನಾಟಕಗಳ ಒಳ ಆವರಣದ ಪರಿಚಯ, ಕನ್ನಡ ರಂಗಭೂಮಿಯ ಹೊಸ ಅಭಿವ್ಯಕ್ತಿಯ ಕ್ರಮ, ಮತ್ತೆ ಪತ್ರಿಕೆಯನ್ನು ಹೊರ ತರುವ ಶ್ರಮ, ಅದರ ರಚನಾತ್ಮಕ ಹಾಗೂ ಸಂಘಟನಾತ್ಮಕ ಕೆಲಸ ಇವೆಲ್ಲವೂ ಪರಿಚಯವಾಗುತ್ತದೆ ಹಾಗೂ ಕರಗತವಾಗುತ್ತದೆ. ಈ ಅನುಭವ ಅವರಿಗೆ 'ಈ ಮಾಸ ನಾಟಕ' ರಂಗಪತ್ರಿಕೆ ತರಲು ಸಹಾಯಕ್ಕೆ ಬರುತ್ತದೆ.

ಬಯಲು ರಂಗೋತ್ಸವದಲ್ಲಿ ಆದ ಲಂಕೇಶ್‌ರ 'ಸಂಕ್ರಾಂತಿ' ಸಾಕಷ್ಟು ಯಶಸ್ವಿ ಆಗಲಿಲ್ಲ ಎಂಬ ಒಂದು ಮಾತಿದೆ. ಇದು ರಂಗಚರಿತ್ರೆಯಲ್ಲೂ ದಾಖಲಾಗಿರಬಹುದು. ಹೀಗೆ ತೇಲಾಡಿದ ಮಾತಿನಿಂದ ಲಂಕೇಶರು, ಕಾರಂತರ ಬಗ್ಗೆ ಸಿಟ್ಟಾಗುತ್ತಾರೆ, ಮುಕ್ತದಲ್ಲಿ ಕಾರಂತರನ್ನು ಖಾರವಾಗಿ ಟೀಕಿಸುವ, ಅವರ ಹಾಡು ಕುಣಿತಗಳಿಂದ ಮೋಡಿಗೊಳಿಸಿದ ನಿರ್ದೇಶನ ಶೈಲಿಯನ್ನು ಲೇವಡಿ ಎಬ್ಬಿಸಿದ, ಕಠಿಣ ವಿಮರ್ಶೆಗೆ ಒಳಗು ಮಾಡಿದ ಲೇಖನಗಳು ಮುಕ್ತದಲ್ಲಿ ಪ್ರಕಟವಾಗುತ್ತವೆ. ಕಾರಂತರು ನನಗೆ ಆ ಮೂರೂ ನಾಟಕಗಳಲ್ಲಿ ಸರಿಯಾದ ಪಾತ್ರಗಳನ್ನು ಕೊಡಲಿಲ್ಲ, ಅದರ ವೇದನೆ ಒಳಗೆ ಕುದಿಯುತ್ತಿತ್ತು, ಅದನ್ನು ಖಾರಿಕೊಳ್ಳಲಿಕ್ಕೆ "ಮುಕ್ತ"ದಲ್ಲಿ ಕಾರಂತರ ಕುರಿತು ಇಂತಹ ಲೇಖನಗಳು ಪ್ರಕಟಗೊಂಡವು. ಕಾರಂತರ ಬಗ್ಗೆ ನಮಗ್ಯಾವ ವೈಯಕ್ತಿಕ ದ್ವೇಷವೂ ಇರಲಿಲ್ಲ ಎಂದು ಆಗಾಗ ಸ್ವತಃ ಟಿ.ಎನ್. ಸೀತಾರಾಂ ಅವರೇ ಆ ಈ ಸಮಾರಂಭಗಳಲ್ಲಿ ನಗುನಗುತ್ತಲೇ ಹೇಳುತ್ತಿರುತ್ತಾರೆ. ಸತ್ಯವೂ ಇರಬಹುದೇನೋ !?

ಏನೇ ಇರಲಿ ಇಂತಹ ಘಟನೆಯಿಂದ ಬಣ ಒಡೆಯಿತು. ಲಂಕೇಶರ ಬಣ, ಕಾರಂತರ ಬಣ, ಈ ಎರಡೂ ಬಣದಲ್ಲಿ ಒದ್ದಾಡಿದವರು ಕೃಷ್ಣಪ್ಪನವರೇ. ಇತ್ತ ಲಂಕೇಶರನ್ನು ಬಿಡಲಾರದೆ, ಅತ್ತ ಕಾರಂತರನ್ನೂ ದೂರ ಮಾಡಲಾಗದೆ ತಲ್ಲಣಿಸಿದವರು ಕೃಷ್ಣಪ್ಪನವರು. ಕಾರಂತರು ಮಾಡಿದ ನಾಟಕಗಳಲ್ಲಿ ಕೆಲಸ ಮುಂದುವರೆಸಿದರು. ಅದಕ್ಕಾಗಿ ಸಾಕಷ್ಟು ಟೀಕೆಗಳಿಗೂ ಒಳಗಾದರು. ಇದಕ್ಕೆ ಒಂದು ಸಣ್ಣ ಉದಾಹರಣೆ ಎಂದರೆ: ಕೃಷ್ಣಪ್ಪನವರ ಅಮೋಘ 'ಹಯವದನ' ನಾಟಕದಲ್ಲಿ ಕೃಷ್ಣಪ್ಪನವರು ಮಾಡಿದ ಪಾತ್ರ (ಕುದುರೆ ಮುಖವಾಡ) ಕುರಿತು 'ಅಭಿನಯ ಹಾಗೂ ಮುಖಭಾವ ಅತ್ಯುತ್ತಮ' ಎಂದು ಮುಕ್ತದಲ್ಲಿ ಗೇಲಿಮಾಡಿದ್ದ ಸಾಲುಗಳನ್ನೂ ನಗುನಗುತ್ತಲೇ ಸ್ವೀಕರಿಸುತ್ತಾ ಲಂಕೇಶ ಬಣದಲ್ಲೂ ಕೃಷ್ಣಪ್ಪನವರು ಒಡನಾಟವಿಟ್ಟುಕೊಂಡರು.

## ಪ್ರತಿಮಾ ನಾಟಕರಂಗ : ಅಸಂಗತ ರಂಗಲೋಕ

ಬಯಲು ರಂಗೋತ್ಸವ ಮುಗಿದ ಮೇಲೆ ಕೃಷ್ಣಪ್ಪನವರು ಎಲ್ಲಾ ಕಡೆ ಸ್ಟೇಜ್ ಮಾಡುತ್ತಾ, ಬೆಳಕು ವಿನ್ಯಾಸವನ್ನು ಮುಂದುವರೆಸುತ್ತಾ, ಕಾಂಟ್ರ್ಯಾಕ್ಟ್ ಕೆಲಸದಲ್ಲೂ

ತೊಡಗುತ್ತಾರೆ. ಇದರ ನಡುವೆ ಪ್ರೊ॥ಬಿ.ಚಂದ್ರಶೇಖರ್ ನಿರ್ದೇಶನದಲ್ಲಿ ಟೌನ್‌ಹಾಲ್‌ನಲ್ಲಿ ಪ್ರದರ್ಶನಗೊಂಡ 'ಮಣ್ಣಿನ ಬಂಡಿ' ನಾಟಕಕ್ಕೆ ಇವರು ರಂಗವಿನ್ಯಾಸ, ರಂಗ ಸಜ್ಜಿಕೆಯನ್ನು ಮಾಡುತ್ತಾರೆ. ಕಾರಂತರು ದೆಹಲಿಯನ್ನು ಕಾರ್ಯಕ್ಷೇತ್ರ ಮಾಡಿಕೊಂಡಿದ್ದು ಅಲ್ಲದೆ ಹೊಸ ಅಲೆಯ ಸಿನಿಮಾಗಳಲ್ಲಿ ತೊಡಗಿಕೊಂಡಿದ್ದ ಕಾರಣ ಅವರ ಸಂಸರ್ಗ, ಸಂಪರ್ಕ ಕಡಿಮೆಯಾಗುತ್ತದೆ ಕೃಷ್ಣಪ್ಪನವರಿಗೆ. ಇದೇ ಸಂದರ್ಭದಲ್ಲೇ ರವೀಂದ್ರ ಕಲಾಕ್ಷೇತ್ರದ ವಾಸ್ತವ್ಯ ಹಾಗೂ ಕಾರಂತರೊಡನೆಯ ಶಿವಾನಂದವರ ಮನೆಯ ವಾಸ್ತವ್ಯದಿಂದ ದೂರವಾಗಿ, ಟಿ.ಎನ್.ಸೀತಾರಾಂ ಅವರ ಒಡನಾಡಿಯಾಗಿದ್ದ ಡಿ.ಸಿ. ಕೃಷ್ಣಮೂರ್ತಿ ಅವರ ಮಲ್ಲೇಶ್ವರಂ ಮನೆಯಲ್ಲಿ ವಾಸ್ತವ್ಯ ಹೂಡುತ್ತಾರೆ. ಆ ಮನೆಯಲ್ಲೇ ಆಶ್ರಯ, ಊಟ ತಿಂಡಿಗೆ ವ್ಯವಸ್ಥೆ ಮಾಡಿಕೊಂಡು ತಮ್ಮ ರಂಗಕೆಲಸವನ್ನು ಮುಂದುವರಿಸುತ್ತಾರೆ. ಹಾಗೂ 'ಮುಕ್ತ'ದಲ್ಲಿ ಮುಳುಗುತ್ತಾರೆ. ಮುಕ್ತದ ಸಂಪರ್ಕದಿಂದ ನಾಟಕ ರಚನೆ, ನಾಟಕ ವಿಮರ್ಶೆ ಹಾಗೂ ಬರಹಗಳ ವಿಚಾರದಲ್ಲಿ ಆಸಕ್ತಿ ಮೂಡಿದ್ದರಿಂದ ಕೃಷ್ಣಪ್ಪನವರಿಗೆ ಲಂಕೇಶ್ ಮತ್ತು ಟಿ.ಎನ್.ಸೀತಾರಾಂ ಅವರೊಡನೆ ಒಡನಾಟ ಹೆಚ್ಚಾಗುತ್ತದೆ.

ಲಂಕೇಶ್, ಕಿ.ರಂ. ನಾಗರಾಜ್, ಟಿ.ಎನ್.ಸೀತಾರಾಂ, ಎಲ್.ಕೃಷ್ಣಪ್ಪ, ಕೆ ಮರುಳಸಿದ್ಧಪ್ಪ, ಪ್ರಸನ್ನ, ಕೆ.ವಿ.ನಾರಾಯಣ ಈ ಬಳಗದಿಂದ ಬೆಂಗಳೂರಿನ ಕನ್ನಡ ರಂಗಭೂಮಿಯ ಮತ್ತೊಂದು ಮಜಲು ಪ್ರಾರಂಭವಾಗುತ್ತದೆ. ನವ್ಯದ ಪ್ರಭಾವ, ಹಾಗೂ ಪಶ್ಚಿಮದ ಲೇಖಕರ ಬರಹಗಳಿಂದ ಪ್ರಭಾವಿತರಾದವರು ಈ ಬಳಗದಲ್ಲಿದ್ದರು. ಇವರನ್ನು 'ಆಕ್ರಾಂತ ಯುವಪಡೆ' ಎಂದೇ ಅಂದಿನ ರಂಗವಲಯ ಗುರುತಿಸುತ್ತಿತ್ತು. ಐನೋಸ್ಕೋ, ಪಿರಾಂಡಲೋ, ಇಂತಹ ನಾಟಕಕಾರರು, ಕಾಮೂ, ಕಾಫ್ಕ, ಇಂತಹ ಲೇಖಕರ ವಿಚಾರವಾದಗಳಿಂದ ಪ್ರಭಾವಿತವಾದ ಈ ಪಡೆ ಕನ್ನಡ ರಂಗಭೂಮಿಯಲ್ಲಿ ಹೊಸದೊಂದು ಶಕೆಯನ್ನೇ ಪ್ರಾರಂಭಿಸಿತು. ಅದರಿಂದ ಹೊರಹೊಮ್ಮಿದ ರಂಗಶೈಲಿಯೇ 'ಅಸಂಗತನಾಟಕಗಳು'. ಆ ಕಾಲವನ್ನು ಕನ್ನಡ ರಂಗಭೂಮಿಯ 'ಅಸಂಗತ ನಾಟಕಗಳ ಯುಗ' ಎಂತಲೇ ಕರೆಯುತ್ತಾರೆ. ಮನುಷ್ಯನ ಅಸಂಗತತೆಯನ್ನು, ಗೋಜಲುತನವನ್ನು, ಅವ್ಯವಸ್ಥತೆಯನ್ನು ಹಿಡಿದಿಡುವ ಪ್ರಯತ್ನ ಈ ಶೈಲಿಯ ನಾಟಕಗಳದಾಗಿರುತ್ತದೆ. ಫ್ರೆಂಚ್ ನಾಟಕಕಾರ ಐನೋಸ್ಕೋನ ನಾಟಕವನ್ನು ಡಾ. ಸುಮತೀಂದ್ರನಾಡಿಗರು 'ಬೊಕ್ಕ ತಲೆಯ ನರ್ತಕಿ' ಹೆಸರಿನಲ್ಲಿ ಅನುವಾದಿಸುತ್ತಾರೆ. ಈ ನಾಟಕ ಕನ್ನಡ ರಂಗಭೂಮಿಯ ಮೊದಲ 'ಅಸಂಗತನಾಟಕ' ಎಂದು ಹೆಸರಾಗುತ್ತದೆ. ಇದೇ ಸಾಲಿನಲ್ಲಿ ಲಂಕೇಶರ 'ತೆರೆಗಳು', 'ನನ್ನ ತಂಗಿಗೊಂದು ಗಂಡುಕೊಡಿ', 'ಸಿದ್ಧತೆ' 'ಬದುಕು' ನಾಟಕಗಳು, ನಾ. ರತ್ನ, ಅವರ 'ಬೊಂತೆ', ಚದುರಂಗರ 'ಇಲಿಬೋನು', ಚಂಪಾ ಅವರ 'ಟಿಂಗರ ಬುಡ್ಡಣ್ಣ', 'ಅಪ್ಪ', 'ಕೊಡೆಗಳು' ಇನ್ನೂ ಮುಂತಾದ ನಾಟಕಗಳು ಬರುತ್ತವೆ. 1965ರಲ್ಲಿಯೇ ಲಂಕೇಶರ

'ಅಸಂಗತನಾಟಕ' 'ನನ್ನ ತಂಗಿಗೊಂದು ಗಂಡುಕೊಡಿ' ನಾಟಕವನ್ನು ಎ.ಎಸ್. ಮೂರ್ತಿ ಮತ್ತು ಮಿತ್ರರ ಬಳಗವಾದ 'ಚಿತ್ರಾ' ತಂಡವು ಪ್ರದರ್ಶನಕ್ಕೆ ತಂದಿರುತ್ತದೆ. ಪ್ರತಿಮಾ ನಾಟಕರಂಗ ಲಂಕೇಶರ ಬಿರುಕು ಕಾದಂಬರಿ ಆಧಾರಿತ 'ಬಿರುಕು' ನಾಟಕವನ್ನು ಡಾ.ಎಂ.ಎಸ್.ಶ್ರೀನಿವಾಸರಾವ್ ಅವರು ನಿರ್ದೇಶಿಸುತ್ತಾರೆ. ಸುಮತೀಂದ್ರ ನಾಡಿಗರ 'ಬೊಕ್ಕ ತಲೆಯ ನರ್ತಕಿ' ನಾಟಕವನ್ನು 1972ರಲ್ಲಿ ಪ್ರೊ.ಬಿ.ಚಂದ್ರಶೇಖರ್ ಅವರು ಪ್ರಯೋಗಕ್ಕೆ ತಂದಿರುತ್ತಾರೆ. 'ಅರಿಸ್ಟೋಫೆನಿಸ್'ನ ನಾಟಕ 'ಲೈಸಿಸ್ಟ್ರಾಟಾ' ವನ್ನು ಲಂಕೇಶರು ಅನುವಾದಿಸಿ ಸ್ವತಃ ಅವರೇ ನಿರ್ದೇಶಿಸುತ್ತಾರೆ. ಈ ನಾಟಕ 1973 ಆಗಸ್ಟ್ 20 ಹಾಗೂ 21ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶಿತವಾಗುತ್ತದೆ. ಇದೇ ಸಂದರ್ಭದಲ್ಲಿ ಟಿ.ಎನ್.ಸೀತಾರಾಂ, ಅವರು ಅನುವಾದಿಸಿದ ಗೋಗೆಲ್‌ನ 'ಇನ್‌ಸ್ಪೆಕ್ಟರ್' ನಾಟಕವನ್ನು ಡಾ.ಎಂ.ಎ.ನ್. ಶ್ರೀನಿವಾಸ್‌ರವರು ನಿರ್ದೇಶಿಸುತ್ತಾರೆ. ಅದೂ ಸಹ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶಿತವಾಗುತ್ತದೆ. ಇಂತಹ ನಾಟಕಗಳಿಗೂ ಕೃಷ್ಣಪ್ಪನವರು ಸ್ಟೇಜ್ ಹಾಗೂ ಬೆಳಕು ವಿನ್ಯಾಸವನ್ನು ಮಾಡುತ್ತಾರೆ. ಇದುವರೆವಿಗೂ ಮಾಡುತ್ತಿದ್ದ ಸ್ಟೇಜ್ ಡಿಸೈನ್‌ಗಳಿಗೂ, ಈ ನಾಟಕಗಳ ಸ್ಟೇಜ್ ಡಿಸೈನ್‌ಗಳಿಗೂ ಬಹಳ ವ್ಯತ್ಯಾಸ ಇರುತ್ತಿತ್ತು. ಸಿಂಬಾಲಿಕ್ ಆದ, ಅಂದರೆ ನಾಟಕಗಳ ವಸ್ತುವಿಗೆ ಅಗತ್ಯವಾದ ಸೂಚ್ಯ ರೀತಿಯ ಸ್ಟೇಜ್‌ನ್ನು ಈ ನಾಟಕಗಳಿಗೆ ಮಾಡಲಾಗುತ್ತಿತ್ತು. ಉದಾಹರಣೆಗೆ 'ತೆರೆಗಳು' ನಾಟಕಕ್ಕೆ ಬಹಳ ಸರಳವಾದ, ನಾಟಕದ ಒಳಾರ್ಥವನ್ನು ಹೇಳುವ ಪ್ರತಿಮಾತ್ಮಕವಾದ ಒಂದು 10 x10 ವಿಸ್ತೀರ್ಣ ಅಥವಾ 12 x 12 ವಿಸ್ತೀರ್ಣವುಳ್ಳ ಜೇಡರ ಬಲೆಯನ್ನು ಬಿಳಿ ಹಗ್ಗದಿಂದ ನಿರ್ಮಿಸಿ ಅದನ್ನು ಸ್ಟೇಜಿನ ಹಿಂದಿನ ಕಪ್ಪು ಪರದೆ ಮೇಲೆ ಅನಿಸುವುದು, ನಾಟಕ ಪ್ರಾರಂಭಕ್ಕೆ ಆ ಪರದೆಯ ಮೇಲೆ ಮಾತ್ರ ಮುಸುಕು ಮುಸುಕಾಗಿ ಬೆಳಕನ್ನು ಪ್ರಸಹಿಸುವುದು, ನಂತರ ಮನೆಯ ವಾತಾವರಣವನ್ನು ತೋರಲು ಒಂದು ಬಾಗಿಲ ಫ್ರೇಂನ್ನು ನಿಲ್ಲಿಸುವುದು. ಕುರ್ಚಿ ಹಾಗೂ ಸೋಫಾಗಳಿಗೆ ಬದಲಾಗಿ ಪ್ಲೇವುಡ್‌ಬಾಕ್ಸ್ ಗಳನ್ನು ಬಳಸುವುದು. ಈ ರೀತಿಯ ಸೂಚ್ಯ, ಸಾಂಕೇತಿಕ ಸ್ಟೇಜಿನ ಬಲೆಯನ್ನು ನಾಟಕಗಳಿಗೆ ಮಾಡುತ್ತಿದ್ದರು. ಇದೇ ರೀತಿ ಬೆಳಕಿನ ವಿನ್ಯಾಸದಲ್ಲಿಯೂ ಬದಲಾವಣೆಯಾಯಿತು. ರಂಗದ ತುಂಬಾ ಗಾಢವಾದ ಪ್ರಕರವಾದ ಬೆಳಕನ್ನು ಬಳಸದೆ ಮಂದಗತಿಯು ಮಸುಕಾದ ಅಗತ್ಯ ಮೀರದ ಬೆಳಕಿನ ವಿನ್ಯಾಸವನ್ನು ಮಾಡಲಾಗುತ್ತಿತ್ತು. ಈ ನಾಟಕಗಳಲ್ಲಿ ಸಂಗೀತ ಇಲ್ಲೇವೇ ಇಲ್ಲವೆಂದು ಹೇಳಿದರೆ ತಪ್ಪಾಗುವುದಿಲ್ಲ, ಹಾಡು ಕುಣಿತದ ಅಬ್ಬರಗಳಂತೂ ಇರುತ್ತಲೇ ಇರಲಿಲ್ಲ. ಅಗತ್ಯಕ್ಕೆ ಅನುಗುಣವಾಗಿ ಹಿನ್ನಲೆ ಸಂಗೀತ ಇರುತ್ತಿತ್ತು.

ಮೊದಲನೆಯ ಘಟ್ಟವೆಂದರೆ: ರಿಯಲಿಸ್ಟಿಕ್ ಸ್ಟೇಟ್ ಅಂದರೆ ಹೌಸ್‌ಪ್ಲಾಟ್‌ಯುಗ, ಪರದೆಯ ನಾಟಕಗಳ ಕಾಲ. ಕನ್ನಡ ರಂಗಭೂಮಿ ಡ್ರಾಯಿಂಗ್‌ರೂಮ್,

ಪರದೆಯಲ್ಲಿದ್ದ ಕಾಲಘಟ್ಟ, ವಸ್ತುವಿನ ದೃಷ್ಟಿಯಲ್ಲಿ ಹೇಳಬೇಕೆಂದರೆ ಸಂಸಾರ ಜೀವನದ ಕಲಾವಸ್ತುವನ್ನೊಳಗೊಂಡ ನಾಟಕ ಹಾಗೂ ಕಾಮಿಡಿ ನಾಟಕಗಳ ಕಾಲ, ಎರಡನೆಯದು ಎಂದರೆ: ಆಧುನಿಕ ಶೈಲಿಯದ್ದು, ಅಂದರೆ ಸಿಂಬಾಲಿಕ್ ಸೆಟ್, ಸಾಕೇಂತಿಕ ಬೆಳಕಿನ ವಿನ್ಯಾಸಗಳ ಕಾಲಘಟ್ಟದ್ದು. ವಸ್ತುವಿನ ದೃಷ್ಟಿಯಲ್ಲಿ ಪುರಾಣಗಳಿಂದ, ಜನಪದದಿಂದ ಚರಿತ್ರೆಯಿಂದ ವಸ್ತು ಆಯ್ಕೆಮಾಡಿ ಅವನ್ನು ಒಡೆದು, ಮುರಿದು ಕಟ್ಟುವುದರ ಮೂಲಕ ಹೊಸಕಾಲೀನ ಸಂದರ್ಭಕ್ಕೆ ಅರ್ಥೈಸುವ ವಸ್ತುವನ್ನೊಳಗೊಂಡ ನಾಟಕಗಳ ಕಾಲಘಟ್ಟ. ಮೂರನೆಯ ಕಾಲವೆಂದರೆ: ಸರ್‌ರಿಯಾಲಿಸ್ಟಿಕ್ ಸೆಟ್, ಸೂಚ್ಯರಂಗವಿನ್ಯಾಸಗಳ ಕಾಲಘಟ್ಟದ್ದು ಹೀಗೆ ಕೃಷ್ಣಪ್ಪನವರ ರಂಗ ಪ್ರಯಾಣವೂ ಈ ಮೂರು ಹಂತಗಳನ್ನು ದಾಟಿ ಬರುತ್ತದೆ. ಕೃಷ್ಣಪ್ಪನವರು ಆಯಾ ಕಾಲಘಟ್ಟದಲ್ಲಿ ಬಂದ ರಂಗಚಿಂತನೆಗಳು, ರಂಗಭಾಷೆಗಳು, ರಂಗಶೈಲಿಗಳನ್ನು ತಮ್ಮದಾಗಿಸಿಕೊಂಡು ತಮ್ಮದೇ ಅದೊಂದು ರಂಗಲೋಕವನ್ನು ಕಟ್ಟುತ್ತಾ ಬರುತ್ತಾರೆ.

1972 ಅಕ್ಟೋಬರ್ 15, 16, 17 ರಂದು ಪ್ರತಿಮಾ ನಾಟಕದಿಂದ ಲಂಕೇಶರು ಅನುವಾದಿಸಿದ ಸಾಪ್ಲೋಕ್ಲಿಸ್‌ನ 'ಅಂತಿಗೊನೆ' ನಾಟಕವನ್ನು ಪ್ರೊ.ಬಿ. ಚಂದ್ರಶೇಖರ್ ಅವರು ನಿರ್ದೇಶಿಸುತ್ತಾರೆ. ಈ ನಾಟಕ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶನ ಗೊಳ್ಳುತ್ತದೆ. ಈ ನಾಟಕಕ್ಕೂ ಸಹ ಕೃಷ್ಣಪ್ಪನವರು ಸ್ಟೇಜ್ ಡಿಸೈನ್ ಮತ್ತು ಲೈಟ್ ಡಿಸೈನ್‌ಗಳನ್ನು ಮಾಡುತ್ತಾರೆ. ಇದೇ ಹೊತ್ತಿನ ಕೊನೆ ದಿನವಾದ 17ನೇ ತಾರೀಖಿನಂದು ಚಂದ್ರಶೇಖರ್‌ಕಂಬಾರರು ಬರೆದು 'ಸಂಗ್ಯಾಬಾಳ್ಯಾ' ಪ್ರದರ್ಶನಗೊಳ್ಳುತ್ತದೆ. ಸ್ವತಃ ಕಂಬಾರರೇ ಈ ನಾಟಕವನ್ನು ನಿರ್ದೇಶಿಸುತ್ತಾರೆ. ಈ ನಾಟಕಕ್ಕೂ ಸಹ ಕೃಷ್ಣಪ್ಪನವರು ಬೆಳಕಿನ ವಿನ್ಯಾಸವನ್ನು ಮಾಡುತ್ತಾರೆ.

## ಲಂಕೇಶರೊಡನೆ ಒಡನಾಟ

ಲಂಕೇಶರು ಬೆಂಗಳೂರು ವಿ.ವಿಯಲ್ಲಿ ಇಂಗ್ಲೀಷ್ ಪ್ರಾಧ್ಯಾಪಕರಾಗಿದ್ದವರು. ಇಂಗ್ಲೀಷ್ ಸಾಹಿತ್ಯವನ್ನು ಬಲ್ಲವರು. ಪಾಶ್ಚಿಮಾತ್ಯ ಆಲೋಚನಾಕ್ರಮಗಳನ್ನು ಕಸಿ ಮಾಡಿ ಕನ್ನಡದಲ್ಲಿ ಸಾಹಿತ್ಯ ರಚಿಸಿದವರು. ಗ್ರಾಮ್ಯದ ಸೊಗಡು, ಸಾಮಾಜಿಕ ಆಸ್ತೆ, ವಂಶ ಪರಂಪರ್ಯವಾಗಿ ಬಂದ ಪಾಳೇಗಾರಿಕೆ ಗುಣ, ಪಾಶ್ಚಿಮಾತ್ಯ ಸಾಹಿತ್ಯ ಪಾರಾಂಪರೆಯ ದೊಡ್ಡದಾದ ಹರವು ಎಲ್ಲವೂ ಮಿಳಿತಗೊಂಡ ವಿಶಿಷ್ಟ ತಳಿ ಲಂಕೇಶರು. ಇಂತಹ ಲಂಕೇಶರು. ಕೃಷ್ಣಪ್ಪನವರಿಗೆ ನಾಟಕಕಾರರಾಗಿ ಪರಿಚಯವಾಗುತ್ತಾರೆ. ಅವರಲ್ಲಿದ್ದ ಆಕರ್ಷಣೆ ಎಂದರೆ ಪ್ರೀತಿ, ವಿಶ್ವಾಸಗಳಿಂದ ಕಾಣುವುದು, ಕಾರಂತರು ಒಂದಲ್ಲ ಒಂದು ಕಡೆ ನಿರಂತರವಾಗಿ ನಾಟಕ ಮಾಡುತ್ತಲೇ ಇರುತ್ತಾರೆ. ಅವರದು ಅಲೆಮಾರಿ ಮನಸ್ಸು. ಕಾರಂತರ ಆಲೋಚನಾ ಕ್ರಮವೇ ಬೇರೆ. ಹಾಗಾಗಿ ನಾಟಕ ಪ್ರದರ್ಶನಕ್ಕಾಗಿ ಬೇಕಾದ ಶ್ರಮಜೀವಿಗಳ, ಅಂದರೆ ನೇಪಥ್ಯಗಾರರ

ಅಗತ್ಯ ಕಾರಂತರಿಗಿರುತ್ತದೆ. ಆ ಕಾರಣದಿಂದ ಕಾರಂತರ ಬಳಿ ಕೃಷ್ಣಪ್ಪನವರು ಅನೇಕ ವರ್ಷಗಳ ಕಾಲ ಒಡನಾಟವಿಟ್ಟು ಕೊಂಡಿದ್ದರು ಹಾಗೂ ಕಾರಂತರಿಗೂ ಕೃಷ್ಣಪ್ಪನವರ ಒಡನಾಟ ಬೇಕಾಗಿತ್ತು. ಅದನ್ನು ಅವರು ಬಯಸಿದ್ದರೂ ಸಹ. ಆದರೆ ಲಂಕೇಶರ ಆಲೋಚನಾ ಕ್ರಮ, ಅವರ ಕಾರ್ಯಚಟುವಟಿಕೆಗಳೇ ಬೇರೆ ಇತ್ತು. ಅವರೊಬ್ಬ ಚಿಂತನಾಕಾರರು, ನಾಟಕಕಾರರು, ಹೆಚ್ಚು ಓದಿನ ಹಿನ್ನೆಲೆ ಇದ್ದವರು. ಅವರು ಕೃಷ್ಣಪ್ಪನವರನ್ನು ವಿಚಾರಧಾರೆಗೆ ಅಣಿಗೊಳಿಸುತ್ತಿದ್ದರು. ಹೊಸ ಹೊಸ ಚಿಂತನಾಕ್ರಮಗಳು, ಹೊಸ ಹೊಸ ಆಲೋಚನೆಗೆ ಪ್ರಚೋದಿಸುತ್ತಿದ್ದರು. ಅವರಲ್ಲಿದ್ದ ಸಾಮಾಜಿಕ ಕಳಕಳಿಯಿಂದ ಕೃಷ್ಣಪ್ಪನವರು ಅವರೆಡೆಗೆ ಪ್ರಭಾವಿತರಾಗುತ್ತಾರೆ. ಹೀಗಾಗಿ ಲಂಕೇಶರಿಗೆ ಹೆಚ್ಚು ಹೆಚ್ಚು ಹತ್ತಿರವಾಗಲು ತೊಡಗುತ್ತಾರೆ. ಅಲ್ಲಿಯವರೆಗೂ ಕನ್ನಡ ಸಾಹಿತ್ಯ ಕಲಾಸಂಘ, ಕಾರಂತರೊಟ್ಟಿಗಿನ ಒಡನಾಟಗಳಿಂದ ಹಲವಾರು ನಾಟಕಗಳು, ಹಲವಾರು ಊರಿನ ರಂಗ ಚಟುವಟಿಕೆಗಳು, 'ಶಕಶೈಲುಷರು', ಜಿ.ವಿ. ಶಿವಾನಂದರ 'ಕಲಾಕುಂಜ', ಹೆಚ್.ವಿ.ರಾಮಮೂರ್ತಿ, ಸೋಮಸುಂದರಂ, ಶಂಕರರಾವ್ ಅವರ 'ಕಲಾಘೋಷಿಣಿ' 'ಮಿತ್ರರ ಬಳಗ', 'ಕಲಾಕ್ಷೇತ್ರ', ಟಿ.ಎನ್.ಸೀತಾರಾಂ ಅವರ 'ಭೂಮಿಕಾ' ಇನ್ನಿತರ ತಂಡಗಳಿಗೆ ರಂಗವಿನ್ಯಾಸ ಮತ್ತು ಬೆಳಕಿನ ವಿನ್ಯಾಸಗಳನ್ನು ಮಾಡುತ್ತಿದ್ದರಾದ್ದರಿಂದ ಈ ಎಲ್ಲರಿಗೂ ಕೃಷ್ಣಪ್ಪನವರ ಅಗತ್ಯತೆ ಇತ್ತು. ಇವರಿಗೂ ಎಲ್ಲರೊಡನೆ ಒಂದಾಗಿ ಕೆಲಸ ಮಾಡುವ ಮನಸ್ಸಿತ್ತು. ಹಾಗೆಯೇ ಎಲ್ಲಿಯೂ ಭೇದಭಾವ ಮಾಡದೆ ರಂಗಕ್ಕೆ ನಿಷ್ಠರಾಗಿ ಕೆಲಸ ಮಾಡಿದರು. ಇವರು ಸಹ ಒಂದು ತಂಡವೆನ್ನದೆ ಎಲ್ಲ ತಂಡಗಳೊಡನೆ ಸುಳಿದಾಡುತ್ತಾ ಯಾರಿಗೂ ಇರಿಸುಮುರಿಸಾಗದಂತೆ ರಂಗ ಕೈಂಕರ್ಯದಲ್ಲಿ ಮುಳುಗಿದರು. ಅಕಸ್ಮಾತ್ ಯಾವುದೇ ಭಿನ್ನಾಭಿಪ್ರಾಯಗಳು ಬಂದರೂ, ಅದನ್ನು ಪಕ್ಕಕ್ಕೆ ಸರಿಸಿ ಕೆಲಸ ಮಾಡುವಂತ ಗುಣ ಕೃಷ್ಣಪ್ಪನವರಗಿತ್ತು. ಇವರಿಗೆ ರಂಗಭೂಮಿ ಎನ್ನುವುದು ಒಂದು ತಪಸ್ಸಾಗಿತ್ತು. ಒಂದು ಬದುಕಿನ ಮಾರ್ಗವಾಗಿತ್ತು. ಎಡರು ತೊಡಕುಗಳನ್ನು ಲೆಕ್ಕಿಸಲಿಲ್ಲ. ಗಣನೆಗೆ ತೆಗೆದುಕೊಳ್ಳಲಿಲ್ಲ. ಎಲ್ಲವನ್ನೂ ಸಮಚಿತ್ತದಿಂದ ಸ್ವೀಕರಿಸಿದರು. ನಟನಾಗಬೇಕೆಂದವರು ನೇಪಥ್ಯಗಾರನಾಗಿ, ಶ್ರಮಜೀವಿಯಾಗಿ ಇತರರಿಗೆ ದುಡಿದಿದ್ದೇ ಹೆಚ್ಚು. ಇದಕ್ಕೆ ಅವರು ಬೇಸರಿಸಿಕೊಳ್ಳಲಿಲ್ಲ. ಅವರಿಗೆ ರಂಗಭೂಮಿ ಅಷ್ಟೇಗೊತ್ತಿದ್ದದ್ದು ಅದು ಅವರಿಗೆ ಸ್ವರ್ಗವೂ ಆಗಿತ್ತು.

ಇಂತಹ ಸಂದರ್ಭದಲ್ಲಿ ಲಂಕೇಶರವರ ಒಡನಾಟ ಲಭಿಸಿತ್ತು. ಈ ದಿನಮಾನಗಳೇ ಕೃಷ್ಣಪ್ಪನವರ ರಂಗಬದುಕನ್ನು ಮತ್ತೊಂದು ಮಜಲಿಗೆ ಕೊಂಡೊಯ್ಯುತ್ತದೆ. ತುಘಲಕ್ ನಾಟಕದ 'ಕ್ಯಾಸ್ಟಿಂಗ್ ಮೀಟಿಂಗ್' ಸಂದರ್ಭದಲ್ಲೇ ಅಂದರೆ 1969 ಸರಿಸುಮಾರಿಗೆ ಈ ಮೊದಲೇ ಲಂಕೇಶರ ಪರಿಚಯವಾಗಿದ್ದರೂ ಅಂತಹ ಒಡನಾಟವಿರಲಿಲ್ಲ. 1965–

66ರಲ್ಲೇ ಲಂಕೇಶರು 'ಪ್ರತಿಮಾ ನಾಟಕ ರಂಗ' ತಂಡವನ್ನು ಹುಟ್ಟು ಹಾಕಿದ್ದರು. ಇವರ ಜೊತೆಗೆ ಕಿ.ರಂ, ಕೆ.ಎಂ.ಎಸ್, ಟಿ.ಎನ್.ಎಸ್. ಮುಂತಾದವರಿದ್ದರು ಎಂದು ನಾನು ಮೊದಲೇ ನಿಮಗೆ ತಿಳಿಸಿದ್ದೆನಲ್ಲ, ತಾವು ಮರೆತಿದ್ದರೆ ನೆನಪು ಮಾಡಿಕೊಳ್ಳಲೆಂದು ಮತ್ತೆ ಬರೆದೆನಷ್ಟೇ. ಈ ಬುದ್ಧಿಜೀವಿಗಳ ಗುಂಪು ಲಂಕೇಶರ ಏಕಾಂಕಗಳನ್ನು ಪ್ರದರ್ಶನ ಮಾಡುತ್ತಿತ್ತು. ಆ ಸಂದರ್ಭದಲ್ಲಿಯೂ ಅವರಿಗೂ ಸಹ ಕೃಷ್ಣಪ್ಪನವರು ಸ್ಟೇಜ್ ಮತ್ತು ಬೆಳಕಿನ ವ್ಯವಸ್ಥೆ ಮಾಡುತ್ತಿದ್ದರೂ ಲಂಕೇಶರೊಡನೆ ನಿಕಟತೆ ಇರಲಿಲ್ಲ, ಕೃಷ್ಣಪ್ಪ ಮತ್ತು ಲಂಕೇಶರನ್ನು ಹತ್ತಿರ ಮಾಡಿದ್ದು 'ತುಘಲಕ್' ಹಾಗೂ 'ಬಯಲು ರಂಗೋತ್ಸವ' ಎಂದರೆ ತಪ್ಪಾಗಲಿಕ್ಕಿಲ್ಲ. ಕೃಷ್ಣಪ್ಪನವರಲ್ಲಿದ್ದ ಕಾರ್ಯಾಧ್ಯಕ್ಷತೆ ಹಾಗೂ ರಂಗ ಬದ್ಧತೆಯನ್ನು ಕಂಡ ಲಂಕೇಶರು ಅವರ ಆತ್ಮೀಯ ವಲಯದಲ್ಲಿ ಕೃಷ್ಣಪ್ಪನವರನ್ನು ಒಬ್ಬರನ್ನಾಗಿ ಮಾಡಿಕೊಂಡು ಬಿಟ್ಟರು.

1973ರ ಒಂದು ದಿನ 'ಏಯ್ ಕೃಷ್ಣಪ್ಪ ನೀನು ಪ್ರತಿಮಾ ನಾಟಕ ತಂಡದ ಕಾರ್ಯದರ್ಶಿಯಾಗಿ ಇರಬೇಕು ಕಣಯ್ಯ' ಎಂದು ತಮ್ಮ ಯಥಾಪ್ರಕಾರದ ಶೈಲಿಯಲ್ಲಿ ಅಪ್ಪಣೆ ಮಾಡಿದರು. ಅಲ್ಲಿಂದ ಮುಂದೆ 'ಪ್ರತಿಮಾ ನಾಟಕ ತಂಡ' ನನ್ನದಾಯಿತು ಎನ್ನುತ್ತಾರೆ ಕೃಷ್ಣಪ್ಪನವರು. ಹೀಗೆ ಪ್ರಾರಂಭವಾದ ಕೃಷ್ಣಪ್ಪ ಮತ್ತು ಲಂಕೇಶರ ಪರಿಚಯ ಕನ್ನಡ ರಂಗಭೂಮಿಯಲ್ಲಿ ಹೊಸದೊಂದು ಚಿಂತನಾಕ್ರಮದ ರಂಗಶೈಲಿಗೆ ಬುನಾಧಿಯಾಯಿತು. ಹೊಸ ರಂಗತಂತ್ರಗಳೊಡನೆ ಹೊಸ ವಿಚಾರಧಾರೆಯೊಡನೆ ಆವಿರ್ಭವಿಸಿದ ಆ ಶೈಲಿ ಎಂದರೆ 'ಅಸಂಗತ' ನಾಟಕಗಳದ್ದು.

ಲಂಕೇಶರ ಒಡನಾಟದಲ್ಲಿನ ನಾಟಕಗಳ ಪರ್ವ ಒಂದಾದರೆ, ಮತ್ತೊಂದು ಪರ್ವವೆಂದರೆ ವೈಚಾರಿಕತೆ, ವಿಚಾರವಾದ, ಸಾಮಾಜಿಕ ಚಿಂತನ, ಹೋರಾಟ, ಚಳವಳಿಗಳು, ಮಾರ್ಕ್ಸವಾದ, ಲೋಹಿಯಾ ಸಮಾಜವಾದ ಇವುಗಳ ಪರಿಚಯ ಹಾಗೂ ಅವುಗಳನ್ನು ಮೈಗೂಡಿಸಿಕೊಂಡಿದ್ದು ಹಾಗೂ ಹೊಸ ಹೊಸ ಚಿಂತನೆಗಳಿಗೆ ತೆರೆದುಕೊಂಡಿದ್ದು ಇನ್ನೊಂದು. ಅದು ಚಳವಳಿಗಳ ಕಾಲ, ಚಿಂತನೆಗಳು ಮಡುಗಟ್ಟಿದ ಕಾಲ, ಹೋರಾಟಗಳಿಗೆ ಬುನಾದಿ ಹಾಕಿದ ಕಾಲ, ಜಾತಿ ಸಂಘರ್ಷದ ಸಾಮಾಜಿಕ ಪ್ರಜ್ಞೆ ಗರಿಗೆದರಿದ ಕಾಲ, ವೈಜ್ಞಾನಿಕ ಚಿಂತನೆ, ವಿಚಾರವಾದ ಬೆಳೆದ ಕಾಲ, ಬಂಡಾಯ ಮನೋಧರ್ಮ ಅಂಕುರಿಸಿದ ಕಾಲ, ಇವೆಲ್ಲ ಕೃಷ್ಣಪ್ಪನವರ ಜ್ಞಾನ ಕೋಶದೊಳಗೆ ಇಳಿದಿದ್ದು ಆಗಲೇ. ಲಂಕೇಶರ ಒಡನಾಟದ ಮುಂಚಿನ ಕೃಷ್ಣಪ್ಪನವರಿಗೂ ಆ ನಂತರದ ಕೃಷ್ಣಪ್ಪನವರಿಗೂ ವ್ಯತ್ಯಾಸ ಕಾಣಬಹುವಾದದ್ದು ಇದೇ ಸಂದರ್ಭದಲ್ಲಿಯೇ.

'ಪೂನಾ ಫಿಲಂ ಇನ್‌ಸ್ಟಿಟ್ಯೂಟ್‌ನ ಪ್ರೊ. ಸತೀಶ ಬಹದ್ದೂರ್ ಅವರು ಬೆಂಗಳೂರಿನಲ್ಲಿ 1974ರಲ್ಲಿ ಬಿ.ಎಸ್. ವಿಶ್ವನಾಥ್‌ರವರು ಚೇರ್‌ಮನ್ ಆಗಿದ್ದ

ಸಂದರ್ಭದಲ್ಲಿ 'ಕಲಾಸಂಪದ' ದಿಂದ ಚಲನಚಿತ್ರ ರಸಗ್ರಹಣ ಶಿಬಿರವನ್ನು ಏರ್ಪಡಿಸಿರುತ್ತಾರೆ. ಆ ಶಿಬಿರದ ಶಿಬಿರಾರ್ಥಿಯಾಗಿ ಕೃಷ್ಣಪ್ಪನವರು ಭಾಗಿಯಾಗಿ ಚಲನಚಿತ್ರ ನಿರ್ಮಾಣ, ನಿರ್ದೇಶನದ ಬಗ್ಗೆ ತಿಳಿದುಕೊಂಡು ಸಿನಿಮಾ ಅಭಿರುಚಿ ಬೆಳಸಿಕೊಂಡಿರುತ್ತಾರೆ. ಹೀಗೆ ಸಿನಿಮಾ ಕ್ಷೇತ್ರದಲ್ಲೂ ಅಭಿರುಚಿ ಹಾಗೂ ಪರಿಣತಿ ಪಡೆದಿದ್ದ ಕೃಷ್ಣಪ್ಪನವರನ್ನು ಲಂಕೇಶರು ತಮ್ಮ ಪಲ್ಲವಿ ಚಿತ್ರದ ನಿರ್ಮಾಣದ ವ್ಯವಸ್ಥೆಯನ್ನು ನೋಡಿಕೊಳ್ಳಲು ಆಹ್ವಾನಿಸುತ್ತಾರೆ. ನಿರ್ಮಾಣದ ಜವಾಬ್ದಾರಿಯನ್ನು ತೆಗೆದುಕೊಂಡ ಕೃಷ್ಣಪ್ಪನವರು ಚಿತ್ರದ ಸಂಪೂರ್ಣ ನಿರ್ವಹಣೆಯನ್ನು ವಹಿಸಿಕೊಂಡು ಸಿನಿಮಾವು ಸುಗಮವಾಗಿ ಪೂರ್ಣಗೊಳ್ಳಲು ದುಡಿಯುತ್ತಾರೆ.

ಇದಾದ ನಂತರ ಲಂಕೇಶರು ಬೇರೆ ಬೇರೆ ಸಿನಿಮಾಗಳನ್ನು ಮಾಡುವ ಸಂದರ್ಭಗಳಲ್ಲಿ ಕೃಷ್ಣಪ್ಪನವರು ಬಿಲ್ಡಿಂಗ್ ಕಾಂಟ್ರಾಕ್ಟ್‌ನ ಕೆಲಸಗಳಲ್ಲಿ ತೊಡಗಿ ಕೊಳ್ಳುತ್ತಾರೆ. ನಾಲ್ಕೈದು ಸಿನಿಮಾಗಳನ್ನು ಮಾಡಿದ ಲಂಕೇಶರಿಗೆ ಪತ್ರಿಕೆ ಮಾಡುವ ಆಲೋಚನೆ ಬಂದು 'ಲಂಕೇಶ್ ಪತ್ರಿಕೆ' ಪ್ರಾರಂಭ ಮಾಡುತ್ತಾರೆ.

ಈ ಲಂಕೇಶ್ ಪತ್ರಿಕೆ ಯು ಗಾಂಧಿಬಜಾರಿನ ಗೋವಿಂದಪ್ಪ ರಸ್ತೆಯಲ್ಲಿದ್ದ ಬಾಡಿಗೆ ಮನೆಯ ಒಂದು ಕೋಣೆಯಲ್ಲಿ ಪ್ರಾರಂಭವಾಗುತ್ತದೆ. ಅಲ್ಲಿ ಸ್ಥಳದ ಅಭಾವವಿದ್ದ ಕಾರಣ ಅದೇ ಮನೆಯ ಟೆರೇಸ್‌ನಲ್ಲಿ ತಾತ್ಕಾಲಿಕ! ಹಾಲ್ ನಿರ್ಮಾಣ ಮಾಡಲು ಕೃಷ್ಣಪ್ಪನವರ ಸಹಕಾರ ಕೋರುತ್ತಾರೆ. ಈ ಹಾಲ್‌ನ್ನು ಕೃಷ್ಣಪ್ಪನವರು ನಿರ್ಮಿಸಿ ಲಂಕೇಶ್‌ಪತ್ರಿಕೆ ಬೆಳೆಯಲು ಪ್ರಾರಂಭದ ದಿನಗಳಲ್ಲಿ ಸಹಕರಿಸುತ್ತಾರೆ. ತದನಂತರ ಲಂಕೇಶ್‌ಪತ್ರಿಕೆಯು ಗಾಂಧಿಬಜಾರ್‌ನ 'ಬ್ಯೂಗಲ್ ರಾಕ್' ರಸ್ತೆಯಲ್ಲಿ ಸ್ವಂತ ಕಟ್ಟಡಕ್ಕೆ ಬದಲಾಗುತ್ತದೆ. ಈ ಕಟ್ಟಡವನ್ನೂ ಕೃಷ್ಣಪ್ಪನವರು ಪತ್ರಿಕಾಲಯಕ್ಕೆ ಬೇಕಾದಂತೆ ವಿಶಿಷ್ಟವಾಗಿ ವಿನ್ಯಾಸಗೊಳಿಸಿ ನಿರ್ಮಾಣ ಮಾಡುತ್ತಾರೆ. ಇದರ ಜೊತೆಗೆ ಬೆಂಗಳೂರಿನ ಕೋಣನ ಕುಂಟೆಯ ಹಿಂಭಾಗದಲ್ಲಿದ್ದ ಗೊಟ್ಟಿಗೇರೆಯಲ್ಲಿದ್ದ ಲಂಕೇಶ್ ಅವರ ತೋಟದಲ್ಲಿ ಒಂದು ಫಾರಂ ಹೌಸ್‌ನ್ನು ಸಹ ಕೃಷ್ಣಪ್ಪನವರು ಅಲ್ಲಿದ್ದ ಮಾವಿನ ಮರಗಳ ಮಧ್ಯ ಕಟ್ಟುತ್ತಾರೆ. ಇದೇ ಕಟ್ಟಡ ಹಾಗೂ ಆ ಮರಗಳೇ ಲಂಕೇಶರ ಜೀವನ ಚರಿತ್ರೆ 'ಹುಳಿಮಾವಿನ ಮರ'ಕ್ಕೆ ಪ್ರೇರಣೆಯಾಗಿದ್ದು, ಪೂರಕವಾದದ್ದು. ಇದೇ ಸ್ಥಳದಲ್ಲಿ ತನ್ನ ಕಾಲಾನಂತರ ತನ್ನ ಕಳೇಬರವನ್ನು ಮಣ್ಣಾಗಿಸಬೇಕೆಂದು ಲಂಕೇಶರು ತಮ್ಮ ಇಚ್ಛೆಯನ್ನು ವ್ಯಕ್ತಪಡಿಸುತ್ತಾರೆ. ಅವರ ಇಚ್ಛೆಯಂತೆಯೇ ಕೃಷ್ಣಪ್ಪನವರು ಕಟ್ಟಿದ 'ಫಾರಂ ಹೌಸ್'ನ ಬಳಿ ಲಂಕೇಶ್ ಚಿರನಿದ್ರೆಯಲ್ಲಿದ್ದಾರೆ.

## ಸಾಹಿತಿಗಳು ಮತ್ತು ನಾಟಕಕಾರರ ಬಳಗದಲ್ಲಿ ಬ್ಯಾಕ್ ಸ್ಟೇಜ್ ಬಂಟ ಕೃಷ್ಣಪ್ಪ

ರಂಗಭೂಮಿಗೆ ನಟನಾಗಬೇಕೆಂಬ ಕನಸು ಹೊತ್ತು, ನಟ ಸಾರ್ವಭೌವ ಅನ್ನಿಸಿಕೊಳ್ಳಬೇಕು ಎಂದು ಮನೆಯಿಂದ ಹೊರ ಬಂದದ್ದು. ಮನೆಯ ವಾತಾವರಣ ಸರಿಯಿಲ್ಲದೆ ಅಲ್ಲಿಂದ ದೂರಸರಿದು ಗೊತ್ತುಗುರಿಯಿಲ್ಲದೆ ಅಲೆದಾಡಿ ಕಾಲಕಳೆಯಲು ದಾರಿತೋರದ ಸಾಹಿತ್ಯ ಪರಿಷತ್ತಿನ ಮೊರೆಹೋಗಿದ್ದು, ನಾಗೇಶರ ಪರಿಚಯ ಆಗಿದ್ದು, 'ಕನ್ನಡ ಸಾಹಿತ್ಯ ಕಲಾಸಂಘ' ಸೇರಿದ್ದು, ಕನ್ನಡ ಚಳುವಳಿಯಿಂದ ಕನ್ನಡ ರಂಗಭೂಮಿ ಕಡೆಗೆ ಹೊರಳಿದ್ದು, ಶ್ರೀರಂಗರು ಆಯೋಜಿಸಿದ ರಂಗಶಿಬಿರದಲ್ಲಿ ಶಿಬಿರಾರ್ಥಿಯಾಗಿದ್ದು, ಅಲ್ಲಿ ಬಿ.ವಿ.ಕಾರಂತರ ಪರಿಚಯವಾದದ್ದು, ಕಾರಂತರ ಒಡನಾಟದಲ್ಲಿ ರಂಗಭೂಮಿ ಸೂಕ್ಷ್ಮಗಳನ್ನು ತಿಳಿದದ್ದು, ಅವರ ಹೆಗಲಿಗೆ ಹೆಗಲುಕೊಟ್ಟು ಕೆಲಸ ಮಾಡಿ 'ದೀವಟಿಗೆ ಕೃಷ್ಣಪ್ಪ' ಅನಿಸಿಕೊಂಡಿದ್ದು, ನಂತರ ಲಂಕೇಶರ ಪರಿಚಯ, 'ಪ್ರತಿಮಾ ನಾಟಕ ತಂಡ'ದಲ್ಲಿ ಸಕ್ರಿಯನಾದದ್ದು, 'ಕನ್ನಡ ರಂಗಭೂಮಿ ಸುವರ್ಣಕಾಲ' ಎಂದೇ ಜನಜನಿತವಾಗಿರು '1972ರ ಬಯಲು ರಂಗೋತ್ಸವ'ದಲ್ಲಿ ಕಾರಣ ಪುರಷರಲ್ಲಿ ಒಬ್ಬರಾಗಿದ್ದು, ನಂತರ ಟಿ.ಎನ್.ಸೀತಾರಾಂ ಜೊತೆ ಸೇರಿ 'ಮುಕ್ತ' ಪತ್ರಿಕೆ ತಂದದ್ದು ಇವೆಲ್ಲ ಕೃಷ್ಣಪ್ಪನವರ ಬದುಕಿನ 'ಒನ್ ಲೈನ್ ಸ್ಟೋರಿ' ಆಗುತ್ತದೆ.

ರಂಗಭೂಮಿಯಲ್ಲಿ ಇಷ್ಟೆಲ್ಲಾ ಕೆಲಸ ಮಾಡಿದ್ದದೂ, ತಮ್ಮನ್ನು ತಾವು ರಂಗಭೂಮಿಗೆ ಅರ್ಪಿಸಿಕೊಂಡಿದ್ದರೂ ಕೃಷ್ಣಪ್ಪನವರಿಗೆ ಇನ್ನೇನೋ ಮತ್ತೇನೋ ಕೊರತೆ ನನ್ನಲ್ಲಿ ಇದೆ ಅಂತಲೇ ಅನ್ನಿಸುತ್ತಿತ್ತು. ಕಲಿಯುವುದು, ತಿಳಿದುಕೊಳ್ಳುವುದು ಇನ್ನೂ ಇದೆ ಎಂತಲೆ ಭಾಸವಾಗುತ್ತಿತ್ತು. ರಂಗಭೂಮಿಯ ಎಲ್ಲಾ ವಿಭಾಗಗಳಲ್ಲಿಯೂ ಕೆಲಸ ಮಾಡಿದ್ದಾದರೂ ಮತ್ಯಾವುದೋ ಅತೃಪ್ತಿ ಕೃಷ್ಣಪ್ಪನವರನ್ನು ಕಾಡುತ್ತಲೇ ಇತ್ತು. ಅದು ಯಾವುದೆಂದರೆ 'ನಾಟಕ ರಚನಾ ವಿಧಾನವನ್ನು ತಿಳಿಯಬೇಕು, ಬರಹದ ಕೌಶಲ್ಯವನ್ನು ತನ್ನದಾಗಿಸಿಕೊಳ್ಳಬೇಕು. 'ಎನ್ನುವ ಅಂಬಲ ಸದಾ ಅವರನ್ನು ಕಾಡುತ್ತಿತ್ತು. ವಿದ್ವಾಂಸರ ಜೊತೆ, ನಾಟಕಕಾರರ ಜೊತೆ, ತಾನು ಅಷ್ಟಾಗಿ ಬೆರತಿಲ್ಲ ಎಂಬುದು ಮನದಲ್ಲಿ ಕೊರೆಯುತ್ತಿದ್ದರಿಂದ ಮುಂದೆ ಕೃಷ್ಣಪ್ಪನವರು ಅಂತಹವರ ಸಂಘದಲ್ಲಿ ಹೆಚ್ಚು ಹೆಚ್ಚು ಬೆರೆತೆನು ಎನ್ನುತ್ತಾರೆ.

ಲಂಕೇಶ್, ಸುಮತೀಂದ್ರ ನಾಡಿಗ್, ಕೆ.ಎಂ. ಮರಳಸಿದ್ದಪ್ಪ. ಜಿ.ಕೆ ಗೋವಿಂದರಾವ್ ಕಾ.ವೆಂ. ರಾಜಗೋಪಾಲ್, ದೊಡ್ಡರಂಗೇಗೌಡ, ಕೆ.ವಿ.ನಾರಾಯಣ ಕಿ.ರಂ. ನಾಗರಾಜ್, ಪ್ರಸನ್ನ ಇಂತಹ ಅನೇಕ ಸಾಹಿತಿಗಳ ಸಂಪರ್ಕಕ್ಕೆ ಬರುತ್ತಾರೆ ಕೃಷ್ಣಪ್ಪನವರು. ಆಗ ಕನ್ನಡ ರಂಗಭೂಮಿ ಕಂಡೆ ಅನೇಕ ಜನರನ್ನು ರಂಗಭೂಮಿ ಕಡೆ ಸೆಳಿದ 'ಉಲ್ಲಾಳ ಫೀಲ್ಡ್' ನಾಟಕ ಸ್ಪರ್ಧೆ ನಡೆಯುತ್ತಿದ್ದ ಕಾಲ, ಅದೇ ಸಂದರ್ಭದಲ್ಲೇ

ಇವರೆಲ್ಲ ಕಾಲೇಜುಗಳಲ್ಲಿ, ವಿಶ್ವವಿದ್ಯಾನಿಲಯಗಳಲ್ಲಿ ಕೆಲಸ ಮಾಡುತ್ತಿದ್ದರು ಅಥವಾ ಸಂಶೋಧನಾ ವಿದ್ಯಾರ್ಥಿಗಳಾಗಿ 'research' ಮಾಡುತ್ತಿದ್ದರು. 'ಉಲ್ಲಾಳ್ ಫೀಲ್ಡ್' ಸ್ಪರ್ಧೆಯಲ್ಲಿ ಕೃಷ್ಣಪ್ಪನವರು 'ಬ್ಯಾಕ್ ಸ್ಟೇಜ್' ಮಾಡುತ್ತಲೋ, 'ಲೈಟಿಂಗ್' ಮಾಡುತ್ತಲೋ ಇದ್ದದರಿಂದ ಸ್ಪರ್ಧೆಗೆ ಬರುತ್ತಿದ್ದ ಕಾಲೇಜುಗಳಿಗೆ ಭೇಟಿ ಕೊಡಬೇಕಾದದ್ದು ಅನಿವಾರ್ಯವಾದದ್ದರಿಂದ ಸಾಹಿತಿಗಳ ಸಂಘ ದೊರೆಯಿತು. ಅವರುಗಳ ಪರಿಚಯವಾಯಿತು. ಹೀಗೆ ಪರಿಚಯವಾದ ಬರಹಗಾರ ಹಾಗೂ ಸಾಹಿತಿಗಳೊಡನೆ ಕೃಷ್ಣಪ್ಪನವರ ಒಡನಾಟ ಜಾಸ್ತಿಯಾಗುತ್ತದೆ. ಸಮಯ ಸಿಕ್ಕಾಗಲ್ಲೆ ಅವರುಗಳೊಡನೆ ಕಾಲಕಳೆಯುವ ಪರಿಪಾಠವಿಟ್ಟುಕೊಳ್ಳುತ್ತಾರೆ. ಇವರೆಲ್ಲರ ಸಂಪರ್ಕದಿಂದ ಆಕಾಡಮಿಕ್ ಆದ ವಿಚಾರಗಳನ್ನು ಹೆಚ್ಚು ಹೆಚ್ಚು ತಿಳಿದುಕೊಳ್ಳಲು ಸಹಕಾರವಾಗುತ್ತದೆ. ಸಾಹಿತಿಗಳ ಅಧ್ಯಯನ, ವಿಷಯ ಸಂಗ್ರಹ, ಮಾತುಗಾರಿಕೆ, ಜ್ಞಾನ ಸಂಪಾದನೆ, ಇವೆಲ್ಲ ಹೇಗೆ ಎಂಬುದು ಇವರಿಗೆ ತಿಳಿಯುತ್ತದೆ. ಇದರ ಜೊತೆಜೊತೆಗೆ ಗ್ರಂಥಾಲಯದ ಸಂಪರ್ಕ ಸಿಗುತ್ತದೆ. ಓದಲು ಭಿನ್ನ ಭಿನ್ನವಾದ ನಾಟಕಗಳು ಸಿಗುತ್ತವೆ. ಒಂದು ಸಾಹಿತ್ಯ ಕೃತಿ ಹೇಗೆ ನಾಟಕ ಕೃತಿಯಾಗುತ್ತದೆ ಎಂಬುದರ ಕಡೆ ಅವರ ಗಮನ ಹೋಗುತ್ತದೆ. ಹೆಚ್ಚು ಹೆಚ್ಚು ಓದಲು ಪ್ರಾರಂಭಿಸುತ್ತಾರೆ ಕೃಷ್ಣಪ್ಪ ನವರು. ಇದರಿಂದ ನಾಟಕದ ವಸ್ತುಗಳು ಕೃಷ್ಣಪ್ಪನವರನ್ನು ಆಕರ್ಷಿಸುತ್ತವೆ. ಇದರಿಂದ ವಸ್ತುವಿನ ಆಯ್ಕೆ ಹೇಗೆ, ಅದರ ಶೈಲಿ ಏನು, ಪಾತ್ರ ರಚನೆ ಯಾವ ಪರಿ, ರಚನಾ ವಿನ್ಯಾಸ ಯಾವ ರೀತಿಯದು. ನಿರೂಪಣಾಶೈಲಿ ಹೇಗಾಗುತ್ತದೆ. ಇವೆಲ್ಲದರ ಪರಿಚಯವಾಗುತ್ತದೆ.

ದಾಶರಥಿ ದೀಕ್ಷಿತ್, ಎ.ಎಸ್.ಮೂರ್ತಿ, ಗುಂಡಣ್ಣ, ಪರ್ವತವಾಣಿ, ನಂತರದ ಶ್ರೀರಂಗರು, ಕೈಲಾಸಂ ಅವರೊಟ್ಟಿಗೆ, ಲಂಕೇಶರು, ಕಂಬಾರರು, ಜಿ.ಬಿ. ಜೋಷಿ, ಗಿರೀಶ್‌ಕಾರ್ನಾಡ್ ಇವರಲ್ಲಿ ಈ ಮೊದಲೆ ತಮ್ಮ ನಾಟಕಗಳ ಮೂಲಕ ಕೃಷ್ಣಪ್ಪನವರಿಗೆ ಪರಿಚಯವಾಗಿರುತ್ತಾರೆ. ಅಲ್ಲಲ್ಲಿ ಇವರೆಲ್ಲರ ನಾಟಕಗಳ ಪ್ರೊಡಕ್ಷನ್ನಿನಲ್ಲಿಯು ಕೃಷ್ಣಪ್ಪನವರು ಭಾಗಿಯಾಗಿರುತ್ತಾರೆ. ಆದರೆ ಸಾಹಿತಿಗಳ ಸಹವಾಸದಿಂದ ಇದೆಲ್ಲ ನಿಕಟವಾಗುತ್ತದೆ. ರಂಗಸಾಹಿತ್ಯದ ಅಭಿರುಚಿ ಹೆಚ್ಚಾಗಿದ್ದಲ್ಲದೆ ಕಾಲೇಜ್ ಗ್ರಂಥಾಲಯದ ಸಂಪರ್ಕದಿಂದಾಗಿ, ಬ್ರೆಕ್ಟ್, ಇಬ್ಸನ್, ಐನೋಸ್ಕೋ, ಪಿರಾಂಡಿಲೋ ಹೀಗೆ, ಸಂಪ್ರದಾಯಿಕವಾಗಿ ನಾಟಕ ಕಟ್ಟುತ್ತಿದ್ದವರಿಗಿಂತ ವಿಭಿನ್ನವಾಗಿ ನಾಟಕವನ್ನು ರೂಪಿಸಿದವರ ನಾಟಕಗಳನ್ನು ಓದಲು, ಅವರನ್ನು ತಿಳಿದುಕೊಳ್ಳಲು ಸಹಾಯವಾಯಿತು. ಈ ರೀತಿಯ ಸಂಪರ್ಕದಿಂದ ಅಸಂಗತ ನಾಟಕಗಳೆಡೆಗೆ ಜಾರಿದ ಕೃಷ್ಣಪ್ಪನವರು, ಪ್ರಸನ್ನ, ಟಿ.ಎನ್.ಸೀತಾರಾಂ, ಪ್ರೋ॥ ಬಿ.ಸಿ, ವಿ.ಸಿ. ಕೃಷ್ಣಮೂರ್ತಿ ಇವರುಗಳೊಡನೆ ಹಿಂದಿನ ದಿನ ನೋಡದ–ಓದಿದ ನಾಟಕಗಳ ಕುರಿತು ಚರ್ಚಿಸುತ್ತಿದ್ದರು ಹಾಗೂ ಸಂವಾದ ಮಾಡುತ್ತಿದ್ದರು. ಇದು ಇವರಿಗೆ ಸಾಹಿತ್ಯಕೃತಿಯ ಒಳಪಯಣಿಸಲು ಸಹಕಾರ ನೀಡಿತು.

## ಪ್ರಸನ್ನ ಎಂಬ ಚುಂಬಕ ಶಕ್ತಿಯೆಡಗೆ ಆಕರ್ಷಿತರಾದದ್ದು

1968 ರಲ್ಲಿ ಪ್ರದರ್ಶಿತವಾದ ರಂಗದ ಮಹೋನ್ನತ ನಾಟಕ 'ತೊಘಲಕ್' ನಲ್ಲಿ ಸಣ್ಣಪಾತ್ರ ಮಾಡಿ, ವಸ್ತ್ರ ವಿನ್ಯಾಸವನ್ನು ಮಾಡಿದ 'ಪ್ರಸನ್ನ' ಅವರ ಪರಿಚಯವಾಗುತ್ತದೆ. ಅವರು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಎಂ.ಎಸ್.ಸಿ ಕೆಮಿಸ್ಟ್ರಿ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿದ್ದರು. ಆ ವ್ಯಾಸಂಗವನ್ನು ಮುಂದುವರಿಸಲು ಅಂದರೆ ಪಿ.ಹೆಚ್.ಡಿ ಮಾಡಲು ಕಾನ್ಪುರಕ್ಕೆ ಹೋದವರು ವ್ಯಾಸಂಗವನ್ನು ಅರ್ಧಕ್ಕೆ ಕೈಬಿಟ್ಟು ವಾಪಸ್ ಬೆಂಗಳೂರಿಗೆ ಬಂದಿರುತ್ತಾರೆ. ಬೆಂಗಳೂರಿನಲ್ಲಿ ಬಯಲು ರಂಗೋತ್ಸವ ಆಗುವ ಸಮಯ ಅದು. ಪ್ರಸನ್ನ ಅವರು 'ಬಯಲು ರಂಗೋತ್ಸವದಲ್ಲಿ' ಪ್ರದರ್ಶಿತವಾದ ಡಾ॥ ಕಂಬಾರರ 'ಜೋಕುಮಾರಸ್ವಾಮಿ' ನಾಟಕಕ್ಕೆ ರಂಗನಿರ್ವಾಹಕರಾಗಿ ಕೆಲಸ ಮಾಡುತ್ತಾರೆ. ಅದೇ ಸಂದರ್ಭದಲ್ಲಿಯೇ 'ಮುಕ್ತ' ರಂಗಪತ್ರಿಕೆ ಪ್ರಾರಂಭವಾಗುತ್ತದೆ. 'ಜೋಕುಮಾರಸ್ವಾಮಿ' ನಾಟಕದಲ್ಲಿ 10–12 ಪಂಜುಗಳನ್ನು ಬಳಸಲಾಗಿರುತ್ತದೆ. ಆ ದೃಶ್ಯ ಮುಗಿದ ವೇಲೆ ಆ ಪಂಜುಗಳನ್ನು ರಂಗದಿಂದ ದೂರ ತೆಗೆದುಕೊಂಡು ಹೋಗಿ ನಂದಿಸಬೇಕಾಗಿತ್ತು. ಆದರೆ ಆ ವ್ಯವಸ್ಥೆಯನ್ನು ಸರಿಯಾಗಿ ನಿರ್ವಹಿಸಲಿಲ್ಲ. ಹಾಗೂ ಪ್ರೇಕ್ಷಾಂಗಣದ ಹಿಂಭಾಗದಲ್ಲಿ ಆ ಪಂಜುಗಳನ್ನು ನಂದಿಸಿದ್ದರಿಂದ ಅಲ್ಲಿಂದ ಹೆಚ್ಚು ಹೆಚ್ಚು ಹೊಗೆ, ದೂಳು ತುಂಬಿಕೊಂಡು ಅಲ್ಲಿದ್ದ ಎಲ್ಲಾ ಪ್ರೇಕ್ಷಕರು ಕಣ್ಣನ್ನೂ ಉಜ್ಜಿಕೊಳ್ಳುತ್ತಾ, ಕೆಮ್ಮುತ್ತಾ ಇದ್ದುದರಿಂದ ಗೊಂದಲ ಉಂಟಾಗಿ ನಾಟಕದ ಓಘಕ್ಕೆ ದಕ್ಕೆಯಾಗಿ ಪ್ರದರ್ಶನದ 'ಅಂದ' ಕೆಟ್ಟಿದ್ದರಿಂದ ನಾಟಕ ಮುಗಿದ ಕೂಡಲೇ ಕಾರಂತರು ಪ್ರಸನ್ನ ಅವರನ್ನು ಕರೆದು "ತಿಳುವಳಿಕೆ ಬೇಡವೇ ನಿಮಗೆ.... ನಾಟಕ ಸುಂದರವಾಗಿ ನಡೆಯುತ್ತಿದ್ದ ಸಂದರ್ಭದಲ್ಲಿ ಹೀಗೆ ಅಭಾಸ ಮಾಡುವುದೇ, ನಿಮ್ಮಂತವರೆಲ್ಲ ನಾಟಕ ಕ್ಷೇತ್ರಕ್ಕೆ ಬಂದು ಈ ಕ್ಷೇತ್ರವನ್ನು ಕುಲಗೆಡಿಸುತ್ತೀರಲ್ಲಾ, ನೀವೊಬ್ಬರು ರಂಗ ವಿಮರ್ಷಕರಾಗಿ, ಪತ್ರಿಕೆ ನಡೆಸುವವರಾಗಿ ನಿಮಗೆ 'ರಂಗಪ್ರಜ್ಞೆ ಬೇಡವೆ' ಇಲ್ಲಿ ಬಂದು ಹಾಳು ಮಾಡುವುದೇ ........" ಎಂದೆಲ್ಲಾ ಖಾರವಾಗಿ ಮಾತಾಡಿಬಿಟ್ಟರು. ಇದರಿಂದ ಪ್ರಸನ್ನ ಅವರು ಸಿಟ್ಟಿಗೆದ್ದು 'ಆಗಲಿ ಕಾರಂತರೇ 3 ವರ್ಷದ ನಂತರ 'ರಂಗಪ್ರಜ್ಞೆ' ಯಾರಿಗೆ ಇರುತ್ತದೋ ಎನ್ನುವುದನ್ನು ನೋಡೋಣ' ಎನ್ನುತ್ತಾ ಅಲ್ಲಿಂದ ನಿರ್ಗಮಿಸಿದರು. ನಂತರ ದೆಹಲಿಯ ಎನ್.ಎಸ್.ಡಿ ಸೇರಿಕೊಳ್ಳುತ್ತಾರೆ ಪ್ರಸನ್ನ. ಅಲ್ಲಿಯ ಬಿಡುವಿನ ವೇಳೆಯಲ್ಲಿ ಬೆಂಗಳೂರಿಗೆ ಬಂದು ನಾಟಕಗಳನ್ನು ನಿರ್ದೇಶನ ಮಾಡಲು ತೊಡಗುತ್ತಾರೆ. ಹೀಗೆ ರಜದ ವೇಳೆಯಲ್ಲಿ ಬಂದು 'ಕದಡಿದ ನೀರು', 'ಬಿರುಕು', 'ಟಿ.ಪ್ರಸನ್ನನ ಗೃಹಸ್ಥಾಶ್ರಮ', ಐಯನೋಸ್ಕ'ನ 'ದ ಲೆಸೆನ್' ಮುಂತಾದ ನಾಟಕಗಳನ್ನು ನಿರ್ದೇಶಿಸುತ್ತಾರೆ. ಆ ಸಂದರ್ಭದಲ್ಲಿ ಪ್ರಸನ್ನರವರಿಗೆ ಕೃಷ್ಣಪ್ಪನವರ ಒಡನಾಟ ಬೇಕೇ ಬೇಕಾಗುತ್ತದೆ. ಆಗಿನ ಅವರ ಎಲ್ಲಾ ನಾಟಕಗಳಿಗೂ ಕೃಷ್ಣಪ್ಪನವರೇ

ನೇಪಥ್ಯದ ಜವಾಬ್ದಾರಿ ವಹಿಸುತ್ತಾರೆ. ಹಿನ್ನೆಲೆಯಲ್ಲಿ ನಿಂತು ಸಂಪೂರ್ಣವಾಗಿ ಪ್ರಸನ್ನ ಅವರಿಗೆ 'ಸಾತ್' ನೀಡುತ್ತಾರೆ. ಕಾರಂತರೊಡನೆ ಇದ್ದ ಕೃಷ್ಣಪ್ಪನವರ ಒಡನಾಟ ಪ್ರಸನ್ನರವರ ಕಡೆ 'ಶಿಫ್ಟ್' ಆಗುತ್ತದೆ. ಇದೇ ಸಂದರ್ಭದಲ್ಲಿಯೇ ತಾವು ನಿರ್ವಹಿಸುತ್ತಿದ್ದ 'ಮುಕ್ತ'ದ ಜವಾಬ್ದಾರಿಯನ್ನು ಕೃಷ್ಣಪ್ಪ ಹಾಗೂ ಸೀತಾರಾಂ ಅವರಿಗೆ ವಹಿಸುತ್ತಾರೆ ಪ್ರಸನ್ನ.

ಪ್ರಸನ್ನ ಅವರು ಎನ್.ಎಸ್.ಡಿ ಮುಗಿಸಿ ಬೆಂಗಳೂರಿಗೆ ಬಂದವರು. 'ಸಮುದಾಯ' ಸಂಸ್ಥೆಯನ್ನು ಹುಟ್ಟಿಹಾಕಿ, ಕಲಾವಿದರನ್ನು ಸಂಘಟಿಸಿ 'ಸಂಸ'ರ ವಿಗಡ ವಿಕ್ರಮವಾಯ ಮತ್ತೆ 'ಬಿರುದೆಂತೆಂಬರ ಗಂಡ' ನಾಟಕಗಳನ್ನು ಕೂಡಿಸಿ ಕೆ.ವಿ. ನಾರಾಯಣ ಅವರು ಪುನರ್‌ಸೃಷ್ಟಿಸಿದ 'ಹುತ್ತವ ಬಡಿದರೆ' ನಾಟಕವನ್ನು ಸಮುದಾಯಕ್ಕೆ ನಿರ್ದೇಶಿಸುತ್ತಾರೆ. ಇದೇ ನಾಟಕಕ್ಕೆ ಪ್ರಸಿದ್ಧ 'ಮೈಸೂರು ರಾಜ್ಯದ ದೊರೆಯೇ....' ರಂಗಗೀತೆಯನ್ನು ಸಿ.ವೀರಣ್ಣನವರು ರಚಿಸುತ್ತಾರೆ. ಈ ನಾಟಕದಲ್ಲಿ ಕೃಷ್ಣಪ್ಪನವರು 'ತುಂಗರಾಯ'ನ ಪಾತ್ರವನ್ನು ಮಾಡಿದ್ದಲ್ಲದೆ ನೇಪದ್ಯದ ಎಲ್ಲಾ ಕೆಲಸವನ್ನೂ ಮಾಡುತ್ತಾರೆ.

ಪ್ರಸನ್ನ ಅವರು ಎಡಪಂಥೀಯ ದೋರಣೆಯುಳ್ಳ ಸಂಘಟನೆಯಾದ 'ಸಮುದಾಯ'ವನ್ನು ವಿಸ್ತರಿಸಲು ಕರ್ನಾಟಕದಾದ್ಯಂತ ಪ್ರವಾಸವಾಡುತ್ತಾರೆ. ಹಾಗಾಗಿ ಅವರೊಡನೆ ಹೆಚ್ಚು ಸಮಯ ಕಳೆಯಲಾರದ್ದರಿಂದಲೂ, ಇವರು ಬೆಂಗಳೂರು ಬಿಟ್ಟು ಹೊರಹೋಗಲು ಸಾಧ್ಯವಿಲ್ಲದ್ದರಿಂದಲೂ, ಅವರದೇ ಆದ ಬದುಕನ್ನು ರೂಪಿಸಿಕೊಳ್ಳಬೇಕಾದ ಅನಿವಾರ್ಯತೆ ಇದ್ದರಿಂದ ಬೆಂಗಳೂರಿನಲ್ಲಿ ಉಳಿಯಬೇಕಾಗುತ್ತದೆ. ಪ್ರಸನ್ನರ ಒಡನಾಟದ ಕೊಂಡಿ ಕಳಚುತ್ತದೆ.

## ಒಡಲಾಳದ ತಾಕಲಾಟವು ಹಾಗೂ ರಂಗ ಪಾತ್ರಗಳ ತಳಮಳಗಳೂ

ಕೃಷ್ಣಪ್ಪನವರು ಕೆಲಸ ಮಾಡಿದ ಬಹುತೇಕ ರಂಗ ನಿರ್ದೇಶಕರುಗಳಿಗೆ ಒಳ್ಳೆಯ ಮನೆತನದ ಹಿನ್ನೆಲೆ ಇತ್ತು. ವಿದ್ಯಾಭ್ಯಾಸವಿತ್ತು, ಮನೆಗಳ ವಾತಾವರಣವೂ ಚೆನ್ನಾಗಿದ್ದವು. ಬದುಕಿನ ಪ್ರಶ್ನೆಗಳು ಅವರುಗಳಿಗೆ ಅಷ್ಟಾಗಿ ಕಾಡುತ್ತಿರಲಿಲ್ಲ. ಅವರಿಗೆಲ್ಲ ಅಸ್ತಿತ್ವದ ಪ್ರಶ್ನೆ ಬೃಹದಾಕಾರವಾಗಿರಲಿಲ್ಲ ಅವರಿಗೆಲ್ಲ 'ಐಡೆಂಟಿಫಿಕೇಷನ್' ಇದ್ದವು ಆದರೆ ಕೃಷ್ಣಪ್ಪನವರಿಗಾದರೂ ಅವ್ಯಾವೂ ಇರಲಿಲ್ಲ. ಪುಡಿಗಾಸಿಗೂ ತಾಪತ್ರಯವಿದ್ದ ಕಾಲವದು. ನಂಬಿದ ರಂಗಕ್ಕೂ ಹಿನ್ನೆಲೆಯಲ್ಲೆ ದುಡಿಯಬೇಕಾದ ಸಂದರ್ಭ ಒದಗಿ ಬಂದಿತ್ತು. ಇವರು ಮಾಡುತ್ತಿದ್ದ ರಂಗ ಕೆಲಸಗಳಿಂದ ಇವರಿಗೆ ಅಂತಹ 'ಐಡೆಂಟಿಟಿ'ಯೂ ಸಿಗುತ್ತಿರಲಿಲ್ಲ. ಶ್ರಮ ಇವರದು ಪ್ರತಿಫಲ ಇನ್ನಾರದೋ, ದುಡಿಮೆ ಕೃಷ್ಣಪ್ಪನವರದು. ಅದರ ಸುಖಭೋಗಗಳು ಮತ್ಯಾರದೋ, ಹಿನ್ನೆಲೆಯಲ್ಲಿ ಇದ್ದವರು

ಕತ್ತಲೆಯಲ್ಲೇ ಇರಬೇಕಾಗುತ್ತಿತ್ತು. ರಂಗದ ಮೇಲಿದ್ದವರು ಚಪ್ಪಾಳೆ, ಬೇಷ್‌ಗಿರಿ, ಅಭಿಮಾನ, ಪುಟ್ಟ ಪುಟ್ಟ ಮಾನ್ಯತೆಗೆ ಅರ್ಹರಾಗುತ್ತಿದ್ದರು. ಬೆವರು ಸುರಿಸಿದ್ದು ಯಾತಕ್ಕಾಗಿ ಯಾರಿಗಾಗಿ ಎಂಬ ಪ್ರಶ್ನೆ ಎದುರು ನಿಲ್ಲುತ್ತಿತ್ತು. ನಿದ್ದೆಗೆಡಿಸುತ್ತಿತ್ತು. ಅಸ್ತಿತ್ವವೇ ಇಲ್ಲದ ಖಾಲಿ ಆಕಾಶದಲ್ಲಿ ನಡೆಯುತ್ತಿದ್ದೇನೂ ಅನಿಸುತ್ತಿತ್ತು. ದಿಕ್ಕೇ ಇಲ್ಲದ ದಾರಿಯಲ್ಲಿ ನಕ್ಷತ್ರಗಳ ಕನಸು ಕಾಣುತ್ತಿದ್ದೇನೇನೊ ಎನ್ನುವ ಭ್ರಮೆ ಸುಳಿಯುತ್ತಿತ್ತು. ತಾಕಲಾಟಗಳು, ತಳಮಳಗಳು, ತಲ್ಲಣಗಳು ವಿಭ್ರಮೆಗೊಳುಸುತ್ತಿದ್ದವು. ಬದುಕಿನ ಪ್ರಶ್ನೆ, ಅಸ್ತಿತ್ವದ ಪ್ರಶ್ನೆ ಮಾನ್ಯಾಮಾನ್ಯತೆಯ ಪ್ರಶ್ನೆ, ಶ್ರಮಕ್ಕೆ ಸಿಗಲಾರದ ಪ್ರತಿಫಲದ ಪ್ರಶ್ನೆ. ಇವೆಲ್ಲವೂ ಕೃಷ್ಣಪ್ಪನವರ ನಿದ್ರೆಗೆಡಿಸಿ 'ಡಿಚ್ಚಿ' ಹೊಡೆಯುತ್ತಿದ್ದವು. ಪ್ರಶಾಂತ ಕತ್ತಲೆಯ ರಾತ್ರಿಗಳು ಸದಾ ಎಚ್ಚರ ವಾಗಿರುತ್ತಿದ್ದವು. ವಿಳಾಸವೇ ಇಲ್ಲದವನ ಬದುಕು ಅವರಿವರಿಗೆ ಗೂಡು ಕಟ್ಟಿತ್ತು. ಮನೆ –ಮಹಲು ಕಟ್ಟುತ್ತಾ, ಆದನ್ನೇ ತನ್ನ ಸುಖ ಎಂಬ ಪರಿಭಾವಿಸುತ್ತಾ ಮನೆ ಕಟ್ಟಿಸಿಕೊಂಡವರು ಆ ಮನೆಯಲ್ಲಿ ಬಂದು ನೆಲೆಸುವ ಸಂದರ್ಭಕ್ಕೆ 'ವಾಚ್‌ಮನ್‌ಗಳಾದಿಯಾಗಿ ಕಟ್ಟಡದ ಶ್ರಮಜೀವಿಗಳಾದ ಮತ್ತೊಂದು ಕೆಲಸ ಮಗದೊಂದು ತಾಣ' ಎನ್ನುತ್ತಾ ಹೊರಡುವಂತಾ ಸ್ಥಿತಿ, ಬದುಕು ರಂಗದಲ್ಲಿ ಮುಂದುವರಿಯುತ್ತಿತ್ತು. ಇದ್ಯಾವುದು ಅರಿವಿಗೆ ಬಾರದಂತೆ ಕೆಲಸಮಾಡುತ್ತಾ ಬೆವರು ಸುರಿಸುತ್ತಾ, ಶ್ರಮ ಪಡುತ್ತಾ, ಮತ್ತೊಬ್ಬರ ಆನಂದವೇ ತನ್ನ ಆನಂದ ಎಂದು ಕೊಂಡಿದ್ದ. ರಂಗಬದ್ಧತೆಯ ಮೆರುಗು ಮಾತಿಗೆ ಮನಸೋತು ದುಡಿದು ದುಡಿದು ದುಡಿದು ರಂಗದ ಮೂಲೆಗೆ ತಳ್ಳಲ್ಪಟ್ಟಿದ್ದ ಕೃಷ್ಣಪ್ಪನವರಿಗೆ ಅವರು ಮಾಡಿದ, ಅವರು ಸಹಕರಿಸಿದ, ನೇಪಥ್ಯ ಮಾಡಿದ ನಾಟಕಗಳ ಪಾತ್ರಧಾರಿಗಳು ದುತ್ತೆಂದು ಎದುರಾಗಿ, ಪ್ರಶ್ನಿಸಿತೊಡಗಿದ್ದು. ಗೇಲಿ ಮಾಡಿ ಕೇಕೆ ಹಾಕುತ್ತಿದ್ದದ್ದು. ನಗುತ್ತಾ ನಗುತ್ತಾ ಲೇವಡಿ ಮಾಡುತ್ತಿದ್ದದ್ದು. ಕುಣಿದು ಕುಣಿದು ಕಾಲೆಳೆಯುತ್ತಿದ್ದದ್ದು. ಆ ಪಾತ್ರಗಳೆಲ್ಲವು ಈ ಮೂಲಕ ತಮ್ಮ ತಮ್ಮ ಬದುಕನ್ನು ಮುಂದಿಟ್ಟು ತಮ್ಮನ್ನು ಅನಾವರಣ ಮಾಡಿಕೊಳ್ಳುತ್ತಾ ಕೃಷ್ಣಪ್ಪನವರ ಮುಂದೆ ಬಂದು ನಿಂತು ಬಿಡುತ್ತಿದ್ದವು. 'ರಂಗದಲ್ಲಿ ನೀ ಎಲ್ಲಿದ್ದಿಯಾಪ್ಪಾ..?....... ಇಷ್ಟು ವರ್ಷ ಕೆಲಸ ಮಾಡಿದ್ದಿಯಲ್ಲಪ್ಪಾ.... ಏನು ನಿನ್ನ ಸಂಪಾದನೆ..? ..... ನಿನ್ನ ಬೆವರಿಗೆ ಏನು ಪ್ರತಿಫಲ ಸಿಕ್ಕಿದೆ..? .... ಹೊಟ್ಟೆ ತುಂಬಾ ಊಟ, ಕಣ್ಣು ತುಂಬಾ ನಿದ್ದೆ....? ಎಲ್ಲಿ ನಿನ್ನ ಹೆಸರು..? ನಿನ್ನ ಉಸಿರಿಗೆಲ್ಲ ಬೆಲೆ..? ಕಲಾಕೋವಿದನೆ....ನೇಪಥ್ಯ ನಿಪುಣನೇ.....ದೀವಟಿಗೆ ಕೃಷ್ಣಪ್ಪನೇ.....ಎಲ್ಲಪ್ಪ ನಿನ್ನ ಅರಮನೆ' ಎಂದು ಅಣುಕಿಸುತ್ತಿದ್ದಾವೇನೋ ಅನ್ನಿಸುತ್ತಿತ್ತು.

'ಐಡೆಂಟಿಟಿಕ್ರೈಸಿಸ್'ನಲ್ಲಿ ತೊಳಲಾಡುತ್ತಿದ್ದ ಆ ಪಾತ್ರಗಳೆಲ್ಲವೂ ಬದುಕುತ್ತಿರುವುದನ್ನು ನಾನು ನನ್ನ ರಂಗಜೀವನದುದ್ದಕ್ಕೂ ಕಾಣುತ್ತಾ ಬಂದಿದ್ದೆನು. ಆ ನಾಟಕಗಳ ಪಾತ್ರಗಳ ಮತ್ತೊಂದು ರೂಪವೇ 'ನಾನು' ಅನಿಸಿದ್ದು ಅಲ್ಲದೆ

ಎಲ್ಲಿಯವರಿಗೆ ಬೇರೆಯವರಿಗೆ ಕೆಲಸ ಮಾಡುತ್ತಲೇ ಇರಬೇಕು ಎನಿಸಿಬಿಡುತ್ತದೆ ಕೃಷ್ಣಪ್ಪನವರಿಗೆ. ತಾನು ಸ್ವತಂತ್ರವಾದ ಬದುಕನ್ನು ರೂಪಿಸಿಕೊಳ್ಳದಿದ್ದರೆ ಈ ಸಮಾಜದಲ್ಲಿ ಅಸ್ತಿತ್ವವಿಲ್ಲ ಎಂದೆನಿಸುತ್ತದೆ. ಈ ರೀತಿಯ 'ಐಡೆಂಟಿಟಿಕ್ರೈಸಸ್' ಕೃಷ್ಣಪ್ಪನವರನ್ನು ಸದಾ ಕಾಡುತ್ತಿರುತ್ತದೆ. ಇದು ಆಗಾಗ್ಗೆ ಪುನರಾವರ್ತನೆಯಾಗುತ್ತಿರುತ್ತದೆ. ಈ ಕುರಿತು ನಾನು ಈ ಮೊದಲೂ ದಾಖಲಿಸಿರುತ್ತೇನೆ. ಅಸಂಗತ ನಾಟಕಗಳ ಪಾತ್ರಗಳ ಆಳಕ್ಕೆ ಇಳಿದಂತೆಲ್ಲಾ, ಆ ಭಾವನೆಗಳು, ಅಸ್ತಿತ್ವದ ಪ್ರಶ್ನೆ, ಅನಾಧಿ ಪ್ರಜ್ಞೆ ಇಂತಹ ಅನೇಕ ವಿಚಾರಗಳು ಮತ್ತೆ ಮತ್ತೆ ಎದ್ದು ನಿಲ್ಲುತ್ತಿದ್ದವು.

ಕೃಷ್ಣಪ್ಪನವರ ರಂಗ ಪರಿಶ್ರಮ, ಅವರ ವೈಯಕ್ತಿಕ ಬದುಕನೆಲ್ಲ ಕಂಡಿರುವ ಅವರ ಗೆಳೆಯ ಹೆಸರಾಂತ ರಂಗ ನಿರ್ದೇಶಕ ಪ್ರಸನ್ನರವರು ಅವರನ್ನು ಕುರಿತು, ಅವರ ರಂಗಕೈಂಕರ್ಯವನ್ನು ಕುರಿತು ಅವರು ಅನುಭವಿಸಿದ ರಂಗ ಅವಜ್ಞೆಯನ್ನು ಕುರಿತು ಹೀಗೆ ಹೇಳುತ್ತಾರೆ.

"ನಾವು ಕೆಲವರು ರಂಗಭೂಮಿಗೆ ಕಾಲಿರಿಸುತ್ತಿದ್ದ ಸಮಯ ಅದು. ಬಾಲಕರು ನಾವು ಕೃಷ್ಣಪ್ಪ, ನಾಗೇಶ್ ಎಂಬಿಬ್ಬರು ಗೆಳೆಯರು ಆ ವೇಳೆಗಾಗಲೇ ರಂಗಭೂಮಿಯಲ್ಲಿ ಸಕ್ರಿಯಾರಾಗಿದ್ದರು. ಶ್ರೀರಂಗರು, ಬಿ.ವಿ.ಕಾರಂತರು, ಲಂಕೇಶರು, ಗಿರೀಶರು... ಇಂದು ಅವರೇನಾಗಿದ್ದಾರೆಯೋ ಅದನ್ನಾಗಿಸುವಲ್ಲಿ ಇವರು ತಮ್ಮೆಲ್ಲ ಶಕ್ತಿಯನ್ನು ವ್ಯಯಿಸುತ್ತಿದ್ದರು, ಗಿರೀಶ್ ಕಾರ್ನಾಡರು 'ತುಘಲಕ್' ನಾಟಕವನ್ನು ಇನ್ನೂ ಬರೆದಿದ್ದರಷ್ಟೆ, ನಭೂತೋನಭವಿಷ್ಯತಿ: ಎಂಬಂತೆ ಆ ನಾಟಕವನ್ನು ರಂಗದ ಮೇಲೆ ತರಬೇಕೆಂದು ಕೃಷ್ಣಪ್ಪ, ನಾಗೇಶ್ ಶ್ರಮಿಸಿದರು. ಆಗ, ಪ್ರಾಯಶಃ ಅರವತ್ತರ ದಶಕದ ಕಡೆಯಲ್ಲಿ ಪರಿಚಯವಾದರು ಕೃಷ್ಣಪ್ಪ. ಒಂದೆರಡು ವರ್ಷಗಳ ನಂತರ ನಾನು ಮುಕ್ತ ಎಂಬ ರಂಗಭೂಮಿ ಪತ್ರಿಕೆ ಶುರುಮಾಡಿದೆ. ಶೂದ್ರ ಶೀನಿವಾಸ ಹಾಗೂ ಕೃಷ್ಣಪ್ಪ ಇಬ್ಬರೂ ಮುಕ್ತದೊಟ್ಟಿಗೆ ಕೆಲಸ ಮಾಡಿದರು. ಆನಂತರ ನಾನು ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಗೆ ಕಲಿಯಲೆಂದು ಹೋದೆ. ಕೃಷ್ಣಪ್ಪ ಮುಕ್ತ ಪತ್ರಿಕೆ ವಹಿಸಿಕೊಂಡರು. ಶೀನಿವಾಸ 'ಶೂದ್ರ' ಪತ್ರಿಕೆ ಶುರುಮಾಡಿದರು.

ಕೃಷ್ಣಪ್ಪನವರ ಆಗಿನ ಬಡತನದ ಬದುಕು ನನಗಿನ್ನೂ ನೆನಪಿದೆ. ಈಗಲೂ ಆ ಕಟ್ಟಡ ಆಶ್ಚರ್ಯಕರ ರೀತಿಯಲ್ಲಿ, ಒಂದು ಪಳೆಯುಳಿಕೆಯಂತೆ, ಬೆಂಗಳೂರಿನ ಮಿನರ್ವ ಸರ್ಕಲ್ಲಿನ ಮೂಲೆಯಲ್ಲಿ ಉಳಿದಿದೆ. ಕಸದಿಂದ ಆವೃತ್ತವಾಗಿ, ಇಡೀ ವೃತ್ತದ ಶ್ರೀಮಂತಿಕೆಯ ಅಬ್ಬರಕ್ಕೆ ಸಡ್ಡುಹೊಡೆದಂತೆ ಉಳಿದಿದೆ. ಅದೊಂದು ಕಲ್ಲಿನ ಮಂಟಪ, ಒಳಗೊಂದು ವಠಾರ! ಅವರು ಪ್ರಾಯಶಃ ಕೃಷ್ಣಪ್ಪನವರ ಅಜ್ಜಿಯಿರಬೇಕು. ಬಡಮುದುಕಿ, ಹಾಲು ಮಾರುತ್ತಿದ್ದರು. ಕೃಷ್ಣಪ್ಪನನ್ನು ಸಾಕಿದವರು ಆಕೆ........

ಬಡತನದ ಬದುಕನ್ನು ಕಳೆದ ಕನ್ನಡ. ರಂಗಭೂಮಿಯನ್ನು ಅಧಿಕೃತವಾಗಿ ಬಲ್ಲವರು ಕೃಷ್ಣಪ್ಪ. ಆದರೂ ಕೃಷ್ಣಪ್ಪನವರಿಗೆ ರಂಗಭೂಮಿಯಲ್ಲಿ ಸಿಕ್ಕಬೇಕಿದ್ದ ಮಾನ್ಯತೆ ಸಿಕ್ಕಿಲ್ಲ. ಅದಕ್ಕೆ ಹಲವು ಕಾರಣಗಳಿವೆ. ಅವರು ಮಾತುಬಲ್ಲವರಾಗಿರಲಿಲ್ಲ. ಇಂಗ್ಲೀಷ್ ಬಲ್ಲವರಾಗಿರಲಿಲ್ಲ. ಎಂಬುದು ಎಷ್ಟು ಕಾರಣವೋ ಅಷ್ಟೇ ಅವರೂ ಅವರ ಪರಿಸ್ಥಿತಿಗೆ ಕಾರಣರು. ಅಥವಾ ಅವರ ಪರಿಸ್ಥಿತಿಯೇ ಅವರ ರಂಗಭೂಮಿಗೆ ಕಾರಣವಾಯಿತು ಎಂದರೂ ನಡೆದೀತು. ಎಲ್ಲ ಬಿಟ್ಟು ರಂಗಭೂಮಿಯಲ್ಲಿ ನೆಲೆನಿಲ್ಲುವುದು ಅವರಿಗೆ ಸಾಧ್ಯವಿರಲಿಲ್ಲ. ದುಡಿಯಬೇಕಿತ್ತು ಅವರು. ರಂಗದ ಮೇಲೆ ಮಾತ್ರವಲ್ಲ. ಬದುಕಿನಲ್ಲಿಯೂ ಸಹ ತನ್ನ ಪಾತ್ರವನ್ನು ಸಮರ್ಥವಾಗಿ ನಿಭಾಯಿಸಬೇಕಿತ್ತು ಅವರು. ಇದು ಕೃಷ್ಣಪ್ಪನವರ ಬಗ್ಗೆ ಪ್ರಸನ್ನ ಆಡಿರುವ ಮಾತುಗಳು.

## ಕುಚೇಲ ಕೃಷ್ಣನಿಗೆ ಸಾಥು ನೀಡಿದ ಟಿ.ಎನ್.ಸೀತಾರಾಂ

ಕೃಷ್ಣಪ್ಪನವರ ಡೋಲಾಯಮಾನ ಮನಸ್ಥಿತಿಯಲ್ಲಿ, ಅಸ್ಥಿರತೆಯಿಂದ ಆವೃತಗೊಂಡಿದ್ದ, ಅತಂತ್ರ ಬದುಕಲ್ಲಿ ಟಿ.ಎನ್.ಸೀತಾರಾಂ ಸಹಾಯ ಹಸ್ತ ಚಾಚುತ್ತಾರೆ. ಆಗ ಟಿ.ಎನ್.ಸೀತಾರಾಂ ಎಲ್.ಎಲ್.ಬಿ ಮುಗಿಸಿ ಅವರ ಸೀನಿಯರ್‌ರ ಹತ್ತಿರ ಪ್ರಾಕ್ಟೀಸ್ ಮಾಡುತ್ತಿರುತ್ತಾರೆ. ಅವರಿಗೆ ಸಾಹಿತ್ಯ ಮತ್ತು ರಂಗಭೂಮಿಯ ಆಕರ್ಷಣೆ ಹೆಚ್ಚಾಗಿ ತಮ್ಮ 'ಲಾಯರ್ ಗಿರಿ'ಯನ್ನು ಅರ್ಧಕ್ಕೆ ಕೈಬಿಟ್ಟು ಲಂಕೇಶರ ಒಡನಾಟಕ್ಕೆ ಬರುತ್ತಾರೆ. ಆಗ ಲಂಕೇಶರ ಒಡನಾಟದಲ್ಲೆ ಇದ್ದ ಕೃಷ್ಣಪ್ಪನವರು ಇವರಿಗೆ ಹತ್ತಿರವಾಗುತ್ತಾರೆ. ಇವರ ಸಮಾಗಮ, 'ಮುಕ್ತ' ಪತ್ರಿಕೆಯ ಪ್ರಕಟಣೆ, ಅದು ಅಂದಿನ ರಂಗಭೂಮಿಯಲ್ಲಿ ಎಬ್ಬಿಸಿದ ವಿಚಾರ ಚಿಂತನೆ. ಅಲೆ ಅದು ಒಂದು ಒಂದೂವರೆ ದಶಕಗಳ ಕಾಲ ರಂಗಭೂಮಿಯನ್ನು ಆವರಿಸಿಕೊಂಡಿದ್ದು ಇದೆಲ್ಲಾ ರಂಗ ಇತಿಹಾಸ. ಇದನ್ನೆಲ್ಲ ನಾನು ಈ ಮೊದಲೆ ದಾಖಲಿಸಿದ್ದೇನೆ. ಟಿ.ಎನ್. ಸೀತಾರಾಂ ಹಾಗೂ ಕೃಷ್ಣಪ್ಪನವರ ಜೋಡಿ ಮಾಡಿದ ಮೋಡಿ ಹಾಗಿತ್ತು. ಆ ಮುಕ್ತದ ಪ್ರಕರತೆ ಅಷ್ಟಿತ್ತು. ಮುಕ್ತಕ್ಕೆ ಬರೆದವರು ಒಬ್ಬಿಬ್ಬರಲ್ಲ. ಇಂದಿನ ದಿಗ್ಗಜರೆಲ್ಲ ಅದಕ್ಕೆ ಬರೆದಿದ್ದಾರೆ. ಶ್ರೀಯುತರುಗಳಾದ ಬರಗೂರು ರಾಮಚಂದ್ರಪ್ಪ, ಕಿ.ರಂ.ನಾಗರಾಜು, ಡಿ.ಆರ್. ನಾಗರಾಜು, ಲಂಕೇಶ್ ಶೂದ್ರ, ಕಾಳೇಗೌಡನಾಗವಾರ, ಹಾಗೂ ಇನ್ನಿತರು. ಇಂತಹ ಸಾಹಿತ್ಯದ ಮೇರು ವ್ಯಕ್ತಿಗಳು ರಂಗದ ಒಡನಾಟದಲ್ಲಿದ್ದರು. 'ಮುಕ್ತ' ಕೃಷ್ಣಪ್ಪ ಮತ್ತೆ ಸೀತಾರಾಂ ಅವರನ್ನು ಹತ್ತಿರ ತಂದುಬಿಡುತ್ತದೆ. ಗಾಢ ಸ್ನೇಹ ಅವರದಾಗುತ್ತದೆ. ಇಲ್ಲಿ ಕೃಷ್ಣಪ್ಪ ಕುಚೇಲನಾದರೆ ಸೀತಾರಾಂ ಕೃಷ್ಣನಾಗುತ್ತಾರೆ. ಪುರಾಣದ ಕೃಷ್ಣ – ಆ ಗೆಳೆಯ ಕುಚೇಲನಿಗೆ ಅದೇನು ಸಹಾಯ ನೀಡಿದನೋ ನನಗೆ ಗೊತ್ತಿಲ್ಲ ಕಂಡ್ರಿ... ಆದರೆ... ಇಷ್ಟೆಲ್ಲಾ ಸಾಹಸಗಳನ್ನು ಮಾಡುತ್ತಿದ್ದ ಕೃಷ್ಣಪ್ಪನವರ ವೈಯಕ್ತಿಕ ಬದುಕು ಅತಂತ್ರದಲ್ಲೆ ಇತ್ತು. ನೆಲೆ ಕಾಣದೆ ಅಲೆದಾಡುವ ಈ ರಂಗಪರಿಚಾರನ ಪರಿಪರಿಯ ಪರದಾಟವನ್ನು

ಅಂತರಂಗದ ಗೆಳೆಯ ನೋಡು ನೋಡುತ್ತಾ ಸುಮ್ಮನಿರಲಾರದೆ ಮಹಾಭಾರತದ ಅರ್ಜುನನಿಗೆ ಕೃಷ್ಣ ಬೋಧಿಸಿದಂತೆ ಕೃಷ್ಣಪ್ಪನವರಿಗೆ ಸೀತಾರಾಂ ಬದುಕಿನ ಬೋಧನೆಯನ್ನು ಮಾಡುತ್ತಾರೆ. ಬದುಕನ್ನು ರೂಪಿಸಿಕೊಳ್ಳಲು ಸಹಾಯ ನೀಡುತ್ತಾರೆ. ಇದೇ ವೇಳೆಗೆ ಸೀತಾರಾಂ ಅವರ ಗಳಸ್ಯ – ಕಂಠಸ್ಯ ಸ್ನೇಹಿತರಾದ ಡಿ.ಸಿ. ಕೃಷ್ಣಮೂರ್ತಿಯವರ ತಂದೆಯ ಮಲ್ಲೇಶ್ವರಂನಲ್ಲಿದ್ದ ಮನೆಯ ವಿಸ್ತರಣೆಯ ಕೆಲಸದ ಜವಾಬ್ದಾರಿಯನ್ನು ಕೃಷ್ಣಪ್ಪನವರಿಗೆ ವಹಿಸುತ್ತಾರೆ. ಸ್ವಲ್ಪ ಹಣವೂ ಸಿಗುವಂತೆ ನೋಡಿಕೊಳ್ಳುತ್ತಾರೆ. ಆ ಮನೆಯ ಕೆಲಸ ಮುಗಿದ ಮೇಲೆ ಟಿ.ಎಸ್. ಸೀತಾರಾಂ ಅವರು ತಮ್ಮ ಸ್ವಂತ ಸ್ಥಳ ಗೌರಿಬಿದನೂರಿನಿಂದ ಮಲ್ಲೇಶ್ವರಂನ ಕೃಷ್ಣಮೂರ್ತಿಯ ಆ ಮನೆಯ ಒಂದು ಪುಟ್ಟ ಕೊಠಡಿಗೆ ತಮ್ಮ ವಾಸವ್ಯವನ್ನು ಬದಲಾಯಿಸುತ್ತಾರೆ. ಕೇರ್‌ಆಫ್ ರವೀಂದ್ರ ಕಲಾಕ್ಷೇತ್ರ ಹಾಗೂ ಬೆಂಗಳೂರಿನ ಬೇರೆ ಬೇರೆ ಬಡಾವಣೆಗಳಲ್ಲಿದ್ದ ಸ್ನೇಹಿತರ ಮನೆಗಳಲ್ಲಿ ರಾತ್ರಿ ವೇಳೆ ಕಾಲಕಳೆಯುತ್ತಿದ್ದ ಕೃಷ್ಣಪ್ಪನವರ ಅಲೆದಾಟಕ್ಕೆ 'ಮುಕ್ತಿ' ಕೊಟ್ಟು ಸೀತಾರಾಂ ತಮ್ಮ ಜೊತೆ ಬಂದು ಇರುವಂತೆ ಕೃಷ್ಣಪ್ಪನವರಿಗೆ ಹೇಳಿ ತಮ್ಮ 'ರೂಂ ಮೆಟ್' ಮಾಡಿಕೊಳ್ಳುತ್ತಾರೆ. ಆಗ ಕೃಷ್ಣಪ್ಪನವರ ಪರಿಸ್ಥಿತಿ ಸೀತಾರಾಂ ಅವರಿಗೆ ಇನ್ನೂ ಹೆಚ್ಚಾಗಿ ನಿಚ್ಚಳವಾಗುತ್ತದೆ. ಸೀತಾರಾಂ ಅವರಿಗೆ ಇವರ ಹಣಕಾಸಿನ ಸಮಸ್ಯೆ, ಕೆಲಸದ ಸಮಸ್ಯೆ. ಕಂಡು ಕೃಷ್ಣಪ್ಪನವರ ಗುತ್ತಿಗೆಕೆಲಸಕ್ಕೆ ಸಹಾಯ ನೀಡುತ್ತಾರೆ. ಸಣ್ಣ ಪುಟ್ಟ, ಸುಮಾರಾದ, ಮದ್ಯಮ ಮಟ್ಟದ ಗುತ್ತಿಗೆ ಕೆಲಸ ಮಾಡಲು ನೆರವಾಗುತ್ತಾರೆ. ಸೀತಾರಾಂ ಆಗಿನ ಕಾಲಕ್ಕೆ ಅತಿ ಹೆಚ್ಚಿನ ಮೊತ್ತವಾದ ಹದಿನೈದು ಸಾವಿರ ರೂಪಾಯಿಗಳನ್ನು ಕೊಡುತ್ತಾರೆ. ಇದೇ ಕೃಷ್ಣಪ್ಪನವರ ಮೂಲ ಬಂಡವಾಳವಾಗುತ್ತದೆ. ಅಷ್ಟು ಹಣ ಕೊಟ್ಟಿದ್ದೂ ಅಲ್ಲದೆ ತಿರುಗಾಡಲಿಕ್ಕೆ ಎಂದು ತಮ್ಮ ಬಳಿ ಇದ್ದ ಮೋಟರ್ ಬೈಕ್ ಅನ್ನೂ ಕೊಡುತ್ತಾರೆ. ಇಷ್ಟಲ್ಲದೆ ತಮ್ಮ ತಮ್ಮನಾದ ಟಿ.ಎನ್.ಶೀನಿವಾಸಮೂರ್ತಿಯವರನ್ನು ಕೃಷ್ಣಪ್ಪನವರ ಸಹಕಾರಕ್ಕೆ ಅವರೊಡನೆ ಬಿಡುತ್ತಾರೆ.

ಇದನ್ನೆಲ್ಲ ನೆನಪಿಸಿಕೊಳ್ಳುತ್ತಾ, ಆಗ ನನ್ನ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಯಿತು. ಯಾವಾಗ ನನ್ನ ಆರ್ಥಿಕ ಪರಿಸ್ಥಿತಿ ಸುಧಾರಿಸಿತೊ ಆ ನಂತರ ನಾನು ಇನ್ನು ಹೆಚ್ಚು ನಾಟಕದ ಕಡೆಗೆ ಗಮನ ಕೊಡುತ್ತಾ ಬಂದೆನು ಎನ್ನುತ್ತಾರೆ ಕೃಷ್ಣಪ್ಪನವರು.

ಟಿ.ಎನ್.ಸೀತಾರಾಂ ಸ್ವತಃ ನಾಟಕಕಾರರು ಹಾಗೂ ನಟರೂ ಆಗಿದ್ದರಿಂದ ಅವರ ನಾಟಕಗಳಾದ 'ಬದುಕ ಮನ್ನಿಸೋ ಪ್ರಭುವೆ', ಆಸ್ಫೋಟ, 'ನಮ್ಮೊಳಗೊಬ್ಬ ನಾಜೂಕಯ್ಯ' ಇಂತಹ ನಾಟಕಗಳನ್ನು ರಚಿಸುವ ಸಂದರ್ಭಗಳಲ್ಲಿಯೂ ನಾನು ಅವರೊಡನೆ ಇರುತ್ತಿದ್ದರಿಂದ ಹಾಗೂ ಅವುಗಳ ಪ್ರದರ್ಶನಗಳಿಗೆ ನೇಪಥ್ಯ ಮಾಡುತ್ತಿದ್ದರಿಂದ ನನಗೆ ನಾಟಕದ ವಸ್ತು, ಬರಹದ ಶೈಲಿ, ನಾಟಕ ಕಟ್ಟುವಿಕೆ ಪಾತ್ರ

ವಿಶ್ಲೇಷಣೆ, ದೃಶ್ಯ ಸಂಯೋಜನೆ, ಹಾಗೂ ನಾಟಕ ಸಾಹಿತ್ಯ ಕೃತಿ–ರಂಗಕೃತಿಗಳ ನೇರ ಪರಿಚಯವಾಗುತ್ತಿತ್ತು. ಇದರಿಂದ ಇತರ ನಾಟಕಕಾರರ ನಾಟಕಗಳನ್ನು ಸೂಕ್ಷ್ಮವಾಗಿ ನೋಡಲು ಅದರ ಶೈಲಿಗಳನ್ನು ನಾನು ಅರಿತುಕೊಂಡು ನನ್ನದೇ ಆದ ರಂಗಶೈಲಿಯನ್ನು ಕಂಡುಕೊಳ್ಳಲು, ಅದು ನನ್ನ ಸುಪ್ತ ಪ್ರಜ್ಞೆಯಲ್ಲಿ ಉಳಿದು ನಾನು ನಾಟಕಗಳನ್ನು ನಿರ್ದೇಶನ ಮಾಡುವ ಸಂದರ್ಭದಲ್ಲಿ ನನ್ನ ಉಪಯೋಗಕ್ಕೆ ಬರುತ್ತಿದೆ. ಇದಕ್ಕೆಲ್ಲ ಸೀತಾರಾಂರವರ ಜೊತೆಗಾರಿಕೆ, ಅವರು ನೀಡಿದ ಸಹಾಯವೇ ನನ್ನನ್ನು ಇಲ್ಲಿಗೆ ತಂದು ನಿಲ್ಲಿಸಿದೆ ಎಂದು ಸ್ಮರಿಸುತ್ತಾರೆ ಕೃಷ್ಣಪ್ಪ.

1971ರ ನಂತರ ಡಿ.ಸಿ.ಕೃಷ್ಣಮೂರ್ತಿ (ಕಿಟ್ಟಿ) ಮನೆಯಲ್ಲಿ ಸೀತಾರಾಂ ಹಾಗೂ ಕೃಷ್ಣಪ್ಪ ವಾಸ್ತವ್ಯ ಪ್ರಾರಂಭಿಸುತ್ತಾರೆ. 60–70–80ರ ದಶಕದವರೆಗೂ ಹವ್ಯಾಸಿ ರಂಗಭೂಮಿಯಲ್ಲಿ ವೃತ್ತಿಪರತೆ ಎನ್ನುವುದು ಇದ್ದರೂ ಸಹ ನಿರ್ದೇಶಕರಿಗೆ ಅದರಲ್ಲಿಯೂ ಎನ್.ಎಸ್.ಡಿಯಿಂದ ಬರುತ್ತಿದ್ದ ನಿರ್ದೇಶಕರುಗಳಿಗೆ ಮಾತ್ರ ಸಂಭಾವನೆ ಕೊಡುವ ಪರಿಪಾಠವಿತ್ತು. ಇದರಿಂದ ಅವರ ಜೀವದ ನಿರ್ವಹಣೆ ಹಾಗೂ ಬದುಕು ಹಾಗೂ– ಹೀಗೂ ಸಾಗುತ್ತಿತ್ತು. ಆದರೆ ನಟವರ್ಗಕ್ಕಾಗಲಿ, ನೇಪಥ್ಯದವರು, ವಿನ್ಯಾಸಕಾರರು ಇವರ್‍ಯಾರಿಗೂ ರಂಗಭೂಮಿಯಿಂದ ಹಣ ಸಿಗುತ್ತಿರಲಿಲ್ಲ ಹಾಗೂ ಜೀವನ ನಿರ್ವಹಣೆಗೆ ರಂಗಭೂಮಿಯೇನು ದಾರಿಯಾಗಿರಲಿಲ್ಲ. ಬದುಕು ಸಾಗಿಸಲು ಬೇರೆ ವೃತ್ತಿಯನ್ನು ಮಾಡಲೇ ಬೇಕಾಗಿತ್ತು. ರಂಗಭೂಮಿ ಎನ್ನುವುದು ಆಸಕ್ತಿಯ ಹಾಗೂ ಹವ್ಯಾಸದ ನಿಮಿತ್ತವಾಗಿ ಮಾತ್ರವೇ ಇದ್ದ ದಿನಗಳು ಅವು.

ಹಾಗಾಗಿ ಕೃಷ್ಣಪ್ಪನವರು ಸಣ್ಣ ಪುಟ್ಟ ಕೆಲಸಗಳ ಗುತ್ತಿಗೆದಾರನಾಗಿ ಕೆಲಸ ಮಾಡುತ್ತಿದ್ದರು. ಪಿ.ಡಬ್ಲ್ಯೂ.ಡಿ, ಕೆ.ಎಸ್.ಆರ್.ಟಿ.ಸಿ, ಬಿ.ಡಿ.ಎ ಮತ್ತು ಇತರ ಸರ್ಕಾರಿ ಕಛೇರಿಗಳಲ್ಲಿ ಅಲ್ಲಿಯ ಜೆ.ಇ. ಮತ್ತೆ ಎ.ಇ ಅವರು ತಮ್ಮ ವ್ಯಾಪ್ತಿಯಲ್ಲಿ ಕೊಡಬಹುದಾದ 'ಪೀಸ್‌ವರ್ಕ್'ಗಳನ್ನು ಗುತ್ತಿಗೆ ಪಡೆದು ಕೆಲಸ ಮಾಡಿಸುತ್ತಿದ್ದರು. ಈ ರೀತಿಯ ಕೆಲಸ ಇವರ ಬದುಕಿನ ನಿರ್ವಹಣೆಗೆ ದಾರಿಯಾಗಿದ್ದವು. ಇಂತಹ ಸಣ್ಣಪುಟ್ಟ ಕೆಲಸಗಳ ಗುತ್ತಿಗೆದಾರನಾಗಿ ಕೆಲಸಮಾಡುತ್ತಾ ಅವರ ಅತ್ಯಂತ ಆಸಕ್ತಿದಾಯಿಕ ವಲಯವಾದ ರಂಗಭೂಮಿಯಲ್ಲಿಯೂ ಕೆಲಸ ಮಾಡುತ್ತಾ ರಂಗಭೂಮಿಯ ಎಲ್ಲಾ ಒಳಹೊರಗಳನ್ನು ಅರಿತುಕೊಳ್ಳುತ್ತಾ ಬೆಳೆದ ದಿನಗಳಲ್ಲಿ ಗೆಳೆಯರ ಪ್ರವೇಶ, ಒಡನಾಟ, ಸಾಹಿತಿ, ಕಲಾವಿದರ ಸಂಘ, ನಾಟಕ–ಗೀಟಕ ಹಾಗೂ ಕೃಷ್ಣಪ್ಪನವರ ಕೆಲಸದ ಬದ್ಧತೆ, ವಿಶಿಷ್ಟತೆ, ನೈಪುಣ್ಯತೆ, ನಿಷ್ಠೆ ಇವುಗಳನ್ನು ಕಂಡ ಅಧಿಕಾರಿಗಳು ಅವರಿಗೆ ತಮ್ಮ ವ್ಯಾಪ್ತಿಯ ಹೆಚ್ಚು ಹೆಚ್ಚು ಕೆಲಸಗಳನ್ನು ಮಾಡಲು ಅವಕಾಶಕೊಟ್ಟರು. ಆದರೆ ಅದಕ್ಕೆಲ್ಲ ಹೆಚ್ಚಿನ ಬಂಡವಾಳ ಎಲ್ಲಿಂದ ತರುವುದು..? ಇವರ ಒದ್ದಾಟವನ್ನು ಇವರ ಹಣಕಾಸಿನ ಪರಿಸ್ಥಿತಿ ಇವರ ಚಡಪಡಿಕೆ ಎಲ್ಲವನ್ನು ಕಂಡಿದ್ದ ಸೀತಾರಂ ಇವರ ಸಹಾಯಕ್ಕೆ ನಿಂತರು, ಇನ್ನೊ

ಹೆಚ್ಚು ಹೆಚ್ಚಿನ ಕೆಲಸ ಮಾಡಲು ಸಲಹೆಕೊಟ್ಟಿದ್ದೂ ಅಲ್ಲದೆ ಹಣ ಸಹಾಯವನ್ನು ನೀಡುತ್ತಾರೆ.

ಇದೇ ಸಂದರ್ಭದಲ್ಲಿಯೆ ಇವರ ಸ್ನೇಹವಲಯದ ಗೆಳೆಯರ ಮದುವೆ – ಸಂಸಾರ – ಬದುಕು ಪ್ರಾರಂಭವಾಗುತ್ತದೆ. ಗೆಳೆಯ ಕಿಟ್ಟಿಯ ಮದುವೆಯಾಗುತ್ತದೆ. ನಂತರ ಸೀತಾರಾಂಗೆ ಬಾಳಸಂಗಾತಿ ಬರುತ್ತಾರೆ. ಹೀಗೆ ಗೆಳೆಯರ ಮದುವೆಗಳಾಗಿ ಬದುಕು ರೂಪಿತವಾಗುತ್ತಿರುತ್ತದೆ. ಇದೇ ಸಂದರ್ಭದಲ್ಲಿ ಗೆಳೆಯ ಸೀತಾರಾಂ ಅವರು ಕೃಷ್ಣಪ್ಪನವರಿಗೆ 'ನಿನ್ನ ಬದುಕು ಒಂದು ನೆಲೆ ಕಾಣಲಿ ಗೆಳೆಯ' ಎಂದು ಇವರ ಮದುವೆಯ ಪ್ರಸ್ತಾಪ ಮಾಡುತ್ತಾರೆ. ಹಾಗೂ ಇವರ ಮದುವೆ ಮಾಡಲು ಮುಂದಾಗುತ್ತಾರೆ.

## ಕೊನೆಗೂ ಕೈ ಬೀಸಿ ಕರೆಯಿತು ಚಿತ್ರರಂಗ

ಕಿಟ್ಟಿಯವರು ಮನೆ ಕಟ್ಟಿ ಮುಗಿದ ನಂತರ ಕೃಷ್ಣಪ್ಪನವರು ಕೆ.ಎಸ್.ಆರ್.ಟಿ.ಸಿ ಮತ್ತು ಇತರಡೆ ಕೆಲಸ ಮಾಡುತ್ತಾ ಸಂಜೆ ವೇಳೆಗೆ ಕಲಾಕ್ಷೇತ್ರ ಸೇರುತ್ತಿದ್ದರು. ಇದೇ ಸಂದರ್ಭದಲ್ಲಿಯೇ ಹೊಸ ಅಲೆಯ ಸಿನಿಮಾಗಳ ಭರಾಟೆ ಪ್ರಾರಂಭವಾಗುತ್ತಿರುತ್ತದೆ. ಸಂಸ್ಕಾರ, ಚೋಮನದುಡಿ, ಆಷಾಡಭೂತಿ, ಕಂಕಣ, ಮಾಡಿ ಮಡಿದವರು ಇಂತಹ ಸಿನಿಮಾಗಳು ನಿರ್ಮಾಣವಾಗುತ್ತಿದ್ದವು. ಸಂಸ್ಕಾರ ಸಿನಿಮಾದಲ್ಲಿ ಪಾತ್ರ ಮಾಡಿದ ಲಂಕೇಶರವರಿಗೂ ತಾವೂ ಒಂದು ಸಿನಿಮಾ ಮಾಡಬೇಕೆಂಬ ಆಲೋಚನೆ ಬರುತ್ತದೆ. ಇದೇ ವೇಳೆಯಲ್ಲಿ ಅಂದರೆ 1974ರಲ್ಲಿ ಪೂನಾಫಿಲಂ ಇನ್‌ಸ್ಟಿಟ್ಯೂಟ್‌'ನ ಎಂ.ವಿ.ಕೃಷ್ಣಸ್ವಾಮಿಯವರು ಬೆಂಗಳೂರಿನ 'ಸಿನಿಮಾ ರಸಗ್ರಹಣ ಶಿಬಿರ' (Film Appreciation) ಮಾಡುತ್ತಾರೆ. 'ಪೂನಾ ಫಿಲಂ ಇನ್‌ಸ್ಟಿಟ್ಯೂಟ್‌ನ ಪ್ರೊಫೆಸರ್ 'ಸತೀಶ್ ಬಹದ್ದೂರ್' ಅವರು ಶಿಬಿರದ ನಿರ್ದೇಶಕರಾಗಿರುತ್ತಾರೆ. ಇದನ್ನು ನಡೆಸಿದವರು 'ಕಲಾಸಂಪದ'ದ ಬಿ.ಎಸ್.ವಿಶ್ವನಾಥ್ ಅವರು. ಈ ಶಿಬಿರಕ್ಕೆ ಶಿಬಿರಾರ್ಥಿಯಾಗಿ ಕೃಷ್ಣಪ್ಪನವರೂ ಸಹ ಭಾಗವಹಿಸುತ್ತಾರೆ. ಈ ರೀತಿ ಕೃಷ್ಣಪ್ಪನವರಿಗೆ ಸಿನಿಮಾ ಇನ್ನೂ ಹೆಚ್ಚು ಹತ್ತಿರವಾಗುತ್ತದೆ. ಸಾಹಿತ್ಯ ಮತ್ತು ರಂಗಭೂಮಿಯಲ್ಲಿ ತೊಡಗಿಸಿಕೊಂಡಿದ್ದ ಕಾರಂತರು, ಕಾರ್ನಾಡ್, ಲಂಕೇಶ, ಪಟ್ಟಾಭಿರಾಮರೆಡ್ಡಿ, ಎಂ.ವಿ ಕೃಷ್ಣಸ್ವಾಮಿ, ಕಂಬಾರರು, ಎನ್. ಲಕ್ಷೀನಾರಾಯಣ್, ಪ್ರಸಾದ್ ಇವರೆಲ್ಲ ಹೊಸ ಅಲೆಯ ಚಿತ್ರಗಳ ಕಡೆಗೆ ಮುಖ ಹಾಕಿದಾಗ ಅವರ ಬಳಗದಲ್ಲಿದ್ದ ಕೃಷ್ಣಪ್ಪನವರು ಆ ಕಡೆಗೆ ಗಮನಕೊಡುತ್ತಾರೆ. ಕೃಷ್ಣಪ್ಪ, ಎಂ.ಸಿ. ಆನಂದ್, ಆರ್ ನಾಗೇಶ್ ಹಾಗೂ ಎ.ಎನ್. ಪ್ರಸನ್ನ ಈ ನಾಲ್ಕು ಜನ ಸೇರಿ 'ಸೃಜನ' ಕಿರುಚಿತ್ರ ನಿರ್ಮಾಣ ತಂಡ ಕಟ್ಟಿಕೊಂಡು ಆ ಸಂಸ್ಥೆಯ ಮೂಲಕ ಕೃಷ್ಣಪ್ಪನವರು 'ಋಷಿ' ಚಿತ್ರ ನಿರ್ದೇಶಿಸುತ್ತಾರೆ. ಅದರಲ್ಲಿ ಜಿ.ಎಸ್.ಸದಾಶಿವ, ಬಿ.ವಿ. ವೈಕುಂಠರಾಜು, ಆರ್. ನಾಗೇಶ್, ಎಸ್.ರಾಮಚಂದ್ರ ಇವರೆಲ್ಲ ನಿರ್ಮಾಣ ತಂಡದಲ್ಲಿ ಇರುತ್ತಾರೆ.

ಕೃಷ್ಣಪ್ಪ–ಸೀತಾರಾಂ ಜೊತೆಜೊತೆಯಲಿದ್ದ ಕಾರಣ ಲಂಕೇಶ ಅವರು ತಮ್ಮ ಚಿತ್ರ 'ಪಲ್ಲವಿ'ಯ ನಿರ್ಮಾಣದಲ್ಲಿ ತೊಡಗಿಕೊಳ್ಳಲು ಇವರನ್ನು ಆಹ್ವಾನಿಸುತ್ತಾರೆ. ಆಗ ಕೃಷ್ಣಪ್ಪ ನವರು ಆ ಚಿತ್ರದ ನಿರ್ಮಾಣದ ಪೂರ್ಣ ಜವಾಬ್ದಾರಿ ನಿರ್ವಹಿಸುತ್ತಾರೆ.

## ಮನೆ ಕಟ್ಟುವ ಗುತ್ತಿಗೆ–ಉಣ್ಣಲು ತುತ್ತು ಹೊತ್ತೊತ್ತಿಗೆ

ಈ ಚಿತ್ರದ ನಿರ್ಮಾಣದ ನಂತರ ಕೃಷ್ಣಪ್ಪನವರು ಮತ್ತೆ 'ಗುತ್ತಿಗೆದಾರಿ' ಕೆಲಸವನ್ನು ಮುಂದುವರಿಸುತ್ತಾರೆ. ಸಂಜೆಯ ವೇಳೆ ಮತ್ತೆ ರಂಗಭೂಮಿಯಲ್ಲಿ ಸಕ್ರಿಯವಾಗುತ್ತಾರೆ. ಲಂಕೇಶರು ಮತ್ತೆ 'ಅನುರೂಪ' ಸಿನಿಮಾದ ತಯಾರಿ ನಡೆಸುತ್ತಾರೆ. ಮತ್ತೆ ಆ ಸಿನಿಮಾದ ಕೆಲಸಕ್ಕೆ ಕೃಷ್ಣಪ್ಪನವರನ್ನು ಕರೆದಾಗ ಇಂತಹ ಹೊಸ ಅಲೆಯ ಸಿನಿಮಾಗಳಲ್ಲಿ ಹಣದ ಸಂಪಾದನೆ ಇಲ್ಲದ್ದರಿಂದ ಹಾಗೂ ಅವರ ಜೀವನ ನಿರ್ವಹಣೆಗೆ ಹಣದ ಅಗತ್ಯವಾಗಿದ್ದರಿಂದ ಆ ಸಿನಿಮಾದಲ್ಲಿ ಕೃಷ್ಣಪ್ಪನವರು ಭಾಗವಹಿಸಲಿಲ್ಲ. ಇವರ ಜವಾಬ್ದಾರಿಯನ್ನು ಎನ್.ನಾಗರಾಜರಾವ್ ನಿರ್ವಹಿಸುತ್ತಾರೆ. ಈ ಸಿನಿಮಾದ ಚರ್ಚೆಯ ಸಂದರ್ಭದಲ್ಲಿ ನಾಗರಾಜರಾವ್ ಕೃಷ್ಣಪ್ಪನವರನ್ನು ತಮ್ಮ ನಿಕಟವಲಯದ ಸದಸ್ಯರನ್ನಾಗಿಸಿಕೊಳ್ಳುತ್ತಾರೆ. ಇದರ ನಡುವೆ ರಾಜಾಜಿನಗರದಲ್ಲಿದ್ದ ಎಂ.ಸಿ. ಆನಂದ್ ಅವರ ತಂದೆಯ ಮನೆಯ ವಿಸ್ತರಣೆ ಕೆಲಸವನ್ನು ಕೃಷ್ಣಪ್ಪನವರು ಮಾಡುತ್ತಾರೆ. ಇಷ್ಟಲ್ಲದೆ ಸೀತಾರಾಂ ಅವರಿಗೆ ಮದುವೆಯಾಗಿದ್ದರಿಂದ ತಮ್ಮ ಜೀವನ ನಿರ್ವಹಣೆಯ ವರಮಾನಕ್ಕಾಗಿ ಬಾಡಿಗೆ ಬರುವಂತೆ ಮಾಡಿಕೊಳ್ಳಲು 'ಸುಜಾತ' ಟಾಕೀಸ್ ಬಳಿಯಿದ್ದ, ತಮ್ಮ ಖಾಲಿ ನಿವೇಶನದಲ್ಲಿ 'ಮನೆ' ಕಟ್ಟಲು ತೀರ್ಮಾನಿಸಿ ಅವರ ಕೆಲಸವನ್ನು ಇವರಿಗೆ ವಹಿಸುತ್ತಾರೆ. ಅದೇ ಜಾಗದಲ್ಲೇ ಕೃಷ್ಣಪ್ಪನವರು ಆ ಮನೆಯ 'ಸೆಲ್ಲರ್'ನಲ್ಲಿ ಸೀತಾರಾಂ ಅವರ ಅನುಮತಿ ಪಡೆದು ಒಂದು ಪುಟ್ಟ ಕೊಠಡಿಯನ್ನು ಕಟ್ಟಿಕೊಳ್ಳುತ್ತಾರೆ. ಆ ಕೊಠಡಿಗೆ ಇವರು ಮಲ್ಲೇಶ್ವರಂನ ಕಿಟ್ಟಿ ಮನೆಯಿಂದ ತಮ್ಮ ವಾಸ್ತವ್ಯವನ್ನು ಬದಲಿಸುತ್ತಾರೆ. ಈ ಕೊಠಡಿಗೆ 'ಸಮಾಜವಾದಿ' ಪಕ್ಷದ ಕಾರ್ಯಕರ್ತರು, ನಾಯಕರು, ಕಡೆಗೆ ದುರೀಣರು ಎಲ್ಲವೂ ಆಗಿದ್ದ 'ರಮೇಶ್ ಬಂದಗದ್ದೆ' ಯವರು ಒಡನಾಡಿಯಾಗಿ(ರೂಂಮೆಟ್)ಆಗಿ ಬಂದು ಸೇರುತ್ತಾರೆ.

ಎನ್.ನಾಗರಾಜರಾವ್ ಅವರ ಸಂಪರ್ಕ ಬಂದ ನಂತರ ಇವರಿಗೆ ಹೆಚ್ಚು ಹೆಚ್ಚು ನಿರ್ಮಾಣದ ಕೆಲಸಗಳ ಅವಕಾಶಗಳು ಸಿಗುತ್ತವೆ. ಸ್ವಲ್ಪಮಟ್ಟಿನ ಹಣವೂ ದೊರೆಯುತ್ತದೆ. ರಾಜಾಜಿನಗರದಲ್ಲಿದ್ದ ಸಿ.ಎನ್.ಆರ್.ರಾವ್ (ಖ್ಯಾತ ವಿಜ್ಞಾನಿ) ಅವರ ಮನೆಯನ್ನು ಕೊಂಡಿದ್ದ ಮುಂಬೈನ 'ಶೇರ್ ಮಾರ್ಕೆಟ್' ಉದ್ದಿಮೆದಾರರು ಕೃಷ್ಣಪ್ಪನವರಿಗೆ ಆ ಮನೆಯ ನವೀಕರಣ ಮತ್ತು ಮೊದಲ ಮಹಡಿಯ ನಿರ್ಮಾಣದ ಜವಾಬ್ದಾರಿಯನ್ನು ಕೊಡುತ್ತಾರೆ. ಆ ಮನೆಯ ನವೀಕರಣ ಹಾಗೂ ನಿರ್ಮಾಣವನ್ನು ಕಲಾತ್ಮಕವಾಗಿ ನಿರ್ಮಾಣ ಮಾಡಿದ್ದ ಕಾರಣ ಕೃಷ್ಣಪ್ಪನವರಿಗೆ ಹಲವಾರು 'ಟಾಟಾ

ಇನ್ಸ್ಟಿಟ್ಯೂಟ್‌ನ ವಿಜ್ಞಾನಿಗಳ ಮನೆ ಹಾಗೂ ಖ್ಯಾತ ವಿಜ್ಞಾನಿಗಳಾದ ಭಾರತರತ್ನ ಸಿ.ಎನ್.ಆರ್. ರಾವ್ ಅವರ ಹೊಸ ಮನೆಯ ನಿರ್ಮಾಣದ ಜವಾಬ್ದಾರಿಗಳು ದೊರೆತವು. ಹೀಗೆ ನಾಗರಾಜರಾವ್, ಸಿ.ಎನ್.ಆರ್‌ರಾವ್, ಕಲಾವಿದ ಚಂದ್ರನಾಥ, ಜಿ.ಕೆ.ಸತ್ಯ ಹೀಗೆ ಹಲವರ ಮನೆಗಳನ್ನು ಕಟ್ಟುತ್ತಾರೆ. ಆ ಸಮಯದಲ್ಲಿ ಇವರ ಹಣದ ಪರಿಸ್ಥಿತಿಯೂ ಸುಧಾರಿಸುತ್ತದೆ. ಮೊದಲಿದ್ದ ಅತಂತ್ರತೆ ಸ್ವಲ್ಪ ಮಟ್ಟಿಗೆ ದೂರವಾಗುತ್ತದೆ. ಹಣದ ಅಭಾವ ಕಡಿಮೆಯಾಗುತ್ತದೆ. ಬದುಕು ಒಂದು ಹಂತದಲ್ಲಿ ನಿರಮ್ಮಳ ಎನಿಸುತ್ತದೆ.

## ನೆಲೆ ಅರಸಿ ಅಲೆದವರಿಗೆ ಮದುವೆ....ಮಡದಿ....ಮನೆ...ಮಕ್ಕಳು

ಹಣದ ಪರಿಸ್ಥಿತಿ ಸ್ವಲ್ಪ ಮಟ್ಟಿಗೆ ಸುಧಾರಿಸಿದ್ದರಿಂದ ಗೆಳೆಯರೆಲ್ಲರು ಕೃಷ್ಣಪ್ಪನವರಿಗೆ ಬದುಕು ರೂಪಿಸಿಕೊಳ್ಳಲು ಮತ್ತು ಮದುವೆ ಮಾಡಿಕೊಳ್ಳಲು ಒತ್ತಾಯಿಸುತ್ತಾರೆ. ಆಗ ಇವರು ಮದುವೆಯ ಕಡೆ ಗಮನ ಹರಿಸುತ್ತಾರೆ. ನಾಗರಾಜರಾವ್ ಅವರೇ 'ನಾನೇ ಮುಂದೆ ನಿಂತು, ನಿಮ್ಮ ಹಿತೈಷಿಯಾಗಿ ಮದುವೆಯ ಜವಾಬ್ದಾರಿಗಳನ್ನೆಲ್ಲ ನಿರ್ವಹಿಸುತ್ತೇನೆ.' ಎಂದು ಹೇಳಿ ಮುಂದುವರೆದು ಅವರ ಕಡೆಯವರಾದ 'ಎಕ್ಸ್‌ಸರ್ವಿಸ್‌ಮನ್' ವಾಸುದೇವ್‌ರಾವ್ ಅವರ ಮಗಳಾದ 'ವಿನೋದಿನಿ'ಯವರನ್ನು ನಾಗರಾಜರಾವ್ ತಮ್ಮ ಮನೆಗೆ ಕರೆದುಕೊಂಡು ಬಂದು 'ಹೆಣ್ಣು ತೋರಿಸುವ' ಶಾಸ್ತ್ರ ಮುಗಿಸುತ್ತಾರೆ. ವಾಸುದೇವರಾವ್ ಕುಟುಂಬದವರೆಲ್ಲ ಕಲಾಸಕ್ತರು ಹಾಗೂ ಸ್ವತಃಕಲಾವಿದರೂ ಆಗಿದ್ದಲ್ಲದೆ, ವಾಸುದೇವರಾವ್ ಅವರೇ ಪ್ರಾರಂಭದ ಬೆಂಗಳೂರಿನ ಹವ್ಯಾಸಿ ರಂಗಭೂಮಿಯ ನೇತಾರರು ಆಗಿರುತ್ತಾರೆ. ಅವರು ಯಶವಂತಪುರ ಭಾಗದಲ್ಲಿ ನಾಟಕ ಸ್ಪರ್ಧೆಗಳನ್ನು ಮಾಡುತ್ತಾ ಇರುತ್ತಾರೆ. ಈ ಎಲ್ಲಾ ಕಾರಣದಿಂದ ಹಾಗೂ ಕೃಷ್ಣಪ್ಪನವರೂ ರಂಗಭೂಮಿಯವರಾದ್ದರಿಂದ, ಸಂಬಂಧ ಕೂಡಿ ಬಂದು ದಿನಾಂಕ 10/7/1980 ರಂದು ಹೋಟೆಲ್ 'ವುಡ್‌ಲ್ಯಾಂಡ್'ನಲ್ಲಿ ಲಂಕೇಶ್, ವೈಕುಂಠರಾಜ್, ಟಿ.ಎನ್.ಸೀತಾರಾಂ, ಚಂದ್ರನಾಥ್, ಜಿ.ಎಸ್.ಸದಾಶಿವ, ಎಸ್.ವೆಂಕಟರಾಮ್, ರಮೇಶ್ ಬಂದಗದ್ದೆ, ಡಾ|| ವಿ.ಎನ್.ಜೋಶಿ, ಟಿ.ಎನ್.ಶ್ರೀನಿವಾಸಮೂರ್ತಿ, ಆರ್.ನಾಗೇಶ್, ಎಂ.ಸಿ. ಆನಂದ್ ಇವರ ಸಮ್ಮುಖದಲ್ಲಿ ಮದುವೆಯಾಗುತ್ತದೆ. ಇವರಿಗೆ ತಂದೆ–ತಾಯಿ ಇಲ್ಲದ್ದರಿಂದ ಬಂಧು–ಬಳಗದ ಯಾರ ಸಂಪರ್ಕವೂ ಇಲ್ಲದ ಕಾರಣ ಡಿ.ಸಿ.ಕೃಷ್ಣಮೂರ್ತಿ ಮನೆಯಲ್ಲೇ ಬೆಳೆದ ಕಾರಣ ಅವರ ತಂದೆ–ತಾಯಿಯವರಾದ ಸಿ.ಚಂದ್ರಶೇಖರಯ್ಯ ಮತ್ತು ಸರೋಜಮ್ಮನವರೇ ತಂದೆ–ತಾಯಿಯ ಸ್ಥಾನದಲ್ಲಿ ನಿಂತು ಮದುವೆ ಮಾಡಿಸಿ, ಕೃಷ್ಣಪ್ಪನವರು ಮೊದಲು ವಾಸಕ್ಕಿದ್ದ ತಮ್ಮ ಮನೆಗೇ ವಿನೋದಿನಿಯವರನ್ನು ಮನೆ ತುಂಬಿಸಿಕೊಳ್ಳುತ್ತಾರೆ.

ಮಾಂಗಲ್ಯಧಾರಣೆ 10/7/1980 ರಂದು ಆದರೆ, 26/7/1980 ರಂದು

ರಂಗವಲಯದ ಸ್ನೇಹಿತರೆಲ್ಲ ಸೇರಿ ಶ್ರೇಷಾದ್ರಿಪುರಂನ ಗುರುರಾಜ ಕಲ್ಯಾಣ ಮಂದಿರದಲ್ಲಿ ಮದುವೆಯ ಸಂತೋಷ ಕೂಟವನ್ನು ಏರ್ಪಡಿಸುತ್ತಾರೆ. ಈ ಸಂದರ್ಭದಲ್ಲಿ ಸಮುದಾಯ, ಬೆನಕ, ರಂಗಸಂಪದ, ನಟರಂಗ ತಂಡಗಳು ರಂಗಗೀತೆಗಳನ್ನು ಹಾಡುತ್ತಾರೆ. 'ಕೆನ್‌ಕಲಾ ಶಾಲೆಯ' ಹಡಪದ್ ಅವರು 'ಕಲಾಪ್ರದರ್ಶನ'ವೂ ವ್ಯಂಗ್ಯ ಚಿತ್ರಕಾರ ನರೇಂದ್ರ ಅವರಿಂದ 'ವ್ಯಂಗ್ಯಕಲಾ ಪ್ರದರ್ಶನವೂ' ವೆಂಕಟಾಚಲಪತಿ (ಶಿಲ್ಪ ಕಲಾ ಅಕಾಡೆಮಿಯ ಮಾಜಿ ಅಧ್ಯಕ್ಷರು.) ಅವರಿಂದ 'ಶಿಲ್ಪಕಲಾಪ್ರದರ್ಶನವೂ' ನಡೆಯುತ್ತದೆ. ಈ ಸಂದರ್ಭವನ್ನು ಲಂಕೇಶ್ ಪತ್ರಿಕೆಯಲ್ಲಿ ಲಂಕೇಶ ಹೀಗೆ ದಾಖಲಿಸುತ್ತಾರೆ" 'ಅಮಾವಾಸ್ಯೆ ಹುಣ್ಣಿಮೆ...' ಬೆಂಗಳೂರು ರಂಗಭೂಮಿಯ ದೀಪದಾರಿ, ನಿರ್ದೇಶಕ, ಸಹಾಯಕ ಮತ್ತು ಗೆಳೆಯ ಎಲ್.ಕೃಷ್ಣಪ್ಪ ಮೊನ್ನೆ ಮದುವೆಯಾದರು. ಕಪ್ಪು ಸುಂದರ ಕೃಷ್ಣಪ್ಪ, ಬಿಳಿ ಹುಡುಗಿ ವಿನೋದಿನಿಯನ್ನು ಮದುವೆಯಾಗಿ ಏರ್ಪಡಿಸಿದ ಸಂತೋಷಕೂಟದಲ್ಲಿ ಇವರ ಆತ್ಮೀಯ ಮಿತ್ರರು ಹಾಡಿದರು. ಚಿತ್ರ, ಶಿಲ್ಪಗಳನ್ನು ಪ್ರದರ್ಶಿಸಿದರು. ಕೃಷ್ಣಪ್ಪನ ಸರಳ ಅಂತರ್ಜಾತಿ ವಿವಾಹ ಹಸಿರು ನೆನಪಾಗಿ ಉಳಿವಂತೆ ಸಂಭ್ರಮಿಸಿದರು. ಈ ಸಾಲುಗಳುಳ್ಳ ಪತ್ರಿಕೆ ನನಗೊಂದು ಸುಂದರ ನೆನಪು ಎನ್ನುತ್ತಾರೆ. ಕೃಷ್ಣಪ್ಪ.

ಕೃಷ್ಣಪ್ಪನವರು ಹಾಗೂ ವಿನೋದಿನಿಯವರು ಸಂಸಾರ ಪ್ರಾರಂಭವಾಗುತ್ತದೆ. ಇವರಿಬ್ಬರ ಪ್ರೀತಿಯ ಒಡನಾಟಕ್ಕೆ ಸಾಕ್ಷಿಯಾಗಿ, ಬದುಕಿನ ಬಳ್ಳಿಗಳಾಗಿ, ಕರುಳ ಕುಡಿಗಳಾಗಿ ಇಂದಿನ ಚಿತ್ರರಂಗದ ಜನಪ್ರಿಯ ತಾರೆ, ಕಲಾವಿದೆ, ಅಭಿನೇತ್ರಿ 'ಶ್ವೇತಾ' (ಶ್ವೇತಾ ಶ್ರೀ ವಾಸ್ತವ್) ಅವರು 1981ರ ಸೆಪ್ಟೆಂಬರ್‌ನಲ್ಲಿಯೂ, ಮಗ 'ಶರದ್' ಅವರು 1984 ರ ಫೆಬ್ರವರಿಯಲ್ಲಿ ಜನಿಸುತ್ತಾರೆ.

ಮದುವೆಗೆ ಮುಂಚೆ ಮೂರು ವರ್ಷಗಳು ಹಾಗೂ ಮದುವೆಯ ನಂತರ ಮೂರು ವರ್ಷಗಳು ಕೃಷ್ಣಪ್ಪನವರು ಸ್ವಂತ ಬದುಕಿನ ಕಡೆಗೆ ಹೆಚ್ಚಿನ ಗಮನ ಕೊಡುತ್ತಾರೆ. ಆಗಾಗ ರಂಗಭೂಮಿಯ ಕಡೆ ಭೇಟಿ ನೀಡುತ್ತಿರುತ್ತಾರೆ. ಅದಾದ ನಂತರ ಮತ್ತೆ ರಂಗಭೂಮಿಗೆ ಪೂರ್ಣ ಪ್ರಮಾಣದಲ್ಲಿ ಪಾದಾರ್ಪಣ ಮಾಡುತ್ತಾರೆ.

## ಮರಳಿ ಮತ್ತೆ – ಕರ್ಮ ಭೂಮಿಗೆ – ರಂಗ ಮಡಿಲಿಗೆ

1982ರ ನಂತರ ಕೃಷ್ಣಪ್ಪನವರು ಮತ್ತೆ ರಂಗಭೂಮಿಗೆ ಮರಳುತ್ತಾರೆ. ಇದುವರೆಗೂ ನೇಪಥ್ಯಗಾರರಾಗಿ, ರಂಗವಿನ್ಯಾಸಕರಾಗಿ, ಬೆಳಕು ವಿನ್ಯಾಸಕರಾಗಿ, ಸಂಘಟಕರಾಗಿ ರಂಗನಿರ್ವಾಹಕರಾಗಿ, ವಸ್ತ್ರ ವಿನ್ಯಾಸಕರಾಗಿ ಕೆಲಸ ಮಾಡುತ್ತಿದ್ದ ಕೃಷ್ಣಪ್ಪನವರಿಗೆ ಉತ್ತಮ ನಾಟಕಗಳನ್ನು ರಂಗಕ್ಕೆ ತರಬೇಕು, ನಿರ್ದೇಶನ ಮಾಡಬೇಕೆಂಬ ಉದ್ದೇಶದಿಂದ ಮತ್ತೆ 'ಪ್ರತಿಮಾ ನಾಟಕ ರಂಗ ಒಳಗ' ಕಟ್ಟಲು ಶಿಬಿರವನ್ನು ಆಯೋಜಿಸುತ್ತಾರೆ. ಆಗ ತಾನೆ ಎನ್.ಎಸ್.ಡಿ ಮುಗಿಸಿ ನಂತರ 2

ಎರಡು ವರ್ಷಗಳ ಕಾಲ ಎನ್.ಎಸ್.ಡಿಯ ರೆಪರ್ಟರಿಯಲ್ಲಿ ನಟನಾಗಿ ದೇಶವಿದೇಶಗಳನ್ನು ಸುತ್ತಿಬಂದಿದ್ದ 'ಗೋಪಾಲಕೃಷ್ಣ ನಾಯರಿ' ಅವರಿಗೆ ಶಿಬಿರದ ನಿರ್ದೇಶಕರಾಗಿ ಶಿಬಿರ ನಡೆಸಿಕೊಡಲು ಆಹ್ವಾನಿಸುತ್ತಾರೆ. ರವೀಂದ್ರ ಕಲಾಕ್ಷೇತ್ರದ ತಾಲೀಮು ಕೊಠಡಿಯಲ್ಲಿ 45 ದಿನಗಳ ಕಾಲ ಬೆಳಗಿನಿಂದ ರಾತ್ರಿಯವರೆಗೂ ನಿರಂತರವಾಗಿ ಶಿಬಿರ ನಡೆಯುತ್ತದೆ. ಆ ಶಿಬಿರ ಮುಗಿದ ನಂತರ ಅದರಲ್ಲಿ ಭಾಗವಹಿಸಿದ ರಂಗಾಸಕ್ತರನ್ನು ಸೇರಿಸಿ ಲಂಕೇಶರ 'ಸಿದ್ಧತೆ' ನಾಟಕವನ್ನು ಹಾಗೂ ಬೆಂಗಳೂರಿನ ಯಶವಂತಪುರದ 'ರಂಗಶಿಲ್ಪಿ' ತಂಡಕ್ಕೆ ಲಂಕೇಶರ 'ಪೋಲೀಸರಿದ್ದಾರೆ ಎಚ್ಚರಿಕೆ' ಹಾಗೂ 'ಕ್ರಾಂತಿ ಬಂತು ಕ್ರಾಂತಿ' ನಾಟಕವನ್ನು ನಿರ್ದೇಶಿಸುತ್ತಾರೆ. ಈ ನಾಟಕಗಳು ಬೆಂಗಳೂರಿನ 'ಯವನಿಕಾ' ರಂಗಮಂದಿರದಲ್ಲಿ ಪ್ರದರ್ಶನ ಕಾಣುತ್ತವೆ. ಇದರಲ್ಲಿ ಕೃಷ್ಣಪ್ಪನವರ ಮಡದಿ 'ವಿನೋದಿನಿ' ಅವರೂ ಸುಧಾ ಪಾತ್ರವನ್ನು ನಿರ್ವಹಿಸುತ್ತಾರೆ. ಈ ನಾಟಕಕ್ಕೆ ಸಿ.ಜಿ.ಕೆ ಅವರು ಬೆಳಕಿನ ವಿನ್ಯಾಸ ಮಾಡುತ್ತಾರೆ.

1983ರಲ್ಲಿ ಕರ್ನಾಟಕ ನಾಟಕ ಅಕಾಡಮಿಗೆ ಡಾ॥ ಚಂದ್ರಶೇಖರ ಕಂಬಾರ ಅವರು ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಪ್ರಸನ್ನ ಅವರು ಸದಸ್ಯರಾಗಿರುತ್ತಾರೆ. ಪ್ರಸನ್ನ ಅವರ ಎನ್.ಎಸ್.ಡಿಯ ಅನುಭವಗಳ ಹಿನ್ನೆಲೆಯಲ್ಲಿ ಪೂರ್ಣಾವಧಿ ನಾಟಕ ರಚನಾ ಶಿಬಿರ 17/6/1983 ರಿಂದ 26/6/83 ರವರೆಗೆ ಚಿತ್ರದುರ್ಗ ಜಿಲ್ಲೆ ಕೊಂಡಜ್ಜಿಯಲ್ಲಿ ನಡೆಯುತ್ತದೆ. ಅಲ್ಲಿ ಸುಮಾರು 40ಜನ ಉಪನ್ಯಾಸಕರು, ಸಾಹಿತ್ಯಾಸಕ್ತರು, ಈಗಾಗಲೇ ನಾಟಕ ರಚನೆಯಲ್ಲಿ ತೊಡಗಿಕೊಂಡಿದ್ದವರು ಶಿಬಿರಾರ್ಥಿಗಳಾಗಿ ಇರುತ್ತಾರೆ. ಅವರಲ್ಲಿ ಕೆಲವರೆಂದರೆ ನಿಸರ್ಗಪ್ರಿಯ (ಸಿದ್ದಗಂಗಯ್ಯ ಕಂಬಾಳ್) ಹೊಲಿಶೇಖರ್, ಮುದೇನೂರು ಸಂಗಣ್ಣ, ಎಂ.ಜಿ. ಈಶ್ವರಪ್ಪ, ಹುಣಸವಾಡಿರಾಜನ್, ಗೋಪಾಲ ವಾಜಪೇಯಿ, ಪಾಲ್‌ಸುದರ್ಶನ್, ಎಸ್.ಆರ್.ರಮೇಶ್, ಎಲ್.ಎಸ್.ಸುದೀಂದ್ರ, ಶೂದ್ರ ಶ್ರೀನಿವಾಸ, ಪಿ.ಗಂಗಾಧರಸ್ವಾಮಿ ಭರತಕುಮಾರ ಪೊಲಿಪು, ಗೋಪಾಲಕೃಷ್ಣ ನಾಯರಿ, ಎ.ಆರ್. ನಾಗಭೂಷಣ, ಹಾ.ಸಾ.ಕೃ, ಮುಂತಾದವರು ಇರುತ್ತಾರೆ. 5–6 ಜನರನ್ನು ಒಂದು ಗುಂಪುಗಳಾಗಿ ವಿಂಗಡಿಸಿ ನಾಟಕ ಬರೆಯಲು ಪ್ರೇರೇಪಿಸುತ್ತಾರೆ. ಶಿಬಿರದ ನಿರ್ದೇಶಕರು ಅದರಲ್ಲಿ ಕೃಷ್ಣಪ್ಪ, ನಿಸರ್ಗಪ್ರಿಯಾ, ಮುದೇನೂರು ಸುಗಣ್ಣ, ಎಲ್.ಎಸ್. ಸುದೀಂದ್ರ, ಹುಣಸವಾಡಿರಾಜನ್ ಎಲ್ಲರದೂ ಒಂದು ಗುಂಪು. ಈ ಗುಂಪಿನ ಎಲ್ಲರೂ ಸಹ ಒಂದೊಂದು ವಸ್ತುವಿನ ಬಗ್ಗೆ ಚರ್ಚಿಸಿ ಕೊನೆಗೆ ಅದರಲ್ಲಿ ಉತ್ತಮವಾದ ವಸ್ತುವನ್ನು ಆಯ್ಕೆ ಮಾಡಿ ನಾಟಕ ರಚಿಸಲು ಪ್ರಾರಂಭಿಸುತ್ತಾರೆ. ಇವರೆಲ್ಲ ಚರ್ಚಿಸಿದ ವಸ್ತುವನ್ನು ಪೂರ್ಣಗೊಳಿಸಲು ಸಿದ್ದಗಂಗಯ್ಯ ಕಂಬಾಳ್ ಅವರಿಗೆ ಜವಾಬ್ದಾರಿ ವಹಿಸುತ್ತಾರೆ. ಆಗ ಹೊರಬಂದ ನಾಟಕವೇ ಜನಪದ ವಸ್ತು ಹಿನ್ನೆಲೆಯ 'ಶಿರುಕರಾಜ' ನಾಟಕ.

ಆ ಶಿಬಿರದಲ್ಲಿ ಇವರೆಲ್ಲ ಜನಪದದ ಹಲವು ಪ್ರದರ್ಶನ ಪ್ರಕಾರಗಳಾದ ಜೋಗೇರ ಆಟ, ಚೌಡಿಕೆ ಮೇಳ, ಕೃಷ್ಣ ಪಾರಿಜಾತ, ದೊಡ್ಡಾಟ, ಸಣ್ಣಾಟಗಳು, ದಾಸರಾಟ, ಇನ್ನೂ ಮುಂತಾದ ಪ್ರಕಾರಗಳನ್ನು ನೋಡಿ ಅನುಭವಕ್ಕೆ ತಂದುಕೊಳ್ಳುತ್ತಾರೆ. ಜೋಗೇರ ಆಟದ ಶೈಲಿಯಲ್ಲಿ ರಚಿತವಾಗಿದ್ದ 'ತಿರುಕರಾಜ' ನಾಟಕವನ್ನು ಮುಂದೊಂದು ದಿನ ಅದ್ಭುತವಾಗಿ ನಿರ್ದೇಶಿಸಿ ಪ್ರದರ್ಶಿಸುವ ಕನಸನ್ನು ಆಗಲೇ ಕೃಷ್ಣಪ್ಪನವರು ಕಾಣುತ್ತಾರೆ.

## ನಾಟಕ ನಿರ್ದೇಶನದತ್ತ ಕೃಷ್ಣಪ್ಪರ ಚಿತ್ತ

1984ರ ಸಂದರ್ಭದಲ್ಲಿ 'ಅಂಚೆ ತಂತಿ ರಂಗ ವೇದಿಕೆ' ಕಲಾವಿದರು ಆರ್.ನಾಗೇಶ ಅವರಿಗೆ ರಂಗಇತಿಹಾಸ ಮತ್ತು ರಂಗಪ್ರಯೋಗಗಳ ಕುರಿತ ಪೂರ್ಣ ಪ್ರಮಾಣದ ರಂಗಶಿಬಿರವನ್ನು ನಡೆಸಿಕೊಡಲು ಆಹ್ವಾನ ಕೊಡುತ್ತಾರೆ. ಆ ಶಿಬಿರದ ಸಂಪನ್ಮೂಲ ವ್ಯಕ್ತಿಯಾಗಿ ನೀವೂ ಸಹ ಇರಬೇಕೆಂದು ಕೃಷ್ಣಪ್ಪನವರನ್ನು ಆರ್.ನಾಗೇಶ್ ಕರೆಯುತ್ತಾರೆ. ಒಂದು ತಿಂಗಳ ಕಾಲ ಕೃಷ್ಣಪ್ಪನವರು ಆ ಶಿಬಿರದ ಭಾಗವಾಗಿದ್ದು, ಆ ಶಿಬಿರದ ಶಿಬಿರಾರ್ಥಿಗಳ ತಂಡವಾದ 'ಅಂತರಂಗ'ಕ್ಕೆ ಕಂಬಾಳ್ ಅವರ 'ತಿರುಕರಾಜ' ನಾಟಕವನ್ನು ನಿರ್ದೇಶನ ಮಾಡುತ್ತಾರೆ. ಇದೇ ನಾಟಕವನ್ನು ಕೃಷ್ಣಪ್ಪನವರು ಚಿತ್ರದುರ್ಗದ 'ರಚನಾ' ತಂಡಕ್ಕೆ ಮಾಡಿಸುತ್ತಾರೆ.

1983–84ರ ಸಮಯದಲ್ಲಿ ಪ್ರಸನ್ನರವರು ಬೆಂಗಳೂರಿನಲ್ಲಿ ಒಂದು 'ರೆಪ್ರಟರಿ' ತಂಡವನ್ನು ಕಟ್ಟಲು ಮುಂದಾಗುತ್ತಾರೆ. ಆ ರೆಪ್ರಟರಿಗೆ 'ಜನಪದ' ಎಂದು ಹೆಸರಿಸುತ್ತಾರೆ. ಅದರ ಸಂಪನ್ಮೂಲ ವ್ಯಕ್ತಿಗಳಾಗಿ ಕೃಷ್ಣಪ್ಪ, ನಾಗೇಶ್, ಲೋಕನಾಥ್ ಸುರೇಂದ್ರನಾಥ್, ಸುಂದರಶ್ರೀ, ಅವಿನಾಶ್ (ರವಿ), ಶೀಲಾಗೌಡ (ಚಿತ್ರಕಲಾವಿದೆ) ಲೈಟ್ ಮುದ್ದಣ್ಣ, ಸತ್ಯಸಂಧ, ರಾಮಕೃಷ್ಣ, ನರಸಿಂಹಯ್ಯ ಹಲವರಿರುತ್ತಾರೆ.

1983ರಲ್ಲಿ ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದ ಶ್ರೀ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಮತ್ತೆ ಚುನಾವಣೆ ಘೋಷಿಸುತ್ತಾರೆ. ಅಲ್ಲದೆ ಚುನಾವಣೆ ಪ್ರಚಾರಕ್ಕೆ ರಂಗಕಲಾವಿದರನ್ನು 'ಬೀದಿನಾಟಕ' ಆಡಿಸುವುದರ ಮೂಲಕ ಬಳಸಿಕೊಳ್ಳುತ್ತಾರೆ.

ಹೀಗೆ  ಮಂತ್ರಿಗಳಿಂದ ಆಹ್ವಾನ ಬಂದ ಕೂಡಲೆ 'ಜನಪದ ರೆಪ್ರಟರಿ'ಯಲ್ಲಿದ್ದ ಬಹುತೇಕರು ಚುನಾವಣೆಗಾಗಿ ಬೀದಿನಾಟಕಗಳನ್ನು ಮಾಡಲು ಅತ್ತ ತೆರಳಿದರು. ಅದರಿಂದ 'ಜನಪದ' ಚಟುವಟಿಕೆ ಸ್ಥಗಿತಗೊಂಡಿತು. ಪ್ರಚಾರದ ಬೀದಿನಾಟಕದಿಂದ ಹೊರಗುಳಿದ, ರಂಗಬದ್ಧತೆಗೆ ಅಪ್ಪಿಕೊಂಡಿದ್ದ ಕೃಷ್ಣಪ್ಪ, ಆರ್. ನಾಗೇಶ್, ಹುಲಿವಾನ್‌ಗಂಗಾಧರಯ್ಯ, ಎಸ್.ಕೆ ಮಾದವರಾವ್, ಮನು, ಟೈರ್ ವೆಂಕಟೇಶ(ಶಿವಮೊಗ್ಗ ವೆಂಕಟೇಶ) ಮುಂತಾದವರೆಲ್ಲ ಸೇರಿ 'ಜನನಾಟ್ಯ ಮಂಡಲಿ'

ರೆಪ್ರಟರಿಯನ್ನು ಸ್ಥಾಪಿಸುತ್ತಾರೆ. ಆ ಸಂಸ್ಥೆಯಿಂದ ನಿರಂತರವಾಗಿ ನಾಟಕ ಮಾಡುವ ಉದ್ದೇಶದಿಂದ ಎಂ.ಪಿ. ಪ್ರಕಾರ ಅವರು ಜಾತ್ರಾಶೈಲಿಯಲಿದ್ದ 'ಉತ್ಪಲದತ್ತ' ಅವರ ಬಂಗಾಲಿಯ ನಾಟಕವನ್ನು ಕನ್ನಡಕ್ಕೆ 'ಸೂರ್ಯನಬೇಟೆ' ಎಂದು ಅನುವಾದಿಸಿದ್ದಿದುದನ್ನು ಕೃಷ್ಣಪ್ಪನವರು 'ಸೂರ್ಯಶಿಕಾರಿ' ಎಂದು ಮರುನಾಮಕರಣಗೊಳಿಸಿ 'ಬ್ರೆಕ್ಟ' ಥಿಯೇರಿ ಬಳಸಿ 'ಪ್ರಯೋಗರೂಪಾಂತರ' ಮಾಡುತ್ತಾರೆ. ಅದರಲ್ಲಿ ಕೃಷ್ಣಪ್ಪನವರು ತಮ್ಮದೇ ಆದ ರಂಗಶೈಲಿ, ಪಾತ್ರಗಳ ನಿರೂಪ, ದೃಶ್ಯ ಸಂಯೋಜನೆ ಇವನ್ನೆಲ್ಲ ಮಾಡಿ ರಂಗಕ್ಕೆ ತರುತ್ತಾರೆ. ಡಾ॥ ಸಿದ್ಧಲಿಂಗಯ್ಯನವರಿಂದ ತಮ್ಮ ನಾಟಕದ ಸನ್ನಿವೇಷಗಳಿಗೆ ಬೇಕಾದಂತೆ ರಂಗಗೀತೆಗಳನ್ನು ಬರೆಸಿ ಅದನ್ನು ನಾಟಕಕ್ಕೆ ಅಳವಡಿಸುತ್ತಾರೆ. ಈ ಬದಲಾವಣೆ, ಮೂಲದ ಉತ್ಪಲದತ್ ಅವರಲ್ಲಾಗಲಿ, ಪ್ರಕಾಶ್ ಅವರ ಅನುವಾದದಲ್ಲಾಗಲಿ ಇರುವುದಿಲ್ಲ. ಪ್ರಕಾಶ್ ಅವರ ಅನುವಾದಕ್ಕೆ ಪುಷ್ಟಿ ಕೊಡುವ ರೀತಿಯಲ್ಲಿ ನಾಟಕವನ್ನು ಕೃಷ್ಣಪ್ಪನವರೇ ಪುನರ್ ನಿರ್ಮಿಸಿ 1985 ಫೆಬ್ರವರಿ 12 ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶಿಸುತ್ತಾರೆ.

ಕೃಷ್ಣಪ್ಪನವರು ನಿರ್ದೇಶಿಸಿದ 'ಸೂರ್ಯಶಿಕಾರಿ' ಕನ್ನಡ ರಂಗಭೂಮಿಯ ಒಂದು 'ಮೈಲಿಗಲ್ಲೂ' ಆಗುತ್ತದೆ ಹಾಗೆಯೆ ಕೃಷ್ಣಪ್ಪನವರ ರಂಗಬದುಕಿನ 'ಮೈಲಿಗಲ್ಲೂ' ಆಗುತ್ತದೆ. ಇವರಿಗೆ ಆ ನಾಟಕ ಬಹಳ ಯಶಸ್ಸನ್ನು ತಂದು ಕೊಡುತ್ತದೆ. ಈ ನಾಟಕ ಬಂದ ದಿನದಿಂದ ಕೃಷ್ಣಪ್ಪನವರನ್ನು 'ಸೂರ್ಯಶಿಕಾರಿ' ಕೃಷ್ಣಪ್ಪ ಎಂದೇ ಗುರುತಿಸುವಂತಾಗುತ್ತದೆ. ಅಂತಹದೊಂದು ಕೀರ್ತಿ ಕೃಷ್ಣಪ್ಪನವರದಾಗುತ್ತದೆ.

ಈ ನಾಟಕದ ಪ್ರದರ್ಶನ ಕುರಿತು ಕನ್ನಡದ ಹೆಸರಾಂತ ಕವಿಗಳು, ವಿಮರ್ಷಕರು, ಸ್ವತಃ ರಂಗತಜ್ಞರೂ ಆದ ಕಾ.ವೆಂ.ರಾಜಗೋಪಾಲ್ ಅವರು 'ಮುಂಜಾವು' ಪತ್ರಿಕೆಯಲ್ಲಿ ಕನ್ನಡಿಗರೆಲ್ಲ ನೋಡಬೇಕಾದ 'ಸೂರ್ಯಶಿಕಾರಿ' ಶೀರ್ಷಿಕೆಯಡಿಯಲ್ಲಿ ಹೀಗೆ ಬರೆಯುತ್ತಾರೆ.

'ಇತ್ತೀಚಿಗೆ ಜನನಾಟ್ಯ ಮಂಡಲಿಯು ಹುಟ್ಟಿಕೊಂಡು ತಮ್ಮ ಮೊದಲ ನಾಟಕವಾಗಿ ಉತ್ಪಲದತ್ತರ ಬಂಗಾಲಿ ಕೃತಿಯಾದ 'ಸೂರ್ಯಶಿಕಾರಿ'ಯನ್ನು ಪ್ರಯೋಗಿಸಿದೆ. ಇದರ ಅನುವಾದ ಮತ್ತು ಮೊದಲ ಕನ್ನಡ ಪ್ರಯೋಗವನ್ನು ಕೆಲವು ವರ್ಷಗಳ ಹಿಂದೆ ಎಂ.ಪಿ. ಪ್ರಕಾಶ ಅವರು ತಮ್ಮ ಹೂವಿನ ಹಡಗಲಿಯಲ್ಲಿ ನಡೆಸಿದ್ದರು. ಅದನ್ನೀಗ ಎಲ್.ಕೃಷ್ಣಪ್ಪ ನಿರ್ದೇಶಿನಿ ಒಂದು ಗಟ್ಟಿಯಾದ ಹೆಜ್ಜೆಯನ್ನು ಇರಿಸಿದ್ದಾರೆ.

ನಾಟಕದ ನಿರ್ದೇಶನವು ಯಶಸ್ವಿಯಾಗಿದೆ ಎನ್ನಿಸಿದರೂ ಕೆಲವು ನಟರು ಇನ್ನು ಹೆಚ್ಚು ಶ್ರಮವಹಿಸಬೇಕಿತ್ತೆನ್ನಿಸುತ್ತಿದೆ. ಮುಂದಿನ ಪ್ರದರ್ಶನಗಳಲ್ಲಿ ಇದು

ಸಾಧ್ಯವೆನ್ನಿಸುವುದಂತೂ ಸಹಜವಾಗುತ್ತದೆ. ಪಾಶ್ಚಿಮಾತ್ಯರಿಗೆ ಗೆಲಿಲಿಯೋ ಆಗಿ ಹೋದಂತೆ ಭಾರತೀಯರಿಗೆ ಗೆಲಿಲಿಯೋಗೂ ಹಿಂದೆ ಕಲ್ಹಣ ಬಂದು ಹೋಗಿದ್ದನೆಂಬುದನ್ನು ಈ ನಾಟಕವು ಬೆಳಕಿಗೊಡ್ಡುತ್ತದೆ.

ನಾಟಕದ ದೃಶ್ಯಗಳು ಸರಳ ಸುಂದರವಾಗಿ ಒಂದು ಸಂಕೀರ್ಣ ವಿಷಯದ ಪದರಗಳನ್ನು ಬಿಡಿಸಲು ಅನುಕೂಲವಾಗಿದ್ದರಿಂದ ಕೆಲವಾದರೂ ಸಂದರ್ಭಗಳಲ್ಲಿ ನಟನಟಿಯರು ಯಶಸ್ವಿಯಾಗಿದ್ದಾರೆ. ಅದಕ್ಕೆ ಅನುಕೂಲವಾಗಿದ್ದ ಸೆಟ್ಸ ತುಂಬಾ ಆಕರ್ಷಕವಾಗಿ ಅರ್ಥವಂತಿಕೆಗೆ ಹೊಣೆಯಾಗಿದ್ದಿತು. ಮೇಳದಲ್ಲಿ ವಾದ್ಯಗಳ ಗೊಂದಲವಿಲ್ಲದೆ ಸಂಯೋಜನೆಗೆ ಹೊಂದಿಕೊಂಡುದಲ್ಲದೆ ವೈವಿಧ್ಯದಿಂದ ಕೂಡಿದ್ದು ಪ್ರೇಕ್ಷಕರ ನಿರೀಕ್ಷೆಯನ್ನು ಮುಟ್ಟಿತು ಎನ್ನಬಹುದು. ಇದರ ಯಶಸ್ಸನ್ನು ನಟ ಮಾಧವರಾವ್ ವಿದೂಷಕನಾಗಿಯೂ ಗಳಿಸಿದಂತಾಗಿದೆ. ನಂತರ ನೆನಪಿನಲ್ಲಿ ಉಳಿಯುವಂಥ ಅಭಿನಯವನ್ನು ನೀಡಿದವರೆಂದರೆ ರಾಣಿಯಾಗಿ ಸಂಗಮಿತ್ರ ಶರ್ಮ ಮತ್ತು ಸಮುದ್ರಗುಪ್ತನಾಗಿ ಹುಲಿವಾನ್ ಗಂಗಾಧರಯ್ಯ. ಇವೆರಡೂ ಪಾತ್ರಗಳನ್ನು ಅರ್ಥ ಮಾಡಿಕೊಳ್ಳಲು ನಾಟಕದ ಕೊನೆಯ ಹಂತಕ್ಕೆ ಮುಟ್ಟಬೇಕಾಗುತ್ತದೆ. ಆಗಲೇ 'ಸೂರ್ಯಶಿಕಾರಿ' ಎಂದರೇನೆಂಬುದು ಹೊಳೆಯುವುದು. ಈ ಕೃತಿಯು ವಿಜ್ಞಾನ ಮತ್ತು ಸಾಂಪ್ರದಾಯಕ ನಡವಳಿಗಳ ನಡುವೆ ಮಾಡುವ ಘರ್ಷಣೆಯನ್ನು ವಸ್ತುವಾಗಿ ಪಡೆದಿದೆಯಷ್ಟೆ. ಅಲ್ಲದೆ ಇದಕ್ಕಾಗಿ ಇದರ ನಾಯಕನು ವಿಜ್ಞಾನಿಯಾದ ಕಲ್ಹಣನಾಗುತ್ತಾನೆ. ಈ ಪಾತ್ರವನ್ನು ಬಿ.ವಿ.ನಂಜುಂಡಯ್ಯ ತುಂಬು ಹೃದಯದಿಂದ ಅಭಿನಯಿಸಿದಂತೆ ಕಂಡು ಬರುತ್ತದೆ. ಉಳಿದವರಿಗೆಲ್ಲಾ ಇಂತಹ ಅವಕಾಶವು ಈ ನಾಟಕದ ಉದ್ದಕ್ಕೂ ಹೇರಳವಾಗಿದೆಯಷ್ಟೆ ಅಲ್ಲ ನಿರ್ದೇಶನ ಈ ದೃಷ್ಟಿಯಿಂದ ಖಚಿತವಾಗಿದೆ. ಇದರ ಸೆಟ್ಸ ತುಂಬ ಅನುಕೂಲಕರವಾದುದಾಗಿದೆ.

ಒಟ್ಟಿನಲ್ಲಿ ಜನ ನಾಟ್ಯ ಮಂಡಲಿಯ ಸಾಹಸವನ್ನು ಮೆಚ್ಚಿಕೊಳ್ಳುವುದಾಗಿದೆ. ಅಲ್ಲದೆ ಇದರ ಪ್ರಯೋಗಗಳನ್ನು ಕನ್ನಡ ನಾಡಿನ ಪ್ರಮುಖ ಸ್ಥಳಗಳಲ್ಲಿ ನಡೆಸುವುದು ಒಳ್ಳೆಯದು ಎಂದು ಹೇಳಬಹುದಾಗಿದೆ. ಕೃಷ್ಣಪ್ಪ ಕನ್ನಡ ಹವ್ಯಾಸಿರಂಗಕ್ಕೆ ಹಳಬರು. ಅವರು ಮತ್ತೆ ಪ್ರಯೋಗ ಶೀಲರಾಗಿರುವುದರಿಂದ ಹವ್ಯಾಸಿ ರಂಗಕ್ಕೆ ಮತ್ತೊಂದು ಕೈ ಮೂಡಿದಂತೆಯೂ ಆಗಿದೆ. ಈ ನಾಟಕವು ಕನ್ನಡಿಗರೆಲ್ಲರೂ ನೋಡಲೇಬೇಕಾದ ಒಂದು ಸಾಧನೆಯೆಂಬುದಂತೂ ಮುಖ್ಯ. ನಾಟಕದ ಬಗ್ಗೆ ಈ ರೀತಿ ಬರೆಯುತ್ತಾರೆ. ಕಾ.ವೆಂ ಅವರು.

ಈ ನಾಟಕಕ್ಕಾಗಿ ನಿರ್ದೇಶಕ ಕೃಷ್ಣಪ್ಪನವರು ಕವಿ ಸಿದ್ದಲಿಂಗಯ್ಯನವರಿಂದ ಬರೆಸಿದ ರಂಗಗೀತೆಗಳನ್ನು ಈ ಸಂದರ್ಭದಲ್ಲಿ ದಾಖಲಿಸುವುದು ಸೂಕ್ತವಾದದ್ದೆನಿಸಿದೆ ನನಗೆ.

ಅರಸನ ಅರಮನೆ ಮೆಟ್ಟಿಲು ನಾವು
ಸಾಲು ಸಾಲು ತೊಲೆ ಕಂಬಗಳು
ನಮ್ಮ ಕರಳನು ಕಿತ್ತು ತೋರಣ ಕಟ್ಟಿ
ರಕ್ತದ ಹೋಕುಳಿ ಆಡುವರು.

ಹಾಗೂ, ಮತ್ತೊಂದು ಹಾಡು.

ಕಂದನ ಎದುರು ಹೆತ್ತ ತಾಯಿಯ
ಬೆತ್ತಲೆ ಮಾಡವ ಕ್ರೂರಿಗಳು
ಮಾನವ ಘನತೆಯ ಗಾಳಿಗೆ ತೂರಿ
ಬೆತ್ತಲೆ ಮಾಡವ ಗೂಳಿಗಳು
ಜೀವಜೀವಗಳ ಬಿಕರಿಗಿಟ್ಟರು
ಹಣ್ಣು ಕಾಯಿಗಳ ರೀತಿಯಲಿ.

ಈ ನಾಟಕದಲ್ಲಿ ಅಭಿನಯಿಸಿದ ಕಲಾವಿದರೆಂದರೆ ಹುಲಿವಾನ್ ಗಂಗಾಧರಯ್ಯ, ಎಸ್.ಕೆ. ಮಾದವರಾವ್, ಹರಿಕೃಷ್ಣ, ಬಿ.ಎ. ನಂಜುಂಡಯ್ಯ, ಶಿವಮೊಗ್ಗ ವೆಂಕಟೇಶ್, ಪ್ರಕಾಶ್ ಅರಸ್, ಕೆ.ರೇವಣ್ಣ, ನಳಿನಾ ಮೂರ್ತಿ, ಸಂಘಮಿತ್ರ ಇನ್ನೂ ಮೊದಲಾದವರು. ಇದೇ ನಾಟಕ ರಾಷ್ಟಾದ್ಯಂತ ಪ್ರದರ್ಶನವಾದ ಸಂದರ್ಭದಲ್ಲಿ ಕೃಷ್ಣಪ್ಪನವರ ಮಗಳಾದ ಇಂದಿನ ಚಲನಚಿತ್ರ ತಾರೆ ಶ್ವೇತಾ ಕೃಷ್ಣಪ್ಪನವರೂ ಅಭಿನಯಿಸುತ್ತಾರೆ.

'ಸೂರ್ಯಶಿಕಾರಿ'ಯ ನಂತರ ಕೃಷ್ಣಪ್ಪನವರು ಕುವೆಂಪುರವರ 'ಶೂದ್ರ ತಪಸ್ವಿ' ನಾಟಕವನ್ನು ಬೆಂಗಳೂರಿನ ಐ.ಟಿ.ಡಿ. ಕಾರ್ಮಿಕರ 'ಗ್ಲೋಬ್' ತಂಡಕ್ಕೆ ನಿರ್ದೇಶನ ಮಾಡುತ್ತಾರೆ. ಈ ನಾಟಕವು 1986ರಲ್ಲಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶಿತವಾಗುತ್ತದೆ. ಮೂಲ ನಾಟಕದ ಬರುವ ಒಬ್ಬ 'ಬ್ರಾಹ್ಮಣ'ನ ಪಾತ್ರವನ್ನು ಕೃಷ್ಣಪ್ಪನವರು ತಮ್ಮ ಪ್ರಯೋಗದಲ್ಲಿ 'ಹನ್ನೊಂದು' ಬ್ರಾಹ್ಮಣವರ್ಗವನ್ನು ಸೃಷ್ಟಿಸುವ ಮೂಲಕ ನಾಟಕದ ತೀವ್ರತೆಯನ್ನು ಹೆಚ್ಚಾಗುವಂತೆ ಮಾಡುತ್ತಾರೆ. ಇದು ಈ ಪ್ರಯೋಗದ ವಿಶಿಷ್ಟವಾಗಿರುತ್ತದೆ.

1995ರಲ್ಲಿ ಮೈಸೂರಿನ ಅಮರ ಕಲಾಸಂಘಕ್ಕೆ 'ರಂಗ ತರಬೇತಿ ಶಿಬಿರವನ್ನು ಮಾಡಿ ಪರ್ವತವಾಣಿಯವರ' 'ಕವಿಭಿಕ್ಷೆ' ನಾಟಕವನ್ನು ನಿರ್ದೇಶಿಸಿ ಮೈಸೂರಿನ ಜಗನ್ಮೋಹನ ಪ್ಯಾಲೇಸ್ ರಂಗಮಂದಿರದಲ್ಲಿ ಪ್ರದರ್ಶಿಸುತ್ತಾರೆ. ಇದೇ ನಾಟಕ 1995ರ ಮಾರ್ಚ್ 24. ಬೆಂಗಳೂರಿನಲ್ಲಿ ನಡೆದ 'ಪರ್ವತವಾಣಿ' ನಾಟಕೋತ್ಸವದಲ್ಲಿಯೂ ಪ್ರದರ್ಶನವಾಗುತ್ತದೆ. ಈ ನಾಟಕದಲ್ಲಿ ರಾಜಶೇಖರ ಕದಂಬ, ಪ್ರಕಾಶ ಶೆಣೈ, ಶಿವಾಜಿರಾವ್ ಜಾದವ್, ಬಿ.ಎನ್.ರಾಮನಾಥ್ ರೇಣುಕಾಪ್ರಸಾದ್,

ಹೆಚ್.ಕೆ.ರಾಮನಾಥ್, ಎಲ್.ಆರ್.ಸೀತಾರಾಂ. ಡಾ॥.ಹೆಚ್.ಎ.ಪಾರ್ಶ್ವನಾಥ್ ವಾಸು. ಇನ್ನು ಮುಂತಾದವರು ಅಭಿನಯಿಸಿದ್ದರು. ಸಂಗೀತ ನಿರ್ದೇಶನವನ್ನು ಮತ್ತು ಹಾಡುಗಾರಿಕೆಯನ್ನು ಹೆಚ್.ಕೆ.ಯೋಗನರಸಿಂಹ ಅವರು ಬೆಳಕು ವಿನ್ಯಾಸವನ್ನು ರವಿಮೋಹನ್ ಅವರೂ ಮಾಡಿದ್ದರು.

2008ರಲ್ಲಿ ಶಿವಮೊಗ್ಗದ 'ಅಭಿನಯ' ತಂಡಕ್ಕೆ ರಂಗತರಬೇತಿ ಶಿಬಿರ ಮಾಡಿದ್ದಲ್ಲದೆ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರ ಕಥೆಯನ್ನು ಆಧರಿಸಿ ಪ್ರೊ॥ ಎಸ್.ಸಿ. ಗೌರಿಶಂಕರ್ ಅವರು ರೂಪಾಂತರಿಸಿದ 'ಪೀತಾರೋಹಣ' ನಾಟಕವನ್ನು ಕೃಷ್ಣಪ್ಪನವರು ನಿರ್ದೇಶನ ಮಾಡುತ್ತಾರೆ. ಈ ನಾಟಕದಲ್ಲಿ ಡಾ॥ ನಾಗಭೂಷಣ, ಹೆಚ್.ಎನ್. ಕಾಂತೇಶಕುಮಾರ್, ಎನ್.ಕೆ. ಹಾಲೇಶ್, ತಿಪ್ಪಣ್ಣ ಮುಂತಾದವರು ಅಭಿನಯಿಸುತ್ತಾರೆ.

2010ರಲ್ಲಿ ಚಿತ್ರದುರ್ಗದ ಮಹಾರಾಜ ಮದಕರಿ ನಾಯಕ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಿಗೆ ರಂಗಶಿಬಿರವನ್ನು ಹಾಗೂ ಅವರಿಗೆ ಡಾ॥ ಸಿದ್ದಲಿಂಗಯ್ಯನವರ 'ಏಕಲವ್ಯ' ನಾಟಕವನ್ನು ಮಾಡಿಸುತ್ತಾರೆ ಕೃಷ್ಣಪ್ಪನವರು. ಈ ನಾಟಕದಲ್ಲಿ ಏಕಲವ್ಯನಾಗಿ ವಿ.ಎಚ್.ಎಂ ರುದ್ರೇಶ್, ಕರ್ಣನಾಗಿ ನಿರಂಜನ್ ಸಿ.ಲ, ದ್ರೋಣನಾಗಿ ಸಿದ್ದೇಶ್ ಅಳಗವಾಡಿ, ಅರ್ಜುನನಾಗಿ ಸೋಮಪ್ಪ ಎಸ್ ಹಾಗೂ ಇನ್ನೂ ಹಲವರು ಅಭಿನಯಿಸುತ್ತಾರೆ. ಈ ನಾಟಕಕ್ಕೆ ಕನ್ನಡ ರಂಗಭೂಮಿಯ ಪ್ರಸಿದ್ಧ ರಂಗಸಜ್ಜಿಕೆ ವಿನ್ಯಾಸಕರು, ನೇಪಥ್ಯತಜ್ಞರು ಆದ ಎಂ.ಪುರುಷೋತ್ತಮ ತಲವಾಟಿಯವರು ವಸ್ತ್ರವಿನ್ಯಾಸ ಮತ್ತು ಪ್ರಸಾದನವನ್ನು ಮಾಡುತ್ತಾರೆ.

ಹೀಗೆ ಕೃಷ್ಣಪ್ಪನವರು ರಂಗಭೂಮಿಗೆ ಮರಳಿದ ನಂತರ ರಂಗಭೂಮಿಯಲ್ಲಿ ಸ್ವತಂತ್ರ ನಿರ್ದೇಶಕರಾಗಿ ಹಲವಾರು ಉತ್ತಮ ನಾಟಕಗಳನ್ನು ರಂಗಕ್ಕೆ ನೀಡುತ್ತಾರೆ. ಕರ್ನಾಟಕದ ಉದ್ದಗಲಕ್ಕೂ ತಿರುಗಾಡಿ ನಾಟಕಗಳನ್ನು ನಿರ್ದೇಶಿಸುತ್ತಾರೆ. ರಂಗಶಿಬಿರಗಳನ್ನು ನಡೆಸುತ್ತಾರೆ. ಯುವಪೀಳಿಗೆಯ ನಟ-ನಟಿಯರೊಂದಿಗೆ ಬೆರೆತು ಹೊಸ ಹೊಸ ರಂಗತಂಡಗಳು ರಚಿತವಾಗಲು ಕಾರಣರಾಗುತ್ತಾರೆ. ಈ ನಡುವೆ ಕೆ. ಮರುಳಸಿದ್ದಪ್ಪನವರು 1995 ರಿಂದ 1997ರ ಅವಧಿಯಲ್ಲಿ ಕರ್ನಾಟಕ ನಾಟಕ ಅಕಾಡಮಿಯ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಸದಸ್ಯರಾಗಿ ಕೆಲಸ ನಿರ್ವಹಿಸುತ್ತಾರೆ. ಬೆಂಗಳೂರು ನಗರ ಜಿಲ್ಲೆ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಉಸ್ತುವಾರಿ ವಹಿಸಿಕೊಂಡು ಗ್ರಾಮಾಂತರ ಪ್ರದೇಶಗಳಲ್ಲಿ ರಂಗಭೂಮಿ ಅರಳಲು ಕಂಕಣಬದ್ಧರಾಗುತ್ತಾರೆ.

ಇಷ್ಟೆಲ್ಲ ಕೆಲಸ ಮಾಡಿದರೂ ಇವರ ರಂಗ ಆಸಕ್ತಿ ಕಡಿಮೆಯಾಗುವುದಿಲ್ಲ, ಇನ್ನೇನೊ ಮಾಡುಬೇಕು, ಮತ್ತೇನೊ ಮಾಡಬೇಕು ಎನ್ನುವ ತುಡಿತ ಇದ್ದೇ ಇದೆ.

ಇವರ ಸಮಕಾಲೀನರು ಬಹುತೇಕರು ರಂಗದ ಹಿನ್ನಲೆಗೆ ಸರಿದಿದ್ದರೆ ಕೆಲವರು ಪೂರ್ತಿ ಮರೆಯಾಗಿದ್ದಾರೆ. ಕೃಷ್ಣಪ್ಪನವರು ಉಳಿದಿರುವ ಒಡನಾಡಿಗಳನ್ನು ಕಟ್ಟಿಕೊಂಡು ನಾಟಕಗಳನ್ನು ಮಾಡುತ್ತಲೇ ಇದ್ದಾರೆ. ಮಕ್ಕಳ ಜೊತೆ ಬೆರತು ಅವರಿಗೆ ನಾಟಕ ಮಾಡಿಸುತ್ತಾ ಇರುತ್ತಾರೆ. ಅವರು ಇತ್ತೀಚಿಗೆ ಮಕ್ಕಳಿಗೆ ಶಿಬಿರ ಮಾಡಿ 'ಪಂಜರಶಾಲೆ' ಮಾಡಿಸುತ್ತಾರೆ. ಇದೊಂದು ವಿಶೇಷವಾದ, ವಿಭಿನ್ನವಾದ ನಾಟಕವಾಗುತ್ತದೆ. ಇದಕ್ಕೆ ಕೃಷ್ಣಪ್ಪನವರ ಪ್ರಯೋಗಶೀಲತೆ ಪ್ರಮುಖ ಕಾರಣ ಎಂದು ಭಾವಿಸುತ್ತೇನೆ. ಇದಲ್ಲದೆ 'ಪ್ರತಿಭಾ ರಂಗ ಸಂಶೋಧನಾ ಪ್ರತಿಷ್ಠಾನ'ದಿಂದ 'ಈ ಮಾಸ ನಾಟಕ' ರಂಗ ಪತ್ರಿಕೆ ತರುವುದರ ಜೊತೆಗೆ 'ಬಿ.ವಿ. ಕಾರಂತ ನಾಟಕೋತ್ಸವ'ವನ್ನು ಬೆಂಗಳೂರಿನ ಸಂಸದಲ್ಲಿ 2012ರಲ್ಲಿ ಸಂಘಟಿಸಿರುವುದು, ನಂತರ 'ಪಂಪ' ತಂಡದ ಜೊತೆ ಸೇರಿ 2013ರಲ್ಲಿ 'ನಾಗೇಶ್ ಉತ್ಸವ' ಸಂಘಟಿಸಿದ್ದಲ್ಲದೆ 'ಪೀಠಾರೋಹಣ' ನಾಟಕ ಪ್ರದರ್ಶಿಸಿದ್ದು. ನಂತರ 2014 'ಪ್ರತಿಮಾ'ದಿಂದ ಲಂಕೇಶರ, 'ಸಿದ್ಧತೆ, ಪೋಲೀಸರಿದ್ದರೆ ಎಚ್ಚರಿಕೆ, ತೆರೆಗಳು,' 2014ರಲ್ಲಿ 'ಸಂಸ' ಪತ್ರಿಕೆ ಆಯೋಜಿಸಿದ ಉತ್ಸವದಲ್ಲಿ 'ಕ್ರಾಂತಿ ಬಂತು ಕ್ರಾಂತಿ' ನಾಟಕಗಳನ್ನು ನಿರ್ದೇಶಿಸಿ ಪ್ರದರ್ಶನ ಮಾಡಿದರು.

ಇಷ್ಟೇಲ್ಲಾ ಕೆಲಸ ಮಾಡಿದರೂ ಸಹ ಕೃಷ್ಣಪ್ಪನವರಿಗೆ ರಂಗಭೂಮಿಗೇ ಆದ ಒಂದು ಪತ್ರಿಕೆಯನ್ನು ತರಬೇಕೆಂಬ ಬಯಕೆ ಇದ್ದೆ ಇರುತ್ತದೆ. ಆ ಕಾರಣದಿಂದ 'ಮುಕ್ತ' ಪತ್ರಿಕೆಯ ನಂತರ 'ವಿಮುಕ್ತ' ತರುತ್ತಾರೆ. ಅದು ಒಂದೆರಡು ತಿಂಗಳು ಬಂದು ನಿಂತು ಹೋಗುತ್ತದೆ. ಇದಾದ ನಂತರ ಮತ್ತೆ 1997 ರಲ್ಲಿ ಈ ಮಾಸ ನಾಟಕ ಪ್ರಾರಂಭಿಸುತ್ತಾರೆ.

ಅವರ ಪತ್ರಿಕಾ ಸಹವಾಸ, ಸಾಹಸದ ಬಗ್ಗೆ ನಾನು ಅವರೊಡನೆ ಕೆಲವು ಮಾತುಗಳನ್ನು ಆಡಿದ್ದೇನೆ. ಅವರು ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ನನ್ನ ಮತ್ತು ಕೃಷ್ಣಪ್ಪನವರು 'ಮುಖಾಮುಖಿ' ನಿಮ್ಮ ಮುಂದೆ ಇದೆ.

ಮಹಾಮನೆ : ಮುಕ್ತ ಪತ್ರಿಕೆಯ ನಂತರ ತಾವು 'ಈ ಮಾಸ ನಾಟಕ' ಪತ್ರಿಕೆಯನ್ನು ತಂದಿರಿ–ಇಷ್ಟು ದೀರ್ಘಾವದಿಯ ನಂತರ ಪತ್ರಿಕೆಯನ್ನು ಯಾಕೆ ತರಬೇಕು ಅನ್ನಿಸಿತು.

ಕೃಷ್ಣಪ್ಪ : ಇಲ್ಲ....ಇಲ್ಲ....ಮುಕ್ತ ನಂತರ 'ಈ ಮಾಸ' ತರಲಿಲ್ಲ. ಅದರ ನಡುವೆ 'ವಿಮುಕ್ತ' ಅನ್ನುವ ಒಂದು ಪತ್ರಿಕೆಯನ್ನು ತಂದೆವು: ಆ ನಂತರ 'ಈ ಮಾಸ ನಾಟಕ'ವನ್ನು ಕಳೆದ 16 ವರ್ಷಗಳಿಂದ ತರುತ್ತಿರುವುದು. ನೋಡಿ ಮಹಾಮನೆ ಮುಕ್ತ–8 ಬಿ.ವಿ ಕಾರಂತರ ಬಗ್ಗೆ ವಿಶೇಷ ಸಂಚಿಕೆಯಾಗಿತ್ತು. ಅಲ್ಲಿ ಮಂತ್ರಕ್ಕಿಂತ ಉಗುಳೇ ಹೆಚ್ಚಾಗಿತ್ತು. ಕಾರಂತರ ಕುರಿತು ವಿಮರ್ಶೆಗಳಿಗಿಂತ ಟೀಕೆಯೇ ಹೆಚ್ಚಾಗಿತ್ತು.

ಮುಕ್ತದಲ್ಲಿ ಬಂದ ಆ ಲೇಖನಗಳ ಕುರಿತು ಉದಯವಾಣಿ ಪತ್ರಿಕೆಯಲ್ಲಿ ತಿಂಗಳುಗಳ ಕಾಲ ಚರ್ಚೆ–ಪ್ರತಿಚರ್ಚೆಗಳು ನಡೆದವು ಮತ್ತು ಮುಕ್ತದ ಸಂಪಾದಕರಲೊಬ್ಬನಾದ ನನ್ನ ಮೇಲೂ ಸಹ ಹರಿತವಾದ ಬಾಣಗಳನ್ನು ಎಸೆದರು, ನನ್ನನ್ನು ರಂಗಭೂಮಿಯ 'ಖಳನಟ' ಎಂದು ಬಿಂಬಿಸುತ್ತಿದ್ದರು. ಈಗ ನ್ಯಾಷನಲ್ ಕಾಲೇಜಿನ ಕನ್ನಡ ಪ್ರೊಫೆಸರ್ ಆಗಿರುವ ಮಾಜಿ ರಂಗಾಸಕ್ತರು ಹಾಗೂ ವಿಮರ್ಶಕರೊಬ್ಬರು ಒಮ್ಮೆ ಸೆನೆಟ್‌ಹಾಲ್ ಬಳಿ ಸಿಕ್ಕಿ 'ಕೃಷ್ಣಪ್ಪ ನಿನ್ನ 'ಪೀತ' ಪತ್ರಿಕೆಯಾದ 'ಮುಕ್ತ'ವನ್ನು 'ಕಾಲಲ್ಲಿ ತುಳಿದು, ಒಸಕಿಹಾಕಿ, ಬಿಟ್ಟೆ' ಎಂದರು. ನಾನು ಕಲಾಕ್ಷೇತ್ರಕ್ಕೆ ಬಂದರೆ ಯಾರು ನನ್ನನ್ನು ಸ್ನೇಹವಲಯಕ್ಕೆ ತೆಗೆದುಕೊಳ್ಳದೆ 'ಸ್ವೈ' ರೀತಿ ಕಾಣುತ್ತಿದ್ದರು. ಇದೆಲ್ಲಾ ಹಳೆಯ ಮಾತು. ಇದನ್ನು ಮತ್ತೇ ಹೇಳುತ್ತಿದ್ದನಷ್ಟೆ. ಈ ರೀತಿಯ ಹಲವು ಮಾತುಗಳು, ಕಹಿ ಘಟನೆಗಳು ಎದುರಾದ ಕಾರಣ ನಾನು ಪತ್ರಿಕೆ ಮಾಡುವುದನ್ನು ನಿಲ್ಲಿಸಿ. ಪ್ರಯೋಗಪ್ರದಾನವಾದ ರಂಗಭೂಮಿ ದಿಕ್ಕಿನಲ್ಲಿ ಸಾಗುವ ಮನಸ್ಸಾಯಿತು.

ಮಹಾಮನೆ : ಇಂತಹ ಕಹಿ ಅನುಭವಗಳು ಆಗಿದ್ದರೂ ಸಹ ಮತ್ತೆ 'ಈ ಮಾಸ ನಾಟಕ' ಪ್ರಾರಂಭಿಸಿದಿರಲ್ಲ ಕಾರಣವೇನು?

ಕೃಷ್ಣಪ್ಪ : ಮುಕ್ತದ ನಂತರದ ದಿನಗಳಲ್ಲಿ ಬೇರೆ ರಂಗಪತ್ರಿಕೆಗಳು ಪ್ರಾರಂಭವಾಗಿದ್ದವು. ಅವುಗಳಲ್ಲಿ, ನಟನಾ, ಬೀದಿ, ಸಮುದಾಯ ವಾರ್ತಾಪತ್ರ, ಸೂತ್ರದಾರ, ಸಂಕುಲ ಹೀಗೆ ಹಲವು ಪ್ರಮುಖವಾದವು. ಆದರೆ ಅವೂ ಸಹ ಕೆಲದಿನ ಕೆಲಸ ನಿರ್ವಹಿಸಿ ಅನಂತ ನಿರಂತರತೆಯನ್ನು ಕಾಪಾಡಿಕೊಳ್ಳುವಲ್ಲಿ ಸಾಹಸ ಪಟ್ಟು ಕೊನೆಗೆ ಸ್ಥಗಿತಗೊಂಡವು. ಈ ಸಂದರ್ಭದಲ್ಲಿ ಬಿ.ವಿ. ಕಾರಂತರು ರಂಗಾಯಣದ ಸ್ಥಾಪಕ ನಿರ್ದೇಶಕರಾಗಿದ್ದರು. ಆ ವೇಳೆಯಲ್ಲಿ 'ಪರಿಕರ' ಎಂಬ ರಂಗಪತ್ರಿಕೆ ಪ್ರಾರಂಭವಾಗಿತ್ತು. ಅದು ತುಂಬಾ ಗಂಭೀರವಾದ ಲೇಖನಗಳನ್ನೊಳಗೊಂಡ ರಂಗಪತ್ರಿಕೆಯಾಗಿತ್ತು. ಅದೂ ಸಹ ಸ್ಥಗಿತವಾಯಿತು. ಅದೇ ಸಂದರ್ಭದಲ್ಲಿ ಕಾರಂತರ ಬೆಂಗಳೂರಿನ ಅವರ ಮನೆಯಲ್ಲಿ ನಾನು ಮತ್ತು ಅವರು ಸತತವಾಗಿ ಭೇಟಿಯಾಗುತ್ತಿದ್ದವು. ಆ ಸಂದರ್ಭದಲ್ಲಿ 'ಪರಿಕರ'ದ ಬಗ್ಗೆ ಮಾತು ಬಂತು. ಕೃಷ್ಣಪ್ಪ ನೀವು ರಂಗಭೂಮಿ ಸಂಚಿಕೆ ಮಾಡುವ ಉದ್ದೇಶ ಇದ್ದರೆ, ನನ್ನಲ್ಲಿ ಕೆಲವು ರಂಗಸಂಬಂಧಿ ಲೇಖನಗಳು ಇದ್ದಾವೆ.

ಇವುಗಳನ್ನು ನಿಮಗೆ ಕೊಡುತ್ತೇನೆ. ಜೊತೆಗೆ ನಾನು ಸ್ವಲ್ಪ ಹಣ ಕೊಡುತ್ತೇನೆಂದು ಹೇಳಿ ಕೆಲವಾರು ತಿಂಗಳು ಒಂದೊಂದು ಸಾವಿರ ರೂಗಳನ್ನು ಕೊಟ್ಟರು. ಆನಂತರ ಅವರ ಆರೋಗ್ಯ ಹಾಗೂ ಹಣಕಾಸಿನ ಮುಂಗಟ್ಟನ್ನು ಕಂಡು ಅವರು ಕೊಡುತ್ತಿದ್ದ ಹಣವನ್ನು ತೆಗೆದುಕೊಳ್ಳಲಿಲ್ಲ. ನನ್ನ ಮನಸ್ಸು ಒಪ್ಪಲಿಲ್ಲ. ಸಾಧ್ಯ ಮಾಡಿಕೊಂಡು ಇವುಗಳನೊಮ್ಮೆ ನೋಡಿ ಎಂದರು ನಾನು ಅವರ ಮಾತಿನಿಂದ ಪ್ರಭಾವಿತನಾದೆ.

**ಮಹಾಮನೆ** : ಕೂಡಲೇ ನೀವು ಮತ್ತೆ ಪತ್ರಿಕೆ ತರುವ ಆಲೋಚನೆ ಮಾಡಿದಿರಾ..?

**ಕೃಷ್ಣಪ್ಪ** : ಆ ಸಂದರ್ಭದಲ್ಲಿ ನನಗೆ ಅದು ಮನಸ್ಸಿಗೆ ಬಂತು ಮಹಾಮನೆ. ಹಾಗೂ ರಂಗಭೂಮಿಗೆ ಒಂದು ಪತ್ರಿಕೆ ಬೇಕೂ ಅಂತನೂ ಅನ್ನಿಸಿತು. ಹಾಗೆ ಅನಿಸಿದ್ದರಿಂದ ಮತ್ತು ಈ ರೀತಿಯ ಪತ್ರಿಕೆ ಮಾಡಲು ಬೇಕಾದ ರಂಗಾನುಭವವೂ ಇದ್ದುದ್ದರಿಂದ ಪತ್ರಿಕೆ ಮಾಡಲು ಮುಂದಾದೆ.

**ಮಹಾಮನೆ** : ನಿಮ್ಮ ಈ ಸಾಹಸಕ್ಕೆ ಯಾರ್‍ಯಾರು ಕೈ ಜೋಡಿಸಿದರು ರಂಗಗೆಳೆಯರ ಪ್ರತಿಕ್ರಿಯ ಹೇಗಿತು.

**ಕೃಷ್ಣಪ್ಪ** : ಒಂದು ರೀತಿ ಮಿಶ್ರ ಪ್ರತಿಕ್ರಿಯೆ. ಒಬ್ಬೊಬ್ಬರದುಒಂದೊಂದು ಅಭಿಪ್ರಾಯ. ಅದೇನು ಸುಲಭದ ದಾರಿಯಾಗಿರಲಿಲ್ಲ. ಆದರೂ ಹೊರಟೆ. ನನ್ನ ಜೊತೆಗೆ ರಂಗಭೂಮಿ ಪತ್ರಿಕೆಯಲ್ಲಿ ಅನುಭವವಿದ್ದಿರುವ ಬಳಗ ಬೇಕೆಂದು ಹಾ.ಸಾ.ಕೃ ಸೂತ್ರಧಾರ ರಾಮಯ್ಯ, ಬನವಾಸಿಕೃಷ್ಣಮೂರ್ತಿ ಹಾಗೂ ನಾನು ಮತ್ತೆ ಇತರರು ಕುಳಿತು ಚರ್ಚಿಸಿ ಪತ್ರಿಕೆ ತರಲು ನಿರ್ಧರಿಸಿದೆವು.

**ಮಹಾಮನೆ** : 'ಈ ಮಾಸ ನಾಟಕ'ದ 'ಸ್ವರೂಪ' ಅಂದರೆ ಅದರ 'ಹೂರಣ' ಹೇಗಿರಬೇಕು. ಅದರ 'ಉದ್ದೇಶ' ಏನಾಗಿರಬೇಕು ಎಂಬುದನ್ನು ಚರ್ಚಿಸಿ ಮುಂದೆ ಅಡಿ ಇಟ್ಟರಾ?

**ಕೃಷ್ಣಪ್ಪ** : ಹೌದು. ಇದುವರೆಗೂ ಬಂದ 'ರಂಗಪತ್ರಿಕೆ'ಗಳನ್ನು ನೋಡಿದ್ದೆ ಹಾಗೂ 'ಮುಕ್ತ' 'ವಿಮುಕ್ತ' ಮಾಡಿದ ಅನುಭವ ಇತ್ತು. ಹಾಗೂ ಇತರ ರಂಗಪತ್ರಿಕೆಗಳನ್ನು ಕಂಡಿದ್ದೆ, ಅದರ ರೂಪರೇಶೆಗಳು ಧ್ಯೇಯೋದ್ದೇಶ ಎಲ್ಲವೂ ತಿಳಿದಿತ್ತಲ್ಲ. ಹಾಗಾಗಿ ಈ ಪತ್ರಿಕೆ ಇವುಗಳಿಗಿಂತ ಭಿನ್ನವಾದ ರೂಪ–ಉದ್ದೇಶವನ್ನು ಹೊಂದಿರಬೇಕೆಂದು ನಿರ್ಧರಿಸಿ, ಪ್ರಯೋಗದ ವಿಮರ್ಶೆಗಳು,

ಗಂಭೀರ ಲೇಖನಗಳು ಯುವರಂಗಕರ್ಮಿಗಳ ಸಾಧನೆಯ ಶ್ಲಾಘನೆ, ವ್ಯಕ್ತಿಪರಿಚಯ ಸಂದರ್ಶನಗಳು, ರಂಗ ಮಾಹಿತಿ ಇವೆಲ್ಲವನ್ನು ಒಳಗೊಂಡ ಪತ್ರಿಕೆಯು ನಮ್ಮದಾಗಿರಬೇಕು ಎನಿಸಿ ಆ ರೀತಿ ಪತ್ರಿಕೆಯನ್ನು ಮಾಡಿದೆನು.

**ಮಹಾಮನೆ** : 'ಮುಕ್ತ'ದ ಘಾಟು ನಿಮ್ಮ 'ಈ ಮಾಸ'ದಲ್ಲಿ ಇಲ್ಲ. ಯಾಕೆ, ನೀವು ತಣ್ಣಗಾಗಿ ಬಿಟ್ಟಿದಿರಿ ಅನ್ನಿಸುತ್ತೆ. ಅಥವಾ ನೀವು ಬದಲಾಗಿಬಿಟ್ಟಿರ, ಅಥವಾ ನಿಮ್ಮ ಈಗಿನ ರಂಗಭೂಮಿಯಲ್ಲಿ ಬದಲಾವಣೆಯನ್ನು ನೀವು ಕಾಣುತ್ತಿದ್ದೀರಾ..?

**ಕೃಷ್ಣಪ್ಪ** : No…No.. ಹಾಗೇನಿಲ್ಲ 70–80 ದಶಕಗಳ ಕಾಲಮಾನ ಬೇರೆ ಈ ಹೊತ್ತಿನ ಕಾಲಮಾನ ಬೇರೆ ಇದೆ. ಆಗ ಬಂದಂಥ ನಾಟಕಗಳು ಬೇರೆ ಇತ್ತು. ಆಗ ನಮಗೆ ಎಲ್ಲವೂ ಹೊಸತು, ಒಂದು ಉದ್ದೇಶದಿಂದ ನಾಟಕ ಮಾಡುತ್ತಿದ್ದವು. ರಂಗಚಳವಳಿಯ ದಿನಗಳು ಅವು. ಆ ಉತ್ಸಾಹ, ಆ ಬದ್ಧತೆ ಇಂದು ಮಾಯವಾಗಿದೆ. ಇವತ್ತು ರಂಗಭೂಮಿ ಬಹಳ ಸಂಘರ್ಷದಲ್ಲಿದೆ. ಅನೇಕ ಸವಾಲುಗಳು ರಂಗದಲ್ಲಿದೆ. ಸಂಸ್ಕೃತಿ ಇಲಾಖೆಯಿಂದ, ಬೇರೆ ಬೇರೆ ಸರ್ಕಾರಿ ಸಂಸ್ಥೆಗಳಿಂದ ಸಹಕಾರವೂ ಇದೆ. ಇಂದಿನ ಯುವಕರು ಬಹಳ ಶ್ರದ್ಧೆಯಿಂದ ಕೆಲಸ ಮಾಡುತ್ತಿದ್ದರೂ ಮೊದಲಿನ ರಂಗ ವಾತಾವರಣ ಮಾಯವಾಗಿದೆ. ಇದನ್ನೆಲ್ಲ ಮನಗಂಡು ಪ್ರೋತ್ಸಾಯದಾಯಕವಾದ ವಾತಾವರಣವನ್ನು ಪತ್ರಿಕೆಯಲ್ಲಿ ರೂಪಿಸುವುದು, ಸತ್ಯವನ್ನು ಬಿಚ್ಚಿಡುತ್ತಲೇ ಇಂದಿನವರಿಗೆ ಉತ್ಸಾಹ ತುಂಬುವುದು, ಇಂದಿನ ರಂಗಭೂಮಿಗೆ ಪೂರಕವಾಗಿ ನಿಲ್ಲುವುದು ಇದು ನಮ್ಮ ಉದ್ದೇಶವಾಗಿದೆ. ಹಾಗಾಗಿ ಈ ಪತ್ರಿಕೆಯ ರೂಪ ಹೀಗಿದೆ.

**ಮಹಾಮನೆ** : 15 ವರ್ಷಗಳಿಂದಲೂ ಪತ್ರಿಕೆಯನ್ನು ನಿರಂತರವಾಗಿ ತರುತ್ತಾ ಬಂದಿದ್ದೀರಿ. ಏನನ್ನಿಸುತ್ತೆ. ಇದು ಹೇಗೆ ಸಾಧ್ಯವಾಯಿತು.

**ಕೃಷ್ಣಪ್ಪ** : ಕಷ್ಟ ಆದರೂ ತಂದಿದ್ದೀನಿ ಅನ್ನುವ ಖುಷಿ ಇದೆ. ಎಲ್ಲಾ ಕ್ಷೇತ್ರಗಳಲ್ಲಿ ಏಳು–ಬೀಳು ಇದ್ದಂತೆ ಇಲ್ಲಿಯೂ ಇದೆ. ಸಾರ್ಥಕ ಅನ್ನಿಸುತ್ತೆ. ನಮ್ಮ ಮನೆಯವರ ಸಹಕಾರ ತುಂಬಾ ಇದೆ. ನನ್ನ ಪತ್ನಿ, ಮಗಳು, ಮಗ ಎಲ್ಲರೂ ಈ ಪತ್ರಿಕೆಗೆ ಕೆಲಸ ಮಾಡಿದ್ದಾರೆ. ಪತ್ರಿಕೆಗೆ ಸ್ಟಾಂಪ್ ಅಂಟಿಸುವುದು, ಅಡ್ರಸ್ ಸ್ಲಿಪ್‌ಗಳನ್ನು ಅಂಟಿಸುವುದು, ಬಂಡಲ್‌ಗಳನ್ನು ಮಾಡುವುದು, ಅಕ್ಷರ ತಿದ್ದವುದು, ಲೇಖನಗಳನ್ನು

ಸಂಗ್ರಹಿಸುವುದು, ಪೋಸ್ಟ್ ಮಾಡುವುದು ಇಂತಹ ಕೆಲಸಗಳನ್ನು ಅವರೆಲ್ಲ ಮಾಡಿದ್ದಾರೆ. ಇವರೆಲ್ಲ ಪತ್ರಿಕೆಯ ಅವಿಭಾಜ್ಯ ಅಂಗ ಈ ಎಲ್ಲಾ ಕೆಲಸಗಳು ಅವರದೇ ಆಗಿತ್ತು. ಜೊತೆಗೆ ರಂಗಮಿತ್ರರು ಹಾಗೂ ಮನೆಯವರು ನನ್ನ ಜೊತೆ ಕೈ ಜೋಡಿಸಿದ್ದರಿಂದಲೇ ಇದೆಲ್ಲ ಸಾಧ್ಯವಾಯಿತು.

**ಮಹಾಮನೆ** : ನಮಸ್ಕಾರ ಸಾರ್. ಇನ್ನೊಂದಷ್ಟು ರಂಗ ಕೆಲಸಗಳು ತಮ್ಮಿಂದ ಆಗಲಿ. ಯಶಸ್ಸು ತಮ್ಮದಾಗಲಿ.

**ಕೃಷ್ಣಪ್ಪ** : ನಮಸ್ಕಾರ ಮಹಾಮನೆ.

ಹೀಗೆ ಕಳೆದ 40 ವರ್ಷಗಳಿಂದ ರಂಗಕಾರ್ಯಕರ್ತನಾಗಿ, ನೇಪಥ್ಯ ಕಲಾವಿದನಾಗಿ, ಬೆಳಕು ತಜ್ಞನಾಗಿ, ಸಂಘಟಕನಾಗಿ, ನಿರ್ದೇಶಕನಾಗಿ, ಪತ್ರಿಕೆಯ ಸಂಪಾದಕನಾಗಿ ಬಹುತೇಕ ರಂಗಭೂಮಿಯ ಎಲ್ಲ ವಿಭಾಗಗಳಲ್ಲಿಯೂ ಅನುಭವ ಪಡೆದಿರುವ ಏಕೈಕ ವ್ಯಕ್ತಿ ಎಂದರೆ ಅದು. ಎಲ್. ಕೃಷ್ಣಪ್ಪನವರು. ಆರ್. ನಾಗೇಶ್, ಬಿ.ವಿ. ಕಾರಂತರು, ಪ್ರಸನ್ನ, ಲಂಕೇಶ, ಟಿ.ಎನ್. ಸೀತಾರಾಂ ಹೀಗೆ ಹಲವು ವ್ಯಕ್ತಿತ್ವಗಳೊಡನೆ ಬೆರೆತವರು. ವಿಭಿನ್ನ ಆಲೋಚನಾಕ್ರಮ, ಭಿನ್ನ ಕಾರ್ಯಶೈಲಿ ಇರುವ ದಿಗ್ಗಜರ ನಡುವೆ ಜೊತೆಯಾದವರು, ಅವರಿಗೆ ಅನಿವಾರ್ಯವಾದವರು. ರಂಗ ಸವಾಲುಗಳನ್ನು ಮೆಟ್ಟಿ ಅಸಾಧ್ಯವನ್ನು ಕಟ್ಟಿದವರು, ರಂಗಶಿಖರವನ್ನು ಮುಟ್ಟಿದವರು, ಬಯಲಲ್ಲಿ ಬಿತ್ತಿ ಹಸಿರು ಬೆಳೆಸಿದ ಇವರ ಪೂರ್ವಿಕರಂತೆ ಇವರೂ ಸಹ ಬಟಾ ಬಯಲಲ್ಲಿ ಹೆಜ್ಜೆ ಇಟ್ಟವರು. ಸಾಮಾನ್ಯನೊಬ್ಬನ ಮಗ, ಯಾವುದೇ ಪ್ರಬಲ ಹಿನ್ನೆಲೆ ಇಲ್ಲದ, ತನ್ನ ಶ್ರಮ, ಬದ್ಧತೆ, ಚತುರತೆಗಳ ಬಲದಿಂದಲೆ ಮೇಲೆ ಬಂದ ಹೈದರನಂತೆ ಕೃಷ್ಣಪ್ಪನವರೂ ಸಹ ಯಾವುದೇ ರಂಗಹಿನ್ನೆಲೆ ಇಲ್ಲದ ಸಾಮಾನ್ಯ ಕುಟುಂಬದಿಂದ ಬಂದು, ನೆಲೆಗಾಗಿ ಅಲೆದಾಡುತ್ತಾ, ಅಸ್ತಿತ್ವಕ್ಕಾಗಿ ಪರದಾಡುತ್ತಾ, ಶೂನ್ಯದಿಂದ ಹೊರಟು ಅಶೂನ್ಯವನ್ನು ಸೃಷ್ಟಿಸಿದವರು. ಸಾಧನೆಯ ಹಾದಿಯಲ್ಲಿ ಎಲ್ಲವನ್ನೂ ಕಂಡವರು. ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಹೀಗೆ ಹಲವಾರು ಪ್ರಶಸ್ತಿಗೆ ಭಾಜನರಾಗಿರುವವರು. ಈಗ 70ರ ಹಂಚಿನಲ್ಲಿದ್ದಾರೆ ಕೃಷ್ಣಪ್ಪನವರು. ಅವರು ತಮ್ಮ ರಂಗ ಬದುಕನ್ನು ಅಲ್ಲಲ್ಲಿ ಒಮ್ಮೆ ತಿರುಗಿ ನೋಡಿದ ಕುರುಹಾಗಿ ಈ 'ಹೊತ್ತಿಗೆ' ನಮ್ಮ ಮುಂದಿದೆ.

# ಅನುಬಂಧ

## ಕರ್ನಾಟಕ ಸರ್ಕಾರ 2003ರಲ್ಲಿ 'ರಂಗಭೂಮಿ' ಸೇವೆಯನ್ನು ಪರಿಗಣಿಸಿ ನೀಡಿರುವ ರಾಜ್ಯೋತ್ಸವ ಪ್ರಶಸ್ತಿ ವಿಜೇತ

# ಎಲ್. ಕೃಷ್ಣಪ್ಪನವರ

## ವ್ಯಕ್ತಿ ವಿಶೇಷ

| | | | |
|---|---|---|---|
| 1. | ಹೆಸರು | : | ಎಲ್. ಕೃಷ್ಣಪ್ಪ |
| 2. | ವಿಳಾಸ | : | # 141 / 1 ಪಾರಿಜಾತ ಮಾರ್ಗ, ಕರಿಶ್ಮ ಹಿಲ್ಸ್, ಸುಬ್ರಮಣಿಪುರ ಪೋಸ್ಟ್, ಬನಶಂಕರಿ 6ನೇ ಹಂತ, ಬೆಂಗಳೂರು – 61 |
| 3. | ಹುಟ್ಟಿದ್ದು | : | 5–4–1946<br>ಹೆನ್ನಾಗರ, ಅನೇಕಲ್ ತಾಲ್ಲೂರು |
| 4. | ಲಿಂಗ | : | ಪುರುಷ |
| 5. | ತಂದೆಯ ಹೆಸರು | : | ಲಕ್ಷ್ಮಯ್ಯ (ದಿವಂಗತ) |
| 6. | ವಿದ್ಯಾಭ್ಯಾಸ | : | ಎಸ್.ಎಸ್.ಎಲ್.ಸಿ |
| 7. | ಜಾತಿ | : | ವಹ್ನಿ ಕುಲಕ್ಷತ್ರಿಯ |
| 8. | ವಿವಾಹ | : | ಅಂತರ್‌ಜಾತಿ |
| 9. | ದೂರವಾಣಿ | : | 9980157147 |

10. 1970ರಲ್ಲಿ ಮೈಸೂರು ರಾಜ್ಯ ಸಂಗೀತ ನಾಟಕ ಅಕಾಡೆಮಿ, ಆದ್ಯ ರಂಗಾಚಾರ್ಯರ ನಿರ್ದೇಶನದಲ್ಲಿ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮ, ದೆಹಲಿ ಅವರು ನಡೆಸಿದ ಟ್ರೈನಿಂಗ್ ಕೋರ್ಸ್ ಆಫ್ ಡ್ರಾಮ್ಯಾಟಿಕ್ಸ್‌ನಲ್ಲಿ ಭಾಗವಹಿಸಿದ್ದು.

11. 1974ರಲ್ಲಿ ಪೂನ ಫಿಲಂ ಇನ್‌ಸ್ಟಿಟ್ಯೂಟ್ ಅಂಡ್ ಟೆಲಿವಿಷನ್ ಸಂಸ್ಥೆ ಸತೀಶ್ ಬಹುದ್ದೂರ್ ಅವರ ನಿರ್ದೇಶನದಲ್ಲಿ ಫಿಲಿಂ ತರಬೇತಿ ಶಿಬಿರದಲ್ಲಿ ಭಾಗವಹಿಸಿದ್ದು.

12. 1983ರಲ್ಲಿ ಕರ್ನಾಟಕ ನಾಟಕ ಅಕಾಡೆಮಿಯು ನಾಟಕ ರಚನಾ ಶಿಬಿರ ಡಾ॥ ಚಂದ್ರಶೇಖರ ಕಂಬಾರರ ಅಧ್ಯಕ್ಷತೆಯಲ್ಲಿ ನಡೆಸಿದ್ದರು. ಪ್ರಸನ್ನರವರ ಶಿಬಿರದ ನಿರ್ದೇಶಕ ನಾಯಕತ್ವದಲ್ಲಿ ನಡೆದ ಶಿಬಿರದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದು.

13. 1985ರ ಫಿಟ್ಸ್ ಬೆನವಿಡ್ಸ್ (ಜರ್ಮನಿ) ಅವರ ನಿರ್ದೇಶನದಲ್ಲಿ ರಂಗತರಬೇತಿ ಶಿಬಿರದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದು.

14. 1990ರ ಫೀಟರ್ ಭ್ರೂಕ್ (ಲಂಡನ್) ಅವರ ನಿರ್ದೇಶನದಲ್ಲಿ ನಡೆದ ರಂಗತರಬೇತಿ ಶಿಬಿರದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದು.

15. 1993ರ ನೀನಾಸಂ ಸಂಸ್ಥೆಯು ಯು.ಆರ್. ಅನಂತಮೂರ್ತಿಯವರ ನಿರ್ದೇಶನದಲ್ಲಿ ಸಂಸ್ಕೃತಿ ಶಿಬಿರ ನಡೆಸಿ ಅದರಲ್ಲಿ ಭಾಗವಹಿಸಿದ್ದು.

**ನಟನಾಗಿ**

1960 ಚಿತ್ರನಟ ಜೆ.ಸಿ ರಾಮಸ್ವಾಮಿ (ಶಕ್ತಿ ಪ್ರಸಾದ್) ನಮ್ಮ ಶಾಲೆಯ ಮಾಸ್ತರ್‌ರ ನಿರ್ದೇಶನದಲ್ಲಿ **'ಟಿಪ್ಪು ಸುಲ್ತಾನ್'**ನ ಮಗನಾಗಿ ಪಾತ್ರ, **'ಪ್ರಚಂಡ ರಾವಣ'** ಸೇವಕನ ಪಾತ್ರ **'ದೇವದಾಸಿ'** ಒಂದು ಸಣ್ಣ ಪಾತ್ರ.

1961 ಚಿತ್ರನಟ ದ್ವಾರಕೀಶ್‌ರವರ ನಿರ್ದೇಶನದಲ್ಲಿ **'ಕೆಸರಿನ ಕಮಲ'**ದಲ್ಲಿ ಹುಚ್ಚನ ಪಾತ್ರ. **'ಹಳ್ಳಿ ಹುಡುಗಿ'**ಯಲ್ಲಿ ಕಳ್ಳನ ಪಾತ್ರ.

1962 ಆರ್. ನಾಗೇಶ್ ನಿರ್ದೇಶನದಲ್ಲಿ **'ಅನುಕೂಲಕ್ಕೊಬ್ಬ ಅಣ್ಣ'**ದಲ್ಲಿ ಸಣ್ಣ ಪಾತ್ರ.

1964 ವೈ.ವಿ ವೆಂಕಟೇಶ್ವರರಾವ್ ಅವರ ನಾಟಕ **'ಕತ್ತಲಲ್ಲಿ ಪಾರ್ಕೋೀ ಪಾರ್ಕಿನಲ್ಲಿ ಕತ್ತಲೋೀ'**ದಲ್ಲಿ ವ್ಯಕ್ತಿಯ ಪಾತ್ರ.

1966 ಜಿ.ವಿ. ಶಿವಾನಂದ ಅವರ ನಿರ್ದೇಶನದ **'ಶ್ರೀರಂಗರಾಯ'**ದಲ್ಲಿ ಸೈನಿಕ ಹಾಗೂ ವ್ಯಕ್ತಿಯಾಗಿ.

1967 ಬಿ.ವಿ ಕಾರಂತರ ನಿರ್ದೇಶನದಲ್ಲಿ **'ನೀ ಕೊಡೆ ನಾ ಬಿಡೆ'**ಯಲ್ಲಿ ಸಮವಸ್ತ್ರಧಾರಿಯಾಗಿ ಜಿ.ವಿ. ಶಿವಾನಂದ್, ಹೆಚ್. ಕೆ ರಾಮಮೂರ್ತಿ ಅವರುಗಳ ಜೊತೆ ಪಾತ್ರವಹಿಸಿದ್ದು.

1968 ಪ್ರೊ॥ ಬಿ. ಚಂದ್ರಶೇಖರ್‌ರವರ ನಿರ್ದೇಶನದಲ್ಲಿ **'ತುಘಲಕ್'** ನಾಟಕದಲ್ಲಿ ಪುರಜನರು.

1969 ಬಿ.ವಿ ಕಾರಂತ ನಿರ್ದೇಶನದಲ್ಲಿ **'ಸದ್ದು ವಿಚಾರಣೆ ನಡೀತಾ ಇದೆ'** ಪೋಸ್ಟ್‌ಮ್ಯಾನ್

1970 ಬಿ.ವಿ ಕಾರಂತ ನಿರ್ದೇಶನದಲ್ಲಿ **'ಸ್ವರ್ಗಕ್ಕೆ ಮೂರೇ ಬಾಗಿಲು' 'ಬಿರುದಂತೆಂಬರ ಗಂಡ' 'ಸಾಮಾನ್ಯನು ಸಾಹೇಬನಾದದ್ದು'** ಈ ಮೂರು ನಾಟಕಗಳಲ್ಲಿ ನಟಿಸಿದ್ದು.

1971 ಎಂ.ಎಸ್. ಸತ್ಯು ನಿರ್ದೇಶನದಲ್ಲಿ **'ಮೊನ್ನ–ಹೊನ್ನ'** ನಾಟಕದಲ್ಲಿ ಪಾತ್ರ, ಎಂ.ಎನ್ ಶ್ರೀನಿವಾಸ್ ನಿರ್ದೇಶನದಲ್ಲಿ **'ಬಿರುಕು'**

1972 ಬಯಲು ನಾಟಕೋತ್ಸವದಲ್ಲಿ ಕಾರಂತ ನಿರ್ದೇಶನದಲ್ಲಿ **'ಸಂಕ್ರಾಂತಿ', 'ಈಡಿಪಸ್', 'ಜೋಕುಮಾರಸ್ವಾಮಿ'** ಈ ಮೂರು ನಾಟಕದಲ್ಲಿ ಗಿರೀಶ್ ಕಾರ್ನಾಡರೊಡನೆ ಪಾತ್ರ, ಬಿ.ವಿ ಕಾರಂತರ ನಿರ್ದೇಶನದಲ್ಲಿ ಗಿರೀಶ್ ಕಾರ್ನಾಡರ ಹಯವದನ ನಾಟಕದಲ್ಲಿ ಹಯವದನನಾಗಿ.

1975 ಪ್ರಸನ್ನ ನಿರ್ದೇಶಿಸಿದ 'ಹುತ್ತವ ಬಡಿದರೆ' ನಾಟಕದಲ್ಲಿ ತುಂಗರಾಯನಾಗಿ.

## ರಂಗ ನಿರ್ವಾಹಕನಾಗಿ

1965–1975 1. ಆರ್. ನಾಗೇಶ್ ನಿರ್ದೇಶನದ **'ಕತ್ತಲೆ–ಬೆಳಕು', 'ದ್ರೌಪದಿ', 'ತ್ರಿಶಂಕು'** ಹಾಗೂ ಇತರೆ.

2. ಪ್ರೊ॥ ಬಿ. ಚಂದ್ರಶೇಖರ್ ನಿರ್ದೇಶನದ **'ತುಘಲಕ್,' 'ಮಣ್ಣಿನ ಬಂಡಿ', 'ತೆರೆಗಳು', 'ಯಮಳ ಪ್ರಶ್ನೆ'**

3. ಬಿ.ವಿ ಕಾರಂತ ನಿರ್ದೇಶನದ **'ಸ್ವರ್ಗಕ್ಕೆ ಮೂರೆ ಬಾಗಿಲು', 'ನಾಟಕಕಾರನ ಶೋಧನೆಯಲ್ಲಿ ಆರು ಪಾತ್ರಗಳು', 'ಪಂಜರ ಶಾಲೆ,' 'ಅಶ್ವತ್ಥಾಮನ್'** ಇತರೆ ಹತ್ತು ನಾಟಕಗಳು.

## ನಿರ್ದೇಶಕನಾಗಿ

1974 ಪರ್ವತವಾಣಿ ಅವರ **'ವಾರ್ಷಿಕೋತ್ಸವ'**, ದಾಶರಥಿ ದೀಕ್ಷಿತ್ ಅವರ **'ಗಾಂಪರ ಗುಂಪು'**

1976 ಶ್ರೀರಂಗರ **'ಕತ್ತಲೆ ಬೆಳಕು'**, ಲಂಕೇಶ್‌ರ **'ಸಿದ್ಧತೆ'** ಪ್ರೊ॥ ಚಂದ್ರಶೇಖರ ಪಾಟೀಲರ **'ಗುರ್ತಿನವರು'**

1984 ಸಿದ್ಧಗಂಗಯ್ಯನವರ **'ತಿರುಕ ರಾಜ'**

1985 ಎಂ.ಪಿ ಪ್ರಕಾಶ್‌ರವರ **'ಸೂರ್ಯ ಶಿಕಾರಿ'**, ಲಂಕೇಶ್‌ರ **'ಕ್ರಾಂತಿ ಬಂತು ಕ್ರಾಂತಿ'**

1986 ಕುವೆಂಪು ಅವರ **'ಶೂದ್ರ ತಪಸ್ವಿ'**

1986–94 ಮೇಲಿನ ನಾಟಕಗಳ ಪುನರ್ ಪ್ರದರ್ಶನಗಳು

1994 ಚಿತ್ರದುರ್ಗದಲ್ಲಿ ರಂಗ ತರಬೇತಿ ಶಿಬಿರ ಹಾಗೂ ನಾಟಕ **'ತಿರುಕ ರಾಜ'**

1995 ಮೈಸೂರುನಲ್ಲಿ ಅಮರ ಕಲಾ ಸಂಘದಲ್ಲಿ ರಂಗ ತರಬೇತಿ ಶಿಬಿರ ಹಾಗೂ ನಾಟಕ **'ಸೂರ್ಯ ಶಿಕಾರಿ'** ಪರ್ವತವಾಣಿ ಅವರ **'ಕವಿ ಭಿಕ್ಷೆ'**

1995 ರಿಂದ 2000 ಮೇಲಿನ ನಾಟಕಗಳ ಪುನರ್ ಪ್ರದರ್ಶನ

2009 ಶಿವಮೊಗ್ಗ **"ಅಭಿನಯ"** ತಂಡಕ್ಕೆ ರಂಗತರಬೇತಿ ಹಾಗೂ ನಾಟಕ ಪೀಠಾರೋಹಣ ನಿರ್ದೇಶನ

2010 ಕರ್ನಾಟಕ ನಾಟಕ ಅಕಾಡೆಮಿ ಸಹಯೋಗ ಚಿತ್ರದುರ್ಗ ಮದಕರಿ ಕಾಲೇಜಿಗೆ ಡಾ|| ಸಿದ್ದಲಿಂಗಯ್ಯ ವಿರಚಿತ "ಏಕಲವ್ಯ" ನಿರ್ದೇಶನ

2014 ಪ್ರತಿಮಾ ನಾಟಕ ತಂಡಕ್ಕೆ ಕಾರಂತರ "ಪಂಜರ ಶಾಲೆ" ನಾಟಕ ನಿರ್ದೇಶನ ರಂಗ ತರಬೇತಿ

## ಗ್ರಾಮಾಂತರ ಪ್ರದೇಶದಲ್ಲಿ ರಂಗಶಿಬಿರಗಳ ಸಂಘಟನಾಕಾರನಾಗಿ

- 1994 ಚಿತ್ರದುರ್ಗದ 'ರಚನಾ ಕಲಾ ಸಂಘ' ರಂಗ ತರಬೇತಿ ಶಿಬಿರ
- 1995 ಮೈಸೂರು ಅಮರ ಕಲಾ ಸಂಘ ರಂಗ ತರಬೇತಿ ಶಿಬಿರ
- 1996 ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಮುನ್ನಸಂದ್ರದಲ್ಲಿ ರಂಗ ತರಬೇತಿ ಶಿಬಿರ
- 1997 ದೊಡ್ಡ ಬಳ್ಳಾಪುರದಲ್ಲಿ ರಂಗ ತರಬೇತಿ ಶಿಬಿರ

## ನಾಟಕೋತ್ಸವ ಮತ್ತು ವಿಚಾರ ಸಂಕಿರಣಗಳು ಸಂಘಟಿಸಿದ್ದು

- 1962 ರಿಂದ 66 ಕನ್ನಡ ಸಾಹಿತ್ಯ ಕಲಾ ಸಂಘ 'ನಾಟಕ ಸ್ಪರ್ಧೆ ಹಾಗೂ ಉತ್ಸವಗಳು'
- 1969 ಸಂಗೀತ ನಾಟಕ ಅಕಾಡೆಮಿಯ ನಾಟಕ ಉತ್ಸವ
- 1969 ರಿಂದ 1972 ನಾಟ್ಯ ಸಂಘ, ಬೆಂಗಳೂರು 'ಉಲ್ಲಾಳ್ ಶೀಲ್ಡ್ ನಾಟಕೋತ್ಸವ'
- 1985 ರಂಗಶಿಲ್ಪಿ ಯಶವಂತಪುರ 'ನಾಟಕ ಸ್ಪರ್ಧೆ ಹಾಗೂ ವಿಚಾರ ಸಂಕಿರಣ'
- 20. ಬಿ.ವಿ ಕಾರಂತ ನಾಟಕೋತ್ಸವ – ನಾಗೇಶ್ ನಾಟಕೋತ್ಸವ

## ಗ್ರಾಮಾಂತರ ಪ್ರದೇಶದಲ್ಲಿ ನಾಟಕೋತ್ಸವ ಸಂಘಟಿಸಿದ್ದು

- 1994 'ರಚನಾ' ಚಿತ್ರದುರ್ಗ ಜನಪದ ಕಲಾ ಉತ್ಸವ ಹಾಗೂ ವಿಚಾರ ಸಂಕಿರಣ
- 1998 ದೊಡ್ಡ ಬಳ್ಳಾಪುರದಲ್ಲಿ 5 ದಿನಗಳ ನಾಟಕ ಉತ್ಸವ ಹಾಗೂ ವಿಚಾರ ಸಂಕಿರಣ

## ರಂಗ ಪುಸ್ತಕಗಳ ಪ್ರಕಾಶಕನಾಗಿ

- ಡಾ|| ಕೆ. ಮರುಳಸಿದ್ದಪ್ಪ ಅವರ 'ಕನ್ನಡ ನಾಟಕ ಸಮೀಕ್ಷೆ', ಡಾ|| ಕೆ.ವಿ. ನಾರಾಯಣ ಅವರ 'ಹುತ್ತವ ಬಡಿದರೆ'

- ಎಂ.ಪಿ ಪ್ರಕಾಶರವರು ಅನುವಾದಿಸಿದ 'ಸೂರ್ಯ ಶಿಕಾರಿ', ನಿಸರ್ಗ ಪ್ರಿಯರ 'ತಿರುಕ ರಾಜ'
- ಡಾ॥ ವಿಜಯಾ ಸಂಪಾದಿಸಿದ 'ನಾನೊಂದ ಕನಸ ಕಂಡೆ', ಲಿಂಗದೇವರು ಹಳೆಮನೆ ಸಂ.: 'ರೂಪರೂಪಗಳನು ದಾಟಿ, ಸಿದ್ದಲಿಂಗಯ್ಯ ಕಂಬಾಳು : 'ನಾಟಕದ ಮನೆ', ಶ್ರೀಧರ ಹಂದೆ ಸಂ.: 'ಯಕ್ಷಲೋಕದ ಕೋಲ್‌ಮಿಂಚು'

## ರಂಗ ಸಂಘಟನೆಗಳಲ್ಲಿ ಪ್ರಮುಖ ಪಾತ್ರ ನಿರ್ವಹಣೆ

- 'ಕನ್ನಡ ಸಾಹಿತ್ಯ ಕಲಾ ಸಂಘ', 'ಭೂಮಿಕ', 'ಶಕಶೈಲೂಶರು', 'ಕಲಾಕುಂಜ', 'ನಾಟ್ಯ ಸಂಘ', 'ಪ್ರತಿಮಾ ನಾಟಕರಂಗ'

## ಚಲನಚಿತ್ರ ಹಾಗೂ ಕಿರುಚಿತ್ರಗಳಲ್ಲಿ ಕಾರ್ಯನಿರ್ವಹಣೆ

- 1976 ಪಿ. ಲಂಕೇಶರ 'ಪಲ್ಲವಿ' ಚಿತ್ರದ ನಿರ್ವಾಹಕನಾಗಿ
- 1977ರ ಆರ್. ನಾಗೇಶ್ ನಿರ್ದೇಶನದ ಕಿರುಚಿತ್ರದಲ್ಲಿ ನಟ.
- ದೂರದರ್ಶನದ ಧಾರಾವಾಹಿ ಟಿ.ಎನ್.ಸೀತಾರಾಂ ಅವರ 'ಆಸ್ಫೋಟ'ದಲ್ಲಿ ಒಂದು ಪಾತ್ರ.
- 1976 ಎಂ.ಸಿ ಆನಂದ 'ಪ್ಯಾರಸೈಟ್' ನಟನಾಗಿ
- 1976 ಸದಾಶಿವ ಅವರ 'ಋಷಿ' ಚಿತ್ರ ನಿರ್ದೇಶಕನಾಗಿ

## ಕನ್ನಡ ನಾಟಕ ಸ್ಪರ್ಧೆಯಲ್ಲಿ ತೀರ್ಪುಗಾರನಾಗಿ

- ದಕ್ಷಿಣ ಭಾರತ ಅಂಚೆ ಇಲಾಖೆ ನಾಟಕ ಸ್ಪರ್ಧೆ, ಭಾರತ ಸರ್ಕಾರ
- ಕರ್ನಾಟಕ ರಾಜ್ಯ ಮಟ್ಟದ ಕಾರ್ಮಿಕ ಸಂಘ ನಾಟಕ ಸ್ಪರ್ಧೆ
- ನಾಟ್ಯ ಸಂಘ ಬೆಂಗಳೂರು, ರಾಜ್ಯ ಮಟ್ಟದ ನಾಟಕ ಸ್ಪರ್ಧೆ

## ಬೆಳಕು ವಿನ್ಯಾಸಕಾರನಾಗಿ

**1968 ರಿಂದ 1975 ಪ್ರಮುಖ ನಾಟಕಗಳು ಮಾತ್ರ**

- ನಾಗೇಶ್ ನಿರ್ದೇಶನದ **'ಕತ್ತಲೆ–ಬೆಳಕು'**, **'ದ್ರೌಪದಿ'**, **'ತ್ರಿಶಂಕು'**, **'ಯಾಯಿತಿ'** ಹಾಗೂ ಇತರೆ.
- ಪಿ. ಲಂಕೇಶ್ ನಿರ್ದೇಶನದ ಅರಿಸ್ಟೋಫೆನಿಸ್ **'ಸ್ತ್ರೀ ಬಂಡಾಯ'** (ಲೆಸಿಸ್ಟ್ರಾಟಾ) **'ಕೊಡೆಗಳು'**
- ಡಾ॥ ಎಂ.ಎನ್. ಶ್ರೀನಿವಾಸ್ ಗೊಗಲ್‌ನ **'ಇನ್‌ಸ್ಪೆಕ್ಟರ್'**, ಲಂಕೇಶ್‌ರವರ **'ಬಿರುಕು'**

- ಹೆಚ್.ಕೆ ರಾಮಮೂರ್ತಿ ನಿರ್ದೇಶನದ **ಶ್ರೀರಂಗರ ಊರ್ಧ್ವಮೂಲ ಅಧಃಶಾಖ', 'ಕಾಡ್ ಮನಸ'**
- ಬಿ.ವಿ. ಕಾರಂತರ ನಿರ್ದೇಶನದಲ್ಲಿ **'ಏವಂ ಇಂದ್ರಜಿತ್', 'ಕುರುಡು ಕಾಂಚಾಣ'**, 'ನಾಟಕಕಾರನ ಶೋಧನೆಯಲ್ಲಿ ಆರು ಪಾತ್ರಗಳು', **'ಪಂಜರ ಶಾಲೆ', 'ಅಶ್ವತ್ಥಾಮನ್', 'ಹೆಡ್ಡಾಯಣ', 'ಸದ್ದು ವಿಚಾರಣೆ ನಡೀತಾ ಇದೆ'**, ಬೆಂಗಳೂರು ನಗರ ಹೊರತಾದ ಇತರೆ ಜಿಲ್ಲೆಗಳಲ್ಲಿ ಸಾಗರ, ಹೆಗ್ಗೋಡು, ಮೈಸೂರು, ದಾವಣಗೆರೆ, ಧಾರವಾಡ, ಉಡುಪಿ ಇತರೆ ಭಾಗಗಳಲ್ಲಿ ನಡೆದ ನಾಟಕ ಪ್ರದರ್ಶನಗಳಿಗೆ
- ಪ್ರಸನ್ನ ನಿರ್ದೇಶನದ **'ಹುತ್ತವ ಬಡಿದರೆ', 'ತದ್ರೂಪಿ', 'ಕದಡಿದ ನೀರು'**
- ಪ್ರೇಮ ಕಾರಂತ್ ನಿರ್ದೇಶನದ **'ಇಸ್ಟಿಟ್‌ರಾಜ', 'ಪಂಜರ ಶಾಲೆ',**

## ರಂಗ ವಿನ್ಯಾಸಕಾರನಾಗಿ

- ಆರ್. ನಾಗೇಶ್ : 'ಏಕಲವ್ಯ', 'ತ್ರಿಶಂಕು', 'ಬುಟ್ಟೊ', 'ದ್ರೌಪದಿ' ಹಾಗೂ ಇತರೆ
- ಬಿ.ವಿ ಕಾರಂತ : 'ನೀ ಕೊಡೆ–ನಾ ಬಿಡೆ', 'ಕುರುಡು ಕಾಂಚಾಣ', 'ಏವಂ ಇಂದ್ರಜಿತ್', 'ಪಂಜರ ಶಾಲೆ', 'ಸಂಧ್ಯಾಕಾಲ', 'ರಂಗಭಾರತ' 1969 ರಿಂದ 1972ರ ಎಲ್ಲಾ ನಾಟಕಗಳಿಗೆ
- ಪ್ರೊ॥ ಬಿ. ಚಂದ್ರಶೇಖರ್ : 'ತುಘಲಕ್', 'ಮಣ್ಣಿನ ಬಂಡಿ', 'ಬೊಕ್ಕತಲೆ ನರ್ತಕಿ', 'ತೆರೆಗಳು'
- ಎಂ.ಎನ್. ಶ್ರೀನಿವಾಸ್ : 'ಬಿರುಕು'
- ಪಿ. ಲಂಕೇಶ್ : 'ಕೊಡೆಗಳು', 'ತೆರೆಗಳು', 'ಸ್ತ್ರೀ ಬಂಡಾಯ'
- ಎನ್. ಎಸ್. ವೆಂಕಟರಾಂ : 'ಆನೆ ಬಂತು', 'ಆಧೆ ಅದೂರೆ'
- ಪರ್ವತವಾಣಿ : 'ಗೀತ ರಾಕ್ಷಸ', 'ಲೊಯರ್ ಡೆಪ್ತ್'
- ಪ್ರಸನ್ನ : 'ಕದಡಿದ ನೀರು', 'ಹುತ್ತವ ಬಡಿದರೆ'

## ವಸ್ತ್ರವಿನ್ಯಾಸಕಾರನಾಗಿ

- ಆರ್. ನಾಗೇಶ್ 'ಏಕಲವ್ಯ', 'ಯಯಾತಿ',
- ಪ್ರೊ॥ ಬಿ. ಚಂದ್ರಶೇಖರ್ 'ಮಣ್ಣಿನ ಬಂಡಿ' 'ತುಘಲಕ್'
- ಪಿ. ಲಂಕೇಶ್ 'ಸ್ತ್ರೀ ಬಂಡಾಯ'
- ಹೆಚ್.ಕೆ ರಾಮಮೂರ್ತಿ 'ರಂಗಭಾರತ'
- ಎಲ್. ಕೃಷ್ಣಪ್ಪ 'ಸೂರ್ಯ ಶಿಕಾರಿ', 'ಕವಿ ಭಿಕ್ಷೆ', 'ಶೂದ್ರ ತಪಸ್ವಿ', 'ತಿರುಕ ರಾಜ'

### ರಂಗಶಿಬಿರಗಳ ಸಂಘಟನಾಕಾರನಾಗಿ

- 1982 ಪ್ರತಿಮಾ ನಾಟಕರಂಗ 'ಅಭಿನಯ ತರಬೇತಿ ಶಿಬಿರ'
- 1984 ಅಂಚೆ ತಂತಿ ರಂಗ ವೇದಿಕೆ 'ರಂಗ ತರಬೇತಿ ಶಿಬಿರ'
- 1986 ರಿಂದ 1990 ಪ್ರತಿಮಾ ನಾಟಕ ರಂಗ ನಗರದ ಮೂರು ಭಾಗಗಳಲ್ಲಿ ರಂಗ ತರಬೇತಿ ಶಿಬಿರ
- 1996ರಲ್ಲಿ 'ನೇಪಥ್ಯ ರಂಗ ಶಿಬಿರ'
- 2000 ರಿಂದ 2004 'ಮಕ್ಕಳ ನಾಟಕ ಶಿಬಿರ'


### ಈ ಕೆಳಕಂಡ ಸಂಘ ಸಂಸ್ಥೆಗಳಿಂದ ಸನ್ಮಾನ

- 'ರಂಗ ಭಾರತಿ' ಹೂವಿನ ಹಡಗಲಿ, 'ರಚನಾ' ಚಿತ್ರದುರ್ಗ
- 'ಕನ್ನಡ ಸಂಘ' ಗೌರಿಬಿದನೂರು, 'ಅಮರ ಕಲಾ ಸಂಘ' ಮೈಸೂರು
- ಕನ್ನಡ ಸಾಹಿತ್ಯಕೂಟ, ತಿಪಟೂರು. 'ರಂಗಶಿಲ್ಪಿ' ಯಶವಂತಪುರ
- 'ಯಕ್ಷದೇಗುಲ' ತ್ಯಾಗರಾಜನಗರ
- 'ಕನ್ನಡ ಸಾಹಿತ್ಯ ಪರಿಷತ್' ಬೆಂಗಳೂರು
- 'ಕರ್ನಾಟಕ ನಾಟಕ ಅಕಾಡೆಮಿ', ಬೆಂಗಳೂರು
- 'ಅಮರ ಕಲಾ ಸಂಘ', ಮೈಸೂರು
- 'ಕರ್ನಾಟಕ ಟೆಲಿವಿಷನ್ ಸಂಸ್ಥೆ'
- 'ಸಿಂಚನ', ಬೆಂಗಳೂರು
- 1995–97ರ ಅವಧಿಗೆ ಕರ್ನಾಟಕ ಸರ್ಕಾರ, ಕರ್ನಾಟಕ ನಾಟಕ ಅಕಾಡೆಮಿ ಸದಸ್ಯನಾಗಿ ನಾಮಕರಣ.
- **1998–99ರ ಅವಧಿಗೆ ಕರ್ನಾಟಕ ನಾಟಕ ಅಕಾಡೆಮಿಯಿಂದ ಪ್ರಶಸ್ತಿ**
- **2002–2003 ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ**
- **2011 ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ "ಕೆಂಪೇಗೌಡ ಪ್ರಶಸ್ತಿ"**

### ರಂಗ ಪತ್ರಿಕೆ ಸಂಪಾದಕನಾಗಿ / ವ್ಯವಸ್ಥಾಪಕ ಸಂಪಾದಕನಾಗಿ

- 1972–73 **'ಮುಕ್ತ'** ರಂಗಭೂಮಿ ಮಾಸ ಪತ್ರಿಕೆ
- 1998 ರಿಂದ ಸತತವಾಗಿ 15 ವರ್ಷಗಳಿಂದ ರಂಗಭೂಮಿ ತಿಂಗಳ ಪತ್ರಿಕೆ **'ಈ ಮಾಸ ನಾಟಕ'** ವ್ಯವಸ್ಥಾಪಕ ಸಂಪಾದಕನಾಗಿ ನಿರಂತರವಾಗಿ ತರುತ್ತಲಿರುವುದು.

# ಚಿತ್ರ ಸಂಪುಟ



18ನೇ ವಯಸ್ಸಿನಲ್ಲಿ ಎಲ್. ಕೃಷ್ಣಪ್ಪ



80ರ ದಶಕದಲ್ಲಿ ಎಲ್. ಕೃಷ್ಣಪ್ಪ



ಎಲ್. ಕೃಷ್ಣಪ್ಪ, ಟಿ.ಎನ್. ಸೀತಾರಾಮ್, ಕೆ. ಮರುಳಸಿದ್ದಪ್ಪ, ಬರಗೂರು ರಾಮಚಂದ್ರಪ್ಪ
"ಈ ಮಾಸ ನಾಟಕ" 15ನೇ ವರ್ಷದ ಸಂಭ್ರಮಾಚರಣೆ ಸಂದರ್ಭದ ಚಿತ್ರ



2014ರಲ್ಲಿ ಎಲ್. ಕೃಷ್ಣಪ್ಪ ನಿರ್ದೇಶಿಸಿದ "ಪಂಜರಶಾಲೆ" ನಾಟಕದ ಚಿತ್ರ



1997ರಲ್ಲಿ "ಈ ಮಾಸ ನಾಟಕ" ಪ್ರಾರಂಭಿಸಿದಾಗ ಸಿ.ಆರ್.ಸಿಂಹ, ಬಿ.ಎನ್. ನಾಣಿ, ಬಿ.ವಿ. ವೈಕುಂಠರಾಜು, ಸಿ.ಜಿ ಕೃಷ್ಣಸ್ವಾಮಿ, ಎಲ್. ಕೃಷ್ಣಪ್ಪ



1980ರ ವಿವಾಹದ ಸ್ನೇಹಕೂಟದಲ್ಲಿ ಎಲ್. ಕೃಷ್ಣಪ್ಪ, ವಿನೋದಿನಿ, ರೋಹಿಣಿ ತಂದೆಯವರೊಂದಿಗೆ



ಅರುಂದತಿನಾಗ್, ಸಿ.ಆರ್.ಸಿಂಹ, ಜಿ. ಶ್ರೀನಿವಾಸ್, ಡಾ॥ ವಿಜಯಾ,
ಆರ್. ನಾಗೇಶ್, ಎಲ್. ಕೃಷ್ಣಪ್ಪ, ಹೆಚ್. ಜಿ. ಸೋಮಶೇಖರ್



ರಂಗ ಸಂಭ್ರಮ–ಕಾರ್ಯಕ್ರಮ, ಬೆಳಕು(ರಿ)
ಸಾಹಿತ್ಯ ಮತ್ತು ಸಾಂಸ್ಕೃತಿಕ ವಿದ್ಯಾಮಂದಿರ, ಡಿ.ವಿ.ಎಸ್.ರಂಗ ಶಿಕ್ಷಣ
ಕೇಂದ್ರ, 4–12–2011,ಸಂಜೆ 7ಕ್ಕೆ ಡಿ.ವಿ.ಎಸ್. ರಂಗಮಂದಿರ, ಪ್ರಾಯೋಜನೆ:
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಾಟಕ: ಸಾಕ್ರೆಟೀಸ್




"ಋಷಿ" ಚಿತ್ರತಂಡದ ಒಂದು ದೃಶ್ಯ.
ಆರ್. ನಾಗೇಶ್, ಬಿ.ವಿ. ವೈಕುಂಠರಾಜು, ಎಲ್. ಕೃಷ್ಣಪ್ಪ
ಛಾಯಾಗ್ರಾಹಕರು : ಬಿ.ಸಿ. ಗೌರಿಶಂಕರ, ಎಸ್. ರಾಮಚಂದ್ರ,



ಎಲ್. ಕೃಷ್ಣಪ್ಪ, ಕೆ.ಜಿ. ಕೃಷ್ಣಮೂರ್ತಿ, ಬಿ.ವಿ ಕಾರಂತ.



1968ರ ಚಿತ್ರ, ಆರ್. ನಾಗೇಶ್, ತುಪ್ಪಕೃಷ್ಣ, ಶಿವಸ್ವಾಮಿ, ಎಲ್. ಕೃಷ್ಣಪ್ಪ.



ಎಲ್. ಕೃಷ್ಣಪ್ಪ ನಿರ್ದೇಶನದ "ತಿರಕರಾಜ"
ನಾಟಕ ಪಾತ್ರಧಾರಿಗಳು ಮಂಜುನಾಥ್, ಗುಡಿಹಳ್ಳಿ ನಾಗರಾಜು



1980ರಲ್ಲಿ ಸರಳ ವಿವಾಹದ ಸಂದರ್ಭದಲ್ಲಿ ವಿನೋದಿನಿ, ಎಲ್. ಕೃಷ್ಣಪ್ಪನವರೊಂದಿಗೆ
ಡಾ॥ ವಿ.ಎನ್. ಜೋಷಿ, ಬಂದಗದ್ದೆ ರಮೇಶ್ ಮುಂತಾದವರು



2003ರಲ್ಲಿ ನಾಟಕ ಅಕಾಡೆಮಿ ಅಧ್ಯಕ್ಷ ಆರ್. ನಾಗೇಶ್
ಎಲ್. ಕೃಷ್ಣಪ್ಪನವರನ್ನ ಅಭಿನಂದಿಸಿದ ಚಿತ್ರ




ಹುನಗುಂದದ ಸಭಾಕಾರ್ಯಕ್ರಮದಲ್ಲಿ
ಶ್ರೀನಿವಾಸ ತಾವರಗೆರೆ, ಎಲ್. ಕೃಷ್ಣಪ್ಪ ಮುಂತಾದವರು



1981–82ರಲ್ಲಿ ಜನಪದ ರೆಪರ್ಟರಿ ತಂಡದ ಸದಸ್ಯರ ಜೊತೆಗೆ




ಎಲ್. ಕೃಷ್ಣಪ್ಪನವರಿಗೆ ಮುಖ್ಯಮಂತ್ರಿ ಯಡಿಯೂರಪ್ಪ ಅವರು
ಕೆಂಪೆಗೌಡಪ್ರಶಸ್ತಿ ಪ್ರಧಾನ ಮಾಡುತ್ತಿರುವ ದೃಶ್ಯ



ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಪ್ರಧಾನ ಚಿತ್ರದಲ್ಲಿ
ಎಂ.ಎಸ್. ಸತ್ಯು, ಸಿದ್ಧಲಿಂಗಪಟ್ಟಣಶೆಟ್ಟಿ, ಕೆ.ನಾಗರತ್ನಮ್ಮ ಮುಂತಾದವರು.




ಶಿವಮೊಗ್ಗದ ಅಭಿನಯ ತಂಡಕ್ಕೆ ನಿರ್ದೇಶಿಸಿದ ಎಲ್. ಕೃಷ್ಣಪ್ಪ
"ಪೀಠಾರೋಹಣ" ನಾಟಕದ ಚಿತ್ರ



ಚಿತ್ರ "ಏಕಲವ್ಯ" ನಾಟಕದ್ದು. ನಿರ್ದೇಶನ : ಎಲ್. ಕೃಷ್ಣಪ್ಪ.
ಅಭಿನಯ : ಚಿತ್ರದುರ್ಗದ ಮದಕರಿ ಕಾಲೇಜು



ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು 2003ರಲ್ಲಿ
ಎಲ್. ಕೃಷ್ಣಪ್ಪನವರಿಗೆ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡಿದರು



"ಸೂರ್ಯಶಿಕಾರಿ" ನಾಟಕದ ದೃಶ್ಯ
ನಿರ್ದೇಶನ : ಎಲ್. ಕೃಷ್ಣಪ್ಪ.